ಬುಧವಾರ, ನವೆಂಬರ್ 20, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 321 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ಬೇಡದ ಇಮೇಲ್‌ಗಳನ್ನು ಬಾರದಂತೆ ತಡೆಯಲು ಅಲಿಯಾಸ್ ಇಮೇಲ್!

ಆಳ-ಅಗಲ
ಕರ್ನಾಟಕದಲ್ಲಿ ನಕ್ಸಲರ ಜಾಡು

ಏಕಕಾಲಕ್ಕೆ 2,200 ಲೈನ್‌ಮನ್‌ಗಳ ನೇಮಕಾತಿ: ಕೆ.ಜೆ. ಜಾರ್ಜ್ 5

ಮುಡಾ ಹಿಂದಿನ ಆಯುಕ್ತ ನಟೇಶ್ ವಿಚಾರಣೆ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
77,578	23,518	₹79,460 (ಬೆಂಗಳೂರು)	₹96,300 (ಬೆಂಗಳೂರು)	84.42

ಕಬ್ಬಿನಾಲೆಯ ಪೀತಬೈಲ್‌ನಲ್ಲಿ ಎಎನ್‌ಎಫ್ ಕಾರ್ಯಾಚರಣೆ • ಇನ್ನೂ ಐವರ ತಂಡ ಇರುವ ಶಂಕೆ

ನಕ್ಸಲ್ ನಾಯಕ ವಿಕ್ರಂ ಗೌಡ ಹತ್ಯೆ



ಹೆಬ್ರಿ ತಾಲ್ಲೂಕಿನ ಕಬ್ಬಿನಾಲೆಯ ಪೀತಬೈಲ್‌ನ ಎನ್‌ಕೌಂಟರ್ ನಡೆದ ಸ್ಥಳ

• ನವೀನ್ ಕುಮಾರ್ ಜಿ.

ಉಡುಪಿ: ಹೆಬ್ರಿ ತಾಲ್ಲೂಕಿನ ಕಬ್ಬಿನಾಲೆಯ ಪೀತಬೈಲ್‌ನಲ್ಲಿ ಸೋಮವಾರ ರಾತ್ರಿ ನಕ್ಸಲರು ಮತ್ತು ನಕ್ಸಲ್ ನಿಗ್ರಹ ಪಡೆಯ (ಎಎನ್‌ಎಫ್) ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ನಕ್ಸಲ್ ನಾಯಕ ವಿಕ್ರಂ ಗೌಡ ಅಲಿಯಾಸ್ ಶ್ರೀಕಾಂತ್ (46) ಹತ್ಯೆಯಾಗಿದ್ದಾನೆ.



ವಿಕ್ರಂ ಗೌಡ

ಹೆಬ್ರಿ ತಾಲ್ಲೂಕಿನ ಸೋಮೇಶ್ವರ ನಾಡ್ಪಾಲು ಗ್ರಾಮದ ಕೂಡ್ಲು ನಿವಾಸಿ ವಿಕ್ರಂ ಗೌಡ ಹಲವು ವರ್ಷಗಳಿಂದ ನಕ್ಸಲ್ ಚಟುವಟಿಕೆಗಳಲ್ಲಿ ಸಕ್ರಿಯ-ನಾಗಿದ್ದ ಮತ್ತು ಹಲವು ಪ್ರಕರಣಗಳಲ್ಲಿ ಪೊಲೀಸರಿಗೆ ಬೇಕಾಗಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸೋಮವಾರ ರಾತ್ರಿ ಸುಮಾರು ಆರು ಮಂದಿ ನಕ್ಸಲರ ತಂಡ ಪೀತಬೈಲ್‌ನ ಮನೆಯೊಂದರ ಸಮೀಪ ಬಂದಿತ್ತು. ಈ ವೇಳೆ ಅವರು ಹಾಗೂ ಎಎನ್‌ಎಫ್ ತಂಡ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ವಿಕ್ರಂ ಮೃತಪಟ್ಟಿದ್ದು, ಉಳಿದವರು ಪರಾರಿಯಾಗಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಎನ್‌ಕೌಂಟರ್ ನಡೆದ ಸ್ಥಳ ದಟ್ಟ ಅರಣ್ಯ ಪ್ರದೇಶವಾಗಿದ್ದು, ಕಬ್ಬಿನಾಲೆ ಬಸ್ ನಿಲ್ದಾಣದಿಂದ ಸುಮಾರು ಎಂಟು ಕಿ.ಮೀ. ದೂರದಲ್ಲಿದೆ.

7ನೇ ಪುಟ ನೋಡಿ

‘61 ಪ್ರಕರಣಗಳಲ್ಲಿ ಬೇಕಾಗಿದ್ದ ವಿಕ್ರಂ’

ಎನ್‌ಕೌಂಟರ್‌ನಲ್ಲಿ ಮೃತಪಟ್ಟಿರುವ ವಿಕ್ರಂ ಗೌಡನ ವಿರುದ್ಧ, ಕೊಲೆ, ಸುಲಿಗೆ ಸೇರಿದಂತೆ 61 ಪ್ರಕರಣಗಳು ದಾಖಲಾಗಿದ್ದವು. ಅವುಗಳಲ್ಲಿ 19 ಪ್ರಕರಣ ಕೇರಳದಲ್ಲಿ ದಾಖಲಾಗಿದ್ದವು ಎಂದು ಸ್ಥಳಕ್ಕೆ ಭೇಟಿ ನೀಡಿದ್ದ ರಾಜ್ಯ ಆಂತರಿಕ ಭದ್ರತಾ ವಿಭಾಗದ ಐಜಿಪಿ ಡಿ. ರೂಪಾ ತಿಳಿಸಿದರು.

ರಾಜ್ಯದಲ್ಲಿ ನಕ್ಸಲರ ಕಬಿನಿ ದಳಂ -1 ಮತ್ತು ಕಬಿನಿ ದಳಂ -2 ಎಂಬ ಎರಡು ಸಕ್ರಿಯ ತಂಡಗಳಿದ್ದು ವಿಕ್ರಂ ಗೌಡ ಕಬಿನಿ ದಳಂ -2 ಅನ್ನು ಮುನ್ನಡೆಸುತ್ತಿದ್ದ ಎಂದು ವಿವರಿಸಿದರು.

ವಿಕ್ರಂ ಗೌಡನ ಜೊತೆ ಐದರಿಂದ ಆರು ಮಂದಿ ನಕ್ಸಲರು ಬಂದಿರುವ ಸಾಧ್ಯತೆ ಇದ್ದು, ಉಳಿದವರ ಪತ್ತೆಗಾಗಿ ಶೋಧ ಕಾರ್ಯಾಚರಣೆ ಮುಂದುವರಿಸ ಲಾಗಿದೆ. ಎಎನ್‌ಎಫ್ ಎಸ್.ಪಿ. ಜಿತೇಂದ್ರ ದಯಾಮ ನೇತೃತ್ವದಲ್ಲಿ 10 ದಿನಗಳಿಂದ ಅರಣ್ಯ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆದಿತ್ತು.

ಬೆಂಗಳೂರಿನಿಂದ ಬಂದಿರುವ 75 ಸಿಬ್ಬಂದಿ ಹಾಗೂ ಶಿವಮೊಗ್ಗದಿಂದ ಬಂದಿರು ವ 25 ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಮಾಹಿತಿ ನೀಡಿದರು. ಮಂಗಳೂರು ಪಶ್ಚಿಮ ವಲಯ ಡಿಐಜಿ ಅಮಿತ್ ಸಿಂಗ್, ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ. ಸ್ಥಳಕ್ಕೆ ಭೇಟಿ ನೀಡಿದ್ದಾರೆ.

‘ಕೊಲ್ಲುವುದು ಸಲ್ಲ: ನ್ಯಾಯಾಂಗ ತನಿಖೆಯಾಗಲಿ’

ಇದನ್ನೊಂದು ಹತ್ಯೆ ಎಂದೇ ನಾವು ಕರೆಯುತ್ತೇವೆ. ಪೊಲೀಸರ ಹೇಳಿಕೆಯೊಂದನ್ನೇ ಆಧರಿಸಿ ಇದನ್ನು ಎನ್‌ಕೌಂಟರ್ ಎಂದು ಒಪ್ಪಿಕೊಳ್ಳಲು ನಾವು ತಯಾರಿಲ್ಲ. ಸಮಿತಿಯಲ್ಲಿರುವ ನಾಗರಿಕ ಸಮಾಜದ ಪ್ರತಿನಿಧಿಗಳು ಹತ್ಯೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತೇವೆ. ಈ ಹತ್ಯೆ ಬಗ್ಗೆ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ರಾಜ್ಯಮಟ್ಟದ ಸಮಿತಿಯ ಸದಸ್ಯ ಬಂಜಗೆರೆ ಜಯಪ್ರಕಾಶ್ ಆಗ್ರಹಿಸಿದ್ದಾರೆ.



ಬಂಜಗೆರೆ ಜಯಪ್ರಕಾಶ್

ಈ ಚಳವಳಿಯಲ್ಲಿ ತೊಡಗಿರುವವರು ಇತರ ಅಪರಾಧಿಗಳಂತಲ್ಲ. ಇವರನ್ನು ರಾಜಕೀಯ ಹೋರಾಟಗಾರರು ಎಂದೇ ಪರಿಗಣಿಸಬೇಕಾಗುತ್ತದೆ. ಆದರೆ ಹೋರಾಟಕ್ಕೆ ಅವರು ಆಯ್ಕೆ ಮಾಡಿಕೊಂಡ ಹಾದಿ ಒಪ್ಪತಕ್ಕದ್ದಲ್ಲ. ಹಾಗೆಂದು ಅವರನ್ನು ಈ ರೀತಿ ಕೊಲ್ಲುವ ಕ್ರಮ ಸರಿಯಲ್ಲ. ಸರ್ಕಾರ ತಕ್ಷಣವೇ ಇಂತಹ ಕಾರ್ಯಾಚರಣೆಗಳನ್ನು ನಿಲ್ಲಿಸಬೇಕು ಎಂದಿದ್ದಾರೆ.

ಶರಣಾಗಿ ಎಂದು ವಿಕ್ರಂ ಗೌಡ ಮತ್ತು ತಂಡವನ್ನು ಉದ್ದೇಶಿಸಿ ಹಲವು ತಿಂಗಳ ಹಿಂದೆಯೇ ಸಮಿತಿಯಿಂದ ಪತ್ರ ಬರೆದಿದ್ದೆವು. ಅವರು ಯಾರೂ ನಮ್ಮನ್ನು ಸಂಪರ್ಕಿ-ಸಲಿಲ್ಲ. ನಮ್ಮ ಪತ್ರಗಳು ಅವರಿಗೆ ತಲುಪಿವೆ ಎಂಬುದರ ಬಗ್ಗೆಯೇ ನಮಗೆ ಅನುಮಾನವಿದೆ ಎಂದು ಹೇಳಿದ್ದಾರೆ.

ಸಶಸ್ತ್ರ ಹೋರಾಟ ಸಂವಿಧಾನಬಾಹಿರ. ಅದನ್ನು ಬಿಟ್ಟು, ಶರಣಾಗಿ. ನಿಮಗೆ ತೊಂದರೆಯಾಗದಂತೆ ನಾವು ಎಚ್ಚರಿಕೆ ವಹಿಸುತ್ತೇವೆ. ಸಮಾಜದ ಮುಖ್ಯವಾಹಿನಿಗೆ ಬಂದು ಹೋರಾಟ ಮುಂದುವರೆಸಿ ಎಂದು ಅಲ್ಲಿ ಉಳಿ-ದಿರುವವರಿಗೆ ತಿಳಿ ಹೇಳುತ್ತೇನೆ ಎಂದಿದ್ದಾರೆ.

ಜಿಸ್ಯಾಟ್‌–ಎನ್‌2 ಯಶಸ್ವಿ ಉಡಾವಣೆ

ಬೆಂಗಳೂರು (ಪಿಟಿಐ): ದೇಶದ ಜಿಸ್ಯಾಟ್-ಎನ್‌2 ನೂತನ ಸಂವಹನ ಉಪಗ್ರಹವನ್ನು ಅಮೆರಿಕದ ಶತಕೋಟ್ಯಧಿಪತಿ ಎಲಾನ್ ಮಸ್ಕ್ ಸ್ಥಾಪಿಸಿರುವ ‘ಸ್ಪೇಸ್‌ಎಕ್ಸ್’ನಿಂದ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು. 11



ಅಗ್ನಿ ಅವಘಡ ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯಲ್ಲಿರುವ ಮೈ ಇವಿ ಎಲೆಕ್ಟ್ರಿಕ್ ಸ್ಕೂಟರ್ ಶೋರೂಂನಲ್ಲಿ ಮಂಗಳವಾರ ಸಂಜೆ ಬೆಂಕಿ ಅವಘಡ ಸಂಭವಿಸಿದ್ದು, ಅಗ್ನಿ ಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಲು ಕಾರ್ಯಾಚರಣೆ ನಡೆಸಿದರು
– ಪ್ರಜಾವಾಣಿ ಚಿತ್ರ : ಎಂ.ಎಸ್.ಮಂಜುನಾಥ್

ಸುದ್ದಿ 3D

‘ಕುಕಿ’ ಉಗ್ರರ ವಿರುದ್ಧ ಕಾರ್ಯಾಚರಣೆಗೆ ನಿರ್ಣಯ

ಇಂಫಾಲ್ (ಪಿಟಿಐ): ಕುಕಿ ಉಗ್ರರ ವಿರುದ್ಧ 7 ದಿನಗಳ ಒಳಗಾಗಿ ‘ಬೃಹತ್ ಕಾರ್ಯಾಚರಣೆ’ಗೆ ಕರೆ ನೀಡುವ ನಿರ್ಣಯವನ್ನು ಎನ್‌ಡಿಎ ಶಾಸಕರು ನಡೆಸಿದ ಸಭೆಯಲ್ಲಿ ಕೈಗೊಳ್ಳಲಾಗಿದೆ. 11

ಒಳಪುಟಗಳಲ್ಲಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಲಕ್ಷ ಮಂದಿಗೆ ತರಬೇತಿ ನೀಡುವ ಕಾರ್ಯಕ್ರಮಕ್ಕೆ ಒಪ್ಪಂದ

‘ನಿಪುಣ ಕರ್ನಾಟಕ’ಕ್ಕೆ ಚಾಲನೆ

• ಜಯಸಿಂಹ ಆರ್.

ಬೆಂಗಳೂರು: ಸ್ಥಳೀಯ ಪ್ರತಿಭೆಗಳು ಮತ್ತು ಜಾಗತಿಕ ಮಟ್ಟದ ಹೂಡಿಕೆ-ದಾರರನ್ನು ಒಂದೇ ವೇದಿಕೆಗೆ ತರುವ ಉದ್ದೇಶದ, 27ನೇ ಆವೃತ್ತಿಯ ‘ಬೆಂಗಳೂರು ತಂತ್ರಜ್ಞಾನ ಶೃಂಗದ ಉದ್ಘಾಟನಾ ಸಮಾರಂಭವು ಒಂದು ಲಕ್ಷ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ಕೌಶಲ ಅಭಿವೃದ್ಧಿ ತರಬೇತಿ ನೀಡುವ ಒಪ್ಪಂದಗಳಿಗೂ ಸಾಕ್ಷಿಯಾಯಿತು.

40 ದೇಶಗಳ ಸರ್ಕಾರ ಮತ್ತು ಉದ್ಯಮ ವಲಯದ ಪ್ರತಿನಿಧಿಗಳು ಮತ್ತು 150ಕ್ಕೂ ಹೆಚ್ಚು ಜಾಗತಿಕ ಉದ್ಯಮಿಗಳು ಭಾಗಿಯಾಗಿರುವ ಶೃಂಗಸಭೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಚಾಲನೆ ನೀಡಿದರು. ವಿದ್ಯಾರ್ಥಿ ಗಳಲ್ಲಿ ಕೌಶಲವನ್ನು ಹೆಚ್ಚಿಸುವ ಸಲುವಾಗಿ ರೂಪಿಸಿರುವ ‘ನಿಪುಣ ಕರ್ನಾಟಕ’ ಕಾರ್ಯಕ್ರಮವನ್ನು ಅವರು ಅನಾವರಣ ಮಾಡಿದರು.

ಬೆಂಗಳೂರಿನಲ್ಲಿ ತಂತ್ರಜ್ಞಾನ ಆಧರಿತ ಉದ್ಯಮಗಳ ಹೂಡಿಕೆಗೆ ಉತ್ತಮ ವಾತಾವರಣವಿದೆ. ಫ್ರಾನ್ಸ್‌ನ ಕಂಪನಿಗಳು ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಿವೆ
ಅಲೆಕ್ಸಾಂಡ್ರಾ ಡ್ಯುಬ್ಲಾಂಚೆ, ಉಪಾಧ್ಯಕ್ಷೆ, ಆರ್ಥಿಕ ಅಭಿವೃದ್ಧಿ ಸಚಿವಾಲಯ, ಫ್ರಾನ್ಸ್

ಈ ಕಾರ್ಯಕ್ರಮದ ಭಾಗವಾಗಿ ವಿಶ್ವದ ಐದು ತಂತ್ರಜ್ಞಾನ ದೈತ್ಯ ಕಂಪನಿಗಳ ಜತೆಗೆ ರಾಜ್ಯದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯು ಒಪ್ಪಂದ ಮಾಡಿಕೊಂಡಿದೆ. ಎಂಜಿನಿಯರಿಂಗ್, ಡಿಪ್ಲೊಮಾ ಎಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲಿ ಕೌಶಲ ಹೆಚ್ಚಿಸುವ ಮೂಲಕ, ಅವರ ಉದ್ಯೋಗಾರ್ಹತೆಯನ್ನು ಹೆಚ್ಚಿಸುವ ಗುರಿ ಹಾಕಿಕೊಳ್ಳಲಾಗಿದೆ. ಪ್ರತಿ ವರ್ಷ ಲಕ್ಷ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಮತ್ತು ಅವರಲ್ಲಿ ಕನಿಷ್ಠ ಶೇ 70ರಷ್ಟು ಮಂದಿಗೆ ಉದ್ಯೋಗ ನೀಡುವ ಗುರಿಯನ್ನು ಇವು ಒಳಗೊಂಡಿವೆ.

3C ಪುಟ ನೋಡಿ

ಹಣ ಹಂಚುವಾಗಲೇ ಸಿಕ್ಕಿಬಿದ್ದ ಬಿಜೆಪಿ ಪ್ರಧಾನ ಕಾರ್ಯದರ್ಶಿ: ಬಿವಿಎ

ಹಣ ಹಂಚಿದ ತಾವ್ಡೆ: ಆರೋಪ

ಪ್ರಜಾವಾಣಿ ವಾರ್ತೆ/ ಪಿಟಿಐ

ಪಾಲ್ಘರ್ (ಮಹಾರಾಷ್ಟ್ರ): ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಅವರು ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯಲ್ಲಿ ಮತದಾರರಿಗೆ ₹5 ಕೋಟಿ ಹಂಚಿದ್ದಾರೆ ಎಂದು ಬಹುಜನ ವಿಕಾಸ ಆಘಾಡಿ (ಬಿವಿಎ) ಮಂಗಳವಾರ ಆರೋಪಿಸಿದೆ.



ವಿನೋದ್ ತಾವ್ಡೆ

ವಿಧಾನಸಭಾ ಚುನಾವಣೆಯ ಮತದಾನಕ್ಕೆ ಒಂದು ದಿನ ಮುನ್ನ ಕೇಳಿಬಂದ ಈ ಆರೋಪವು ಮಹಾರಾಷ್ಟ್ರದ ರಾಜಕೀಯದಲ್ಲಿ ಭಾರಿ ಸದ್ದು ಉಂಟುಮಾಡಿದೆ. ತಮ್ಮ ವಿರುದ್ಧದ ಆರೋಪವನ್ನು ತಾವ್ಡೆ ಅಲ್ಲಗಳೆದಿದ್ದಾರೆ.

‘ತಾವ್ಡೆ ಅವರು ಹಣ ಹಂಚುತ್ತಿದ್ದುದನ್ನು ನಮ್ಮ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ನೋಡಿದ್ದಾರೆ. ಹಣ ಹಂಚುವಾಗಲೇ ಸಿಕ್ಕಿಬಿದ್ದಿದ್ದಾರೆ’ ಎಂದು ಬಿವಿಎ ಮುಖ್ಯಸ್ಥ ಹಿತೇಂದ್ರ ಠಾಕೂರ್ ಮತ್ತು ಅವರ ಪುತ್ರ ಕ್ಷಿತಿಜ್ ಠಾಕೂರ್ ಹೇಳಿದ್ದಾರೆ.

7ನೇ ಪುಟ ನೋಡಿ

ಮುಖ್ಯಾಂಶಗಳು

- ಮತದಾನಕ್ಕೆ ಮುನ್ನಾದಿನ ನಡೆದ ಘಟನೆ
- ಹಣ ಹಂಚುತ್ತಿದ್ದರು ಎನ್ನಲಾದ ವಿಡಿಯೊ ವೈರಲ್
- ಹೋಟೆಲ್‌ಗೆ ನುಗ್ಗಿದ ಬಿವಿಎ ಕಾರ್ಯಕರ್ತರು

‘ಗುರುತಿನ ಚೀಟಿ ಪಡೆದು ಹಣ ವಿತರಣೆ’

ಮುಂಬೈ: ಏಕನಾಥ ಶಿಂದೆ ನೇತೃತ್ವದ ಶಿವಸೇನೆ ಕಾರ್ಯಕರ್ತರು ಛತ್ರಪತಿ ಸಂಭಾಜಿನಗರ ಜಿಲ್ಲೆಯಲ್ಲಿ ಜನರಿಗೆ ಹಣ ನೀಡಿ ಅವರಿಂದ ಮತದಾರರ ಗುರುತಿನ ಚೀಟಿ ಪಡೆಯುತ್ತಿದ್ದಾರೆ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಅಂಬಾದಾಸ್ ದಾನ್ವೆ ಆರೋಪಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆಯ (ಯುಬಿಟಿ) ಹಿರಿಯ ನಾಯಕರಾದ ದಾನ್ವೆ ತಿಳಿಸಿದ್ದಾರೆ.

ಹಾಲಿ ಶಾಸಕ ಹಾಗೂ ಏಕನಾಥ ಶಿಂದೆ ಅವರ ಆಪ್ತ ಸಂಜಯ್ ಶಿರ್ಸಾಟ್ ವಿರುದ್ಧ ಶಿವಸೇನೆಯ (ಯುಬಿಟಿ) ರಾಜು ಶಿಂದೆ ಸ್ಪರ್ಧಿಸುತ್ತಿರುವ ಪಶ್ಚಿಮ ಔರಂಗಾಬಾದ್ ಕ್ಷೇತ್ರದಲ್ಲಿ ಈ ಘಟನೆ ನಡೆದಿದೆ ಎನ್ನಲಾಗಿದೆ.

‘ಬೆರಳುಗಳಿಗೆ ಶಾಯಿ ಹಾಕಿ, ಮತದಾರರ ಗುರುತಿನ ಚೀಟಿ ಪಡೆದು ಹಣ ಹಂಚುತ್ತಿರುವುದು ಬೆಳಕಿದೆ ಬಂದಿದೆ. ಪೊಲೀಸರು ಸುಮಾರು ₹18 ಲಕ್ಷ ಸಂಗ್ರಹಿಸಿದ್ದಾರೆ. ಶಿರ್ಸಾಟ್ ಅವರ ಆದೇಶದಂತೆ ₹2 ಕೋಟಿ ಬಿಡುಗಡೆ ಮಾಡಲಾಗಿದೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಅಧಿಕಾರಿಗಳು ಇದ್ದರೂ ಶಾಯಿ ಹೊರಕ್ಕೆ ಬಂದದ್ದು ಹೇಗೆ ಎಂಬುದು ಪ್ರಶ್ನೆ’ ಎಂದು ದಾನ್ವೆ ಹೇಳಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಸೋಮವಾರ ರಾತ್ರಿ ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಮೋದಿ ಕೊಟ್ಟ ಕೆಲಸ ಎಚ್‌ಡಿಕೆ ಮಾಡಲಿ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ಅವರು ಕೊಟ್ಟಿರುವ ಕೆಲಸವನ್ನು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮೊದಲು ಮಾಡಲಿ' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

'ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಹೀಗಾಗಿ, ಸರ್ಕಾರ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸುತ್ತಿದೆ' ಎಂಬ ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯೆ, 'ಅಧಿಕಾರದಲ್ಲಿದ್ದಾಗ ಕುಮಾರಸ್ವಾಮಿ ಅವರು ರಾಜ್ಯಕ್ಕೆ ಏನು ಮಾಡಿದರು? ಅವರ ಕೊಡುಗೆ ಏನು? ಗಾಳಿಯಲ್ಲಿ ಗುಂಡು ಹೊಡೆಯುವುದೇ ಅವರ ಕೊಡುಗೆ' ಎಂದರು.

'ತಮ್ಮ ಅವಧಿಯಲ್ಲಿ ಸರ್ಕಾರಕ್ಕೆ ಆರ್ಥಿಕ ಶಕ್ತಿ ತುಂಬುವ ಕೆಲಸವನ್ನು ಕುಮಾರಸ್ವಾಮಿ ಮಾಡಿದ್ದಾರೆಯೆ? ರಾಜ್ಯದಲ್ಲಿ ಉದ್ಯೋಗ ಸೃಷ್ಟಿ ಮಾಡುವ ಪುಡಾಗಿ ಹೇಳಿದ್ದಾರಲ್ಲವೇ, ರಾಜ್ಯದಲ್ಲಿ ಅವರಿಗೆ ಎಷ್ಟು ಜಮೀನು ಬೇಕೆಂದು ಪತ್ರ ಬರೆಯಲಿ. ಯಾವ ಕೈಗಾರಿಕೆ ತರುತ್ತಾರೆಂದು ಯೋಜನಾ ವರದಿ ಸಲ್ಲಿಸಲಿ. ನಾನೇ ಮುಂದೆ ನಿಂತು ಅಗತ್ಯ ಜಮೀನು ಕೊಡಿಸುತ್ತೇನೆ' ಎಂದರು.

'ಅಭಿವೃದ್ಧಿ ಯೋಜನೆಗಳಿಗೆ ಅನುದಾನ ಸಿಗುತ್ತಿಲ್ಲವೆಂದು ಕೆಲವು ಕಾಂಗ್ರೆಸ್ ಶಾಸಕರು ಹೇಳುತ್ತಿದ್ದಾರೆ ಎಂದು ಕೇಳಿದಾಗ, 'ಶಾಸಕರು ತಮ್ಮದೇ ಲೆಕ್ಕಾಚಾರದಲ್ಲಿ ಹೇಳಿರುತ್ತಾರೆ. ಅದಕ್ಕೆ ಪ್ರತಿಕ್ರಿಯೆ ಬೇಕಿಲ್ಲ. ಕೆಲವರು ತಮ್ಮ ಕ್ಷೇತ್ರಕ್ಕೆ ₹100 ಕೋಟಿ ಅನುದಾನ ಬೇಕು ಎಂದು ಕೇಳುತ್ತಾರೆ. ಅದು ಕೇಳಿದ ತಕ್ಷಣ ಕೊಡಲು ಆಗುವುದಿಲ್ಲ. ಆಯಾ ಕ್ಷೇತ್ರಕ್ಕೆ ಎಷ್ಟು ಕೊಡಬೇಕು ಎಂಬ ಲೆಕ್ಕಾಚಾರವಿದೆ. ಅದರಂತೆ ನೀಡುತ್ತೇವೆ' ಎಂದರು.

ನಿರ್ಮಾಣಕ್ಕೆ ಬಿಬಿಎಂಪಿಯಿಂದ ನಕ್ಷೆ ಅನುಮೋದನೆ ಅಗತ್ಯ; ರಕ್ಷಣಾ ಮಾನದಂಡಗಳೇ ಇಲ್ಲ

ಈಜು ಕೊಳ: ಸುರಕ್ಷತೆಗಿಲ್ಲ ಮಾರ್ಗಸೂಚಿ

• ಆರ್. ಮಂಜುನಾಥ್

ಬೆಂಗಳೂರು: ನಗರದ ಈಜು ಕೊಳಗಳಲ್ಲಿ ಸುರಕ್ಷತೆಗೆ ಅನುಸರಿಸಬೇಕಾದ ಮಾನದಂಡಗಳಿಲ್ಲ. ಬಿಬಿಎಂಪಿ, ಅಗ್ನಿಶಾಮಕ ದಳ ಕೂಡ ಈಜು ಕೊಳಗಳಲ್ಲಿ ಅಳವಡಿಸಿಕೊಳ್ಳಬೇಕಾದ ರಕ್ಷಣಾ ವ್ಯವಸ್ಥೆಯ ಮಾರ್ಗಸೂಚಿಗಳನ್ನು ಹೊಂದಿಲ್ಲ.

ಈಜು ಎಲ್ಲರೂ ಕಲಿಯಲು ಬಯಸುವ ಕ್ರೀಡೆ. ಮಕ್ಕಳಿಗಂತೂ ಈಜು ಕೊಳವೆಂದರೆ ಅಚ್ಚುಮೆಚ್ಚು. ಈಜು ಬಾರದವರೂ ಈಜು ಕೊಳದಲ್ಲಿ ಸಮಯ ಕಳೆಯಲು, ಮೋಜು ಮಾಡಲು ಬಯಸುತ್ತಾರೆ. ಆಕಸ್ಮಿಕವಾಗಿ ಈಜು ಕೊಳ ಮೋಜಿನ ಬದಲು ಆತಂಕಕ್ಕೆ ಕಾರಣವಾಗುತ್ತದೆ. ಸುರಕ್ಷತೆಯಿಂದಿದ್ದರೆ ಮಾತ್ರ ಸಂತಸ ತರುವ ಈಜು ಕೊಳಗಳಲ್ಲಿ, ಯಾವ ರೀತಿಯ ರಕ್ಷಣಾ ಕ್ರಮಗಳು ಇರಬೇಕು ಎಂಬುದನ್ನು ಸರ್ಕಾರಿ ಸಂಸ್ಥೆಗಳು ಸೂಚಿಸಿಲ್ಲ.

ನಗರದಲ್ಲಿ ಬಿಬಿಎಂಪಿಯ 16 ಈಜು ಕೊಳಗಳಿವೆ. ಐಷಾರಾಮಿ ಹೋಟೆಲ್, ಕ್ಲಬ್, ಶಾಪಿಂಗ್ ಮಾಲ್, ಅಪಾರ್ಟ್‌ಮೆಂಟ್‌ಗಳಲ್ಲಿರುವ ಈಜು ಕೊಳಗಳ ಸಂಖ್ಯೆ ಕೆಲವು ಸಾವಿರಗಳನ್ನೂ ಮೀರುತ್ತದೆ. ಇಷ್ಟೊಂದು ಸಂಖ್ಯೆಯಲ್ಲಿರುವ ಈಜು ಕೊಳಗಳು ಆಕರ್ಷಕವಾಗಿ ನಿರ್ಮಾಣವಾಗಿದ್ದರೂ, ಅವುಗಳಲ್ಲಿನ ಸುರಕ್ಷತಾ ಕ್ರಮಗಳ ಕುರಿತು ಯಾರೊಬ್ಬರೂ ಉತ್ತರಿಸುತ್ತಿಲ್ಲ. ಯಾವ ಸುರಕ್ಷತಾ ಕ್ರಮ ಕೈಗೊಳ್ಳಬೇಕು? ಯಾವ ಮಾನದಂಡಗಳಿವೆ ಎಂಬ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಿರಿಯ, ಕಿರಿಯ ಅಧಿಕಾರಿಗಳಲ್ಲಿ ಮಾಹಿತಿ ಇಲ್ಲ.

ಹೋಟೆಲ್, ರೆಸ್ಟೋರೆಂಟ್, ಬಾರ್-ಪಬ್, ಪೇಯಿಂಗ್ ಗೆಸ್ಟ್ (ಪಿಜಿ) ನಿರ್ಮಾಣ ಹಾಗೂ ನಿರ್ವಹಣೆಗಾಗಿ ಸಾಕಷ್ಟು ಮಾರ್ಗಸೂಚಿಗಳನ್ನು ಹೊಂದಿರುವ ಬಿಬಿಎಂಪಿ, ಈಜುಕೊಳಗಳಲ್ಲಿನ ಸುರಕ್ಷತೆಗೆ ಕೈಗೊಳ್ಳಬೇಕಾದ ಪ್ರತ್ಯೇಕ ಕ್ರಮಗಳ ಮಾರ್ಗಸೂಚಿ ಹೊಂದಿಲ್ಲ.

'ಈಜುಕೊಳದಲ್ಲಿ ನೀರಿನ ಮಟ್ಟವನ್ನು ಕೊಳದ ಎರಡೂ ಬದಿಯಲ್ಲಿ ನಮೂದಿಸಬೇಕು, ಸ್ವಚ್ಛತೆ ಕಾಪಾಡಿಕೊಳ್ಳಬೇಕು, ಟ್ಯೂಬ್ ವ್ಯವಸ್ಥೆ ಇರಬೇಕು, ಸದಾ ಮೇಲ್ವಿಚಾರಕರು ಇರಬೇಕು' ಎಂಬ ಸಾಮಾನ್ಯ ಮಾನದಂಡಗಳು ಇವೆ. ಆದರೆ, ಇದೆಲ್ಲ ಇರಲೇಬೇಕು ಎಂಬ ಕಟ್ಟಪ್ಪಣೆಯ ಸೂಚನೆಗಳನ್ನು ಯಾವ ಸಂಸ್ಥೆಯೂ ನೀಡಿಲ್ಲ. ಐಷಾರಾಮಿ ಹೋಟೆಲ್, ಕ್ಲಬ್ ಹಾಗೂ ಕೆಲವು ಅಪಾರ್ಟ್‌ಮೆಂಟ್‌ಗಳಲ್ಲಿ ಈಜು ಕಲಿಸುವ ತರಬೇತುದಾರರು ಇರುತ್ತಾರೆ. ಅದರ ನಿರ್ವಹಣೆಗೆಂದೇ ಸಿಬ್ಬಂದಿ ಸದಾ ಇರುತ್ತಾರೆ. ಆದರೆ, ಇದು ಎಲ್ಲ ಈಜುಕೊಳಗಳಿಗೂ ಅನ್ವಯಿಸುವುದಿಲ್ಲ. ಬಹುತೇಕ ಈಜುಕೊಳಗಳಲ್ಲಿ ಮೇಲ್ವಿಚಾರಕರೇ ಇರುವುದಿಲ್ಲ. ಅಪಾಯದ ಸಂದರ್ಭದಲ್ಲಿ ಸಹಾಯಹಸ್ತ ಚಾಚುವವರು ಸಮೀಪದಲ್ಲಿ ಇರುವುದಿಲ್ಲ.

2023ರಲ್ಲಿ ನಗರದ ಹೊರ ವಲಯದಲ್ಲಿ ಈಜು ಕೊಳದಲ್ಲಿ ವಿದ್ಯುತ್ ಆಘಾತದಿಂದ ಬಾಲಕನೊಬ್ಬ ಮೃತಪಟ್ಟಿದ್ದ. ಆ ಸಂದರ್ಭದಲ್ಲಿ ಈಜು ಕೊಳದ ಸುರಕ್ಷತೆ ಬಗ್ಗೆ ಚರ್ಚೆ ಆರಂಭವಾಗಿತ್ತು. ಆದರೆ, ಸುರಕ್ಷತಾ ಕ್ರಮಗಳ ಕುರಿತು ಯಾವುದೇ ನಿರ್ಧಾರಗಳು ಆಗಿಲ್ಲ. 'ಈಜು ಕೊಳಗಳಲ್ಲಿ ಕೈಗೊಳ್ಳಬೇಕಾದ ಸುರಕ್ಷತೆಗೆ ಮಾನದಂಡಗಳಿವೆಯೇ?' ಎಂಬ ಪ್ರಶ್ನೆಗೆ ಉತ್ತರಿಸಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ನಿರಾಕರಿಸಿದರು.



ಬಿಬಿಎಂಪಿ ಈಜುಕೊಳ ಖಾಸಗಿ ನಿರ್ವಹಣೆ

'ಬಿಬಿಎಂಪಿ ವ್ಯಾಪ್ತಿಯಲ್ಲಿ 16 ಈಜು ಕೊಳಗಳಿವೆ. ಅವುಗಳ ನಿರ್ವಹಣೆಯನ್ನು ವಲಯ ಕಚೇರಿಗಳಿಗೆ ನೀಡಲಾಗಿದೆ. ಆದರೆ, ಅವುಗಳನ್ನು ಪಾಲಿಕೆ ವತಿಯಿಂದ ನಿರ್ವಹಿಸಲಾಗುತ್ತಿಲ್ಲ. ಖಾಸಗಿಯವರಿಗೆ ಅಥವಾ ಸಂಘ–ಸಂಸ್ಥೆಗಳಿಗೆ ಒಪ್ಪಂದದ ಮೇರೆಗೆ ನೀಡಲಾಗಿದೆ. ಅಗತ್ಯ ಸುರಕ್ಷತೆ ಕೈಗೊಳ್ಳಬೇಕು ಎಂದು ಹೇಳಲಾಗಿದೆ. ಆದರೆ ಯಾವ ಕ್ರಮಗಳು ಎಂಬುದನ್ನು ನಮೂದಿಸಿಲ್ಲ' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

'ಪಾಲಿಕೆಯ ಈಜು ಕೊಳಗಳ ಸಮಗ್ರ ಮಾಹಿತಿ ಮುಖ್ಯ ಆಯುಕ್ತರು ಅಥವಾ ಪ್ರಧಾನ ಎಂಜಿನಿಯರ್ ಕಚೇರಿಯಲ್ಲೇ ಇಲ್ಲ. ವಲಯಗಳಿಗೆ ನೀಡಲಾಗಿದ್ದು, ಅವರಿಂದಲೇ ಮಾಹಿತಿ ಪಡೆದು ಕೊಳ್ಳಬೇಕು. ಸುರಕ್ಷತೆ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬುದು ಗೊತ್ತಿಲ್ಲ' ಎಂದರು.

'ರೋಗ ನಿಯಂತ್ರಣಕ್ಕೆ ಸೂಚನೆ ಇದೆ'

'ಈಜು ಕೊಳದ ನೀರಿನಿಂದ ಉಂಟಾಗಬಹುದಾದ, ಹರಡಬಹುದಾದ ರೋಗಗಳ ನಿಯಂತ್ರಣಕ್ಕೆ ಆರೋಗ್ಯ ವಿಭಾಗದಿಂದ ಸೂಚನೆ ನೀಡಬಹುದು. ಆರೋಗ್ಯಕ್ಕೆ ಯಾವುದೇ ರೀತಿಯಲ್ಲಿ ಹಾನಿಯಾಗದಂತೆ ಈಜು ಕೊಳದ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂಬ ನಿಯಮವಿದೆ. ಆದರೆ, ಭದ್ರತೆ, ಸುರಕ್ಷತೆಗೆ ಸಂಬಂಧಿಸಿದಂತೆ ಯಾವ ನಿಯಮಗಳಿವೆ ಎಂಬುದನ್ನು ಪರಿಶೀಲಿಸಬೇಕು' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

'ಕಟ್ಟಡ ನಕ್ಷೆಯಲ್ಲಿ ನಮೂದು'

'ನಗರದಲ್ಲಿರುವ ಅಪಾರ್ಟ್‌ಮೆಂಟ್‌ಗಳು ಕಟ್ಟಡ ನಕ್ಷೆ ಪಡೆಯುವಾಗ ಈಜು ಕೊಳ ಎಂದು ಜಾಗ ಗುರುತಿಸಿ ಅನುಮತಿ ಪಡೆದಿರುತ್ತಾರೆ. ಆನಂತರ ಎಲ್ಲ ಕಡೆಯಲ್ಲೂ ಅದು ಈಜು ಕೊಳವಾಗಿಯೇ ನಿರ್ಮಾಣವಾಗಿರುವುದಿಲ್ಲ. ಬೇರೆ ಅಗತ್ಯಗಳಿಗೆ ಉಪಯೋಗಿಸಿಕೊಂಡಿರುತ್ತಾರೆ. ಅದರ ಬಗ್ಗೆ ಹೆಚ್ಚು ಒತ್ತು ನೀಡುವುದಿಲ್ಲ' ಎಂದು ಬಿಬಿಎಂಪಿ ನಗರ ಯೋಜನೆ ಅಧಿಕಾರಿಗಳು ತಿಳಿಸಿದರು.

'ಈಜು ಕೊಳ ಸೇರಿದಂತೆ ಯಾವುದೇ ರೀತಿಯ ನಿರ್ಮಾಣ ಮಾಡುವುದಿದ್ದರೆ ಅದಕ್ಕೆ ನಕ್ಷೆ ಅನುಮೋದನೆ ಆಗಲೇಬೇಕು. ನಕ್ಷೆಯಲ್ಲಿ ಇಲ್ಲದಿದ್ದರೆ, ನಿರ್ಮಾಣಕ್ಕೆ ಮುಂಚೆ ನಕ್ಷೆ ಅನುಮೋದನೆ ಮಾಡಿಸಿಕೊಳ್ಳಲೇಬೇಕು. ಆದರೆ, ಸುರಕ್ಷತಾ ಕ್ರಮಗಳ ಅಳವಡಿಕೆಗೆ ಸಂಬಂಧಿಸಿದಂತೆ ನಮ್ಮ ಷರತ್ತುಗಳಿರುವುದಿಲ್ಲ' ಎಂದು ಮಾಹಿತಿ ನೀಡಿದರು.

'ಕಟ್ಟಡಗಳಲ್ಲಿ ಅಗ್ನಿ ದುರಂತವಾದಾಗ ಕೈಗೊಳ್ಳಬಹುದಾದ ಸುರಕ್ಷತಾ ಕ್ರಮಗಳನ್ನು ಅಳವಡಿಸಲಾಗಿದೆಯೇ ಎಂಬುದನ್ನು ಮಾತ್ರ ನಾವು ನೋಡುತ್ತೇವೆ. ಈಜು ಕೊಳದ ಸುರಕ್ಷತೆ ನಮ್ಮ ವ್ಯಾಪ್ತಿಗೆ ಬರುವುದಿಲ್ಲ' ಎಂದು ಅಗ್ನಿಶಾಮಕ ದಳದ ಅಧಿಕಾರಿಗಳು ಹೇಳಿದರು.

'ಕಠಿಣ ಕ್ರಮಗಳಿರಲಿ'

'ಈಜುಕೊಳಗಳಲ್ಲಿ ಸುರಕ್ಷತೆ ಅತ್ಯಂತ ಮುಖ್ಯ. ಈಜುಕೊಳ ನಿರ್ಮಾಣ ಮಾಡುವಾಗ ತೋರುವ ಮುತುವರ್ಜಿಯನ್ನು ಅದರ ನಿರ್ವಹಣೆಗೂ ನೀಡಬೇಕು. ನೀರು ಎಂತಹ ಅಪಾಯವನ್ನಾದರೂ ತಂದೊಡ್ಡಬಹುದು. ಇದಕ್ಕಾಗಿ ರಕ್ಷಣಾ ಕ್ರಮಗಳು ಕಠಿಣವಾಗಿರಬೇಕು. ಕಟ್ಟುನಿಟ್ಟಾಗಿ ಪಾಲನೆಯಾಗುವಂತೆ ಸರ್ಕಾರಿ ಸಂಸ್ಥೆಗಳು ನಿಗಾವಹಿಸಬೇಕು' ಎಂದು ವಿಜಯನಗರದ ನಿವಾಸಿ ಚಂದ್ರಪ್ಪ ಆಗ್ರಹಿಸಿದರು.

ಬೀದಿ ನಾಯಿಗಳಿಗೆ ಚಿಪ್: ನೋಟಿಸ್

ಬೆಂಗಳೂರು: ಬೀದಿ ನಾಯಿಗಳಿಗೆ ಅಳವಡಿಸುವ ಮೈಕ್ರೊಚಿಪ್ ಪೂರೈಸಲು ಬಿಡ್ ಆಹ್ವಾನಿಸಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆದೇಶವನ್ನು ಪ್ರಶ್ನಿಸಿದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ, ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

'ಮೈಕ್ರೊಚಿಪ್ ಅಳವಡಿಕೆ ಕಾನೂನು ಬಾಹಿರ ಕ್ರಿಯೆ' ಎಂದು ಆಕ್ಷೇಪಿಸಿ, 'ಸೇವ್ ಅವರ್ ಅನಿಮಲ್ಸ್ ಚಾರಿಟಬಲ್ ಟ್ರಸ್ಟ್' ಪ್ರತಿನಿಧಿ ಸುಜಯಾ ಜಗದೀಶ್ ಮತ್ತು ಕೋರಮಂಗಲದ ನವೀನ್ ಕಾಮತ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ಕೇಂದ್ರ ಪಶುಪಾಲನಾ ಸಚಿವಾಲಯದ ಆಯುಕ್ತ, ಬಿಬಿಎಂಪಿ ಜಂಟಿ ನಿರ್ದೇಶಕ ಸೇರಿ ಒಟ್ಟು 2 ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಡಿಸೆಂಬರ್ 16ಕ್ಕೆ ಮುಂದೂಡಿದೆ.

ಬಿಜೆಪಿ ಸಂಸದ ಗೋವಿಂದ ಕಾರಜೋಳ ಸಲಹೆ

'ಕಾಂಗ್ರೆಸ್ ಸುಳ್ಳುಗಳಿಗೆ ತಿರುಗೇಟು ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್‌ನ ಅಪಪ್ರಚಾರ ಮತ್ತು ಸುಳ್ಳುಗಳಿಗೆ ತಕ್ಕ ಉತ್ತರ ನೀಡಬೇಕು ಎಂದು ಬಿಜೆಪಿ ಸಂಸದ ಗೋವಿಂದ ಕಾರಜೋಳ ಹೇಳಿದ್ದಾರೆ.

ಜಗನ್ನಾಥಭವನದಲ್ಲಿ ಮಂಗಳವಾರ ಏರ್ಪಡಿಸಿದ್ದ 'ಸಂವಿಧಾನ ಸನ್ಮಾನ ಅಭಿಯಾನ' ರಾಜ್ಯ ಮಟ್ಟದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಸಂವಿಧಾನ ಬದಲಿಸುವ ಬಗ್ಗೆ ಅಪಪ್ರಚಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ತನ್ನ ಅಧಿಕಾರದ ಅವಧಿಯಲ್ಲಿ ಒಟ್ಟು 75 ಬಾರಿ ಸಂವಿಧಾನವನ್ನು ಬದಲಾಯಿಸಿದೆ. ಈವರೆಗೆ ಒಟ್ಟು 106 ಬಾರಿ ಸಂವಿಧಾನ ತಿದ್ದುಪಡಿ ಆಗಿದ್ದು, ಅತಿ ಹೆಚ್ಚು ಬಾರಿ ಸಂವಿಧಾನ ಬದಲಿಸಿದ ಕೀರ್ತಿ ಕಾಂಗ್ರೆಸ್‌ಗೆ ಸಲ್ಲುತ್ತದೆ. ಕಾಂಗ್ರೆಸ್ಸೇತರ ಸರ್ಕಾರಗಳು 31 ಬಾರಿ ತಿದ್ದುಪಡಿ ಮಾಡಿವೆ ಎಂದರು.

'ಬಿಜೆಪಿಯವರು ಸಂವಿಧಾನ ಬದಲಿಸುತ್ತಾರೆ ಎಂದು ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್‌ನವರು ಅಪಪ್ರಚಾರ ಮಾಡಿದ್ದರು. ಕಾಂಗ್ರೆಸ್‌ನ ಈ ಸುಳ್ಳಿನ ಕಂತೆಯನ್ನು ಎಸ್‌ಸಿ, ಎಸ್‌ಟಿ ಮಾತ್ರವಲ್ಲ ಒಬಿಸಿಗಳೂ ನಂಬಿದ್ದರು. ಹಲವು ಯುವಕರು ಸಂವಿಧಾನ ಬದಲಾವಣೆ ಕುರಿತು ನನ್ನನ್ನು ಪ್ರಶ್ನಿಸಿದ್ದರು. ನಾವು ವಾಸ್ತವ ತಿಳಿಸಲು ಹೋದರೂ ಅದು ಅವರ ತಲೆಯೊಳಗೆ ಹೋಗಲಿಲ್ಲ. ಪಕ್ಷ ಇಂತಹ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಅದರ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಕಾರಜೋಳ ಹೇಳಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ವಿ. ಸುನಿಲ್‌ಕುಮಾರ್, ಪಿ.ರಾಜೀವ್, ವಿಧಾನಪರಿಷತ್ ಸದಸ್ಯರಾದ ಎನ್. ರವಿಕುಮಾರ್, ಸಿ.ಟಿ.ರವಿ, ಉಪಾಧ್ಯಕ್ಷರಾದ ಎನ್. ಮಹೇಶ್, ಮಾಳವಿಕ ಅವಿನಾಶ್, ಎಸ್‌ಟಿ ಮೋರ್ಚಾ ಅಧ್ಯಕ್ಷ ಸಿಮೆಂಟ್ ಮಂಜು ಇದ್ದರು.



ಬಿಜೆಪಿ ರಾಜ್ಯ ಕಚೇರಿಯಲ್ಲಿ ಮಂಗಳವಾರ ಏರ್ಪಡಿಸಿದ್ದ 'ಸಂವಿಧಾನ ಸನ್ಮಾನ ಅಭಿಯಾನ' ರಾಜ್ಯ ಮಟ್ಟದ ಕಾರ್ಯಾಗಾರವನ್ನು ಸಂಸದ ಗೋವಿಂದ ಕಾರಜೋಳ ಉದ್ಘಾಟಿಸಿದರು. ಪಕ್ಷದ ಮುಖಂಡರಾದ ಎನ್.ಮಹೇಶ್, ಛಲವಾದಿ ನಾರಾಯಣಸ್ವಾಮಿ, ಸಿಮೆಂಟ್ ಮಂಜು, ಎನ್.ರವಿಕುಮಾರ್, ಪಿ.ರಾಜೀವ್ ಮತ್ತು ಮಾಳವಿಕ ಅವಿನಾಶ್ ಭಾಗವಹಿಸಿದ್ದರು.

ವಿಶ್ವಸ್ಥ ಮಂಡಳಿಗೆ ಪದಾಧಿಕಾರಿಗಳ ಆಯ್ಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ವಿಶ್ವ ಕೊಂಕಣಿ ಕೇಂದ್ರದ 2024-2027ರ ಅವಧಿಗೆ ಅಧ್ಯಕ್ಷರಾಗಿ ನಂದಗೋಪಾಲ ಶೆಣೈ ಅವರು ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ವಿಲಿಯಮ್ ಡಿಸೋಜ, ರಮೇಶ ಡಿ.ನಾಯಕ್ ಮೈರಾ, ಕಿರಣ ಬುಡ್ಕುಳೆ, ಕೋಶಾಧಿಕಾರಿಯಾಗಿ ಬಿ.ಆರ್.ಭಟ್, ಕಾರ್ಯದರ್ಶಿಯಾಗಿ ಡಾ.ಕಸ್ತೂರಿ ಮೋಹನ ಪೈ, ಜತೆ ಕಾರ್ಯದರ್ಶಿಯಾಗಿ ನಾರಾಯಣ ನಾಯ್ಕ ಆಯ್ಕೆಯಾಗಿದ್ದಾರೆ. ವಿಶ್ವಸ್ಥ ಮಂಡಳಿ ಸದಸ್ಯರಾಗಿ ಕುಡ್ಪಿ ಜಗದೀಶ ಶೆಣೈ, ಗಿಲ್ಬರ್ಟ್ ಡಿಸೋಜ, ಗೋಕುಲನಾಥ ಪ್ರಭು, ಕೆ.ಬಿ.ಖಾರ್ವಿ, ಮೆಲ್ವಿನ್ ರಾಡ್ರಿಗಸ್, ಮುರಳೀಧರ ಪ್ರಭು, ಶಕುಂತಲಾ ಆರ್. ಕಿಣಿ, ವತಿಕಾ ಪೈ, ನೂತನ ವಿಶ್ವಸ್ಥರಾಗಿ ಶಿವಶಂಕರ ನಾಯಕ್, ಪ್ರಶಾಂತ ಶೇಟ್ ಆಯ್ಕೆಯಾದರು.

ಡಿ.5ಕ್ಕೆ 'ಹಾಸನ ಸಮಾವೇಶ'

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಡಿ.5ರಂದು ಹಾಸನದಲ್ಲಿ ಬೃಹತ್ ರಾಜಕೀಯ ಸಮಾವೇಶ ನಡೆಯಲಿದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ತಿಳಿಸಿದರು.

ಇದಕ್ಕೂ ಮುನ್ನ ಡಿ.2ರಂದು ತುಮಕೂರಿನಲ್ಲಿ ಸರ್ಕಾರದ ವತಿಯಿಂದ ಸಮಾವೇಶ ನಡೆಯಲಿದೆ. ಗೃಹ ಸಚಿವ ಜಿ.ಪರಮೇಶ್ವರ ಅವರು ಇದರ ಉಸ್ತುವಾರಿ ವಹಿಸಿದ್ದು, ಸೋಮವಾರ ಸಂಜೆ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಡೆದ ಸಚಿವರ ಸಭೆಯಲ್ಲಿ ಈ ಕುರಿತು ಚರ್ಚಿಸಲಾಗಿದೆ ಎಂದರು.

ಹಾಸನ ಸಮಾವೇಶದ ಮೂಲಕ ಸಿದ್ದರಾಮಯ್ಯ ರಾಜಕೀಯ ಸಂದೇಶವನ್ನು ನೀಡಲಿದ್ದಾರೆ. ಅಲ್ಲದೆ, ವಿಧಾನ ಮಂಡಲದ ಅಧಿವೇಶನದಲ್ಲಿ ವಿರೋಧ ಪಕ್ಷಗಳನ್ನು ಎದುರಿಸುವ ಕುರಿತು ಚರ್ಚೆ ನಡೆಯಿತು. ಸಿದ್ದರಾಮಯ್ಯ ಟಗರು ಇದ್ದಂತೆ ಎಲ್ಲವನ್ನೂ ಎದುರಿಸುತ್ತಾರೆ ಎಂದು ರಾಜಣ್ಣ ಹೇಳಿದರು.

ವೃದ್ಧರು, ವಿದ್ಯಾರ್ಥಿಗಳು, ರೋಗಿಗಳಿಗೆ ಆಪತ್ತು ತರುತ್ತಿರುವ ಕರ್ಕಶ ಶಬ್ದ

ಸೈಲೆನ್ಸರ್ ಮಾರ್ಪಾಡು: ಹೆಚ್ಚಿದ ಕಿರಿಕಿರಿ

• ಆದಿತ್ಯ ಕೆ.ಎ.

ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಹೆಚ್ಚುತ್ತಿರುವ ಬೆನ್ನಲ್ಲೇ ವಾಹನಗಳ ಸೈಲೆನ್ಸರ್ ಮಾರ್ಪಾಡು ಮಾಡಿಕೊಂಡು ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುತ್ತಿರುವವರ ಸಂಖ್ಯೆಯೂ ಹೆಚ್ಚುತ್ತಿದೆ.

ಯುವಕರ ಸೈಲೆನ್ಸರ್ ಮಾರ್ಪಾಡಿಸುವ 'ಕ್ರೇಜ್' ಇತರರಿಗೆ ಸಮಸ್ಯೆ ತಂದೊಡ್ಡುತ್ತಿದೆ. ಹಲವು ಬಡಾವಣೆಗಳಲ್ಲಿ ದೋಷಪೂರಿತ ಸೈಲೆನ್ಸರ್ ಹಾವಳಿ ಮಿತಿ ಮೀರಿದೆ.

ಬೆಂಗಳೂರಿನಲ್ಲಿ ಪ್ರತಿನಿತ್ಯ ಹೊಸ ಹೊಸ ವಾಹನಗಳು ಸಾವಿರಾರು ಸಂಖ್ಯೆಯಲ್ಲಿ ರಸ್ತೆಗೆ ಇಳಿಯುತ್ತಿದ್ದು, ಶಬ್ದ ಮಾಲಿನ್ಯವೂ ದುಪ್ಪಟ್ಟಾಗಿದೆ. ಅದರ ಜತೆಗೆ ಕೆಲವು ಬೈಕ್ ಸವಾರರ ಸೈಲೆನ್ಸರ್ ಬದಲಾವಣೆಯ ಹುಚ್ಚಾಟವು ವೃದ್ಧರು, ವಿದ್ಯಾರ್ಥಿಗಳು, ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳು, ಕಚೇರಿಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗೆ ಆಪತ್ತು ತರುತ್ತಿದೆ.


ಕಂಪನಿಗಳಿಂದ ಖರೀದಿಸಿದ ಹೊಸ ಬೈಕ್ ಅಥವಾ ತಮ್ಮ ಬಳಿಯಿದ್ದ ಹಳೇ ಬೈಕ್‌ಗಳ ಸೈಲೆನ್ಸರ್ ತೆಗೆಸಿ ಕರ್ಕಶ ಶಬ್ದ ಮಾಡುವ ಸೈಲೆನ್ಸರ್ ಅನ್ನು ಪುಂಡರು ಅಳವಡಿಕೆ ಮಾಡಿಕೊಳ್ಳುತ್ತಿದ್ದಾರೆ. ಇಂತಹ ಬೈಕ್‌ಗಳು ರಸ್ತೆಯಲ್ಲಿ ಸಂಚರಿಸುವಾಗ ಜೋರು ಶಬ್ದ ಮಾಡುತ್ತವೆ. ಇದರಿಂದ ಕಿರಿಕಿರಿಯಾಗುತ್ತದೆ ಎಂದು ವೃದ್ದರು ಅಳಲು ತೋಡಿಕೊಂಡಿದ್ದಾರೆ.



> ಸೈಲೆನ್ಸರ್ ಮಾರ್ಪಾಡು ಮಾಡಿಕೊಂಡು ಕಿರಿಕಿರಿ ಉಂಟು ಮಾಡುತ್ತಿದ್ದವರ ಮಾಹಿತಿ ನೀಡಿದರೆ ಸಂಚಾರ ಪೊಲೀಸರು ಸ್ಥಳಕ್ಕೆ ತೆರಳಿ ಕ್ರಮ ತೆಗೆದುಕೊಳ್ಳಲಿದ್ದಾರೆ
>
> **ಎಂ.ಎನ್.ಅನುಚೇತ್**, ಜಂಟಿ ಪೊಲೀಸ್ ಕಮಿಷನರ್, ಸಂಚಾರ ವಿಭಾಗ

ಆಕರ್ಷಿಸಲು ಪುಂಡರ ತಂತ್ರ: ಬೇರೆಯವರನ್ನು ಆಕರ್ಷಿಸಲು ಬೈಕ್‌ಗೆ ಕಂಪನಿಯವರು ನೀಡಿದ ಸೈಲೆನ್ಸರ್ ಬದಲಿಸಿ ನಿಯಮಗಳಿಗೆ ವಿರುದ್ಧವಾಗಿ ಹೆಚ್ಚು ಶಬ್ದ ಉಂಟು ಮಾಡುವ ಸೈಲೆನ್ಸರ್ ಅನ್ನು ಪುಂಡರು ಅಳವಡಿಸಿಕೊಂಡಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ಪಾಠ ಮಾಡಲು ತೊಂದರೆ ಆಗುತ್ತದೆ. ಆ ಶಬ್ದಕ್ಕೆ ಹೆದರಿ ಪುಟ್ಟ ಮಕ್ಕಳೂ ತರಗತಿಗಳಲ್ಲಿ ಕ್ಷಣಕಾಲ ಆತಂಕದಿಂದಲೇ ಕುಳಿತುಕೊಳ್ಳುತ್ತಾರೆ. ಇದಕ್ಕೆ ಕಡಿವಾಣ ಹಾಕಬೇಕು ಎಂದು ಶಿಕ್ಷಕಿ ಮೇಘಾ ಆಗ್ರಹಿಸಿದರು.

ಆಸ್ಪತ್ರೆ ಸುತ್ತಮುತ್ತ, ತುಮಕೂರು ಹೆದ್ದಾರಿ, ದೇವನಹಳ್ಳಿ ರಸ್ತೆ, ನೈಸ್ ರಸ್ತೆಯಲ್ಲಿ ಪುಂಡರ ಹಾವಳಿ ಮಿತಿಮೀರಿದೆ. ಅಧಿಕ ಶಬ್ದ ಬರುವ ಸೈಲೆನ್ಸರ್‌ಗಳು ಉಂಟು ಮಾಡುವ ಶಬ್ದದಿಂದ ಹೃದಯಾಘಾತ ಆಗುವ ಸಾಧ್ಯತೆಯಿದೆ. ಪುಟ್ಟ ಮಕ್ಕಳ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ ಎಂದು ವೈದ್ಯರೊಬ್ಬರು ಹೇಳಿದರು.



ಕಾರ್ಯರೂಪಕ್ಕೆ ಬಾರದ ಆದೇಶ

ಸೈಲೆನ್ಸರ್ ಮಾರ್ಪಾಡು ಮಾಡಿಕೊಂಡು ವಾಹನಗಳ ನೋಂದಣಿ ಪ್ರಮಾಣ ಪತ್ರವನ್ನು(ಆರ್.ಸಿ) ಅಮಾನತು ಮಾಡಿ ದಂಡ ವಿಧಿಸಲಾಗುವುದು ಎಂದು ಸಾರಿಗೆ ಇಲಾಖೆ ಆಯುಕ್ತರು ಹಿಂದೆ ಹೇಳಿದ್ದರು. ದೋಷಪೂರಿತ ಸೈಲೆನ್ಸರ್ ಅಳವಡಿಕೆ ಮಾಡುತ್ತಿರುವ ಗ್ಯಾರೇಜ್‌ಗಳ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಸಿದ್ದರು. ಅವರ ಆದೇಶ ಪೂರ್ಣ ಪ್ರಮಾಣದಲ್ಲಿ ಕಾರ್ಯರೂಪಕ್ಕೆ ಬಂದಿಲ್ಲ ಎಂಬ ಆರೋಪ ಇದೆ.

ಸಂಚಾರ ಪೊಲೀಸರು ಮಾತ್ರ ಆಗಾಗ್ಗೆ ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಕಳೆದ ವಾರ ನಡೆದ ಕಾರ್ಯಾಚರಣೆಯಲ್ಲಿ 47 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದರು.

ಎಲ್ಲೆಲ್ಲಿ ಹೆಚ್ಚು ಹಾವಳಿ?: ಟಿ.ದಾಸರಹಳ್ಳಿ, ವಿದ್ಯಾರಣ್ಯಪುರ, ಪೀಣ್ಯ ಕೈಗಾರಿಕಾ ಪ್ರದೇಶ, ನೈಸ್ ರಸ್ತೆ, ಸುಂಕದಕಟ್ಟೆ, ಇಂದಿರಾನಗರ, ಕೆಂಗೇರಿ ಉಪ ನಗರ, ಎಲೆಕ್ಟ್ರಾನಿಕ್ ಸಿಟಿ, ರಾಜರಾಜೇಶ್ವರಿ ನಗರ, ಮಾಗಡಿ ರಸ್ತೆ, ಕೆ.ಆರ್. ಮಾರುಕಟ್ಟೆ, ಚಾಮರಾಜಪೇಟೆ, ಕಲಾಸಿಪಾಳ್ಯ ಭಾಗದಲ್ಲಿ ಸೈಲೆನ್ಸರ್ ಬದಲಾವಣೆ ಮಾಡಿಕೊಂಡು ಓಡಾಟ ನಡೆಸುತ್ತಿರುವ ಪುಂಡರ ಸಂಖ್ಯೆ ಹೆಚ್ಚಾಗಿದೆ. ಇನ್ನೂ ಚರ್ಚ್ ರಸ್ತೆ, ಮಹಾತ್ಮ ಗಾಂಧಿ ರಸ್ತೆ, ಬ್ರಿಗೇಡ್ ರಸ್ತೆ, ಕೋರಮಂಗಲದಲ್ಲಿ ವಾರಾಂತ್ಯದಲ್ಲಿ ರಾತ್ರಿ ವೇಳೆ ಈ ರೀತಿಯ ಕಿರಿಕಿರಿ ಸಾಮಾನ್ಯವಾಗಿದೆ ಎಂದು ನಿವಾಸಿಗಳು ಹೇಳಿದ್ದಾರೆ.

ಹೆಲ್ಮೆಟ್ ರಹಿತ ಚಾಲನೆ, ಚಾಲನೆ ಸಮಯದಲ್ಲಿ ಮೊಬೈಲ್ ಬಳಕೆ, ಸಿಗ್ನಲ್ ದಾಟುವುದು, ಪ್ರವೇಶ ನಿರ್ಬಂಧಿತ ಮಾರ್ಗದಲ್ಲಿ ವಾಹನ ಸಂಚಾರ, ನಿಲುಗಡೆ ನಿಷೇಧಿತ ಸ್ಥಳದಲ್ಲಿ ವಾಹನ ನಿಲುಗಡೆ, ಏಕಮುಖ ಮಾರ್ಗದಲ್ಲಿ ವಾಹನ ಸಂಚಾರ ಮಾಡುತ್ತಿದ್ದವರ ವಿರುದ್ಧವೇ ನಗರ ಪೊಲೀಸರು ಹೆಚ್ಚಿನ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಸೈಲೆನ್ಸರ್ ಮಾರ್ಪಾಡು ಮಾಡಿಕೊಂಡು ಕಿರಿಕಿರಿ ತರುತ್ತಿರುವ ಪುಂಡರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಬೇಕು ಎಂದು ದಾಸರಹಳ್ಳಿಯ ನಿವಾಸಿ ಮೋಹನ್ ಆಗ್ರಹಿಸಿದರು.

ಗಣಪತಿ ದೇಗುಲ: ದೀಪೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ವೆಂಕಟಾಲದಲ್ಲಿರುವ ಅಭಯ ಮಹಾಗಣಪತಿ ದೇವಾಲಯದ 12ನೇ ವಾರ್ಷಿಕೋತ್ಸವದ ಪ್ರಯುಕ್ತ ಕಾರ್ತಿಕ ದೀಪೋತ್ಸವವನ್ನು ಏರ್ಪಡಿಸಲಾಗಿತ್ತು.

ವಿಘ್ನೇಶ್ವರನಿಗೆ ವಿಶೇಷ ಅಲಂಕಾರ ಮತ್ತು ಪೂಜಾ ಕೈಂಕರ್ಯಗಳನ್ನು ನೆರವೇರಿಸಿದ ನಂತರ ದೇವಸ್ಥಾನದ ಎದುರಿನಲ್ಲಿ ಸ್ಥಾಪಿಸಿದ್ದ ಪ್ರಧಾನದೀಪವನ್ನು ಹಚ್ಚುವ ಮೂಲಕ ದೀಪೋತ್ಸವಕ್ಕೆ ಚಾಲನೆ ನೀಡಲಾಯಿತು.

ನಂತರ ಭಕ್ತರು ಎರಡೂ ರಸ್ತೆಗಳಲ್ಲಿ ಸಾಲಾಗಿ ಜೋಡಿಸಿದ್ದ ದೀಪಗಳನ್ನು ಬೆಳಗುವ ಮೂಲಕ ದೇವರಿಗೆ ಭಕ್ತಿ ಸಮರ್ಪಿಸಿದರು. ಏಕಕಾಲದಲ್ಲಿ ರಸ್ತೆ ಯುದ್ದಕ್ಕೂ ಬೆಳಗುತ್ತಿದ್ದ ದೀಪಗಳು ಜನರನ್ನು ಆಕರ್ಷಿಸಿದವು.

ಪಾಲಿಕೆ ಮಾಜಿ ಸದಸ್ಯೆ ಚಂದ್ರಮ್ಮ ಕೆಂಪೇಗೌಡ, ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಕೆಂಪೇಗೌಡ, ಸ್ಥಳೀಯ ಮುಖಂಡರಾದ ಚಂದ್ರಯ್ಯ, ಈಶ್ವರ್, ಸುರೇಶ್ ಮತ್ತಿತರರು ಹಾಜರಿದ್ದರು.

ಭಾರತೀಯ ಸೇನೆಯ ಜಂಟಿ ಸಮರಾಭ್ಯಾಸ

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶದ ಶಿಯೋಮಿ ಜಿಲ್ಲೆಯ ಮೆಚುಕಾದಲ್ಲಿ ಭಾರತೀಯ ಭೂಸೇನೆ, ವಾಯುಪಡೆ ಮತ್ತು ನೌಕಪಡೆಗಳು ಜಂಟಿಯಾಗಿ ಸಮರಾಭ್ಯಾಸ ನಡೆಸಿವೆ ಎಂದು ರಕ್ಷಣಾ ಸಚಿವಾಲಯದ ವಕ್ತಾರರು ಮಂಗಳವಾರ ತಿಳಿಸಿದ್ದಾರೆ 'ಪೂರ್ವಿ ಪ್ರಹಾರ' ಎಂಬ ಹೆಸರಿನಲ್ಲಿ ನಾಲ್ಕು ದಿನ ಸಮರಾಭ್ಯಾಸ ನಡೆಯಿತು.

'ಮಹಿಳೆಯರಿಗೆ ಶೇ 50 ಮೀಸಲಾತಿಗೆ ತಕರಾರಿಲ್ಲ'

ಇಂದಿರಾ ಗಾಂಧಿ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ



ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸುಗಂಧಿ ಗಂಗಾಧರ್, ಮಾಲತಿ ಶರ್ಮಾ, ಪ್ಯಾರೇಜಾನ್, ಮಮತಾ ಯಜಮಾನ್ ಮತ್ತು ಸೋನು ವೇಣುಗೋಪಾಲ್ ಅವರಿಗೆ ಇಂದಿರಾಗಾಂಧಿ ಸ್ಮಾರಕ ಗೌರವ ಪ್ರಶಸ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿದರು. ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಸತ್ತು, ವಿಧಾನ ಸಭೆಯಲ್ಲಿ ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ನೀಡಲು ನಮ್ಮ (ಕಾಂಗ್ರೆಸ್) ತಕರಾರಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಮಹಿಳಾ ಕಾಂಗ್ರೆಸ್ ಸಹಯೋಗದಲ್ಲಿ ಮಂಗಳವಾರ ನಡೆದ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮಹಿಳೆಯರಿಗೆ 2028ರಲ್ಲಿ ಮೀಸಲಾತಿ ನೀಡುವುದಾಗಿ ಹೇಳುವ ನರೇಂದ್ರ ಮೋದಿ, ಅದನ್ನು ಈಗಲೇ ಮಾಡಬಹುದಿತ್ತು. ಅದಕ್ಕೆ ರಾಜಕೀಯ ಇಚ್ಛಾಶಕ್ತಿ ಮತ್ತು ಬದ್ಧತೆಯ ಅಗತ್ಯವಿದೆ' ಎಂದರು.

'ನಮಗೆ ಅಧಿಕಾರ ವಿಕೇಂದ್ರೀಕರಣದಲ್ಲಿ ನಂಬಿಕೆಯಿದ್ದರೆ, ಬಿಜೆಪಿಗೆ ಕೇಂದ್ರೀಕೃತ ವ್ಯವಸ್ಥೆಯಲ್ಲಿ ನಂಬಿಕೆ ಇದೆ. ನರೇಂದ್ರ ಮೋದಿ ಪ್ರಧಾನಿಯಾದ ನಂತರ ಆರ್ಥಿಕ ಅಧಿಕಾರ ಕೇಂದ್ರೀಕೃತಗೊಳ್ಳುತ್ತಿದೆ. ನೆಹರೂ, ಇಂದಿರಾ ಗಾಂಧಿ, ರಾಜೀವ್ ಗಾಂಧಿ ಇಲ್ಲದೇ ಹೋಗಿದ್ದರೆ ಈ ದೇಶದಲ್ಲಿ ಅಧಿಕಾರ ವಿಕೇಂದ್ರೀಕರಣ ಆಗಲು ಸಾಧ್ಯವಾಗುತ್ತಿರಲಿಲ್ಲ' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, 'ಕಾಂಗ್ರೆಸ್ ಸರ್ಕಾರ ಮತ್ತು ಇಂದಿರಾ ಗಾಂಧಿ ಜಾರಿಗೆ ತಂದಿರುವ ಉಳುವವನೆ ಭೂಮಿಯ ಒಡೆಯ, ಪಿಂಚಣಿ, ಮಧ್ಯಾಹ್ನದ ಬಿಸಿಯೂಟ, ಪಡಿತರ ವ್ಯವಸ್ಥೆ ಸೇರಿದಂತೆ ಅನೇಕ ಯೋಜನೆಗಳನ್ನು ಯಾರಿಂದಲೂ ಹಾಗೂ ಯಾವುದೇ ಸರ್ಕಾರದಿಂದ ನಿಲ್ಲಿಸಲು ಸಾಧ್ಯವಿಲ್ಲ' ಎಂದರು.

ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಕಾಂಗ್ರೆಸ್ ಮುಖಂಡರಾದ ವೀರಪ್ಪ ಮೊಯಿಲಿ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾ ರೆಡ್ಡಿ, ಮಾಜಿ ಸಚಿವರಾದ ರಾಣಿ ಸತೀಶ್, ಎಚ್.ಎಂ. ರೇವಣ್ಣ ಮತ್ತಿತರರು ಇದ್ದರು.

'ರಾಧಿಕಾ ಕರಿಯ ಅಂದಾಗ ವಿವಾದ ಆಗಲಿಲ್ಲ'

ಮೈಸೂರು: 'ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕುರಿತು ಸಚಿವ ಜಮೀರ್ ಅಹಮದ್ ನೀಡಿದ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ. ಅದೇ ಮಾತನ್ನು ರಾಧಿಕಾ ಕುಮಾರಸ್ವಾಮಿ ಹೇಳಿದಾಗ ಯಾವ ವಿವಾದವೂ ಆಗಲಿಲ್ಲ' ಎಂದು ಕೆಪಿಸಿಸಿ ವಕ್ತಾರೆ ತೇಜಸ್ವಿನಿ ಗೌಡ ವ್ಯಂಗ್ಯವಾಡಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಇಂದಿರಾಗಾಂಧಿ ಜನ್ಮದಿನಾಚರಣೆಯಲ್ಲಿ ಮಾತನಾಡಿ, 'ವಾಹಿನಿಯೊಂದಕ್ಕೆ ರಾಧಿಕಾ ಕುಮಾರಸ್ವಾಮಿ ಅವರು ನೀಡಿದ್ದ ಸಂದರ್ಶನವೊಂದರಲ್ಲಿ ಸಂದರ್ಶಕರು, ನಿಮ್ಮನ್ನು ಕುಮಾರಸ್ವಾಮಿ ಏನೆಂದು ಕರೆಯುತ್ತಾರೆ ಎಂದಾಗ 'ಚಿನ್ನು ಎನ್ನುತ್ತಾರೆ' ಎಂದರು. 'ನೀವು ಹೇಗೆ ಕರೆಯುತ್ತೀರಿ' ಎಂದು ಕೇಳಿದಾಗ, 'ಕರಿಯ' ಎನ್ನುತ್ತೇನೆ ಅಂದಿದ್ದರು. ಅವರು ಹೇಳಿದರೆ ಓಕೆ, ಜಮೀರ್ ಹೇಳಿದರೆ ಯಾಕೆ ಎಂಬ ಪ್ರಶ್ನೆ ಉದ್ಭವವಾಗಿದೆ. ಈ ಇಬ್ಬಗೆಯ ನೀತಿ ಯಾಕಾಗಿ' ಎಂದು ಪ್ರಶ್ನಿಸಿದರು.



ವಿದ್ಯಾರ್ಥಿಗಳು ಸಿದ್ಧಪಡಿಸಿ ಪ್ರದರ್ಶನ ಮತ್ತು ಮಾರಾಟಕ್ಕಿಟ್ಟಿದ್ದ ಆಹಾರ ಖಾದ್ಯಗಳನ್ನು ವಿಮರ್ಶಕಿ ಆಶಾದೇವಿ ಹಾಗೂ ಶಿಕ್ಷಣತಜ್ಞ ವೂಡೇ ಪಿ.ಕೃಷ್ಣ ವೀಕ್ಷಿಸಿದರು

ಶೇಷಾದ್ರಿಪುರ ಕಾಲೇಜಿನಲ್ಲಿ ಕನ್ನಡ ನಾಡಹಬ್ಬದ ಸಂಭ್ರಮ

ಪ್ರಜಾವಾಣಿ ವಾರ್ತೆ

ಯಲಹಂಕ: ಕೆಂಪು ಮತ್ತು ಹಳದಿ ಬಣ್ಣದ ಕಾಗದ ಮತ್ತು ಬಟ್ಟೆಗಳು, ಚಿತ್ತಾರದ ರಂಗೋಲಿ, ವಿವಿಧ ಬಗೆಯ ಹೂವು ಮತ್ತು ತಳಿರು-ತೋರಣಗಳಿಂದ ಕಂಗೊಳಿಸುತ್ತಿದ್ದ ಕಾಲೇಜು ಆವರಣ, ವಿವಿಧ ಮಾದರಿಗಳ ಪ್ರದರ್ಶನ, ಆಹಾರ ಖಾದ್ಯಗಳ ಮಾರಾಟ, ವಿವಿಧ ಉಡುಪುಗಳೊಂದಿಗೆ ಕಂಗೊಳಿಸುತ್ತಿದ್ದ ವಿದ್ಯಾರ್ಥಿಗಳು, ತೇಲಿ ಬರುತ್ತಿದ್ದ ಕನ್ನಡ ಗೀತೆಗಳಿಗೆ ಹೆಜ್ಜೆಹಾಕಿದ ಯುವಜನತೆ....

ಇಲ್ಲಿನ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಆಯೋಜಿಸಿದ್ದ 'ನಾಡಹಬ್ಬ -2024'ರ ಸಮಾರಂಭದ ದೃಶ್ಯಗಳಿವು.

ವಿದ್ಯಾರ್ಥಿಗಳು ತಯಾರಿಸಿದ್ದ ವಿಧಾನಸೌಧ, ಮೈಸೂರು ಅರಮನೆ, ಚಾಮುಂಡಿ ದೇವಾಲಯ, ಶಿವನ ಮೂರ್ತಿ, ಕನ್ನಡ ನಟ-ನಟಿಯರ ಚಂದನವನ, ಗೋಲಗುಮ್ಮಟ, ಚಂದ್ರಯಾನ-3, ಕೆ.ಆರ್.ಎಸ್, ಬಿಡಿಎ, ಕೃಷಿ ಕರ್ನಾಟಕ, ಪುಸ್ತಕ ಪ್ರದರ್ಶನ, ತುಮಕೂರು ಜಿಲ್ಲೆ ಮತ್ತಿತರ ಮಾದರಿಗಳು ಜನರ ಗಮನ ಸೆಳೆದವು. ವಿದ್ಯಾರ್ಥಿಗಳು ತಾವೇ ತಯಾರಿಸಿದ್ದ ಆಹಾರ ಖಾದ್ಯಗಳು, ಚಾಟ್ಸ್ ಹಾಗೂ ತಿಂಡಿ-ತಿನಿಸುಗಳನ್ನು ಮಾರಾಟಮಾಡಿ ಖುಷಿಪಟ್ಟರು. ಅಲ್ಲದೆ ವಿವಿಧ ಕ್ರೀಡೆಗಳಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವಿಮರ್ಶಕಿ ಡಾ.ಆಶಾದೇವಿ, ಕನ್ನಡ ಕೇವಲ ಒಂದು ಭಾಷೆಯಾಗಿರದೆ ಜೀವನಕ್ರಮವಾಗಿದ್ದು, ಇಡೀ ಬದುಕನ್ನು ಆವರಿಸಿದೆ' ಎಂದರು.

ಹೈಕೋರ್ಟ್‌ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮನದಟ್ಟು

‘ಕೆರೆಗಳ ವಾಣಿಜ್ಯೀಕರಣ ಭೀತಿ ಅನಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆರೆಗಳು ಖಾಸಗಿಯವರ ತೆಕ್ಕೆಗೆ ಜಾರಿದಾಕ್ಷಣ ಅವುಗಳ ಮಾಲೀಕತ್ವ ಮತ್ತು ಪಾಲನೆಯ ಹಿಡಿತ ಕೈತಪ್ಪಿ ಹೋಗಲಿದೆ. ಕೆರೆಗಳು ವಾಣಿಜ್ಯೀಕರಣಗೊಳ್ಳುತ್ತವೆ ಎಂಬೆಲ್ಲಾ ಭೀತಿಯ ಅವಶ್ಯಕತೆ ಇಲ್ಲ. ಕೆಲವರು ಇಂತಹ ಭೀತಿಯನ್ನು ಬಿತ್ತುತ್ತಿದ್ದಾರೆ. ಆದರೆ, ಒಪ್ಪಂದದ ಪ್ರಕಾರ ಕೆರೆಗಳ ವ್ಯಾಪ್ತಿಯಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆ ಇರುವುದಿಲ್ಲ. ಇದಕ್ಕೆಲ್ಲಾ ನಿಷೇಧ ವಿಧಿಸಲಾಗಿದೆ’ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹೈಕೋರ್ಟ್‌ಗೆ ಮನದಟ್ಟು ಮಾಡಿದೆ.

‘ಬೆಂಗಳೂರಿನ ಕೆರೆಗಳು ಮತ್ತು ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸಿ ಅವುಗಳನ್ನು ರಕ್ಷಿಸಲು ಸರ್ಕಾರಕ್ಕೆ ಅಗತ್ಯ ನಿರ್ದೇಶನ ನೀಡಬೇಕು’ ಎಂದು ಕೋರಿ 2014ರಲ್ಲಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ



ಮುಖ್ಯಾಂಶಗಳು

- ವಾಣಿಜ್ಯ ಸಂಸ್ಥೆ ಜೊತೆ ಒಪ್ಪಂದಕ್ಕೆ ವಿರೋಧ
- ನೀರಿ ವರದಿ ಉಲ್ಲೇಖ

ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ‘ನಿಬಂಧನೆಗಳನ್ನು ಪರಿಪಾಲಿಸುವಂತಹವರಿಗೆ ಮಾತ್ರವೇ ಕೆರೆಗಳ ಪುನರುಜ್ಜೀವನದ ಜವಾಬ್ದಾರಿಯನ್ನು ನೀಡಲಾಗುತ್ತದೆ. ವಾಸ್ತವದಲ್ಲಿ ಕೆರೆಗಳ ಮಾಲೀಕತ್ವವನ್ನು ಸರ್ಕಾರವೇ ಹೊಂದಿರುತ್ತದೆ. ಇವುಗಳ ಪಾಲನೆಯ ಜವಾಬ್ದಾರಿ ಬಿಬಿಎಂಪಿಗೆ ಒಳಪಟ್ಟಿರುತ್ತದೆ. ಈ ವಿಷಯದಲ್ಲಿ ಸಾರ್ವಜನಿಕರು ಮತ್ತು ಖಾಸಗಿಯವರ ಸಹಭಾಗಿತ್ವದ ಅಗತ್ಯ ಇದ್ದು, ಅದನ್ನು ಯಾವ ರೀತಿ ಅನುಷ್ಠಾನಕ್ಕೆ ತರಬೇಕೆಂಬ ಪ್ರಶ್ನೆ ಮಾತ್ರವೇ ನಮ್ಮ ಮುಂದಿದೆ’ ಎಂದು ವಿವರಿಸಿದರು.

ಅರ್ಜಿದಾರ, ‘ಸಿಟಿಜನ್ ಆಕ್ಷನ್ ಗ್ರೂಪ್’ ಪರ ಹಿರಿಯ ವಕೀಲೆ ಜಯ್ನಾ ಕೊಠಾರಿ, ‘ಕೆರೆ ಪುನರುಜ್ಜೀವನಗೊಳಿಸಲು ಬಂದವರು ಒತ್ತುವರಿ ಮಾಡಿದರೆ ಯಾರು ನಿಗಾ ಇರಿಸುತ್ತಾರೆ? ಇವುಗಳ ಜವಾಬ್ದಾರಿಯನ್ನು ಖಾಸಗಿಯವರಿಗೆ ನೀಡಿದ್ದೇ ಆದರೆ, ಅಲ್ಲಿ ಖಂಡಿತವಾಗಿಯೂ ವಾಣಿಜ್ಯ ಚಟುವಟಿಕೆ ಗರಿಗೆದರುತ್ತವೆ’ ಎಂದು ಪುನರುಚ್ಚರಿಸಿದರು.

ಅರ್ಜಿದಾರರ ಪರ ಮತ್ತೊಬ್ಬ ವಕೀಲ ಜಿ.ಆರ್.ಮೋಹನ್ ಕೂಡಾ ಉದ್ಧರಿಸಿ, ‘ನೀರಿ ವರದಿಯಲ್ಲಿ, ಎಲ್ಲೆಲ್ಲಿ ಕೆರೆ ಒತ್ತುವರಿಯಾಗಿದೆ ಮತ್ತು ಬಫರ್ ವಲಯ ಎಲ್ಲಿ ಬರುತ್ತದೆ ಎಂಬುದನ್ನು ವಿವರಿಸಲಾಗಿದೆ’ ಎಂದರು.

ವಾದ ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಡಿಸೆಂಬರ್ 3ಕ್ಕೆ ಮುಂದೂಡಿದೆ.

ಸಹಾಯವಾಣಿ ಸಂಖ್ಯೆ 1533

‘ಕೆರೆಗಳ ಪುನರುಜ್ಜೀವನದ ವೇಳೆ ಖಾಸಗಿ ಸಂಸ್ಥೆಗಳು ಕೆರೆಗಳನ್ನು ಖಾಸಗಿ ಚಟುವಟಿಕೆಗಳಿಗೆ ಬಳಕೆ ಮಾಡಿದರೆ ಈ ಸಂಬಂಧ ದೂರು ದಾಖಲಿಸಲು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ 1533ರ ಸಹಾಯವಾಣಿಯ ಸಂಖ್ಯೆಯನ್ನು ನೀಡಲಾಗಿದೆ. ಒಪ್ಪಂದದ ಪ್ರಕಾರ ಅಥವಾ ನ್ಯಾಯಾಲಯಕ್ಕೆ ನೀಡಿರುವ ಮುಚ್ಚಳಿಕೆಯನ್ನು ಉಲ್ಲಂಘಿಸಿದರೆ ಯಾರು ಬೇಕಾದರೂ ದೂರು ನೀಡಬಹುದು’ ಎಂದು ಅಡ್ವೊಕೇಟ್ ಜನರಲ್ ಶಶಿಕಿರಣ ಶೆಟ್ಟಿ ನ್ಯಾಯಪೀಠಕ್ಕೆ ತಿಳಿಸಿದರು.

ದಾಖಲೆ ಒದಗಿಸಲು ನಿರ್ದೇಶನ

‘ಕೆರೆಗಳ ಪುನರಜ್ಜೀವನಗೊಳಿಸುವ ಪ್ರಕ್ರಿಯೆಯಲ್ಲಿನ ಒಪ್ಪಂದದ ಪ್ರಕಾರ ಅವುಗಳನ್ನು ಖಾಸಗಿಯವರ ನಿರ್ವಹಣೆಗೆ ಒಪ್ಪಿಸುವಾಗ ವ್ಯಾಪ್ತಿಯ ವಿಚಾರ ನಿಖರವಾಗಿರಬೇಕು’ ಎಂದು ಬಿಬಿಎಂಪಿಗೆ ನಿರ್ದೇಶಿಸಿದ ನ್ಯಾಯಪೀಠ, ‘ಕೆರೆಗಳ ಪಟ್ಟಿ ಮತ್ತು ಅವುಗಳ ವಿಸ್ತೀರ್ಣದ ಅಧಿಕೃತ ದಾಖಲೆಗಳನ್ನು ಒದಗಿಸಿ’ ಎಂದು ಆದೇಶಿಸಿದೆ.

‘17.61 ಲಕ್ಷ ರೈತರಿಗೆ ₹2021 ಕೋಟಿ ಬೆಳೆ ವಿಮೆ’

ಬೆಂಗಳೂರು: ‘ರಾಜ್ಯದಲ್ಲಿ 2023-24ನೇ ಸಾಲಿನಲ್ಲಿ ಒಟ್ಟು 17.61 ಲಕ್ಷ ರೈತರಿಗೆ ₹2021.17 ಕೋಟಿ ಮೊತ್ತದ ಬೆಳೆ ವಿಮೆ ಪರಿಹಾರ ನೀಡಲಾಗಿದೆ’ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಯ ಪ್ರಗತಿ ಪರಿಶೀಲನೆಯ ಬಳಿಕ ಮಾತನಾಡಿದ ಅವರು, ‘ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ 22.97 ಲಕ್ಷ ರೈತರು 17.60 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಬೆಳೆ ವಿಮೆ ನೋಂದಣಿ ಮಾಡಿಕೊಂಡಿದ್ದಾರೆ. ಹಿಂಗಾರು ಹಂಗಾಮಿನಲ್ಲಿ ಈವರೆಗೆ 25,148 ರೈತರು 31,690 ಹೆಕ್ಟೇರ್ ಪ್ರದೇಶಕ್ಕೆ ನೋಂದಣಿ ಮಾಡಿಸಿದ್ದಾರೆ’ ಎಂದರು.

‘ಬೀಜೋತ್ಪಾದನಾ ಕೇಂದ್ರಗಳು, ರೈತ ಸಂಪರ್ಕ ಕೇಂದ್ರಗಳು, ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು ಮತ್ತು ಜೈವಿಕ ನಿಯಂತ್ರಣ, ಪರವಾಲಂಬಿ ಜೀವಿ ಪ್ರಯೋಗಾಲಯಗಳನ್ನು ಒಂದೇ ಸೂರಿನಡಿ ತಂದು ಅಭಿವೃದ್ಧಿ ಪಡಿಸಲು ಕರ್ನಾಟಕ ರಾಜ್ಯ ಕೃಷಿ ಅಭಿವೃದ್ಧಿ ಏಜೆನ್ಸಿ ಸ್ಥಾಪಿಸಲಾಗುವುದು’ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

‘ಜನಸಂಖ್ಯೆ ಆಧಾರದಲ್ಲಿ ಮುಸ್ಲಿಮರ ಮೀಸಲಾತಿ ಹೆಚ್ಚಿಸಿ’

ಮೈಸೂರು: ‘ಜನಸಂಖ್ಯೆಗೆ ಅನುಗುಣವಾಗಿ ಮುಸ್ಲಿಮರ ಮೀಸಲಾತಿ ಹೆಚ್ಚಿಸಬೇಕು. ಅಲ್ಲಿಯವರೆಗೂ ಸಮುದಾಯದ ಹೋರಾಟ ಮುಂದುವರಿಯಲಿದೆ’ ಎಂದು ಶಾಸಕ ತನ್ವೀರ್ ಸೇಠ್ ಹೇಳಿದರು.

ನಗರದಲ್ಲಿ ಮಂಗಳವಾರ ‘ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘ’ವು ಆಯೋಜಿಸಿದ್ದ, ರಾಷ್ಟ್ರೀಯ ಶಿಕ್ಷಣ ದಿನಾಚರಣೆ ಹಾಗೂ ಕರ್ನಾಟಕ ರಾಜ್ಯೋತ್ಸವದಲ್ಲಿ ಮಾತನಾಡಿ, ‘ಹಿಂದಿನ ಬಿಜೆಪಿ ಸರ್ಕಾರವು ನ್ಯಾಯ, ರಕ್ಷಣೆ ಒದಗಿಸಿಲ್ಲವೆಂದು ಸಮುದಾಯದ ಶೇ 95ರಷ್ಟು ಮಂದಿ ಒಂದೇ ಪಕ್ಷಕ್ಕೆ ಮತ ಚಲಾಯಿಸಿದ್ದಾರೆ. ಬೇಡಿಕೆ ಈಡೇರಿಸಲು ಆಗುವುದಿಲ್ಲವೆಂದರೆ ನೇರವಾಗಿ ಹೇಳಿಬಿಡಲಿ. ಆದರೆ, ಸಮುದಾಯದ ಮೇಲೆ ಸಮಸ್ಯೆ ಹೇರಬಾರದು’ ಎಂದರು.

‘ಮುಸ್ಲಿಮರಿಗಿದ್ದ ಶೇ 4ರಷ್ಟು 2 ‘ಬಿ’ ಮೀಸಲಾತಿಯನ್ನು ಹಿಂದಿನ ಬಿಜೆಪಿ ಸರ್ಕಾರವು ರದ್ದುಪಡಿಸಿದಾಗ, ಸುಪ್ರೀಂ ಕೋರ್ಟ್ ಮುಂದಿನ ಆದೇಶದವರೆಗೂ ಮೀಸಲಾತಿ ಬದಲಾವಣೆ ಮಾಡದಂತೆ ತೀರ್ಪು ನೀಡಿದೆ. ಅಂತಿಮ ತೀರ್ಪು ನ್ಯಾಯಾಲಯದಿಂದ ಬಂದಾಗ ಯಾರೂ ಮೀಸಲಾತಿ ಬದಲಾಯಿಸಲು ಕೈ ಹಾಕುವುದಿಲ್ಲ. ಹೀಗಾಗಿ ವ್ಯಾಜ್ಯ ಮುಂದುವರಿಸಿದ್ದೇವೆ’ ಎಂದರು.



‘ಕೇಂದ್ರವು ದಲಿತರು, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರಿಗೆ ನೀಡುತ್ತಿದ್ದ ವಿದ್ಯಾರ್ಥಿವೇತನದ ಪಾಲನ್ನು ಕೊಡುತ್ತಿಲ್ಲ. ಗ್ಯಾರಂಟಿ ಯೋಜನೆ ಮಾದರಿಯಲ್ಲೇ ಶಿಕ್ಷಣ, ಉದ್ಯೋಗ ಹಾಗೂ ವಸತಿಗೆ ಆದ್ಯತೆ ನೀಡಬೇಕು’ ಎಂದು ಕೋರಿದರು.

ಇಬ್ಬರಿಗೆ ‘ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿ’ ಪ್ರದಾನ

ನವದೆಹಲಿ (ಪಿಟಿಐ): ಅಹಿಂಸಾತ್ಮಕ ಮಾರ್ಗಗಳ ಮೂಲಕ ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಜನರ ನಡುವೆ ಸೌಹಾರ್ದ ಮೂಡಿಸಲು ತಮ್ಮ ಜೀವನ ಮುಡಿಪಾಗಿಟ್ಟ ಡೇನಿಯಲ್ ಬ್ಯಾರೆನ್‌ಬೊಯಿಮ್ ಮತ್ತು ಅಲಿ ಅಬೂ ಅವ್ವಾದ್ ಅವರಿಗೆ 2023ರ ಸಾಲಿನ ‘ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿ’ ನೀಡಿ ಗೌರವಿಸಲಾಯಿತು.

ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಟಿ.ಎಸ್. ಠಾಕೂರ್ ನೇತೃತ್ವದ ತೀರ್ಪುಗಾರರ ತಂಡವು ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡಿದೆ. ಅರ್ಜೆಂಟೀನಾ ಮೂಲದ ಬ್ಯಾರೆನ್‌ಬೊಯಿಮ್ ಮತ್ತು ಪ್ಯಾಲೆಸ್ಟೀನ್‌ನ ಅವ್ವಾದ್ ಅವರು ಸಂಗೀತ, ಸಂವಾದ ಮತ್ತು ಜನರಲ್ಲಿ ಅರಿವು ಮೂಡಿಸುವ ಮೂಲಕ ಇಸ್ರೇಲ್– ಪ್ಯಾಲೆಸ್ಟೀನ್ ಸಂಘರ್ಷವನ್ನು ಕೊನೆಗಾಣಿಸಲು ಪ್ರಯತ್ನಿಸುತ್ತಾ ಬಂದಿದ್ದಾರೆ.

ಇಂದಿರಾ ಗಾಂಧಿ ಅವರ ಜನ್ಮ ದಿನಾಚರಣೆ ಅಂಗವಾಗಿ ಮಂಗಳವಾರ ವರ್ಚುವಲ್ ಆಗಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಲಕ್ಕುಂಡಿ ಪ್ರಾಚ್ಯ ವಸ್ತು ಸಂಗ್ರಹಕ್ಕೆ ಇದೇ 24 ರಿಂದ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗದಗ ಜಿಲ್ಲೆಯ ಲಕ್ಕುಂಡಿಯನ್ನು ವಿಶ್ವ ಪಾರಂಪರಿಕ ತಾಣದ ಪಟ್ಟಿಗೆ ಸೇರಿಸುವ ಉದ್ದೇಶದಿಂದ ಅಲ್ಲಿನ ಪ್ರಾಚ್ಯ ವಸ್ತುಗಳು, ಶಾಸನಗಳು, ಮೂರ್ತಿಗಳು, ತಾಳೆಗರಿಗಳು, ಕಲ್ಲಿನ ಕಂಬಗಳನ್ನು ವಶಕ್ಕೆ ಪಡೆಯುವ ಉದ್ದೇಶದಿಂದ ಇದೇ 24ರಿಂದ ವಿಶೇಷ ಅಭಿಯಾನ ಆರಂಭಿಸಲಾಗುವುದು ಎಂದು ಕಾನೂನು ಮತ್ತು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಪ್ರತಿಮೆಗಳು, ಶಿಲ್ಪಗಳು, ಕೆತ್ತನೆಯಿಂದ ಕೂಡಿದ ಕಂಬಗಳು, ಶಿಲಾ ಶಾಸನಗಳು, ನಾಣ್ಯಗಳನ್ನು ಕಳೆದುಕೊಂಡಿದ್ದೇವೆ. ಕೆಲವು ಬಟ್ಟೆ ಒಗೆಯುವ ಕಲ್ಲಾಗಿದ್ದರೆ, ಮತ್ತೆ ಕೆಲವು ಜಾನುವಾರುಗಳನ್ನು ಕಟ್ಟುವ ತಾಣಗಳಾಗಿವೆ. ಸ್ಥಳೀಯರಿಗೆ ಅವುಗಳ ಮಹತ್ವದ ಕುರಿತು ಮನವರಿಕೆ ಮಾಡಿ ಅವರಿಂದ ಅವೆಲ್ಲವನ್ನು ಪಡೆಯಲು ತೀರ್ಮಾನಿಸಲಾಗಿದೆ ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಚಿರತೆ ಸೆರೆಗೆ ‘ತುಮಕೂರು ಬೋನು’

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಮಹಿಳೆಯೊಬ್ಬರನ್ನು ಕೊಂದ ಚಿರತೆ ಹಿಡಿಯಲು, ನೆಲಮಂಗಲ ತಾಲ್ಲೂಕಿನ ಶಿವಗಂಗೆ ಬೆಟ್ಟದ ತಪ್ಪಲಿನ ಕಂಬಾಳು ಗೊಲ್ಲರಹಟ್ಟಿ ಸುತ್ತಲಿರುವ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆ ಎಂಟು ಬೋನುಗಳನ್ನು ಇಟ್ಟಿದೆ.

‘ಒಂದು ಸಾರಿ ಸಣ್ಣ ಬೋನುಗಳಿಗೆ ಚಿರತೆ ಬಿದ್ದರೆ, ಮತ್ತೊಮ್ಮೆ ಬೀಳುವುದು ಕಡಿಮೆ. ಅದಕ್ಕಾಗಿ ವಿಶೇಷವಾದ ‘ತುಮಕೂರು ಬೋನು’ ತಂದು ಇಡಲಾಗಿದೆ. ಚಿರತೆ ಚಲನವಲನದ ಮೇಲೆ ನಿಗಾ ಇಡಲು ಕ್ಯಾಮೆರಾ ಅಳವಡಿಸಲಾಗಿದೆ’ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಎತ್ತರವಾಗಿ ಹಾಗೂ ವಿಶಾಲವಾಗಿರುವ ಈ ಬೋನನ್ನು ತುಮಕೂರು ಭಾಗದಲ್ಲಿ ಚಿರತೆ ಹಿಡಿಯಲು ಬಳಸುತ್ತಿದ್ದರಿಂದ, ಅದಕ್ಕೆ ತುಮಕೂರು ಬೋನು ಎಂದು ಹೆಸರು.

ತಹಶೀಲ್ದಾರ್ ಭೇಟಿ: ತಹಶೀಲ್ದಾರ್ ಅಮೃತ್ ಆತ್ರೇಶ್ ಅವರು ಮಂಗಳವಾರ ಚಿರತೆ ಓಡಾಡುವ ಸಿಗೆಪಾಳ್ಯ, ಹುರಿಯಪ್ಪನ ಪಾಳ್ಯ, ಕಂಬಾಳು ಗೊಲ್ಲರ ಹಟ್ಟಿ ಗ್ರಾಮಗಳಿಗೆ ಭೇಟಿ ನೀಡಿ ಗ್ರಾಮಸ್ಥರಿಗೆ ಧೈರ್ಯ ತುಂಬಿದರು. ನಂತರ ಚಿರತೆ ದಾಳಿಗೆ ಬಲಿಯಾದ ಕರಿಯಮ್ಮ ಅವರ ಕುಟುಂಬಸ್ಥರನ್ನು ಭೇಟಿ ಮಾಡಿ ಸಾಂತ್ವನ ಹೇಳಿದರು.

ಶಿವಗಂಗೆ ಬೆಟ್ಟದ ತಪ್ಪಲಿನಲ್ಲಿರುವ ಮುದ್ದೀರೇಶ್ವರ ದೇವಾಲಯದ ಸುತ್ತಮುತ್ತ ಚಿರತೆ ಸುಳಿದಾಡುವುದನ್ನು ಜನರು ನೋಡಿದ್ದು, ಚಿರತೆ ಸಿಗುವವರೆಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಮುದ್ದೀರೇಶ್ವರ ಜಾತ್ರೆ ನಡೆಸದಂತೆ ತಹಶೀಲ್ದಾರ್ ಹೇಳಿದರು.



ಚಿರತೆ ಸೆರೆ ಹಿಡಿಯಲು ಅರಣ್ಯ ಇಲಾಖೆ ಅಳವಡಿಸಿದ ತುಮಕೂರು ಬೋನು

‘ಭಾಷೆ ಬಳಸಿದಷ್ಟೂ ಬೆಳೆಯುತ್ತದೆ’

ಮಾನವ ಸಂಪನ್ಮೂಲ ಕನ್ನಡ ಸಮ್ಮೇಳನದಲ್ಲಿ ಲೇಖಕ ಡಾ. ನಾ. ಸೋಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾವುದೇ ಭಾಷೆಯಾಗಲಿ, ನಿತ್ಯದ ವ್ಯವಹಾರದಲ್ಲಿ ಸರಾಗವಾಗಿ ಬಳಸುತ್ತಿದ್ದರೆ ಮಾತ್ರ ಆ ಭಾಷೆ ಬೆಳೆಯುತ್ತದೆ’ ಎಂದು ಲೇಖಕ ಡಾ. ನಾ. ಸೋಮೇಶ್ವರ ಅಭಿಪ್ರಾಯಪಟ್ಟರು.

ನಗರದಲ್ಲಿ ಮಂಗಳವಾರ ನಿರಾಂತಕ ಸ್ವಯಂ ಸೇವಾ ಸಂಸ್ಥೆ ಆಯೋಜಿಸಿದ್ದ ‘ಎಂಟನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ಕನ್ನಡ ಸಮ್ಮೇಳ’ನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಕಾರ್ಮಿಕರು, ಸಂಸ್ಥೆಯ ಮುಖ್ಯಸ್ಥರೊಂದಿಗೆ ಸಮಸ್ಯೆಗಳನ್ನು ಹೇಳಿಕೊಳ್ಳುವಾಗ ತಮ್ಮದೇ ಭಾಷೆಯಲ್ಲಿ ಸಂವಹನ ನಡೆಸಬೇಕು. ಇದರಿಂದ ಮಾನವ ಸಂಪನ್ಮೂಲ ಅಭಿವೃದ್ಧಿಯಾಗುತ್ತದೆ. ಸಂಸ್ಥೆಯೂ ಬೆಳೆಯುತ್ತದೆ’ ಎಂದರು.

‘ಮಾನವ ಸಂಪನ್ಮೂಲ ಕ್ಷೇತ್ರಕ್ಕೆ ಸಂಬಂಧಪಟ್ಟ ತಾಂತ್ರಿಕ ಪದಗಳು, ಪಾರಿಭಾಷಿಕ ಪದಗಳನ್ನು ಕನ್ನಡದಲ್ಲಿ ಆಲೋಚಿಸಲು ಪ್ರಯತ್ನಿಸಿ’ ಎಂದು ಅವರು ಸಲಹೆ ನೀಡಿದರು.

ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಬಳಸುವ ಪರಿಕಲ್ಪನೆಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ನಿಘಂಟು ಅಥವಾ ಶಬ್ದಕೋಶ ರೂಪದಲ್ಲಿ ಸಾಹಿತ್ಯ ಸೃಷ್ಟಿಸಬೇಕಿದೆ. ಹಾಗಾದಾಗ ಮಾತ್ರ ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಕನ್ನಡ ಭಾಷೆಯನ್ನು ಬೆಳೆಸಲು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಸಾಧನೆ ಮಾಡಿದ ವೆಂಕಟರಮಣ, ದಿ ಪ್ರಿಂಟರ್ಸ್ (ಮೈಸೂರು) ಲಿ.ನ ಎಚ್‌ಆರ್ ವಿಭಾಗದ ಮುಖ್ಯಸ್ಥ ರಾಜೀವ ವೇಲೂರ್, ಮ್ಯಾಕ್ಸಿ ಎಫ್. ಫರ್ನಾಂಡಿಸ್, ಆನಂದ ಅವರಿಗೆ ‘ಮಾನವ ಸಂಪನ್ಮೂಲ ಕ್ಷೇತ್ರದ ಹಿರಿಯ ಸಾಧಕ ಪ್ರಶಸ್ತಿ- 2024’ ಹಾಗೂ ಶಿವಕುಮಾರ್ ಕೆ.ಎಂ. ವಿಶ್ವೇಶ್ವರ ಹೆಗಡೆ, ಸಂತೋಷ್ ಶೆಟ್ಟಿ ಶ್ರೀರಾಮ್ ಪಟ್ವಾರಿ, ಕೋಮಲ ಮೂರ್ತಿ, ಶಿಲ್ಪ ಎನ್. ಅವರಿಗೆ ‘ಮಾನವ ಸಂಪನ್ಮೂಲ ಕ್ಷೇತ್ರದ ಯುವ ಸಾಧಕ ಪ್ರಶಸ್ತಿ- 2024’ ನೀಡಿ ಗೌರವಿಸಲಾಯಿತು.



ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಸಾಧನೆ ಮಾಡಿದ ಆನಂದ್ ಎಸ್., ಮ್ಯಾಕ್ಸಿ ಎಫ್. ಫರ್ನಾಂಡಿಸ್, ರಾಜೀವ್ ವೇಲೂರ್ ಮತ್ತು ವೆಂಕಟರಮಣ ಪಿ. ಅವರಿಗೆ ‘ಮಾನವ ಸಂಪನ್ಮೂಲ ಕ್ಷೇತ್ರದ ಹಿರಿಯ ಸಾಧಕ ಪ್ರಶಸ್ತಿ 2024’ ನೀಡಿ ಗೌರವಿಸಲಾಯಿತು.

ನಗರದಲ್ಲಿ ಇಂದು

‘ಉಚಿತ ಸ್ತನ ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್ ತಪಾಸಣಾ ಶಿಬಿರ’: ಅತಿಥಿಗಳು: ರಘುನಂದನ್ ಮೂರ್ತಿ, ಆರ್. ಎಸ್. ಉಮಾದೇವಿ, ವಿ. ಭಾಗ್ಯಲಕ್ಷ್ಮಿ, ಬಿ.ಎಂ. ಯಶೋದಾ, ಸುರೇಶ ವೀರಪ್ಪ ಹಳಿಯಾಳ್, ಎಸ್.ವಿ. ನಾಗಲಕ್ಷ್ಮಿ, ಎಸ್. ವಿ. ಸುರೇಶ್, ಆಯೋಜನೆ: ಖಜಾನೆ ಇಲಾಖೆ, ಕರ್ನಾಟಕ ಕ್ಯಾನ್ಸರ್ ಸಂಸ್ಥೆ, ಸ್ಥಳ: ಹೆಚ್ಚುವರಿ ರಾಜ್ಯ ಹುಜೂರ್ ಖಜಾನೆ, ಹೊಸ ಕಚೇರಿ ಕಟ್ಟಡ, ಕೆ.ಆರ್. ವೃತ್ತ, ಬೆಳಿಗ್ಗೆ 9.30ರಿಂದ

ಕನ್ನಡ ರಾಜ್ಯೋತ್ಸವ–2024: ಅತಿಥಿಗಳು: ಎ.ಎಸ್. ಧರ್ಮೇಂದ್ರ ಕುಮಾರ್, ಡಿ.ಎನ್.ವಿ. ಶ್ರೀನಿವಾಸರಾವ್, ಎಸ್.ಕೆ.ಎಲ್. ದಾಸ್, ಚಕ್ರವರ್ತಿ ಪಿ., ಅರುಣ್ ಗಾನಪ್ಪನ್, ಆದರ್ಶ್ ಎಂ.ಎಸ್., ಆಯೋಜನೆ: ಕೆನರಾ ಬ್ಯಾಂಕ್ ಕನ್ನಡ ಸಂಘ, ಸ್ಥಳ: ಕೆನರಾ ಬ್ಯಾಂಕ್ ಮುಖ್ಯ ಕಚೇರಿ, ನವೀನ್ ಸಂಕೀರ್ಣ, ಟ್ರಿನಿಟಿ ವೃತ್ತ, ಬೆಳಿಗ್ಗೆ 10

‘1979ರ ನವೆಂಬರ್ 20ರ 45 ವರ್ಷಗಳ ಹಿಂದಿನ ಕನ್ನಡಪರ ಹೋರಾಟದ ಯಶಸ್ಸಿನ ಮತ್ತು ರಾಜ್ಯದಲ್ಲಿ ಭೂ–ವಿದ್ಯಾದಾನದ ಶಾಲಾ ಜಮೀನು ಗೇಣಿ ರೈತರ ಸಮಸ್ಯೆ’: ಎಚ್.ಎಂ. ರೇವಣ್ಣ, ಅಧ್ಯಕ್ಷತೆ: ಬಿ. ಸ್ವಾಮಿರಾವ್, ಅತಿಥಿಗಳು: ಬೇಲೂರು ಗೋಪಾಲಕೃಷ್ಣ, ಸಿ. ಸೋಮಶೇಖರ್, ಮಹಿಮ ಪಟೇಲ್, ಆಯೋಜನೆ: ರಾಜ್ಯ ಭೂ–ವಿದ್ಯಾದಾನದ ಶಾಲಾ ಜಮೀನುಗಳ ಗೇಣಿ ರೈತ ಹೋರಾಟ ಸಮಿತಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30



ನ್ಯಾ.ಎಚ್.ಎನ್. ನಾಗಮೋಹನದಾಸ್

‘ನ್ಯಾಯ ಸಂಕಲ್ಪ’ ಬಿಡುಗಡೆ: ಎಚ್.ಎನ್. ನಾಗಮೋಹನದಾಸ್, ಸ್ಥಳ: ಪ್ರೆಸ್‌ಕ್ಲಬ್ ಬೆಂಗಳೂರು, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

69ನೇ ಕನ್ನಡ ರಾಜ್ಯೋತ್ಸವ, ಐದನೇ ವರ್ಷದ ವಾರ್ಷಿಕೋತ್ಸವ, ಸ್ವಾಮಿ ವಿವೇಕಾನಂದ ಸದ್ಭಾವನಾ ಪ್ರಶಸ್ತಿ ಪ್ರದಾನ: ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ಚಂದ್ರಶೇಖರ್, ನೀಲಮ್ಮ, ‘ತೀರ್ಥ ಬೇಕಾ? ಬೇಡ್ವಾ?’ ನಾಟಕ ಪ್ರದರ್ಶನ: ರಚನೆ: ವಿಜಯ್ ಕುಮಾರ್, ನಿರ್ದೇಶನ: ನಾಗೇಂದ್ರ ಪ್ರಸಾದ್, ‘ಕೃಷ್ಣೇಗೌಡನ ಆನೆ’ ನಾಟಕ ಪ್ರದರ್ಶನ: ರಚನೆ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ನಿರ್ದೇಶನ: ಭಾಸ್ಕರ್ ಗೌಡ, ಆಯೋಜನೆ: ಉದ್ಭವ ಕಲಾವಿದರು, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಮಧ್ಯಾಹ್ನ 3

‘ಕಿಂಡರ್ ಕಥಾಮಾಲಿಕೆ ಎಂಟು ವರ್ಣರಂಜಿತ ಮಕ್ಕಳ ಕೃತಿಗಳ’ ಬಿಡುಗಡೆ: ಬೊಳುವಾರು ಮಹಮದ್ ಕುಂಞಿ, ಅಧ್ಯಕ್ಷತೆ: ಕನಗವಲ್ಲಿ ಎಂ., ಉಪಸ್ಥಿತಿ: ಮಿಶಾಯಿಲ್ ಹೈನ್ಸ್ಟ್, ಬಿ. ಮಂಜುನಾಥ್, ಆಯೋಜನೆ: ಸಾರ್ವಜನಿಕ ಗ್ರಂಥಾಲಯ ಇಲಾಖೆ, ಸ್ಥಳ: ನಗರ ಕೇಂದ್ರ ಗ್ರಂಥಾಲಯದ ಸಭಾಂಗಣ, ಸಂಪಿಗೆ ರಸ್ತೆ, ಮಲ್ಲೇಶ್ವರ, ಸಂಜೆ 4

ಕಾರ್ತಿಕ ಸಂಗೀತ ಸಂಭ್ರಮ, ಕನಕದಾಸರ ಜಯಂತಿ, ಕನ್ನಡ ರಾಜ್ಯೋತ್ಸವ, ಹರಿದಾಸ ಸಂಭ್ರಮ, ಅನ್ನಮಾಚಾರ್ಯರ ಸಂಸ್ಮರಣೆ–2024: ಸುಗಮ ಸಂಗೀತ: ಶ್ರಾವ್ಯ ಆಚಾರ್, ಹಾರ್ಮೋನಿಯಂ: ಪ್ರಮೋದ್ ಶ್ಯಾಮ್, ತಬಲ: ಸುದತ್ತಾ ಎಲ್.ಎಸ್., ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6ರಿಂದ

‘ನಬಾರ್ಡ್‌ನಿಂದ ಅನ್ಯಾಯ: ಸಚಿವರಾದ ಚಲುವರಾಯಸ್ವಾಮಿ, ರಾಜಣ್ಣ ಕಿಡಿ

‘ಬಾಯಿ ಬಿಡದ ಎಚ್‌ಡಿಕೆ, ಜೋಶಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ರೈತರ ಪರ ಧ್ವನಿ ಎತ್ತಲು ಸಾಧ್ಯವಾಗದೇ ಇದ್ದರೆ ರೈತ ಪರ ಎಂದು ಹೇಳಿಕೊಳ್ಳುವ ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಮತ್ತು ಪ್ರಲ್ಹಾದ ಜೋಶಿ ಕರ್ನಾಟಕವನ್ನು ಏಕೆ ಪ್ರತಿನಿಧಿಸುತ್ತಿದ್ದಾರೆ’ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಪ್ರಶ್ನಿಸಿದರು.

ನಬಾರ್ಡ್ ಅಲ್ಪಾವಧಿ ಕೃಷಿ ಸಾಲದ ಪುನರ್ಧನ ಮಿತಿ ಭಾರಿ ಪ್ರಮಾಣದಲ್ಲಿ ಇಳಿಕೆ ಮಾಡಿರುವ ಕಾರಣ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ ಜತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವಿಚಾರವಾಗಿ ಕೇಂದ್ರ ಸಚಿವರು ಒಮ್ಮೆಯೂ ಬಾಯಿ ಬಿಟ್ಟಿಲ್ಲ ಎಂದರು.

ಕೃಷಿ ಸಾಲದ ಪುನರ್ಧನ ಮಿತಿಯನ್ನು ನಬಾರ್ಡ್ ಹಠಾತ್ ಇಳಿಕೆ ಮಾಡಿದೆ. ನಬಾರ್ಡ್ ಕೇಂದ್ರ ಸರ್ಕಾರದ ಅಧೀನದಲ್ಲೇ ಬರುವುದರಿಂದ ಕೇಂದ್ರ ಸರ್ಕಾರವೇ ದ್ವೇಷದ ಕಾರಣಕ್ಕೆ ರಾಜ್ಯಕ್ಕೆ ಅನ್ಯಾಯ ಮಾಡಿದೆ. ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ನಬಾರ್ಡ್‌ನಿಂದ ₹9,200 ಕೋಟಿ ನಿರೀಕ್ಷೆಯಲ್ಲಿ ಇದ್ದೆವು. ಆದರೆ ಕಳೆದ ವರ್ಷಕ್ಕಿಂತ ಶೇ 58ರಷ್ಟು ಕಡಿಮೆ ಬಂದಿದೆ ಎಂದರು.

ಇದರಿಂದಾಗಿ ಸಹಕಾರ ಸಂಘಗಳಿಂದ ಬಡ್ಡಿರಹಿತ ಅಲ್ಪಾವಧಿ ಬೆಳೆ ಸಾಲ ನೀಡುವುದು ಕಷ್ಟವಾಗಲಿದೆ. ಕೃಷಿ ಕ್ಷೇತ್ರದ ಮೇಲೆ ಅಡ್ಡಪರಿಣಾಮ ಬೀರಲಿದೆ. ಆಹಾರ ಧಾನ್ಯ ಉತ್ಪಾದನೆಯೂ ಕುಸಿತವಾಗಲಿದೆ. ಹೊಸ ರೈತರಿಗೆ ಸಾಲ ಸಿಗುವುದಿಲ್ಲ. ಖಾಸಗಿಯವರ ಬಳಿ ಹೆಚ್ಚು ಬಡ್ಡಿಗೆ ಸಾಲ ಪಡೆಯಬೇಕಾಗುತ್ತದೆ. ರೈತರಿಗೆ ಶಕ್ತಿ ತುಂಬುವ ಕೆಲಸ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜವಾಬ್ದಾರಿ. ಲಾಭದಾಯಕ ವ್ಯವಹಾರಗಳಿಗೆ ಮಾತ್ರ ಸಾಲ ಕೊಡುತ್ತೇವೆ ಎನ್ನುವುದಾದರೆ ಸರ್ಕಾರಗಳೇನು ಕಾರ್ಪೊರೇಟ್ ಸಂಸ್ಥೆಗಳೇ ಎಂದು ಚಲುವರಾಯಸ್ವಾಮಿ ಪ್ರಶ್ನಿಸಿದರು.

ಈ ಹಿಂದೆ ಅತಿವೃಷ್ಟಿಗೆ ಪರಿಹಾರ ನೀಡುವ ವಿಚಾರದಲ್ಲಿ ಕೇಂದ್ರ ಸರ್ಕಾರ ಸ್ಪಂದಿಸದ ಕಾರಣ ಸುಪ್ರೀಂ ಕೋರ್ಟ್‌ನ ಮೊರೆಗೆ ಹೋಗಿದ್ದೆವು. ಆ ಬಳಿಕ ಕೇಂದ್ರ ಪರಿಹಾರ ಬಿಡುಗಡೆ ಮಾಡಿತ್ತು. ಈಗ ಮತ್ತೆ ತಾರತಮ್ಯ ಮತ್ತು ದ್ವೇಷದ ರಾಜಕಾರಣ ಮಾಡಿದರೆ ಕಾನೂನು ಹೋರಾಟ ಸೇರಿ ಯಾವುದೇ ರೀತಿಯ ಹೋರಾಟಕ್ಕೂ ಸಿದ್ಧ ಎಂದು ಅವರು ಎಚ್ಚರಿಕೆ ನೀಡಿದರು.

ಇದೇ 26ರಿಂದ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಸಮ್ಮೇಳನ ಆರಂಭವಾಗಲಿದೆ. ಇದೇ ವೇಳೆ ಸಹಕಾರ ಕ್ಷೇತ್ರದ ನಿಯೋಗ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಲಿದೆ. ಸಮಯಾವಕಾಶ ಸಿಕ್ಕರೆ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಲು ನಿರ್ಧರಿಸಲಾಗಿದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ತಿಳಿಸಿದರು.

ಈ ಸಾಲಿಗೆ ಕೃಷಿ ಪತ್ತಿನ ಸಂಸ್ಥೆಗಳ ಮೂಲಕ ಮಂಜೂರು ಮಾಡಲು ಉದ್ದೇಶಿಸಿರುವ ₹25,000 ಕೋಟಿ ಸಾಲ ವಿತರಿಸಲು ಸಾಧ್ಯವಾಗುವುದಿಲ್ಲ. ರಾಜ್ಯದಲ್ಲಿ ಸಹಕಾರ ಬ್ಯಾಂಕ್‌ಗಳಲ್ಲಿ ಠೇವಣಿಗಳು ಮತ್ತು ಸಂಪನ್ಮೂಲಗಳ ಕೊರತೆ ಇರುವುದರಿಂದ ಅಲ್ಪಾವಧಿ ಕೃಷಿ ಸಾಲ ವಿತರಣೆ ಕುಂಠಿತವಾಗಿದೆ. ಇದು ರಾಜ್ಯದ ಹಣಕಾಸಿನ ವ್ಯವಸ್ಥೆಯ ಮೇಲೂ ಪರಿಣಾಮ ಬೀರಲಿದೆ ಎಂದರು.



ಚಲುವರಾಯಸ್ವಾಮಿ



ಕೆ.ಎನ್‌.ರಾಜಣ್ಣ

ಅಪಘಾತ ನಿಯಂತ್ರಣಕ್ಕೆ ಸಮೂಹ ಸಾರಿಗೆ ಬಳಕೆಗೆ ಉತ್ತೇಜನ: ಎನ್‌.ವಿ.ಪ್ರಸಾದ್

ಬಿಎಂಟಿಸಿ ಬಸ್ 'ಫೀಡರ್ ಸೇವೆ' ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಸಮೂಹ ಸಾರಿಗೆ ಪ್ರಯಾಣವನ್ನು ಉತ್ತೇಜಿಸಲು ಮುಂದಿನ ಐದು ವರ್ಷಗಳಲ್ಲಿ ಬಿಎಂಟಿಸಿ ಫೀಡರ್ ಸೇವೆಯನ್ನು 6,500ರಿಂದ 10 ಸಾವಿರಕ್ಕೆ ಹೆಚ್ಚಿಸಲಾಗುತ್ತದೆ' ಎಂದು ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್‌. ವಿ.ಪ್ರಸಾದ್ ತಿಳಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಮಂಗಳವಾರ ಆಯೋಜಿಸಿದ್ದ 'ಅತಿವೇಗದ ನಿಯಂತ್ರಣಕ್ಕಾಗಿ ಸಮೂಹ ಮಾಧ್ಯಮ ಅಭಿಯಾನ'ಕ್ಕೆ ಚಾಲನೆ ನೀಡಿ, ರಸ್ತೆ ಸುರಕ್ಷತೆ ಜಾಗೃತಿ ಮೂಡಿಸುವ ಕಿರುಚಿತ್ರಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಸಮೂಹ ಸಾರಿಗೆ ಬಳಸುವ ಮೂಲಕ ಅಪಘಾತಗಳ ಸಂಖ್ಯೆಯನ್ನು ಕಡಿತಗೊಳಿಸ ಬಹುದು. ಸಂಚಾರ ದಟ್ಟಣೆ ನಿಯಂತ್ರಣವಾಗುತ್ತದೆ ಹಾಗೂ ಪರಿಸರ ಮಾಲಿನ್ಯವನ್ನೂ ತಪ್ಪಿಸಬಹುದಾಗಿದೆ' ಎಂದು ವಿವರಿಸಿದರು.

ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗದ ಎಡಿಜಿಪಿ ಕೆ.ವಿ.ಶರತ್‌ಚಂದ್ರ ಮಾತನಾಡಿ, 'ಬೆಂಗಳೂರಿನಲ್ಲಿ ನಾಲ್ಕು ವರ್ಷಗಳಲ್ಲಿ ರಸ್ತೆ ಅಪಘಾತದ ಜತೆಗೆ ಸತ್ತವರ ಸಂಖ್ಯೆ ಕೂಡ ದುಪ್ಪಟ್ಟಾಗಿದೆ. ವಾಹನ ಸವಾರರು ಮಾಡಿದ ತಪ್ಪಿಗೆ ಪಾದಚಾರಿಗಳು ಕೂಡ ಸಾವನ್ನಪ್ಪಿರುವ ಘಟನೆಗಳಿವೆ. ಈ ವರ್ಷದ ಅಕ್ಟೋಬರ್ ಅಂತ್ಯದವರೆಗೆ 723 ಮಂದಿ ಸಾವನ್ನಪ್ಪಿದ್ದು, ಸತ್ತವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದ್ವಿಚಕ್ರವಾಹನ ಸವಾರರಿದ್ದಾರೆ' ಎಂದರು.

'ಅಪಘಾತಗಳನ್ನು ನಿಯಂತ್ರಿಸಲು ಇಲಾಖೆಯಿಂದ ಸಮಗ್ರ ಸಂಚಾರ ನಿರ್ವಹಣಾ ವ್ಯವಸ್ಥೆ(ಐಟಿಎಂಎಸ್)ಯಂತಹ ಕ್ರಮಗಳನ್ನು ಕೈಗೊಂಡಿದ್ದೇವೆ. ಆದರೂ ಅಪಘಾತಗಳು ಸಂಭವಿಸುತ್ತಿವೆ. ಇದಕ್ಕೆ ಕಾರಣ, ಹೆಲ್ಮೆಟ್ ಧರಿಸದೇ ವಾಹನ ಚಲಾಯಿಸುವುದು, ಹೆಲ್ಮೆಟ್ ಧರಿಸಿದರೂ, ಬೆಲ್ಟ್ ಹಾಕದಿರುವುದು. ನಾವು ಎಷ್ಟೇ ಆಂದೋಲನ ಮಾಡಿ, ಅರಿವು ಮೂಡಿಸಿದರೂ, ಜನರಲ್ಲಿ ಜಾಗೃತಿ ಮೂಡದ ಹೊರತು, ಅಪಘಾತಗಳನ್ನು ತಪ್ಪಿಸಲು ಸಾಧ್ಯವಿಲ್ಲ' ಎಂದು ಹೇಳಿದರು.

'ಸರ್ಕಾರ ₹90 ಕೋಟಿ ನೀಡಿದೆ: 'ರಸ್ತೆ ಅಪಘಾತಗಳನ್ನು ನಿಯಂತ್ರಿಸುವುದಕ್ಕಾಗಿ ರಾಜ್ಯ ವ್ಯಾಪಿ ರಸ್ತೆ ಸುರಕ್ಷತೆಗಾಗಿ ಸರ್ಕಾರ ₹90 ಕೋಟಿ ಅನುದಾನ ನೀಡಿದೆ. ರಸ್ತೆಯ ಗುಣಮಟ್ಟ ಕೂಡ ಸುಧಾರಣೆ ಆಗಬೇಕು. ವಾಹನ ಸವಾರರು ಕೂಡ ಎಚ್ಚರಿಕೆಯಿಂದ ಚಾಲನೆ ಮಾಡಬೇಕು' ಎಂದರು.

'ಅಪಘಾತ ಮರು ಸೃಷ್ಟಿ'ಯ ಎರಡು ಸಂದರ್ಭಗಳ ಕಿರುಚಿತ್ರಗಳನ್ನು ಬಿಡುಗಡೆ ಮಾಡಲಾಯಿತು. ಒಂದರಲ್ಲಿ, ದ್ವಿಚಕ್ರ ವಾಹನವನ್ನು ವೇಗವಾಗಿ ಚಲಾಯಿಸಿದಾಗ ಅಪಘಾತ ಹೇಗೆ ಸಂಭವಿಸುತ್ತದೆ ಹಾಗೂ ಎರಡನೆಯದರಲ್ಲಿ ದ್ವಿಚಕ್ರ ವಾಹನವನ್ನು ನಿಧಾನವಾಗಿ ಚಾಲನೆ ಮಾಡಿದರೆ ಅಪಘಾತ ಹೇಗೆ ತಪ್ಪಿಸಬಹುದು ಎಂಬ ದೃಶ್ಯಗಳಿವೆ. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ಕೆಎಸ್‌ಆರ್‌ಎಸ್‌ಎ) ರಾಜ್ಯದಾದ್ಯಂತ ಒಂದು ತಿಂಗಳು ಎಲ್ಲಾ ಪ್ರಚಾರ ಮಾಧ್ಯಮಗಳಲ್ಲಿ ಇವುಗಳನ್ನು ಪ್ರದರ್ಶಿಸುತ್ತದೆ. ಸಾರಿಗೆ ಇಲಾಖೆ ಆಯುಕ್ತ ಯೋಗೀಶ್, ನಿಮ್ಹಾನ್ಸ್ ನಿವೃತ್ತ ನಿರ್ದೇಶಕ ಗುರುರಾಜ್ ಉಪಸ್ಥಿತರಿದ್ದರು.

ನಗರದಲ್ಲಿ ಐದು ವರ್ಷಗಳ ಅಪಘಾತಗಳ ವಿವರ

ವರ್ಷ	ಅಪಘಾತಗಳು (ಮರಣ ಹೊಂದಿದ ಪ್ರಕರಣಗಳು)	ಮೃತಪಟ್ಟವರು	ಗಾಯಾಳುಗಳು	ಒಟ್ಟು ಅಪಘಾತ
2020	334	344	1,678	1,928
2021	618	651	2,828	3,211
2022	751	771	3,218	3,823
2023	882	910	4,191	4,974
2024 (ಅ.31ರವರೆಗೆ)	705	723	3,360	3,969

2024ರಲ್ಲಿ 723 ಮಂದಿ ಸಾವು

- ರಾಜ್ಯದಲ್ಲಿ 2023ರಲ್ಲಿ 12,321 ರಸ್ತೆ ಅಪಘಾತಗಳು ಸಂಭವಿಸಿವೆ. ಅಪಘಾತಕ್ಕೊಳಗಾದವರಲ್ಲಿ ಶೇ 43.7(5389) ದ್ವಿಚಕ್ರ ವಾಹನ ಸವಾರರು ಮತ್ತು ಶೇ 19.63(2418) ಪಾದಚಾರಿಗಳು.
- 2023ರಲ್ಲಿ ರಾಜ್ಯದಲ್ಲಿ ಬೆಂಗಳೂರು ನಗರ, ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಅತಿ ಹೆಚ್ಚು ಅಪಘಾತಗಳು ಸಂಭವಿಸಿವೆ.
- ಬೆಂಗಳೂರು ನಗರದಲ್ಲಿ 2024ರ ಅಕ್ಟೋಬರ್ 31ರವರೆಗೆ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ 723 ಮಂದಿ ಮೃತಪಟ್ಟಿದ್ದಾರೆ. ಇದರಲ್ಲಿ ದ್ವಿಚಕ್ರ ಸವಾರರ ಸಂಖ್ಯೆಯೇ ಅಧಿಕ.



'ಅತಿವೇಗದ ನಿಯಂತ್ರಣಕ್ಕಾಗಿ ಸಮೂಹ ಮಾಧ್ಯಮ ಅಭಿಯಾನ'ಕ್ಕೆ ರಸ್ತೆ ಸುರಕ್ಷತೆ ಜಾಗೃತಿ ಕುರಿತ ಭಿತ್ತಿ ಪತ್ರಗಳನ್ನು ಬಿಡುಗಡೆ ಮಾಡುವ ಮೂಲಕ ಸಾರಿಗೆ ಇಲಾಖೆಯ ಕಾರ್ಯದರ್ಶಿ ಎನ್‌.ವಿ. ಪ್ರಸಾದ್ ಚಾಲನೆ ನೀಡಿದರು. ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗದ ಎಡಿಜಿಪಿ ಕೆ.ವಿ.ಶರತ್‌ಚಂದ್ರ ಸಾರಿಗೆ ಹಾಗೂ ರಸ್ತೆ ಸುರಕ್ಷತೆ ಆಯುಕ್ತ ಯೋಗೀಶ್ ಎ.ಎಂ. ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ.



ಕ್ಯಾನ್ಸರ್ ಪತ್ತೆಗೆ 'ಹೊಸ ಪರೀಕ್ಷೆ'

ಬೆಂಗಳೂರು: ಕ್ಯಾನ್ಸರ್ ಅನ್ನು ಪ್ರಾಥಮಿಕ ಹಂತದಲ್ಲಿ ಹಾಗೂ ಮರುಕಳಿಸುವ ಪೂರ್ವದಲ್ಲಿಯೇ ಪತ್ತೆ ಹಚ್ಚುವ 'ನಾವೆಲ್–ಬಯೋಮಾರ್ಕರ್ ಡಯಾಗ್ನಸ್ಟಿಕ್' ಎಂಬ ಹೊಸ ಪರೀಕ್ಷಾ ವಿಧಾನವೊಂದನ್ನು ಎಚ್‌ಸಿಜಿ ಕ್ಯಾನ್ಸರ್ ಸೆಂಟರ್, ಟ್ರುಕನ್ ಡಯಾಗ್ನೋಸ್ಟಿಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಸಹಯೋಗದಲ್ಲಿ ಅಭಿವೃದ್ಧಿ‍ಪಡಿಸಿದೆ.

ಈ ಹೊಸ ಸಂಶೋಧನೆಯ ನೆರವಿನಿಂದ ಕ್ಯಾನ್ಸರ್ ಬರುವ ಮುನ್ನ ಹಾಗೂ ಮರುಕಳಿಸುವ ಪೂರ್ವದಲ್ಲಿಯೇ ನಿಖರವಾಗಿ ಪತ್ತೆ ಹಚ್ಚುವ ಜೊತೆಗೆ, ಯಾವುದೇ ರೀತಿಯ ಕ್ಯಾನ್ಸರ್ ಆಗಿದ್ದರೂ ಅದಕ್ಕೆ ನಿಖರವಾದ ಹಾಗೂ ಪರಿಣಾಮಕಾರಿ ಚಿಕಿತ್ಸೆಯನ್ನು ಈ ಪರೀಕ್ಷೆ ಮೌಲ್ಯಮಾಪನ ಮಾಡಲಿದೆ ಎಂದು ಎಚ್‌ಸಿಜಿ ಪ್ರಕಟಣೆ ತಿಳಿಸಿದೆ. ಈ ಪರೀಕ್ಷೆಯ ಫಲಿತಾಂಶಗಳು ಮುಂದೆ ಕಿಮೊ ಅಥವಾ ಉದ್ದೇಶಿತ ಚಿಕಿತ್ಸೆಗೆ ಒಳಗಾಗುವ ರೋಗಿಗಳನ್ನು ಮೇಲ್ವಿಚಾರಣೆ ಮಾಡಲು ನೆರವಾಗುತ್ತದೆ ಎಂದಿದೆ.

'ಈ ಹೊಸ ಪರೀಕ್ಷೆ ಕ್ಯಾನ್ಸರ್ ಪತ್ತೆಗೆ ಈಗಿರುವ ವಿಧಾನಗಳಿಗಿಂತ ಉತ್ತಮವಾಗಿದೆ' ಎಂದು ಎಚ್‌ಸಿಜಿ ಕಾರ್ಯನಿರ್ವಾಹಕ ಅಧ್ಯಕ್ಷ ಡಾ.ಬಿ.ಎಸ್ ಅಜಯ್ ಕುಮಾರ್ ಹೇಳಿದರು.

ಗಿಗ್ ಕಾರ್ಮಿಕರ ಸುರಕ್ಷಣಾ ಕಾಯ್ದೆ ಜಾರಿ ಒತ್ತಾಯ

ಬೆಂಗಳೂರು: ಗಿಗ್ ಕಾರ್ಮಿಕರ ಸುರಕ್ಷತಾ ಕಾಯ್ದೆ ಜಾರಿ ಮಾಡಬೇಕು ಎಂದು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ (ಜೆಸಿಟಿಯು) ದುಂಡು ಮೇಜಿನ ಸಭೆಯಲ್ಲಿ ಒತ್ತಾಯಿಸಲಾಯಿತು.

'ವಿಧಾನಮಂಡಲದ ಚಳಿಗಾಲದ ಅಧಿವೇಶನದಲ್ಲಿ ಮಸೂದೆ ಮಂಡಿಸಿ ಒಪ್ಪಿಗೆ ಪಡೆದು, ಕಾಯ್ದೆಯನ್ನು ಜಾರಿಗೊಳಿಸಬೇಕು' ಎಂದು ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಮಂಗಳವಾರ ನಡೆದ ದುಂಡು ಮೇಜಿನ ಸಭೆಯಲ್ಲಿ ಆಗ್ರಹಿಸಿದರು.

'ಕಾರ್ಮಿಕರ ಸುರಕ್ಷತೆ ಮತ್ತು ಕಲ್ಯಾಣ ಯೋಜನೆಗಳನ್ನು ರೂಪಿಸಲು ಸರ್ಕಾರ ಆ್ಯಪ್ ಆಧಾರಿತ ಗಿಗ್ ನೌಕರರ ಸಾಮಾಜಿಕ ಸುರಕ್ಷತಾ ಕಾಯ್ದೆಯ ಕರಡು ಮಸೂದೆ ರಚಿಸಿರುವುದು ಸ್ವಾಗತಾರ್ಹ. ಕೆಲವು ಮಾರ್ಪಾಡುಗಳೊಂದಿಗೆ ಅಧಿವೇಶನದಲ್ಲಿ ಮಂಡಿಸಬೇಕು' ಎಂದು ಒತ್ತಾಯಿಸಿದರು.

'ರಾಜ್ಯದಲ್ಲಿ ಸುಮಾರು ಆರು ಲಕ್ಷ ಜನರು ಮೊಬೈಲ್ ಆ್ಯಪ್ ಆಧಾರಿತ ಸ್ವಿಗ್ಗಿ, ಜೊಮ್ಯಾಟೊ, ಡನ್ಜೊ, ವೋಲಾ, ಊಬರ್‌ಗಳಂತಹ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆ ಕಾರ್ಮಿಕರಿಗೆ ಕಾನೂನುಬದ್ಧವಾದ ಔದ್ಯೋಗಿಕ ಮತ್ತು ಸಾಮಾಜಿಕ ಭದ್ರತೆ ಇಲ್ಲ. ಆದ್ದರಿಂದ ಸುರಕ್ಷತಾ ಕಾಯ್ದೆ ಜಾರಿಯಾಗಬೇಕು' ಎಂದರು.

ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳಾದ ಬಾಬು ಮ್ಯಾಥ್ಯೂ, ಎಂ. ಸತ್ಯಾನಂದ, ಕೆ.ವಿ. ಭಟ್, ಎಸ್. ವರಲಕ್ಷ್ಮಿ, ಮೀನಾಕ್ಷಿ ಸುಂದರಂ, ಎಂ. ದೀಪಕ್, ನಾಗನಾಥ್, ಕಾಳಪ್ಪ, ಜಿ.ಆರ್. ಶಿವಶಂಕರ್ ಭಾಗವಹಿಸಿದ್ದರು.







ಕಟ್ಟಡಗಳ ಸದೃಢತೆ ಪರೀಕ್ಷೆಗೆ ಎಐ

● ಇ.ಎಸ್. ಸುಧೀಂದ್ರ ಪ್ರಸಾದ್

ಬೆಂಗಳೂರು: ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್‌ಗೇಟ್ ಕೊಚ್ಚಿಹೋದ ನಂತರ ಅಣೆಕಟ್ಟೆಗಳ ಸದೃಢತೆಯ ವಿಷಯವು ದೊಡ್ಡ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ವಿಶಾಖಪಟ್ಟಣದ ಅಕ್ಷಯ ಇನ್ನೋಟೆಕ್ ಕಂಪನಿಯು ಇಂಥ ಕಟ್ಟಡಗಳ ತಪಾಸಣೆಗೆ ಮಾದರಿಯೊಂದನ್ನು ಸಿದ್ಧಪಡಿಸಿದ್ದು, ಬೆಂಗಳೂರು ಟೆಕ್ ಶೃಂಗದಲ್ಲಿ ಇದು ಪ್ರದರ್ಶನಗೊಳ್ಳುತ್ತಿದೆ.

ಅಣೆಕಟ್ಟೆ, ಶಾಖೋತ್ಪನ್ನ ಕೇಂದ್ರ, ಪರಮಾಣು ಇಂಧನ ಕೇಂದ್ರ ಹಾಗೂ ಇನ್ನಾವುದೇ ಬೃಹತ್ ಕಟ್ಟಡಗಳ ಸದೃಢತೆಯನ್ನು ಪರೀಕ್ಷಿಸಲು ಅತ್ಯಾಧುನಿಕ ಕ್ಯಾಮೆರಾ ಬಳಸಿ, ಮಷೀನ್ ಲರ್ನಿಂಗ್ ಹಾಗೂ ಕೃತಕ ಬುದ್ಧಿಮತ್ತೆ ಬಳಸಿದ ತಂತ್ರಜ್ಞಾನ ಇದಾಗಿದೆ.

'ಸ್ಟ್ರಕ್ಚರಲ್ ಹೆಲ್ತ್ ಮಾನಿಟರಿಂಗ್ ಟೂಲ್' ಎಂದು ಕರೆಯಲಾಗುವ ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನದಲ್ಲಿ ಮಲ್ಟಿಸ್ಪೇಷಿಯಲ್ ಕ್ಯಾಮೆರಾ ಮತ್ತು ಸೆನ್ಸರ್‌ಗಳನ್ನು ಬಳಸಿ ಡ್ರೋನ್ ಮೂಲಕ ಕಟ್ಟಡದ ಪ್ರತಿಯೊಂದು ಕೋನದಿಂದ ಚಿತ್ರ ಸಹಿತ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಡ್ರೋನ್ ಕಳುಹಿಸುವ ಪ್ರತಿಯೊಂದು ಮಾಹಿತಿಯನ್ನೂ ಸಂಗ್ರಹಿಸುವ ತಂತ್ರಾಂಶವು ಅದನ್ನು ವಿಶ್ಲೇಷಿಸುತ್ತದೆ' ಎಂದು ಕಂಪನಿಯ ಡಾ. ರೇಣು ಶರತ್ ವೇಗೇಸನ್ 'ಪ್ರಜಾವಾಣಿ'ಗೆ ತಿಳಿಸಿದರು.



ನಗರದ ಅರಮನೆ ಆವರಣದಲ್ಲಿ ಮಂಗಳವಾರ ಆರಂಭವಾದ ಬೆಂಗಳೂರು ಟೆಕ್ ಸಮ್ಮಿಟ್ ಪ್ರದರ್ಶನ ಮಳಿಗೆಯಲ್ಲಿ ಪ್ರದರ್ಶಿಸಲಾದ ಕಟ್ಟಡ ಸದೃಢತೆ ಪರೀಕ್ಷಿಸುವ ಸಾಧನವನ್ನು ಡಾ. ರೇಣು ಶರತ್ ವೇಗೇಸನ್ ವಿವರಿಸಿದರು — ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಅಣೆಕಟ್ಟೆ, ಶಾಖೋತ್ಪನ್ನ ಕೇಂದ್ರದಂತ ಕಟ್ಟಡಗಳ ತಪಾಸಣೆ
- ಮಲ್ಟಿಸ್ಪೇಷಿಯಲ್ ಕ್ಯಾಮೆರಾ ಮತ್ತು ಸೆನ್ಸರ್‌ಗಳ ಬಳಕೆ
- ಕಟ್ಟಡ ಕುಸಿಯುವ 2 ಗಂಟೆ ಮೊದಲೇ ಮಾಹಿತಿ ನೀಡಲಿದೆ

'ಹೀಗೆ ಸಂಗ್ರಹಿಸುವ ಮಾಹಿತಿಯನ್ನು ಆಧರಿಸಿ ಕಟ್ಟಡವು ಕಂಪನವನ್ನು ಎಷ್ಟರ ಮಟ್ಟಿಗೆ ತಡೆಯಬಹುದು, ಕಟ್ಟಡದ ಒಟ್ಟು ಸದೃಢತೆ ಎಷ್ಟಿದೆ, ಕಟ್ಟಡದ ಯಾವ ಭಾಗ ದುರ್ಬಲವಾಗಿದೆ, ದುರಸ್ತಿ ಮಾಡದಿದ್ದರೆ ಎಷ್ಟು ಭಾಗ, ಎಷ್ಟು ದಿನಗಳಲ್ಲಿ ಹಾಗೂ ಎಷ್ಟು ಪ್ರಮಾಣದಲ್ಲಿ ಕುಸಿಯಲಿದೆ ಎಂಬ ಮಾಹಿತಿಯನ್ನು ಇದು ನೀಡುತ್ತದೆ. ಕಟ್ಟಡ ಕುಸಿಯುವ 2 ಗಂಟೆ ಮೊದಲೇ ತಿಳಿಸುವಷ್ಟರ ಮಟ್ಟಿಗೆ ಇದು ನಿಖರತೆ ಹೊಂದಿದೆ' ಎಂದು ವಿವರಿಸಿದರು.

'ಶಾಖೋತ್ಪನ್ನ ಕೇಂದ್ರದ ಒಂದು ಘಟಕದ ಸಮೀಕ್ಷೆಗೆ ಕನಿಷ್ಠ ಮೂರು ಗಂಟೆ ಬೇಕು. ಹಾಗೆಯೇ 2 ಕಿ.ಮೀ. ಉದ್ದದ ಅಣೆಕಟ್ಟೆಯ ಸಮೀಕ್ಷೆಗೆ 2 ದಿನಗಳು ಅಗತ್ಯ. ಇದಕ್ಕಾಗಿ ಅತಿನೇರಳೆ ಕಿರಣ, ಇನ್‌ಫ್ರಾ ರೆಡ್ ರೇಡಿಯೇಷನ್, ಡೀಪ್ ಪೆನೆಟ್ರೇಷನ್‌ನಂತ ಸ್ಕ್ಯಾನರ್‌ಗಳನ್ನು ಬಳಸಲಾಗುವುದು. ಇದರಿಂದ ನೀರಿನ ಮೇಲೆ ಹಾಗೂ ನೀರಿನ ಒಳಭಾಗದಲ್ಲೂ ಡ್ರೋನ್‌ಗಳ ಮೂಲಕ ಮಾಹಿತಿ ಸಂಗ್ರಹಿಸಿ ಈ ಸಾಧನ ವರದಿ ಸಿದ್ಧಪಡಿಸಲಿದೆ' ಎಂದು ಡಾ. ರೇಣು ಹೇಳಿದರು.

'ಈ ಸಾಧನವನ್ನು ಲಿಖಿತ್ ರೆಡ್ಡಿ, ಶರತ್ ಬಾಬು ಹಾಗೂ ಮಲ್ಲಿಕಾರ್ಜುನ್ ಅಭಿವೃದ್ಧಿಪಡಿಸಿದ್ದಾರೆ. ಐದು ವರ್ಷಗಳಿಂದ ಅಭಿವೃದ್ಧಿಪಡಿಸಲಾಗುತ್ತಿರುವ ಈ ತಂತ್ರಜ್ಞಾನ ಎನ್‌ಟಿಪಿಸಿ ಸೇರಿದಂತೆ ಹಲವು ಕಟ್ಟಡಗಳ ಪರೀಕ್ಷೆಗೆ ಪ್ರಾಯೋಗಿಕವಾಗಿ ಬಳಸಲಾಗಿದೆ' ಎಂದು ತಿಳಿಸಿದರು.

ಪ್ರಗತಿಯ ದಿಕ್ಕು ಬದಲಿಸಿದೆ– ಕಿರಣ್ ಮಜುಂದಾರ್ ಷಾ
'ಜೈವಿಕ ಎಂಜಿನಿಯರಿಂಗ್ ಕಾಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಗ ದೇಶದ ತಂತ್ರಜ್ಞಾನ ಕ್ಷೇತ್ರವನ್ನು ಕೃತಕ ಬುದ್ಧಿಮತೆ (ಎಐ) ಮುನ್ನಡೆಸುತ್ತಿದೆ. ಆದರೆ ಮುಂದಿನ ದಶಕಗಳಲ್ಲಿ ಜೈವಿಕ ಎಂಜಿನಿಯರಿಂಗ್ ದೇಶದ ಪ್ರಗತಿಯ ದಿಕ್ಕನ್ನು ಬದಲಿಸಲಿದೆ' ಎಂದು ಬಯೋಕಾನ್ ಅಧ್ಯಕ್ಷೆ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದ ವಿಷನ್ ಗ್ರೂಪ್ ಅಧ್ಯಕ್ಷೆ ಕಿರಣ್ ಮಜುಂದಾರ್ ಷಾ ಹೇಳಿದರು.



ಕಿರಣ್ ಮಜುಂದಾರ್

ಬೆಂಗಳೂರು ಟೆಕ್ ಶೃಂಗದ ಭಾಗವಾಗಿ ಮಂಗಳವಾರ ಆಯೋಜಿಸಲಾಗಿದ್ದ 'ಜೈವಿಕ ತಂತ್ರಜ್ಞಾನ ಮತ್ತು ಆರೋಗ್ಯ ತಂತ್ರಜ್ಞಾನ' ಕುರಿತ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. 'ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಜೈವಿಕ ಎಂಜಿನಿಯರಿಂಗ್ ಈಗ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ವಿಭಾಗ. ಹವಾಮಾನ ಬದಲಾವಣೆ, ಪರಿಸರ ಸಂರಕ್ಷಣೆ, ಆಹಾರ ಪದಾರ್ಥಗಳ ಉತ್ಪಾದನೆ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಸಾಧಿಸಲು ಇದು ನೆರವಾಗುತ್ತದೆ' ಎಂದರು.

> ಭಾರತವು ಮಧ್ಯಮ ಆದಾಯದ ದೇಶಗಳ ಗುಂಪಿನಿಂದ ಮೇಲಕ್ಕೆ ಏರಲು ಜೈವಿಕ ಎಂಜಿನಿಯರಿಂಗ್ ಕ್ಷೇತ್ರಕ್ಕೆ ಒತ್ತು ನೀಡುವುದು ಅತ್ಯಗತ್ಯ. ಕೇಂದ್ರ ಸರ್ಕಾರ ಆ ಕೆಲಸ ಮಾಡುತ್ತಿದೆ
>
> **ರಾಜೇಶ್. ಎಸ್ ಗೋಖಲೆ,**
> ಕಾರ್ಯದರ್ಶಿ, ಕೇಂದ್ರ ಜೈವಿಕ ತಂತ್ರಜ್ಞಾನ ಸಚಿವಾಲಯ

ಜೈವಿಕ ಎಂಜಿನಿಯರಿಂಗ್‌ನಿಂದ ಜನ ಸಾಮಾನ್ಯರಿಗೆ ನೇರವಾಗಿ ಏನು ಉಪಯೋಗವಾಗುತ್ತದೆ ಎಂದು ಸಭಿಕರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಎಲಾನ್ ಮಸ್ಕ್ ಅವರ ಕಂಪನಿ ನ್ಯೂರೊ ಚಿಪ್ ಅನ್ನು ಅಭಿವೃದ್ಧಿಪಡಿಸಿದೆ. ಅದು ಜೈವಿಕ ಎಂಜಿನಿಯರಿಂಗ್‌ಗೆ ಉತ್ತಮ ಉದಾಹರಣೆ. ಅದನ್ನು ಮಾನವನ ಮಿದುಳಿನಲ್ಲಿ ಅಳವಡಿಸಲಾಗುತ್ತದೆ. ಸಾಮಾನ್ಯ ಮನುಷ್ಯನ ಮಿದುಳು ಸೆಕೆಂಡ್ ಒಂದಕ್ಕೆ ಒಂದು ಬೈಟ್‌ನಷ್ಟು ದತ್ತಾಂಶವನ್ನು ನಿರ್ವಹಿಸುತ್ತದೆ. ಈ ಚಿಪ್ ಅಳವಡಿಸಿದಾಗ ಮಿದುಳಿನ ಸಾಮರ್ಥ್ಯ, ಪ್ರತಿ ಸೆಕೆಂಡ್‌ಗೆ 100 ಬೈಟ್‌ಗಳ ದತ್ತಾಂಶ ನಿರ್ವಹಣೆ ಮಾಡುವಷ್ಟು ವೃದ್ಧಿಸುತ್ತದೆ' ಎಂದು ಉದಾಹರಿಸಿದರು.

ಮುಂದುವರೆದು, 'ನಿಧಾನ ಗತಿಯ ಕಲಿಕೆ ಇರುವ ಮಕ್ಕಳು ಮತ್ತು ವ್ಯಕ್ತಿಗಳು, ಮರೆವಿನ ಸಮಸ್ಯೆ ಇರುವವರಿಗೆ ಅಂತಹ ಚಿಪ್ ಅಳವಡಿಸಿದರೆ, ಅವರ ಸಮಸ್ಯೆಗಳನ್ನು ಪರಿಹರಿಸಬಹುದು' ಎಂದರು.

ಕಸ ನಿರ್ವಹಣೆ, ಕಸ ಕರಗಿಸುವ ಸೂಕ್ಷ್ಮಾಣು ಜೀವಿಗಳ ಅಭಿವೃದ್ಧಿ, ಜೈವಿಕ ತಂತ್ರಜ್ಞಾನ ಆಧಾರಿತ ಬ್ಯಾಟರಿಗಳ ಅಭಿವೃದ್ಧಿಯಲ್ಲಿ ಜೈವಿಕ ಎಂಜಿನಿಯರಿಂಗ್‌ನ ಪಾತ್ರಗಳ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ಮತ್ತು ಸಭಿಕರು ಚರ್ಚಿಸಿದರು.



ನಾವೀನ್ಯ ಸೂಚ್ಯಂಕ ಭಾರತಕ್ಕೆ 39ನೇ ಸ್ಥಾನ

● ಗಂಜಿ ಆದಿಶೇಷ

ಬೆಂಗಳೂರು: ಸಂಶೋಧನೆ ಮತ್ತು ಕೌಶಲದ ಉನ್ನತೀಕರಣದಿಂದ ಹಲವಾರು ಅವಕಾಶಗಳು ಲಭಿಸುತ್ತವೆ ಎಂದು ಟೆಕ್ನಿಕಲ್ ಸೆಂಟರ್ ಇಂಡಿಯಾದ ಮುಖ್ಯಸ್ಥೆ ಲತಾ ಚೆಂಬ್ರಕಲಂ ಅಭಿಪ್ರಾಯಪಟ್ಟರು

ನಗರದ ಅರಮನೆ ಮೈದಾನದಲ್ಲಿ ನಡೆದ ಬೆಂಗಳೂರು ಟೆಕ್ ಶೃಂಗದಲ್ಲಿ 'ಬ್ರೇಕಿಂಗ್ ಬೌಂಡರೀಸ್ ಟು ಅನ್‌ಬೌಂಡ್ ಆಪರ್ಚುನಿಟೀಸ್' ಕುರಿತ ಚರ್ಚೆಯಲ್ಲಿ ಅವರು ಮಾತನಾಡಿದರು.

ದಶಕದ ಹಿಂದೆ ಜಾಗತಿಕ ನಾವೀನ್ಯ ಸೂಚ್ಯಂಕದಲ್ಲಿ 81ನೇ ಸ್ಥಾನದಲ್ಲಿದ್ದ ಭಾರತವು, ಈಗ 39ನೇ ಸ್ಥಾನದಲ್ಲಿದೆ. ಇದು ದೇಶದ ನಾವೀನ್ಯತಾ ಸಾಮರ್ಥ್ಯವನ್ನು ಸೂಚಿಸುತ್ತದೆ. ಇಂದಿನ ಜನರಲ್ಲಿ ತಂತ್ರಜ್ಞಾನ ಮತ್ತು ಕೌಶಲದ ಕೊರತೆಯಿದೆ. ಇದು ಅಭಿವೃದ್ಧಿಗೆ ಅಡ್ಡಿಯುಂಟು ಮಾಡುತ್ತಿದೆ. ಸರ್ಕಾರವು ಕೌಶಲ ಉನ್ನತೀಕರಣಗೊಳಿಸಲು ಕ್ರಮ ಕೈಗೊಳ್ಳಬೇಕಿದೆ ಎಂದರು.

5-ಜಿ, ಕೃತಕ ಬುದ್ಧಿಮತ್ತೆ ಸೇರಿ ತಂತ್ರಜ್ಞಾನವು ಇಂದು ವೇಗವಾಗಿ ಬೆಳೆಯುತ್ತಿದೆ. ಇದಕ್ಕೆ ಪೂರಕವಾದ ಅಂಶವನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ. 2047ರ ವೇಳೆಗೆ ವಿಕಸಿತ ಭಾರತದ ಕನಸು ನನಸಾಗಲು ನಾವೀನ್ಯ, ಸಂಶೋಧನೆ, ಮೂಲಸೌಕರ್ಯ ವಲಯಗಳ ಮೇಲೆ ಹೆಚ್ಚು ವೆಚ್ಚ ಮಾಡಬೇಕಿದೆ ಎಂದು ಸಲಹೆ ನೀಡಿದರು.

ಅಲ್ಕಾನ್ ಗ್ಲೋಬಲ್ ಸರ್ವಿಸಸ್‌ನ ವಿನೀತ್ ದ್ವಿವೇದಿ, ಫಿಲಿಪ್ಸ್ ಇನ್ನೋವೇಶನ್ ಕ್ಯಾಂಪಸ್ ಮುಖ್ಯಸ್ಥ ಅರವಿಂದ್ ವೈಷ್ಣವ್ ಗೋಷ್ಠಿಯಲ್ಲಿದ್ದರು.

'ಕೃತಕ ಬುದ್ಧಿಮತ್ತೆ ಪ್ರಚಾರದಷ್ಟು ಸಾಧನೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರಪತಿ ಹಾಗೂ ಪ್ರಧಾನಿಯವರೆಗೂ ಎಲ್ಲರೂ ಮಾತನಾಡುತ್ತಿರುವಷ್ಟರ ಮಟ್ಟಿಗೆ ಕೃತಕ ಬುದ್ಧಿಮತ್ತೆ ಕ್ಷೇತ್ರ ಬೆಳೆದಿಲ್ಲ. ಆದರೆ ತಂತ್ರಜ್ಞಾನದ ಮೂಲ ಮಾದರಿಯನ್ನು ಭಾರತೀಯರು ಸಿದ್ಧಪಡಿಸಿದರೆ ಮಾತ್ರ, ಈ ಕ್ಷೇತ್ರದಲ್ಲಿ ಜಗತ್ತಿಗೆ ಗುರುವಾಗಲು ಸಾಧ್ಯ' ಎಂದು ಗೂಗಲ್ ಸಂಶೋಧನಾ ಕೇಂದ್ರದ ಭಾರತೀಯ ವಿಭಾಗದ ಮುಖ್ಯಸ್ಥ ಮನೀಶ್ ಗುಪ್ತಾ ಹೇಳಿದರು.

ಬೆಂಗಳೂರು ತಂತ್ರಜ್ಞಾನ ಸಮ್ಮೇಳನ 'ಅಪಾರ'ದ ಮೊದಲ ದಿನವಾದ ಮಂಗಳವಾರ ನಡೆದ 'ಎಐ: ರಿಯಾಲಿಟಿ ವರ್ಸಸ್ ಹೈಪ್' ಎಂಬ ಗೋಷ್ಠಿಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ನಾವು ಮತ್ತೊಂದು ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್ (ಎಲ್‌ಎಲ್‌ಎಂ) ಸೃಷ್ಟಿಸುವ ಅಗತ್ಯವಿಲ್ಲ. ಅದನ್ನು ಸಿಲಿಕಾನ್ ವ್ಯಾಲಿಯಲ್ಲಿ ಕೂತಿರುವವರು ಮಾಡಲಿ ಎಂದು ಇತ್ತೀಚೆಗೆ ಹೇಳಿಕೆ ನೀಡಿದ ನಂದನ್ ನಿಲೇಕಣಿ ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಹಿಂದೆ ಅವರು ಮಾಡಿದ್ದ ಕೆಲಸಕ್ಕೂ, ಈಗಿನ ಅವರ ಹೇಳಿಕೆಗೂ ಸಂಬಂಧವೇ ಇಲ್ಲದಂತಿದೆ. ನಾವೂ ಅಮೆರಿಕನ್ನರಂತೆ ಮೂಲ ಮಾದರಿಗಳನ್ನು ಸೃಷ್ಟಿಸಬೇಕೇ ಹೊರತು, ಸೃಷ್ಟಿಯಾಗಿರುವ ಕೃತಕ ಬುದ್ಧಿಮತ್ತೆ ತಂತ್ರಾಂಶದ ಪರಿಣಾಮಕಾರಿ ಬಳಕೆದಾರರಾಗುವುದರಲ್ಲಿ ಯಾವುದೇ ಶ್ರೇಷ್ಠತೆ ಇಲ್ಲ' ಎಂದರು.

'ಭಾರತದ ಸದ್ಯದ ಪರಿಸ್ಥಿತಿಯಲ್ಲಿ ಅಗ್ಗದ ಹಾಗೂ ಮಧ್ಯಮ ಬೆಲೆಯ ಆ್ಯಂಡ್ರಾಯ್ಡ್ ಫೋನ್‌ಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಆದರೆ ಮತ್ತೊಂದೆಡೆ ಕೃತಕ ಬುದ್ಧಿಮತ್ತೆಗೆ ಬೇಡಿಕೆ ಹೆಚ್ಚಿದೆ. ಈ ಅಂತರ ಕಿರಿದಾಗಲು ಇನ್ನೂ ಕೆಲ ವರ್ಷಗಳು ಬೇಕು. ಅದಕ್ಕಾಗಿ ಮೂಲ ಮಾದರಿಗಳ ಸೃಷ್ಟಿಯತ್ತ ಭಾರತ ಯೋಜನೆ ರೂಪಿಸಬೇಕಿದೆ' ಎಂದು ಅಭಿಪ್ರಾಯಪಟ್ಟರು.

ಓಪನ್ ಎಐ ಕಂಪನಿಯ ಪ್ರಗ್ಯಾ ಮಿಶ್ರಾ ಮಾತನಾಡಿ, 'ಕೃತಕ ಬುದ್ಧಿಮತ್ತೆ ಎಂಬುದು ವೈಯಕ್ತಿಕದಿಂದ ಆರಂಭಗೊಂಡು, ಸಮುದಾಯ, ರಾಷ್ಟ್ರ ಮತ್ತು ಜಾಗತಿಕ ಮಟ್ಟದವರೆಗೂ ಪ್ರಯೋಜನವಾಗುವಂತಿರಬೇಕು. ಈ ವಿಷಯದಲ್ಲಿ ಅಮೆರಿಕದ ತಂತ್ರಜ್ಞಾನ ನಮಗಿಂತ ತುಸು ಮುಂದಿದೆ. ನಾವು ಅದನ್ನು ಅನುಸರಿಸುತ್ತಿದ್ದೇವೆಯಷ್ಟೇ' ಎಂದರು.

ಗೋಷ್ಠಿಯನ್ನು ಲೀಪ್‌ಮೈಲ್ ರೊಬೊಟಿಕ್ಸ್‌ನ ಸಿಇಒ ರವಿ ಗುರುರಾಜ್ ನಡೆಸಿಕೊಟ್ಟರು.

> ಕೃತಕ ಬುದ್ಧಿಮತ್ತೆ ಕುರಿತು ಸದ್ಯ ಅಗತ್ಯಕ್ಕಿಂತ ಹೆಚ್ಚಿನ ಮಾತುಗಳು ಕೇಳಿಬರುತ್ತಿವೆ. ಆದರೆ ನೀತಿ ನಿರೂಪಕರು ವಾಸ್ತವಾಂಶವನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ. ಸದ್ಯದ ಪರಿಸ್ಥಿತಿಯಲ್ಲಿ ಕೃತಕ ಬುದ್ಧಿಮತ್ತೆಯು ಐನ್‌ಸ್ಟೀನ್ ಸಿದ್ಧಾಂತಗಳನ್ನು ಮೀರಿಸುವಷ್ಟರ ಮಟ್ಟಿಗೆ ಬೆಳೆದಿಲ್ಲದಿರಬಹುದು. ಆದರೆ ಭವಿಷ್ಯದಲ್ಲಿ ಅದಕ್ಕಿಂತ ಉತ್ತಮ ಲೆಕ್ಕವನ್ನು ಮಾಡಿ ತೋರಿಸುವಷ್ಟರ ಮಟ್ಟಿಗೆ ಬೆಳೆಯಲಿದೆ
>
> **ಪ್ರೊ. ಗಣೇಶ್ ಬಾಗ್ಲೆರ್**
> ದೆಹಲಿ ಐಐಟಿಯಲ್ಲಿರುವ ಇನ್ಫೊಸಿಸ್ ಕೇಂದ್ರದ ಪ್ರಾಧ್ಯಾಪಕ





ಬೆಂಗಳೂರು ಟೆಕ್ ಸಮ್ಮಿಟ್ ಆವರಣದಲ್ಲಿ ಇ ತ್ಯಾಜ್ಯಗಳಿಂದ ರಚಿಸಿದ ಕಲಾಕೃತಿಗಳು ಜನರನ್ನು ಆಕರ್ಷಿಸಿತು

'ನವೋದ್ಯಮ ನೀತಿ ದೇಶಕ್ಕೆ ಮಾದರಿ'

● ಕೆ.ಎಚ್. ಓಬಳೇಶ್



ಬೆಂಗಳೂರು: 'ನವೋದ್ಯಮಗಳಿಗೆ ಪ್ರೋತ್ಸಾಹ ಹಾಗೂ ಆರ್ಥಿಕ ನೆರವು ನೀಡುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ರೂಪಿಸಿರುವ ನೀತಿಯು ಇಡೀ ದೇಶಕ್ಕೆ ಮಾದರಿಯಾಗಿದೆ. ಅನ್ಯ ರಾಜ್ಯಗಳು ಈ ನೀತಿ ಅನುಸರಿಸುವಂತೆ ನೀತಿ ಆಯೋಗವೇ ಹೇಳಿದೆ' ಎಂದು ಐ.ಟಿ–ಬಿ.ಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದಲ್ಲಿ ಮಂಗಳವಾರದಿಂದ ಆರಂಭವಾದ ಬೆಂಗಳೂರು ಟೆಕ್ ಶೃಂಗದಲ್ಲಿ 'ಫ್ಯೂಚರ್‌ಸ್ಕೇಪ್' ಶೀರ್ಷಿಕೆಯಡಿ ನಡೆದ ಚರ್ಚೆಯಲ್ಲಿ ಅವರು ಮಾತನಾಡಿದರು.

ಮಾರುಕಟ್ಟೆ ಪ್ರವೇಶಿಸುವ ನವೋದ್ಯಮಗಳು ಸ್ಥಿರತೆ ಕಾಯ್ದುಕೊಳ್ಳಲು (ಇನ್‌ಕ್ಯುಬೇಟರ್ ಹಂತ) ಸಮಯಬೇಕಿದೆ. ಇದಕ್ಕೆ ಸರ್ಕಾರವೇ ಆರ್ಥಿಕ ನೆರವು ನೀಡಲಿದೆ. ಇಲ್ಲಿಯವರೆಗೆ 950 ನವೋದ್ಯಮಗಳಿಗೆ ನೆರವು ನೀಡಲಾಗಿದೆ ಎಂದು ತಿಳಿಸಿದರು.

ಸರ್ಕಾರವು ಬೆಂಗಳೂರಿಗಷ್ಟೇ ನವೋದ್ಯಮಗಳನ್ನು ಕೇಂದ್ರೀಕರಿಸಿಲ್ಲ. ಕಲ್ಯಾಣ ಕರ್ನಾಟಕ ಸೇರಿ ಮೈಸೂರು, ಹುಬ್ಬಳ್ಳಿ ಭಾಗದಲ್ಲಿ ನವೋದ್ಯಮಗಳ ಸ್ಥಾಪನೆಗೆ ಪೂರಕ ವಾತಾವರಣ ಕಲ್ಪಿಸಲಾಗಿದೆ ಎಂದು ವಿವರಿಸಿದರು.

ಜೈವಿಕ ತಂತ್ರಜ್ಞಾನ ಕಂಪನಿ ಬಯೊಕಾನ್ ಅಧ್ಯಕ್ಷೆ ಕಿರಣ್ ಮಜುಂದಾರ್ ಷಾ ಮಾತನಾಡಿ, 'ನವೋದ್ಯಮ ಸ್ಥಾಪಿಸುವ ಯುವಜನರಲ್ಲಿ ಅಗಾಧ ಜ್ಞಾನವಿದೆ. ಅವರ ಅನ್ವೇಷಣೆಗಳಿಗೆ ಸರ್ಕಾರದಿಂದ ಪ್ರೋತ್ಸಾಹ ಸಿಗಬೇಕಿದೆ' ಎಂದು ಹೇಳಿದರು.

ಇನ್ಫೊಸಿಸ್ ಸಹ ಸಂಸ್ಥಾಪಕ ಕ್ರಿಸ್ ಗೋಪಾಲಕೃಷ್ಣ ಮಾತನಾಡಿ, 'ಪ್ರಸ್ತುತ ಭಾರತವು ಜಾಗತಿಕ ಮಟ್ಟದಲ್ಲಿ ಐದನೇ ಅತಿದೊಡ್ಡ ಆರ್ಥಿಕತೆಯಾಗಿದೆ. ಮೂರನೇ ಅತಿದೊಡ್ಡ ಆರ್ಥಿಕತೆಯಾಗುವ ಹಂತದಲ್ಲಿದೆ. ಆದರೆ, ಭಾರತದ ತಲಾ ಆದಾಯ ಕಡಿಮೆ ಇದೆ' ಎಂದರು.

ಪ್ರತಿದಿನ ಹೊಸ ತಂತ್ರಜ್ಞಾನಗಳು ಬರುತ್ತಿವೆ. ಅವುಗಳ ಸದ್ಬಳಕೆ ಮೂಲಕ ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡುವ ಅಗತ್ಯವಿದೆ. ಸಾಕಷ್ಟು ಅವಕಾಶಗಳಿದ್ದು, ಯುವಜನರು ಅವುಗಳನ್ನು ಬಳಸಿಕೊಳ್ಳುವ ಮೂಲಕ ಸದೃಢ ಭಾರತ ನಿರ್ಮಾಣಕ್ಕೆ ಒತ್ತು ನೀಡಬೇಕಿದೆ ಎಂದು ಸಲಹೆ ನೀಡಿದರು.

ನವೋದ್ಯಮಗಳಿಗೆ ಸಂಬಂಧಿಸಿದ ವಿಷನ್ ಗ್ರೂಪ್ ಮುಖ್ಯಸ್ಥ ಪ್ರಶಾಂತ್ ಪ್ರಕಾಶ್ ಹಾಗೂ ಅರವಿಂದ್ ಪಾಲ್ಗೊಂಡಿದ್ದರು.

'ಪಂಚ ರಾಷ್ಟ್ರಗಳ ವರ್ತುಲದಲ್ಲಿ ಭಾರತ'

ಬೆಂಗಳೂರು: 'ವಿವಿಧ ಕ್ಷೇತ್ರಗಳಲ್ಲಿ ಭಾರತವು ಪ್ರಗತಿ ಸಾಧಿಸುತ್ತಾ, 'ಪಂಚ ರಾಷ್ಟ್ರಗಳ ವರ್ತುಲ' ಸೇರುತ್ತಿದೆ. ಈ ಮೂಲಕ ಹಲವು ಕ್ಷೇತ್ರಗಳಲ್ಲಿ ಅಗ್ರಗಣ್ಯ ದೇಶ ಎನಿಸಿದೆ' ಎಂದು ಐ–ಸ್ಪಿರಿಟ್ ಸಂಸ್ಥೆಯ ಸಂಸ್ಥಾಪಕ ಶರದ್ ಶರ್ಮಾ ಹೇಳಿದರು.

'ಎಲೆಕ್ಟ್ರಾನಿಕ್ಸ್ ಮತ್ತು ಸೆಮಿ ಕಂಡಕ್ಟರ್ ಉತ್ಪಾದನೆಯ ಜಾಗತಿಕ ಕೇಂದ್ರವಾಗಿ ಭಾರತದ ಅಭಿವೃದ್ಧಿ' ವಿಷಯ ಕುರಿತು ಮಾತನಾಡಿದರು.

'ಕೆಲವೇ ದೇಶಗಳು ಸಾಧಿಸಿರುವ ಗುರಿಯನ್ನು ಈಗಿನ ಜಾಗತಿಕ ವ್ಯವಸ್ಥೆಯಲ್ಲಿ ಐದು ದೇಶಗಳ ಗುಂಪಾಗಿ ಶ್ರೇಣೀಕರಿಸಲಾಗುತ್ತದೆ. ಅದನ್ನು 'ಪಂಚ ರಾಷ್ಟ್ರಗಳ ವರ್ತುಲ' ಎಂದು ಕರೆಯಲಾಗುತ್ತಿದೆ. ಭಾರತವು ಈಗ ಉಪಗ್ರಹ ಉಡಾವಣೆ ಮಾಡುವ ಸಾಮರ್ಥ್ಯವಿರುವ, ಕೋವಿಡ್ ಲಸಿಕೆ ಹೊಂದಿರುವ, ಡಿಜಿಟಲ್ ಪಾವತಿ ವ್ಯವಸ್ಥೆ ಇರುವ ಐದು ರಾಷ್ಟ್ರಗಳ ಗುಂಪುಗಳಲ್ಲಿ ಇದೆ' ಎಂದರು.

ಸರ್ಕೀಟ್ ಹೌಸ್ ಟೆಕ್ನಾಲಜಿಯ ಸಹ ಸಂಸ್ಥಾಪಕ ರಘು ರೆಡ್ಡಿ, 'ಜಾಗತಿಕ ಮೊಬೈಲ್ ಮತ್ತು ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಚೀನಾ ಶೇ 76ರಷ್ಟು ಪಾಲು ಹೊಂದಿದೆ. ಮುಂದಿನ ದಶಕಗಳಲ್ಲಿ ಭಾರತದಲ್ಲಿ ಅಂಥ ಸಾಧನಗಳು ತಯಾರಾಗಬೇಕು' ಎಂದರು.

ವಿಎಲ್‌ಎಸ್‌ಐನ ಅಧ್ಯಕ್ಷ ಸತ್ಯಗುಪ್ತ, ತೇಜಸ್ ನೆಟ್‌ವರ್ಕ್ಸ್ ಸಹ ಸಂಸ್ಥಾಪಕ ಸಂಜಯ್ ನಾಯಕ್ ಇದ್ದರು.

'ಸೊಳ್ಳೆಗಳ ಸಂತಾನ ನಾಶಕ್ಕೆ ಬಯೋಟ್ರ್ಯಾಪ್ಸ್'

ಹೆಣ್ಣು ಸೊಳ್ಳೆಗಳನ್ನು ಆಕರ್ಷಿಸಿ ಅವುಗಳ ಸಂತಾನವನ್ನು ನಾಶಪಡಿಸುವ ಎಕೊ ಬಯೋಟ್ರ್ಯಾಪ್ಸ್ ಬೆಂಗಳೂರು ಟೆಕ್ ಶೃಂಗದಲ್ಲಿ ಗಮನ ಸೆಳೆಯಿತು. ಹೆಣ್ಣು ಸೊಳ್ಳೆಗಳನ್ನು ಈ ಟ್ರ್ಯಾಪ್‌ನಲ್ಲಿ ಮೊಟ್ಟೆ ಇಡುವಂತೆ ಪ್ರೇರೇಪಿಸಿ, ನಂತರ ಅದನ್ನು ಲಾರ್ವಾ ಹಂತದಲ್ಲಿ ನಾಶಪಡಿಸಲಾಗುತ್ತದೆ.

'ಇದು ಡೆಂಗಿ, ಮಲೇರಿಯಾ ನಿಯಂತ್ರಣಕ್ಕಾಗಿ ಸೊಳ್ಳೆಗಳನ್ನು ಆಕರ್ಷಿಸಿ ನಾಶಪಡಿಸುವ ಟ್ರ್ಯಾಪ್ ಆಗಿದೆ. ಈ ಸಾಧನ ಅಳವಡಿಸುವ ಮೂಲಕ ಡೆಂಗಿ ನಿಯಂತ್ರಣಕ್ಕೆ ತರುವ ನಿಟ್ಟಿನಲ್ಲಿ ಬಿಬಿಎಂಪಿ ಹಾಗೂ ಆರೋಗ್ಯ ಇಲಾಖೆ ಜಂಟಿಯಾಗಿ ಯೋಜನೆ ರೂಪಿಸಿವೆ. ಈಗಾಗಲೇ ಇದನ್ನು ಬೆಂಗಳೂರಿನ ಗೋಪಾಲಪುರದಲ್ಲಿ ಪ್ರಾಯೋಗಿಕವಾಗಿ 120 ಟ್ರ್ಯಾಪ್ ಸಾಧನಗಳನ್ನು ಮನೆಗಳ ಹೊರಗಡೆ ಅಳವಡಿಸಲಾಗಿದೆ' ಎಂದು ಎಕೊ ಬಯೋಟ್ರ್ಯಾಪ್ಸ್‌ನ ಗುರುಪ್ರಸಾದ್ ಫಡ್ಕೆ ಮಾಹಿತಿ ನೀಡಿದರು.

ಬಯೋ ಟ್ರ್ಯಾಪ್

ಇದೊಂದು ಮಡಿಕೆ ಆಕಾರದ ಸಾಧನ. ಕುಂಡದಲ್ಲಿ ನೀರು ತುಂಬಿ ರಾಸಾಯನಿಕ ಬೆರಸಲಾಗುತ್ತದೆ. ರಾಸಾಯನಿಕ ಮಿಶ್ರಣ ಸೊಳ್ಳೆಗಳನ್ನು ಆಕರ್ಷಿಸುತ್ತದೆ. ಸೊಳ್ಳೆಗಳು ಹಾಗೂ ಅವುಗಳ ಮೊಟ್ಟೆಗಳನ್ನು ನಾಶಪಡಿಸುತ್ತದೆ. ಜೈವಿಕ ಟ್ರ್ಯಾಪ್ ಬಳಕೆಯಿಂದ ಶೇ 60ರಷ್ಟು ಸೊಳ್ಳೆಗಳ ನಿಯಂತ್ರಿಸಬಹುದು.



ಟೆಕ್ ಶೃಂಗದ ನವೋದ್ಯಮಗಳ ಮಳಿಗೆಗಳಲ್ಲಿ ಕಂಡ ಜನಸಂದಣಿ – ಪ್ರಜಾವಾಣಿ ಚಿತ್ರ: ರಂಜು ಪಿ.

ಕುತೂಹಲಕ್ಕೆ ಒಂದೇ ಸೂರಿನಡಿ ಉತ್ತರ

● ಖಲೀಲಅಹ್ಮದ ಶೇಖ

ಬೆಂಗಳೂರು: ಜಗತ್ತಿನ ಉದ್ದಗಲಕ್ಕೆ ಆವಿಷ್ಕಾರಗೊಂಡಿರುವ ಹೊಸ ತಂತ್ರಜ್ಞಾನಗಳು, ಕೃತಕ ಬುದ್ಧಿಮತ್ತೆ (ಎಐ) ಆಧರಿಸಿದ ಉತ್ಪನ್ನಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿನ ಹೊಸ ಶೋಧನೆಗಳು 'ಬೆಂಗಳೂರು ಟೆಕ್ ಶೃಂಗ'ದಲ್ಲಿ ಒಂದೇ ಸೂರಿನಡಿ ಇವೆ. ವಿವಿಧ ತಂತ್ರಜ್ಞಾನಗಳಿಗೆ ಸಂಬಂಧಿಸಿದ ಜನರ ಕುತೂಹಲದ ಪ್ರಶ್ನೆಗಳಿಗೆ ಉತ್ತರ ಒದಗಿಸುವ ವೇದಿಕೆಯಾಗಿ ಹೊರಹೊಮ್ಮಿದೆ.

ಅರಮನೆ ಆವರಣದಲ್ಲಿ ತಂತ್ರಜ್ಞಾನ ಆಧಾರಿತ ಸೆಲ್ಫಿ ಪಾಯಿಂಟ್‌ಗಳನ್ನು ನಿರ್ಮಿಸಲಾಗಿದ್ದು, ವಿದ್ಯಾರ್ಥಿಗಳು, ಸಾರ್ವಜನಿಕರು ಫೋಟೊ ಕ್ಲಿಕ್ಕಿಸಿಕೊಳ್ಳುತ್ತಿದ್ದರು. ಇ ತ್ಯಾಜ್ಯವನ್ನು (ಹಳೆಯ ಎಲೆಕ್ಟ್ರಿಕ್ ಉಪಕರಣಗಳು, ಸಾಕೆಟ್‌ಗಳು) ಬಳಸಿಕೊಂಡು ರೂಪಿಸಿರುವ 'ಬೆಂಗಳೂರು ಟೆಕ್ ಶೃಂಗ'ದ ಲಾಂಛನ ಹೋಲುವ ರೋಬೊ ಮಾದರಿಯ ಕಲಾಕೃತಿಗಳ ಮುಂಭಾಗದಲ್ಲೂ ಜನ ಸೆಲ್ಫಿ ತೆಗೆದುಕೊಳ್ಳುತ್ತಿದ್ದರು.

ಇಲ್ಲಿ ದೇಶದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ), ಹಿಂದೂಸ್ತಾನ್ ಏರೋನಾಟಿಕಲ್ ಲಿಮಿಟೆಡ್ (ಎಚ್‌ಎಎಲ್), ಅಮೆರಿಕ, ರಷ್ಯಾ, ಕೊರಿಯಾ, ಜಪಾನ್, ಇಸ್ರೇಲ್ ಸೇರಿದಂತೆ ಹಲವು ದೇಶಗಳ ತಂತ್ರಜ್ಞಾನ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸುತ್ತಿವೆ. ಎಐ ಆಧಾರಿತ ತಂತ್ರಜ್ಞಾನಕ್ಕೆ ಸಂಬಂಧಪಟ್ಟಂತೆ ನಗರದ ಎಂಜಿನಿಯರಿಂಗ್ ಕಾಲೇಜುಗಳ ಅಂತಿಮ ವರ್ಷದ ವಿದ್ಯಾರ್ಥಿಗಳು ಮಾಹಿತಿಯ ಜೊತೆಗೆ ಉದ್ಯೋಗದ ಅವಕಾಶಗಳ ಕುರಿತು ಮಾಹಿತಿ ಪಡೆದುಕೊಳ್ಳುತ್ತಿದ್ದುದು ಕಂಡುಬಂತು.

ಅಂತರ್ಜಾಲದಲ್ಲಿ ವಿಷಯ ಹುಡುಕಾಟವನ್ನು ಸರಳಗೊಳಿಸುವ ಸರ್ಚ್ ಎಂಜಿನ್ ಆಪ್ಟಿಮೈಝೇಷನ್ (ಎಸ್‌ಇಒ) ಮಳಿಗೆಗಳಲ್ಲಿ ಆಸಕ್ತರ ದಂಡು ಸುತ್ತುವರಿದಿತ್ತು. ಈ ಕ್ಷೇತ್ರದ ನವೀನ ಮಾದರಿಗಳ ಕುರಿತು ಯುವ ತಂತ್ರಜ್ಞರು ಮಾಹಿತಿ ಕೇಳಿ ಪಡೆಯುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಎಐ ಆಧಾರಿತ ಫ್ಲೋ ಹೌಲರ್: ಫ್ಲೋ ಮೊಬಿಲಿಟಿ ಎಂಬ ಸಂಸ್ಥೆ ಅಭಿವೃದ್ಧಿಪಡಿಸಿರುವ 'ಫ್ಲೋ ಹೌಲರ್' ಎಂಬ ಎಲೆಕ್ಟ್ರಿಕ್ ಯಂತ್ರ ಸಾರ್ವಜನಿಕರ ಗಮನ ಸೆಳೆಯಿತು. ಇದು ನಿರ್ಮಾಣ, ಕೃಷಿ, ಗಣಿಗಾರಿಕೆ ಮತ್ತು ಉಗ್ರಾಣಗಳಲ್ಲಿರುವ ವಸ್ತುಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸ್ಥಳಾಂತರಿಸಲು ಸಹಾಯಕವಾಗಲಿದೆ. ಇದು ಕಾರ್ಮಿಕರ ವೆಚ್ಚ ತಪ್ಪಿಸಲಿದ್ದು, ಒಮ್ಮೆ ಚಾರ್ಜ್ ಮಾಡಿದರೆ ಆರರಿಂದ–ಎಂಟು ಗಂಟೆಯವರೆಗೆ ಕಾರ್ಯನಿರ್ವಹಿಸಲಿದೆ.

'ನಿಪುಣ ಕರ್ನಾಟಕ'ಕ್ಕೆ ಚಾಲನೆ

ಒಂದನೇ ಪುಟದಿಂದ...

ಮೈಕ್ರೊಸಾಫ್ಟ್ ಕಂಪನಿಯು ಡೀಪ್ ಟೆಕ್ ಕ್ಷೇತ್ರದಲ್ಲಿ 10 ಸಾವಿರ ವಿದ್ಯಾರ್ಥಿಗಳಿಗೆ, ಇಂಟೆಲ್ ಕಂಪನಿಯು ಕೃತಕ ಬುದ್ಧಿಮತೆ ಕ್ಷೇತ್ರದಲ್ಲಿ 20 ಸಾವಿರ ವಿದ್ಯಾರ್ಥಿಗಳಿಗೆ, ಅಕ್ಸೆಂಚರ್ ಕಂಪನಿಯು ಸೈಬರ್ ಭದ್ರತೆ ಮತ್ತು ಕ್ವಾಂಟಂ ಕಂಪ್ಯೂಟಿಂಗ್ ವಿಭಾಗದಲ್ಲಿ 10 ಸಾವಿರ ವಿದ್ಯಾರ್ಥಿಗಳಿಗೆ, ಬಿಎಫ್‌ಎಸ್‌ಐ ಕನ್ಸಾರ್ಟಿಯಂ ಕಂಪನಿಯು ಫಿನ್‌ಟೆಕ್ ಕ್ಷೇತ್ರದಲ್ಲಿ ವರ್ಷಕ್ಕೆ 10 ಸಾವಿರ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಒಪ್ಪಿಕೊಂಡಿವೆ. ಎಐ ಮತ್ತು ಕ್ಲೌಡ್ ಕಂಪ್ಯೂಟಿಂಗ್‌ಗೆ ಸಂಬಂಧಿಸಿದಂತೆ ಪ್ರತಿ ವರ್ಷ 50 ಸಾವಿರ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಐಬಿಎಂ ಒಪ್ಪಂದ ಮಾಡಿಕೊಂಡಿದೆ.

ನವೋದ್ಯಮಗಳು ಮತ್ತು ಹೂಡಿಕೆದಾರರು: ಉತ್ತಮ ಸಾಧನೆ ಮಾಡಿರುವ ರಾಜ್ಯದ ನವೋದ್ಯಮಗಳನ್ನು ಪ್ರಶಂಸಿಸುವ ಕಾರ್ಯಕ್ರಮವನ್ನೂ ಶಂಗದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸ್ವಿಗ್ಗಿ ಸಹಸಂಸ್ಥಾಪಕ ಮತ್ತು ಸಿಇಒ ಶ್ರೀಹರ್ಷ ಮಜೇತಿ ಮತ್ತು ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಸಂತೋಷ್ ಕುಮಾರ್ ಅವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು.

ಶೃಂಗಸಭೆಯ ಭಾಗವಾಗಿ ಆಯೋಜಿಸಲಾಗಿದ್ದ ಪ್ರಾತ್ಯಕ್ಷಿಕೆ ವೇದಿಕೆಗಳಲ್ಲಿ ನವೋದ್ಯಮಗಳ ಪ್ರತಿನಿಧಿಗಳು ತಾವು ರೂಪಿಸಿರುವ ತಂತ್ರಜ್ಞಾನ, ತಂತ್ರಾಂಶ ಮತ್ತು ವ್ಯಾಪಾರ ಮಾದರಿಗಳನ್ನು ಜಾಗತಿಕ ಮಟ್ಟದ ಹೂಡಿಕೆದಾರರಿಗೆ ವಿವರಿಸಿದರು. ಈ ನವೋದ್ಯಮಗಳಲ್ಲಿ ಹೂಡಿಕೆ ಸಾಧ್ಯತೆಗಳ ಬಗ್ಗೆ ಚರ್ಚೆಗಳು ನಡೆದವು.

'ಸಮಸ್ಯೆ ಸರಿಪಡಿಸುತ್ತೇವೆ': 'ತಂತ್ರಜ್ಞಾನ ಕ್ಷೇತ್ರದಲ್ಲಿ ಬೆಂಗಳೂರು ದೇಶದಲ್ಲೇ ಮುಂಚೂಣಿಯಲ್ಲಿದೆ. ಆದರೆ ಇಲ್ಲಿ ಕೆಲ ಸಮಸ್ಯೆಗಳಿದ್ದು, ಅವನ್ನು ಶೀಘ್ರವೇ ಸರಿಪಡಿಸುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.



ಬೆಂಗಳೂರು ತಂತ್ರಜ್ಞಾನ ಶೃಂಗದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಫ್ರಾನ್ಸ್‌ನ ಹಣಕಾಸು ಇಲಾಖೆಯ ಆರ್ಥಿಕ ಅಭಿವೃದ್ಧಿ ವಿಭಾಗದ ಉಪಾಧ್ಯಕ್ಷೆ ಅಲೆಕ್ಸಾಂಡ್ರಾ ಡ್ಯುಬ್ಲಾಂಚೆಗೆ ಹಸ್ತಲಾಘವ ನೀಡಿದರು. ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಬಯೊಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ ಇದ್ದರು – ಪ್ರಜಾವಾಣಿ ಚಿತ್ರ

'ಬೆಂಗಳೂರಿನಾಚೆಗೂ ಟೆಕ್ ಉದ್ಯಮ...'



'ತಂತ್ರಜ್ಞಾನ ಕ್ಷೇತ್ರದಲ್ಲಿ ಬೆಂಗಳೂರಿಗೆ ಇರುವ ಹೆಗ್ಗಳಿಕೆಯನ್ನು ಹೆಚ್ಚಿಸಿಕೊಳ್ಳುತ್ತಲೇ ರಾಜ್ಯದ ಬೇರೆ–ಬೇರೆ ಭಾಗಗಳಿಗೂ ತಂತ್ರಜ್ಞಾನ ಆಧಾರಿತ ಉದ್ಯಮಗಳನ್ನು ಒಯ್ಯಲು ರಾಜ್ಯ ಸರ್ಕಾರ ಕಾರ್ಯಪ್ರವೃತ್ತವಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರು ತಂತ್ರಜ್ಞಾನ ಶೃಂಗವನ್ನು ಉದ್ಘಾಟಿಸಿ ಮತನಾಡಿದ ಅವರು, 'ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವೈಮಾನಿಕ ಉದ್ಯಮ ಮತ್ತು ಬಾಹ್ಯಾಕಾಶ ಸಂಶೋಧನೆ, ಕೈಗಾರಿಕೆಗಳಲ್ಲಿ ಬೆಂಗಳೂರು ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿದೆ. ರಾಜ್ಯದ ಬೇರೆ ಭಾಗಗಳನ್ನೂ ಇದೇ ರೀತಿ ಅಭಿವೃದ್ಧಿಪಡಿಸುವ ಗುರಿ ಹಾಕಿಕೊಳ್ಳಲಾಗಿದೆ. ಈ ನಿಟ್ಟಿನಲ್ಲೇ ಈ ಬಾರಿಯ ಶೃಂಗವನ್ನು 'ಅಪಾರ' ಎಂಬ ಧ್ಯೇಯದೊಂದಿಗೆ ನಡೆಸಲಾಗುತ್ತಿದೆ' ಎಂದರು.

'ಮಂಗಳೂರನ್ನು ಫಿನ್‌ಟೆಕ್ ಕೇಂದ್ರವಾಗಿ, ಧಾರವಾಡವನ್ನು ಇ.ವಿ ಮತ್ತು ಡ್ರೋನ್ ಕೇಂದ್ರವಾಗಿ ಹಾಗೂ ಮೈಸೂರನ್ನು ಪಿಸಿಬಿ ತಯಾರಿಕಾ ಕೇಂದ್ರವಾಗಿ ರೂಪಿಸಲಾಗುತ್ತಿದೆ. ಆ ಕ್ಷೇತ್ರಗಳಲ್ಲಿ ಮೂರೂ ನಗರಗಳು ದಾಪುಗಾಲು ಇರಿಸಿವೆ. ಆ ಕ್ಷೇತ್ರಗಳಿಗೆ ಸಂಬಂಧಿಸಿದ ತರಬೇತಿ ಕೇಂದ್ರಗಳು ಮತ್ತು ಉದ್ಯಮಗಳು ಅಲ್ಲಿ ಆರಂಭವಾಗುತ್ತಿವೆ' ಎಂದರು.

'ಇತರ ಕ್ಷೇತ್ರಗಳಲ್ಲೂ ಬೇರೆ ಜಿಲ್ಲೆಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ 'ಜಾಗತಿಕ ಸಾಮರ್ಥ್ಯ ಕೇಂದ್ರ ನೀತಿ' (ಜಿಸಿಸಿ–ಪಾಲಿಸಿ) ರೂಪಿಸಿದ ಮೊದಲ ರಾಜ್ಯ ಕರ್ನಾಟಕ. ಇದರ ಭಾಗವಾಗಿ ಬೆಂಗಳೂರು, ಮೈಸೂರು ಮತ್ತು ಬೆಳಗಾವಿಯಲ್ಲಿ ಮೂರು ನಾವೀನ್ಯತಾ ವಸಾಹತುಗಳನ್ನು ಸ್ಥಾಪಿಸಲಾಗುತ್ತಿದೆ' ಎಂದರು.

'ರಾಜ್ಯವು ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್, ಕಾಮಿಕ್ಸ್ ಮತ್ತು ಎಕ್ಸ್‌ಟೆಂಡೆಡ್ ರಿಯಾಲಿಟಿ (ಎವಿಜಿಸಿ-ಎಕ್ಸ್‌ಆರ್) ವಲಯಗಳಲ್ಲಿ ಜಾಗತಿಕ ಮಟ್ಟದ ತರಬೇತಿ ಮತ್ತು ಸೇವೆ ಒದಗಿಸುತ್ತಿದೆ. 2025ರ ವೇಳೆಗೆ ಈ ಕ್ಷೇತ್ರದಲ್ಲಿ 25,000 ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಕಾರ್ಯಕ್ರಮ ರೂಪಿಸಲಾಗುತ್ತಿದೆ' ಎಂದು ಅವರು ಹೇಳಿದರು.



ಬಾಲಿವುಡ್ ನಟ ಅಭಿಷೇಕ್ ಬಚ್ಚನ್ ಅವರನ್ನು ರಾಮ್‌ರಾಜ್ ಕಾಟನ್ ಅಧ್ಯಕ್ಷ ಕೆ.ಆರ್. ನಾಗರಾಜನ್ ಅಭಿನಂದಿಸಿದರು

ರಾಮರಾಜ್ ಕಾಟನ್‌ಗೆ ನಟ ಅಭಿಷೇಕ್ ಬಚ್ಚನ್ ರಾಯಭಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮರಾಜ್ ಕಾಟನ್‌ನ ಹೊಸ ಪ್ರಚಾರ ರಾಯಭಾರಿಯಾಗಿ ಬಾಲಿವುಡ್ ನಟ ಅಭಿಷೇಕ್ ಬಚ್ಚನ್ ಅವರು ನೇಮಕಗೊಂಡಿದ್ದಾರೆ.

ಈ ಪಾಲುದಾರಿಕೆ ಮೂಲಕ ಅಭಿಷೇಕ್ ಅವರು ಸಂಸ್ಥೆಯ ಸ್ವದೇಶಿ ಬೇರುಗಳನ್ನು ಮತ್ತಷ್ಟು ಗಟ್ಟಿಗೊಳಿಸಲು ಮತ್ತು ಸಾಂಪ್ರದಾಯಿಕ ಉಡುಗೆಗಳ ವಿಭಾಗದಲ್ಲಿ ಹೆಚ್ಚಿನ ಗೆಲುವು ಸಾಧಿಸಲು ಕಾರ್ಯ ನಿರ್ವಹಿಸಲಿದ್ದಾರೆ. ಅವರು ನಟಿಸಿರುವ ರಾಮರಾಜ್ ಕಾಟನ್‌ನ ಹೊಸ ಜಾಹೀರಾತಿನ ಪ್ರಚಾರ ಅಭಿಯಾನವು ಶೀಘ್ರವೇ ಬಿಡುಗಡೆಯಾಗಲಿದೆ ಎಂದು ಸಂಸ್ಥೆ ತಿಳಿಸಿದೆ.

'ಅಭಿಷೇಕ್ ಗಳಿಸಿರುವ ಜನಪ್ರಿಯತೆಯಿಂದ ಅವರು ನಮ್ಮ ಬ್ರ್ಯಾಂಡ್‌ನ ರಾಯಭಾರಿ ಆಗಲು ಅರ್ಹರಾಗಿದ್ದಾರೆ' ಎಂದು ರಾಮ್‌ರಾಜ್ ಕಾಟನ್ ಸಂಸ್ಥಾಪಕ ಮತ್ತು ಅಧ್ಯಕ್ಷ ಕೆ.ಆರ್. ನಾಗರಾಜನ್ ತಿಳಿಸಿದ್ದಾರೆ.

'ಭಾರತೀಯ ಉಡುಗೆಯಲ್ಲಿ ದಶಕಗಳ ಪರಂಪರೆ ಹೊಂದಿರುವ ರಾಮರಾಜ್ ಕಾಟನ್‌ನಂತಹ ಬ್ರ್ಯಾಂಡ್‌ನ ಪ್ರಚಾರ ರಾಯಭಾರಿ ಆಗಿರುವುದು ಹೆಮ್ಮೆ ತಂದಿದೆ' ಎಂದು ಅಭಿಷೇಕ್ ಬಚ್ಚನ್ ಹೇಳಿದ್ದಾರೆ.

ಸೈಬರ್ ವಂಚನೆ ಚೀನಾ ನಾಗರಿಕನ ಬಂಧನ

ನವದೆಹಲಿ (ಪಿಟಿಐ): ಇಲ್ಲಿನ ಶಾಹದರ ಪ್ರದೇಶದಲ್ಲಿ ನಡೆದ ₹43 ಲಕ್ಷ ಸೈಬರ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ, ದೆಹಲಿ ಪೊಲೀಸರು ಚೀನಾದ ನಾಗರಿಕನೊಬ್ಬನನ್ನು ಬಂಧಿಸಿದ್ದಾರೆ.

'ಆನ್‌ಲೈನ್ ಸ್ಟಾಕ್ ಟ್ರೇಡಿಂಗ್ ಹೆಸರಿನಲ್ಲಿ ವ್ಯವಹಾರದ ಮೂಲಕ ₹100 ಕೋಟಿಗೂ ಅಧಿಕ ಹಗರಣದ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಸಫ್ದರ್‌ಜಂಗ್ ನಿವಾಸಿ, ಚೀನಾದ ನಾಗರಿಕ ಫಾಂಗ್ ಛೆನ್‌ಜಿನ್ ಎಂಬಾತನನ್ನು ಬಂಧಿಸಲಾಗಿದೆ' ಎಂದು ಉಪ ಪೊಲೀಸ್ ಆಯುಕ್ತ (ಶಾಹದರ) ಪ್ರಶಾಂತ್ ಗೌತಮ್ ತಿಳಿಸಿದರು.

ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಉತ್ತಮ ಲಾಭ ಪಡೆಯುವುದಾಗಿ ನಂಬಿಸಿ ವ್ಯಕ್ತಿಯೊಬ್ಬರಿಂದ ವಂಚಕ, ಹಲವು ಹಂತಗಳಲ್ಲಿ ₹43.5 ಲಕ್ಷ ಹಣ ಪಡೆದಿದ್ದ.

ಹಣ ಮರಳಿ ದೊರೆಯದಿದ್ದ ವೇಳೆ ಸಂತ್ರಸ್ತರು ಸೈಬರ್ ಕ್ರಿಮಿನಲ್ ಪೋರ್ಟಲ್‌ನಲ್ಲಿ ಜುಲೈ ತಿಂಗಳಲ್ಲಿ ದೂರು ದಾಖಲಿಸಿದ್ದರು.



ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯಲ್ಲಿರುವ ಮೈ ಇ.ವಿ ಶೋರೂಂನಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಅಗ್ನಿ ಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಲು ಕಾರ್ಯಾಚರಣೆ ನಡೆಸಿದರು – ಪ್ರಜಾವಾಣಿ ಚಿತ್ರಗಳು

ಬೆಂಕಿಯ ಕೆನ್ನಾಲಿಗೆ

ರಾಜಾಜಿನಗರದಲ್ಲಿ ನಡೆದ ಘಟನೆ: ಮೂವರಿಗೆ ಗಾಯ– ಸುಟ್ಟು ಹೋದ 25ಕ್ಕೂ ಹೆಚ್ಚು ಎಲೆಕ್ಟ್ರಿಕ್ ಸ್ಕೂಟರ್

ಶೋರೂಂಗೆ ಬೆಂಕಿ: ಯುವತಿ ಸಜೀವದಹನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯಲ್ಲಿರುವ ಮೈ ಇ.ವಿ (ಎಲೆಕ್ಟ್ರಿಕ್) ಸ್ಕೂಟರ್ ಶೋರೂಂನಲ್ಲಿ ಮಂಗಳವಾರ ಸಂಜೆ ಬೆಂಕಿ ಅವಘಡ ಸಂಭವಿಸಿದ್ದು, ಶೋರೂಂನಲ್ಲಿ ಕೆಲಸ ಮಾಡುತ್ತಿದ್ದ ಯುವತಿ ಸಜೀವ ದಹನವಾಗಿದ್ದಾರೆ.

ಓಕಳಿಪುರದ ನಿವಾಸಿ ಪ್ರಿಯಾ(20) ಮೃತ ಯುವತಿ. ಮತ್ತೊಬ್ಬ ಸಿಬ್ಬಂದಿ ದಿಲೀಪ್ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ.

ದಿಲೀಪ್ ಅವರ ಕೈಗಳಿಗೆ ಸುಟ್ಟ ಗಾಯಗಳಾಗಿವೆ. ಶೋರೂಮ್ ನಲ್ಲಿದ್ದ ವೇದಾವತಿ ಹಾಗೂ ರಾಜು ಅವರಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದು, ಅವರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಶೋರೂಂನಲ್ಲಿದ್ದ ವಿವಿಧ ಕಂಪನಿಯ 25ಕ್ಕೂ ಹೆಚ್ಚು ಸ್ಕೂಟರ್‌ಗಳು(ಇ.ವಿ) ಬೆಂಕಿಗೆ ಆಹುತಿ ಆಗಿವೆ.

ಕೊಠಡಿ ಒಳಗಿದ್ದ ಪ್ರಿಯಾ: ಮಂಗಳವಾರ ಸಂಜೆ 5.30ರ ಸುಮಾರಿಗೆ ಬೆಂಕಿ ಅವಘಡ ಸಂಭವಿಸಿದೆ. ಬೆಂಕಿಯ ಕೆನ್ನಾಲಿಗೆ ಇಡೀ ಶೋರೂಂ ಆವರಿಸಿ, ಧಗಧಗನೇ ಹೊತ್ತಿ ಉರಿಯಿತು. ಭೀಕರ ಬೆಂಕಿಗೆ ಸ್ಕೂಟರ್‌ಗಳು, ಪೀಠೋಪಕರಣ ಹಾಗೂ ದಾಖಲೆಗಳು ಸಂಪೂರ್ಣ ಭಸ್ಮವಾಗಿವೆ. ಯುವತಿ ಸಜೀವದಹನವಾದರೆ, ಆರು ಮಂದಿ ಹೊರಕ್ಕೆ ಬಂದು ಪ್ರಾಣ ಉಳಿಸಿಕೊಂಡಿದ್ದಾರೆ. ಅನಾಹುತ ಸಂಭವಿಸಿದ ಸಮಯದಲ್ಲಿ ಗ್ರಾಹಕರು ಇರಲಿಲ್ಲ.

ಪ್ರಿಯಾ ಅವರು ಮೂರು ವರ್ಷಗಳಿಂದ ಹಣಕಾಸು ವಿಭಾಗದಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಬೆಂಕಿ ಹೊತ್ತಿಕೊಂಡ ವೇಳೆ ಒಳಭಾಗದ ಕೊಠಡಿಯಲ್ಲಿ ಅವರು ಇದ್ದರು. ಬೆಂಕಿ ಇ.ವಿ ಸ್ಕೂಟರ್‌ನ ಬ್ಯಾಟರಿಗಳಿಗೆ ತಗುಲಿ ವ್ಯಾಪಿಸಲು ಆರಂಭಿಸಿದ್ದರಿಂದ ಆಕೆಗೆ ಹೊರಗೆ ಬರಲು ಸಾಧ್ಯವಾಗಿಲ್ಲ. ಸುಟ್ಟು-ಕರಕಲಾದ ಸ್ಥಿತಿಯಲ್ಲಿ ಮೃತದೇಹ ಕೊಠಡಿಯಲ್ಲಿ ಸಿಕ್ಕಿದೆ ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ತಿಳಿಸಿದರು.



ಸುಟ್ಟು ಕರಕಲಾದ ಶೋರೂಂ

ವಿದ್ಯುತ್ ಶಾರ್ಟ್ ಸರ್ಕಿಟ್ ಕಾರಣ: ಶೋರೂಂನಲ್ಲಿ ಬೆಂಕಿ ಕಾಣಿಸಿಕೊಳ್ಳಲು ನಿಖರ ಕಾರಣ ಗೊತ್ತಾಗಿಲ್ಲ. ಶೋರೂಂ ಒಳಗಿದ್ದ ಎಲೆಕ್ಟ್ರಿಕ್ ಸ್ಕೂಟರ್‌ಗಳಲ್ಲಿ ವಿದ್ಯುತ್ ಶಾರ್ಟ್ ಸರ್ಕಿಟ್ ಉಂಟಾಯಿತೇ ಅಥವಾ ಶೋರೂಂನ ವಿದ್ಯುತ್ ಮಾರ್ಗದಲ್ಲಿ ಶಾರ್ಟ್ ಸರ್ಕಿಟ್ ಉಂಟಾಯಿತೇ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ. ಶೋ ರೂಂನಲ್ಲಿ ಸುಮಾರು 25ಕ್ಕೂ ಅಧಿಕ ಎಲೆಕ್ಟ್ರಿಕ್ ಬೈಕ್‌ಗಳು ಇದ್ದವು. ಬೆಂಕಿ ಅವಘಡದಲ್ಲಿ ಎಲ್ಲಾ ಬೈಕ್‌ಗಳು ಸುಟ್ಟು ಕರಕಲಾಗಿವೆ. ಬೈಕ್‌ಗಳ ಬ್ಯಾಟರಿಗಳು ಸ್ಫೋಟಗೊಂಡ ಪರಿಣಾಮ ಶೋ ರೂಂನಲ್ಲಿ ಬೆಂಕಿಯ ಪ್ರಮಾಣ ಹೆಚ್ಚಾಯಿತು. ಹೀಗಾಗಿ, ಅಗ್ನಿಶಾಮಕ ಸಿಬ್ಬಂದಿ ಸುಮಾರು ಮೂರು ತಾಸು ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು.

> ಶೋ ರೂಂನಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿಲ್ಲ. ಇದೇ ಅನಾಹುತಕ್ಕೆ ಕಾರಣವಾಗಿದೆ
>
> **ಯೂನಿಸ್ ಅಲಿ ಕೌಸರ್,** ಉಪನಿರ್ದೇಶಕ, ಅಗ್ನಿಶಾಮಕ ದಳ



ಗಾಯಾಳು ದಿಲೀಪ್

ಸಂಚಾರ ದಟ್ಟಣೆ: ರಾಜ್‌ಕುಮಾರ್ ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ಬೆಂಕಿ ಹೊತ್ತಿ ಉರಿಯುತ್ತಿದ್ದ ಕಾರಣ ವಾಹನ ಸವಾರರು ರಸ್ತೆಯಲ್ಲೇ ವಾಹನ ನಿಲ್ಲಿಸಿಕೊಂಡು ವೀಕ್ಷಿಸಿದರು. ರಾಜ್ ಕುಮಾರ್ ರಸ್ತೆ, ವಾಟಾಳ್ ನಾಗರಾಜ್ ರಸ್ತೆ, ರಾಜಾಜಿನಗರ ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಗಿತ್ತು.

'ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಗಿದೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಗುವುದು' ಎಂದು ಪೊಲೀಸರು ತಿಳಿಸಿದರು.

ಘಟನೆಯ ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಮೃತ ಯುವತಿಯ ಕುಟುಂಬಸ್ಥರು ಕಣ್ಣೀರು ಹಾಕಿದರು. ರಾಜಾಜಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಶೋರೂಂ ಮಾಲೀಕ ಪುನೀತ್ ಗೌಡ ತಲೆಮರೆಸಿಕೊಂಡಿದ್ದಾರೆ.

'ಜನ್ಮದಿನ ಆಚರಿಸಿಕೊಳ್ಳಲು ಅವಳೇ ಇಲ್ಲ'



ಪ್ರಿಯಾ

ಬೆಂಕಿ ಅನಾಹುತದಲ್ಲಿ ಮೃತಪಟ್ಟ ಪ್ರಿಯಾ ಅವರ ಜನ್ಮದಿನಾಚರಣೆ ಬುಧವಾರ ಇತ್ತು. ಇದಕ್ಕಾಗಿ ಮನೆಯಲ್ಲಿ ಸಿದ್ಧತೆಗಳು ನಡೆದಿದ್ದವು.

'ಜನ್ಮ ದಿನಕ್ಕೆಂದು ಸೋಮವಾರ ಹೊಸ ಬಟ್ಟೆ ತೆಗೆಸಿಕೊಂಡಿದ್ದಳು. ಈಗ ಅವಳೇ ಇಲ್ಲ. ನನಗೆ ಏನೂ ತೋಚುತ್ತಿಲ್ಲ' ಎಂದು ಪ್ರಿಯಾ ಅವರ ತಂದೆ ಆರ್ಮುಗಮ್ ಕಣ್ಣೀರು ಹಾಕಿದರು.

'ಮಂಗಳವಾರ ಬೆಳಿಗ್ಗೆ ಹತ್ತು ಗಂಟೆಗೆ ಸುಮಾರಿಗೆ ಮನೆಯಿಂದ ಕೆಲಸಕ್ಕೆ ಹೊರಟಿದ್ದಳು. ಪ್ರತಿನಿತ್ಯ ರಾತ್ರಿ 8 ಗಂಟೆಗೆ ಸುಮಾರಿಗೆ ಮನೆಗೆ ಬರುತ್ತಿದ್ದಳು. ಶೋರೂಂನಲ್ಲಿ ಯಾವುದೇ ಸುರಕ್ಷತಾ ಕ್ರಮ ಇರಲಿಲ್ಲ. ಇದೇ ಕಾರಣಕ್ಕೆ ಅನಾಹುತ ಸಂಭವಿಸಿದೆ' ಎಂದು ಆರೋಪಿಸಿದರು.

ಅರ್ಹರಲ್ಲದ ವ್ಯಕ್ತಿಗಳಿಗೂ ಇ.ಎಸ್.ಐ ಕಾರ್ಡ್ • ಸರ್ಕಾರದ ಬೊಕ್ಕಸಕ್ಕೆ ನಷ್ಟ

ಕಾರ್ಡ್ ಸೃಷ್ಟಿ ಜಾಲ: ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಕಂಪನಿಗಳನ್ನು ಸೃಷ್ಟಿಸಿ ಇ–ಪೆಹಚಾನ್ ಕಾರ್ಡ್‌ಗಳನ್ನು-(ಇ.ಎಸ್.ಐ) ಮಾಡಿಸಿ, ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತಿದ್ದ ಜಾಲವನ್ನು ಪತ್ತೆ ಹಚ್ಚಿರುವ ಸಿಸಿಬಿ ಪೊಲೀಸರು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ರಾಜಾಜಿನಗರದ ಪ್ರಕಾಶ್ ನಗರದ ನಿವಾಸಿ ಶ್ರೀಧರ್(35), ರಮೇಶ್ (36) ಮತ್ತು ಶಿವಲಿಂಗ (30) ಹಾಗೂ ಚಂದ್ರಕುಮಾರ್(30) ಬಂಧಿತರು.

ಬಂಧಿತರಿಂದ 4 ಲ್ಯಾಪ್‌ಟಾಪ್, 90 ಮೊಹರುಗಳು, 10 ಮೊಬೈಲ್ ಫೋನ್, ಎರಡು ಬ್ಯಾಂಕ್ ಪಾಸ್‌ಬುಕ್, ಒಂದು ನೋಟ್‌ಬುಕ್, ₹59 ಸಾವಿರ ನಗದು ವಶಕ್ಕೆ ಪಡೆಯಲಾಗಿದೆ. ಶ್ವೇತಾ ಮತ್ತು ಶಶಿಕಲಾ ಎಂಬುವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ನಕಲಿ ಕಂಪನಿಗಳನ್ನು ಸೃಷ್ಟಿಸಿ, ಆ ಕಂಪನಿಗಳ ಮೂಲಕ ಫಲಾನುಭವಿಗಳಲ್ಲದ ಜನರಿಗೆ ಇ–ಪೆಹಚಾನ್ ಕಾರ್ಡ್ ಮಾಡಿಸಿ ಇಎಸ್‌ಐ ಆಸ್ಪತ್ರೆ, ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ವಂಚಿಸುತ್ತಿದ್ದರು. ಕಾರ್ಮಿಕರಲ್ಲದ ಸುಮಾರು 869 ಮಂದಿಗೆ ಈ ಕಾರ್ಡ್ ವಿತರಿಸಿರುವುದು ತನಿಖೆಯ ವೇಳೆ ಪತ್ತೆಯಾಗಿದೆ. ಕಾರ್ಡ್ ಪಡೆದ ವ್ಯಕ್ತಿಗಳ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

'ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯಲ್ಲಿ ಶ್ರೀಧರ್ ಸೆಕ್ಯೂರಿಟಿ ಗಾರ್ಡ್ ಆಗಿದ್ದರು. ಅದೇ ಆಸ್ಪತ್ರೆ ಆವರಣದಲ್ಲಿ ರಮೇಶ್ ಕ್ಯಾಂಟೀನ್ ನಡೆಸುತ್ತಿದ್ದರು. ನಗರದ ಖಾಸಗಿ ಆಸ್ಪತ್ರೆಯಲ್ಲಿ ಶಿವಲಿಂಗ ಅವರು ಸ್ವಚ್ಛತಾ ಕೆಲಸ ಮಾಡುತ್ತಿದ್ದರೆ, ಚಂದ್ರಕುಮಾರ್ ಬೇರೆ ಕಡೆ ಕೆಲಸ ಮಾಡುತ್ತಿದ್ದರು' ಎಂದರು.

ಪ್ರಕರಣದ ಪ್ರಮುಖ ಆರೋಪಿ ಆಗಿರುವ ರಮೇಶ್, ತನ್ನ ಕ್ಯಾಂಟೀನ್‌ನಲ್ಲಿ ಕೆಲಸ ಮಾಡುವವರಿಗೆ ಹಾಗೂ ಕುಟುಂಬಸ್ಥರಿಗೆ ಇ.ಎಸ್.ಐ ಕಾರ್ಡ್ ಮಾಡಿಸಿಕೊಟ್ಟಿದ್ದರು. ಬೇರೆಯವರಿಗೂ ಇದೇ ಮಾದರಿಯಲ್ಲಿ ಕಾರ್ಡ್ ಮಾಡಿಸಿಕೊಟ್ಟರೆ, ಕಮಿಷನ್ ದೊರೆಯಲಿದೆ ಎಂಬ ಆಸೆಯಿಂದ ಶ್ರೀಧರ್ ಜತೆಗೂಡಿ ಸಂಚು ರೂಪಿಸಿದ್ದರು. ಗ್ಯಾಸ್ ಏಜೆನ್ಸಿಯೊಂದರ ಉದ್ಯೋಗಿ ಶ್ವೇತಾ ಮತ್ತು ಖಾಸಗಿ ಕಂಪನಿಯ ಕಂಪ್ಯೂಟರ್ ಆಪರೇಟರ್ ಶಶಿಕಲಾ ಅವರಿಗೂ ಮಾಹಿತಿ ನೀಡಿ, ದಂಧೆ ಆರಂಭಿಸಿದ್ದರು. ಇತ್ತೀಚೆಗೆ ಈ ರೀತಿ ಕಾರ್ಡ್ ಪಡೆದ ವ್ಯಕ್ತಿಯೊಬ್ಬ ಹೆಚ್ಚುವರಿ ಹಣ ಪಡೆದ ಕುರಿತು ಸಿಸಿಬಿಗೆ ದೂರು ನೀಡಿದ್ದರು. ಈ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ನಾಲ್ವರು ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದರು.

ಸಿಸಿಬಿಯ ಸಂಘಟಿತ ಅಪರಾಧ ವಿಭಾಗದ ಎಸಿಪಿ ವಿ.ಗೋವಿಂದ ರಾಜುಮ, ಇನ್‌ಸ್ಪೆಕ್ಟರ್ ದೇವೇಂದ್ರಪ್ಪ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದೆ.



'6 ನಕಲಿ ಕಂಪನಿ'

ಆರೋಪಿಗಳು ಆರು ನಕಲಿ ಕಂಪನಿ ಸೃಷ್ಟಿಸಿಕೊಂಡಿದ್ದರು. ಆ ಕಂಪನಿಗಳ ನೌಕರರೆಂದು ನಕಲಿ ಗುರುತಿನ ಚೀಟಿ ಹಾಗೂ ಇತರೆ ದಾಖಲೆಗಳನ್ನು ಸೃಷ್ಟಿಸುತ್ತಿದ್ದರು. ಅವರಿಂದ ₹20 ಸಾವಿರ ಪಡೆದು ಕಾರ್ಮಿಕರಲ್ಲದವರಿಗೂ ಇಎಸ್‌ಐ ಕಾರ್ಡ್ ನೀಡಲಾಗುತ್ತಿತ್ತು. ಪ್ರತಿ ತಿಂಗಳು ಕಾರ್ಡ್ ಪಡೆದವರಿಂದ ₹500 ಪಡೆದು, ನಿಯಮದಂತೆ ಸರ್ಕಾರಕ್ಕೆ ₹280 ಪಾವತಿಸಿ, ಬಾಕಿ ₹220 ಅನ್ನು ಆರೋಪಿಗಳೇ ಇಟ್ಟುಕೊಳ್ಳುತ್ತಿದ್ದರು ಎಂದು ತನಿಖಾಧಿಕಾರಿಗಳು ಹೇಳಿದರು.

'ದರ್ಶನ್ ಪ್ರಕರಣ ಶೀಘ್ರದಲ್ಲೇ ಮೇಲ್ಮನವಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಣುಕುಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರಿಗೆ ಹೈಕೋರ್ಟ್ ನೀಡಿರುವ ಮಧ್ಯಂತರ ಜಾಮೀನು ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ನಗರ ಪೊಲೀಸರು ಸಿದ್ಧತೆ ನಡೆಸಿದ್ದಾರೆ.

'ಮೇಲ್ಮನವಿ ಸಲ್ಲಿಸಲು ಅಗತ್ಯವಿರುವ ದಾಖಲೆಗಳನ್ನು ಇಂಗ್ಲಿಷ್‌ಗೆ ಅನುವಾದಿಸುವ ಕೆಲಸಗಳು ನಡೆಯುತ್ತಿವೆ' ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

'ಮೇಲ್ಮನವಿ ಸಲ್ಲಿಕೆ ಸಂಬಂಧ ಪ್ರಾಸಿಕ್ಯೂಷನ್ ಪರ ವಕೀಲರ ಜತೆಗೆ ಚರ್ಚಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹೇಳಿದರು.

ಬೆನ್ನು ನೋವಿನ ಚಿಕಿತ್ಸೆಗೆ ಒಳಗಾಗಲು ದರ್ಶನ್ ಅವರು ಹೈಕೋರ್ಟ್‌ನಿಂದ ಮಧ್ಯಂತರ ಜಾಮೀನು ಪಡೆದಿದ್ದರು.

ನಿರ್ದೇಶಕ ಭರತ್ ಹತ್ಯೆಗೆ ಯತ್ನ ಆರೋಪ

ಕೊಲೆಗೆ ಯತ್ನ: ನಟ ತಾಂಡವ ಸೆರೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 'ಜೋಡಿಹಕ್ಕಿ' ಧಾರಾವಾಹಿಯಲ್ಲಿ ನಟಿಸಿದ್ದ ನಟ
- ಚಂದ್ರಾ ಲೇಔಟ್ ಠಾಣೆ ಪೊಲೀಸರಿಂದ ಬಂಧನ



ತಾಂಡವೇಶ್ವರ

ಬೆಂಗಳೂರು: ಸಿನಿಮಾ ನಿರ್ಮಾಣ ಕುರಿತು ಮಾತುಕತೆ ನಡೆಯುತ್ತಿದ್ದ ಸಂದರ್ಭದಲ್ಲಿ ಚಿತ್ರ ನಿರ್ದೇಶಕರೊಬ್ಬರ ಮೇಲೆ ಗುಂಡು ಹಾರಿಸಿ ಕೊಲೆಗೆ ಯತ್ನಿಸಿದ್ದ ಆರೋಪದ ಅಡಿ ನಟ ತಾಂಡವೇಶ್ವರ ಅಲಿಯಾಸ್ ತಾಂಡವ ಅವರನ್ನು ಚಂದ್ರಾ ಲೇಔಟ್ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

'ಆರೋಪಿಯನ್ನು ಬಂಧಿಸಿ, ವಿಚಾರಣೆ ನಡೆಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ನ್ಯಾಯಾಲಯವು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಹಾಸನದ ತಾಂಡವೇಶ್ವರ ಅವರು 'ಜೋಡಿಹಕ್ಕಿ' ಧಾರಾವಾಹಿ ಮೂಲಕ ಕಿರುತೆರೆ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದರು. ಚಲನಚಿತ್ರಗಳಲ್ಲೂ ಅವರು ಕೆಲಸ ಮಾಡಲು ಮುಂದಾಗಿದ್ದರು. ಚಿತ್ರ ನಿರ್ದೇಶಕ ಭರತ್ ನವುಂದ ಅವರೊಂದಿಗೆ 'ದೇವನಾಂಪ್ರಿಯ' ಚಿತ್ರ ನಿರ್ಮಾಣಕ್ಕೆ ಇಬ್ಬರ ಮಧ್ಯೆ ಮಾತುಕತೆ ನಡೆದು, ಚಿತ್ರ ಪ್ರಕ್ರಿಯೆ ಆರಂಭಿಸಿದ್ದರು' ಎಂದು ಪೊಲೀಸರು ತಿಳಿಸಿದರು.

'ಚಿತ್ರ ನಿರ್ಮಾಣಕ್ಕೆ ನಿರ್ಮಾಪಕರು ಸಿಗದ ಕಾರಣಕ್ಕೆ ತಾಂಡವೇಶ್ವರ ಅವರೇ ಹಂತ ಹಂತವಾಗಿ ನಿರ್ದೇಶಕರಿಗೆ ₹6 ಲಕ್ಷ ಮುಂಗಡ ನೀಡಿದ್ದರು. ಈ ಮಧ್ಯೆ ಚಿತ್ರ ನಿರ್ಮಾಣಕ್ಕೆ ಹಾಸನದ ಕುಮಾರಸ್ವಾಮಿ ಎಂಬವರು ಹೂಡಿಕೆ ಮಾಡಿದ್ದರು. ಚಿತ್ರ ನಿರ್ಮಾಣ ಕೆಲಸ ಆರಂಭಗೊಂಡು ಎರಡು ವರ್ಷ ಕಳೆದರೂ ಚಿತ್ರೀಕರಣ ಪೂರ್ಣಗೊಂಡಿರಲಿಲ್ಲ. ವಿಳಂಬ ಆಗಿದ್ದರಿಂದ ಹಣ ವಾಪಸ್ ನೀಡುವಂತೆ ತಾಂಡವೇಶ್ವರ ಅವರು ಭರತ್ ಅವರನ್ನು ಕೇಳಿದ್ದರು. ಈ ಸಂಬಂಧ ಚರ್ಚಿಸಲು ಚಂದ್ರಾ ಲೇಔಟ್‌ನ ಬಸವೇಶ್ವರ ಬಡಾವಣೆಯ ನಿರ್ಮಾಪಕರ ಕಚೇರಿಯಲ್ಲಿ ಸೋಮವಾರ ಸಂಜೆ ಸಭೆ ನಡೆಯುತ್ತಿತ್ತು. ಆಗ ಆರೋಪಿ ಕೃತ್ಯ ಎಸಗಿದ್ದಾರೆ' ಎಂದು ಪೊಲೀಸರು ಹೇಳಿದರು.

'ಸಭೆಯಲ್ಲಿ ಹಣಕಾಸಿನ ವಿಚಾರವಾಗಿ ಇಬ್ಬರ ಮಧ್ಯೆ ಗಲಾಟೆ ನಡೆದಿತ್ತು. ಆ ಸಂದರ್ಭದಲ್ಲಿ ತಾಂಡವೇಶ್ವರ ಅವರು ತಮ್ಮ ಬಳಿಯಿದ್ದ ಬಂದೂಕಿನಿಂದ ನಿರ್ದೇಶಕರತ್ತ ಗುಂಡು ಹಾರಿಸಿದ್ದರು. ಆಗ ಅವರು ತಪ್ಪಿಸಿಕೊಂಡಿದ್ದರಿಂದ ಗುಂಡು ಕಚೇರಿ ಕೊಠಡಿಯ ಚಾವಣಿಗೆ ತಾಗಿತ್ತು' ಎಂದರು.

'ನಿರ್ದೇಶಕ ನೀಡಿದ ದೂರು ಆಧರಿಸಿ ಬಿಎನ್‌ಎಸ್ ಸೆಕ್ಷನ್ 109 ಹಾಗೂ ಶಸ್ತ್ರಾಸ್ತ್ರ ಕಾಯ್ದೆ ಕಲಂ 3, 27, 30ರ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ರವಿಚಂದ್ರನ್ ಅವರ ಮಗ ಮನೋರಂಜನ್ ನಾಯಕನಾಗಿ ನಟಿಸಿದ್ದ ಮುಗಿಲುಪೇಟೆ ಸಿನಿಮಾವನ್ನು 2021ರಲ್ಲಿ ಭರತ್ ನಿರ್ದೇಶಿಸಿದ್ದರು.

ಬೆಟ್ಟಿಂಗ್ ದಂಧೆ ಆರು ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಬ್‌ಸೈಟ್ ಹಾಗೂ ಆ್ಯಪ್‌ಗಳ ಮೂಲಕ ಆನ್‌ಲೈನ್ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದ ಆರು ಮಂದಿಯನ್ನು ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಸಮೀರ್, ವಿರೇಂದ್ರ ಪ್ರಸಾದ್, ವಂಶಿ, ಚಲಪ್ರೇಮ ಕುಮಾರ್, ನಮನ್ ಮಧು, ಶೇಖ್ ನಜೀರ್ ಬಂಧಿತರು.

ಬಂಧಿತರಿಂದ 41 ಮೊಬೈಲ್, ಐದು ಲ್ಯಾಪ್‌ಟಾಪ್‌ಗಳು, ಮೂರು ವೈಫೈ ರೌಟರ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

'ಆರೋಪಿಗಳು ಆ್ಯಪ್ ಮೂಲಕ ಆನ್‌ಲೈನ್ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದರು. ಎಲೆಕ್ಟ್ರಾನಿಕ್ ಸಿಟಿಯ ಅಪಾರ್ಟ್‌ಮೆಂಟ್‌ನಲ್ಲಿ ಫ್ಲ್ಯಾಟ್ ಅನ್ನು ಬಾಡಿಗೆ ಪಡೆದಿದ್ದರು. ಅಲ್ಲಿ ದಂಧೆ ನಡೆಸುತ್ತಿದ್ದರು. ಕ್ರಿಕೆಟ್, ಇಸ್ಪೀಟ್, ಕಬಡ್ಡಿ, ಕ್ಯಾಸಿನೋ ಸೇರಿದಂತೆ ಹಲವು ಆಟಗಳಿಗೆ ಬೆಟ್ಟಿಂಗ್ ಆಡಿಸುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದರು.




ವೈದ್ಯಕೀಯ ಉಪಕರಣ ಕದ್ದ ಆಸ್ಪತ್ರೆಯ ಮಾಜಿ ಸಿಬ್ಬಂದಿ

ಪ್ರಜಾವಾಣಿ ವಾರ್ತೆ



ಹೇಮಲತಾ



ಮಂಜುನಾಥ್

ಬೆಂಗಳೂರು: ವಾಸವಿ ಆಸ್ಪತ್ರೆಯಲ್ಲಿ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಯಂತ್ರದ ಎರಡು ಪ್ರೋಬ್ಸ್‌ಗಳನ್ನು ಕಳವು ಮಾಡಿದ್ದ ಇಬ್ಬರು ಆರೋಪಿಗಳನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆಂಗೇರಿಯ ನಿವಾಸಿ ಹೇಮಲತಾ (40) ಹಾಗೂ ಲಗ್ಗೆರೆಯ ರಾಜಗೋಪಾಲ ನಗರದ ಮಂಜುನಾಥ್(44) ಬಂಧಿತರು.

'ಕೆ.ಎಸ್. ಲೇಔಟ್ ಬಸ್ ನಿಲ್ದಾಣದ ಬಳಿಯ ವಾಸವಿ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ(ಸಿಇಒ) ಗಾಯತ್ರಿ ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಯಿತು. ಆಸ್ಪತ್ರೆಯಲ್ಲಿ ₹10 ಲಕ್ಷ ಮೌಲ್ಯದ ಎರಡು ವೈದ್ಯಕೀಯ ಉಪಕರಣಗಳನ್ನು ಕಳವು ಮಾಡಿದ್ದರು. ಆರೋಪಿಗಳು ಆಸ್ಪತ್ರೆಯ ಮಾಜಿ ಸಿಬ್ಬಂದಿ' ಎಂದು ಪೊಲೀಸರು ತಿಳಿಸಿದರು.

'ಆಸ್ಪತ್ರೆಯ ರೇಡಿಯಾಲಜಿ ವಿಭಾಗದ ಉಸ್ತುವಾರಿ ನೋಡಿಕೊಳ್ಳಲು ಒಬ್ಬ ಪುರುಷ ಹಾಗೂ ಇಬ್ಬರು ಮಹಿಳಾ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗಿತ್ತು. ಆಗಸ್ಟ್ 10ರಂದು ರಾತ್ರಿ ಪಾಳಿಯಲ್ಲಿ ಇದ್ದವರು ಕೆಲಸ ಮುಗಿಸಿ ಮನೆಗೆ ತೆರಳಿದ್ದರು. ಮರು ದಿನ ಪರಿಶೀಲಿಸಿದಾಗ ವೈದ್ಯಕೀಯ ಉಪಕರಣಗಳು ಕಳ್ಳತನ ಆಗಿರುವುದು ಪತ್ತೆಯಾಗಿತ್ತು' ಎಂದರು.

'ವಾಸವಿ ಆಸ್ಪತ್ರೆಯಲ್ಲೇ ಆರೋಪಿ ಹೇಮಲತಾ ಈ ಹಿಂದೆ ಕೆಲಸ ಮಾಡುತ್ತಿದ್ದಳು. ಬಳಿಕ ಕನ್ನಿಂಗ್‌ಹ್ಯಾಮ್ ರಸ್ತೆಯ ಆಸ್ಪತ್ರೆಯೊಂದರಲ್ಲಿ ಕೆಲಸಕ್ಕೆ ಸೇರಿದ್ದಳು. ಅಲ್ಲಿ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಪ್ರಕರಣ ಬಯಲಾಯಿತು. ಕದ್ದ ಉಪಕರಣವನ್ನು ಈ ಹಿಂದೆ ಸಹೋದ್ಯೋಗಿ ಆಗಿದ್ದ ಮಂಜುನಾಥ್‌ಗೆ ಮಾರಾಟ ಮಾಡಿದ್ದಳು. ಮಂಜುನಾಥ್‌ನನ್ನು ಕೋಣನಕುಂಟೆ ಕ್ರಾಸ್‌ನ ಆಸ್ಪತ್ರೆಯೊಂದರಲ್ಲಿ ವಶಕ್ಕೆ ಪಡೆದುಕೊಳ್ಳಲಾಯಿತು' ಎಂದು ಪೊಲೀಸರು ತಿಳಿಸಿದರು.

ತೀರ್ಥಯಾತ್ರೆಗೆ ತೆರಳಿದ್ದ ವೇಳೆ ಚಿನ್ನ, ಕಾರು ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಮಾಲೀಕರು ತೀರ್ಥಯಾತ್ರೆಗೆ ತೆರಳಿದ್ದ ವೇಳೆ ಮನೆಯಲ್ಲಿದ್ದ ಚಿನ್ನಾಭರಣ, ಕಾರು ಕದ್ದೊಯ್ದಿದ್ದ ಇಬ್ಬರು ಆರೋಪಿಗಳನ್ನು ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.


ಕನಕಪುರ ರಸ್ತೆಯ ರಘುವನಹಳ್ಳಿಯ ದೀಪಕ್ ಹಾಗೂ ಪವನ್ ಬಂಧಿತರು.

ಬಂಧಿತರಿಂದ 308 ಗ್ರಾಂ. ಚಿನ್ನಾಭರಣ, 3 ಕೆ.ಜಿ ಬೆಳ್ಳಿ ಸಾಮಗ್ರಿ, ಎರಡು ಕಾರು ಹಾಗೂ ಆರು ದ್ವಿಚಕ್ರ ವಾಹನಗಳು ಸೇರಿದಂತೆ ಒಟ್ಟು ₹41.36 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಎಚ್‌ಎಂಟಿ ಲೇಔಟ್‌ನ ನಿವಾಸಿ, ಕುಟುಂಬ ಸಮೇತ ಗುಜರಾತ್‌ಗೆ ತೀರ್ಥಯಾತ್ರೆಗೆಂದು ತೆರಳಿದ್ದರು. ವಾಪಸ್ ಬಂದು ಪರಿಶೀಲಿಸಿದಾಗ ಮನೆಯ ಮುಂದಿನ ಬಾಗಿಲಿಗೆ ಹಾಕಿದ್ದ ಬೀಗ ಒಡೆದು ಮನೆಯ ಕೊಠಡಿಯ ಬೀರುವಿನಲ್ಲಿದ್ದ 10 ಗ್ರಾಂ. ಚಿನ್ನಾಭರಣ, ಏಳು ಕೆ.ಜಿ ಬೆಳ್ಳಿಯ ಸಾಮಗ್ರಿ ಹಾಗೂ ಕಾರು ಕಳ್ಳತನ ಆಗಿರುವುದು ಗೊತ್ತಾಗಿತ್ತು.



ಆರೋಪಿಗಳಿಂದ ಜಪ್ತಿ ಮಾಡಲಾದ ಕಾರು ಹಾಗೂ ಬೈಕ್‌ಗಳು



ದೀಪಕ್



ಪವನ್

ಮನೆ ಮಾಲೀಕರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

'ಕನಕಪುರ ರಸ್ತೆಯ ಹಾರೋಹಳ್ಳಿ ಬಸ್ ನಿಲ್ದಾಣದ ಬಳಿ ಇಬ್ಬರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳ್ಳತನ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದರು. ತನಿಖೆ ಮುಂದುವರಿಸಿದಾಗ ಆರೋಪಿಗಳು ನಗರದ ವಿವಿಧೆಡೆ ಚಿನ್ನ, ಬೆಳ್ಳಿ ಸಾಮಗ್ರಿ ಕಳ್ಳತನ ಮಾಡಿದ್ದು ಗೊತ್ತಾಯಿತು' ಎಂದರು.

'ಕದ್ದ ಕಾರನ್ನು ಆರೋಪಿಗಳು, ಯಲಹಂಕ ನ್ಯೂಟೌನ್‌ನ ಕೆಂಪೇನಹಳ್ಳಿಯ ಪೀಕಾಕ್ ಗಾರ್ಡನ್ ಬಳಿಯ ಖಾಲಿ ಪ್ರದೇಶದಲ್ಲಿ ನಿಲುಗಡೆ ಮಾಡಿದ್ದರು. ಕದ್ದ ಚಿನ್ನವನ್ನು ಹೊಸಕೋಟೆಯ ಟ್ರೂ ಗೋಲ್ಡ್ ಮಳಿಗೆಗೆ ಮಾರಾಟ ಮಾಡಿದ್ದರು. ಅಲ್ಲಿಂದ ಕಾರು, ಚಿನ್ನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಇಬ್ಬರೂ ಆರೋಪಿಗಳು ಏಳು ಮನೆಗಳ್ಳತನ ಪ್ರಕರಣ ಹಾಗೂ 13 ದ್ವಿಚಕ್ರ ವಾಹನ ಕಳ್ಳತನ ಪ್ರಕರಣಗಳಲ್ಲಿ ಭಾಗಿ ಆಗಿರುವುದು ತನಿಖೆ ವೇಳೆ ಬಯಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಮೈಸೂರು ರೇಸ್

ಕ್ಸಾರ್ ಗೆಲ್ಲುವ ನಿರೀಕ್ಷೆ

ಡಾ. ಎಂ.ಎನ್. ದೊರೆಸ್ವಾಮಿ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕ್ಸಾರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಪೋಲಾರ್ ವಿಂಡ್ 1, ಇಕೊ ಸಿಸ್ಟಮ್ 10, ಫೆಲಿಸಿಟ 2
2ನೇ ರೇಸ್: ತಲ್ವೈವಾ 7, ಆರಾಧನ 10, ಸೇಪಿಯಂಟ್ 9
3ನೇ ರೇಸ್: ರೆಡ್ ಹಿಲ್ಸ್ 4, ಗೋಲ್ಡ್ ಕ್ರೆಸ್ಟ್ 5, ಪ್ರಾಸ್ಪರಸ್ ಪ್ರಿನ್ಸ್ 6
4ನೇ ರೇಸ್: ಡಿ ಗೋಲ್ಡನ್ ಕಪ್ 11, ಡಿ ಲಾರ್ಡ್ 9, ಎಫ್ಫೆಲ್ ಟವರ್ 12
5ನೇ ರೇಸ್: ಸೆಗೆರ 4, ಕ್ಸಾರ್ 3
6ನೇ ರೇಸ್: ಸ್ವಾಗತಮ್ 5, ಶೆರೌಕ್ 12, ಇನ್‌ಎಕ್ಸಾಸ್ಟಿಬಲ್ 8
7ನೇ ರೇಸ್: ಇಂಡಿಯನ್ ಗ್ಲೋರಿ 5, ಓ ಮಂಚಲಿ 1, ಫ್ಲೈಯಿಂಗ್ ಫಾಲ್ಕನ್ 6

ಉತ್ತಮ ಬೆಟ್: ಓ ಮಂಚಲಿ

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್
3,4,5,6,7,	2,3,4	5,6,7

ಮಹಾರಾಷ್ಟ್ರ ವಿರುದ್ಧ ಮಾನನಷ್ಟ ಮೊಕದ್ದಮೆಗೆ ಸಿದ್ಧತೆ: ಸಚಿವ

ಪ್ರಜಾವಾಣಿ ವಾರ್ತೆ



ಜಿ.ಪರಮೇಶ್ವರ

ತುಮಕೂರು: 'ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳು ಜಾರಿಯಾಗಿಲ್ಲ' ಎಂದು ಸುಳ್ಳು ಜಾಹೀರಾತು ನೀಡಿರುವ ಮಹಾರಾಷ್ಟ್ರ ಸರ್ಕಾರದ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಇಲ್ಲಿ ಮಂಗಳವಾರ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸುಳ್ಳು ಜಾಹೀರಾತು ನೀಡಿದ ಮಹಾರಾಷ್ಟ್ರ ಸರ್ಕಾರದ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ಸೂಚನೆ ನೀಡಿದ್ದಾರೆ. ಎಲ್ಲಾ ರೀತಿಯ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವಂತೆ ತಿಳಿಸಿದ್ದಾರೆ. ಮತ್ತೊಮ್ಮೆ ಜಾಹೀರಾತು ಪರಿಶೀಲಿಸಿ ಮೊಕದ್ದಮೆ ದಾಖಲಿಸಲಾಗುವುದು' ಎಂದು ಹೇಳಿದರು.

'ಕರ್ನಾಟಕದಲ್ಲಿ ಅಭಿವೃದ್ಧಿ ವಿಚಾರಗಳನ್ನು ಬದಿಗೊತ್ತಿ ಗ್ಯಾರಂಟಿ ಘೋಷಣೆ ಮಾಡಲಾಗಿತ್ತು. ಆದರೆ ಅನುಷ್ಠಾನ ಮಾಡಿಲ್ಲ. ಕಾಂಗ್ರೆಸ್ ಸುಳ್ಳು ಹೇಳುತ್ತಿದೆ' ಎಂಬ ರೀತಿಯಲ್ಲಿ ಜಾಹೀರಾತು ನೀಡಿ ರಾಜ್ಯ ಸರ್ಕಾರವನ್ನು ಅವಮಾನ ಮಾಡಲಾಗಿದೆ. ಹಾಗಾಗಿ ಕಾನೂನು ಕ್ರಮ ಅನಿವಾರ್ಯವಾಗಿದೆ ಎಂದರು.

---

10 ದಿನಗಳ ಒಳಗೆ ವರದಿ ನೀಡುವಂತೆ ಮುಖ್ಯಮಂತ್ರಿ ಸೂಚನೆ

ಮದ್ಯ ಮಾರಾಟ ಬಂದ್ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಮದ್ಯ ಮಾರಾಟಗಾರರ ಸಂಘ ಕರೆ ನೀಡಿದ್ದ ಬುಧವಾರದ (ನ. 20) ಮದ್ಯ ಮಾರಾಟ ಬಂದ್ ಅನ್ನು ವಾಪಸ್ ಪಡೆದುಕೊಂಡಿದೆ.

ಸಂಘದ ಬೇಡಿಕೆಗಳನ್ನು ಈಡೇರಿ ಸುವ ಭರವಸೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ ಕಾರಣ ಸಂಘದ ಪದಾಧಿಕಾರಿಗಳು ಈ ನಿರ್ಧಾರ ತೆಗೆದುಕೊಂಡಿದ್ದಾರೆ.

ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಆರೋಪದ ಜೊತೆಗೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಒಂದು ದಿನ ಪ್ರತಿಭಟನೆ ನಡೆಸಲು ಸಂಘ ಮುಂದಾಗಿತ್ತು. ಸಂಘದ ಸದಸ್ಯರ ಜೊತೆ ಗೃಹ ಕಚೇರಿ ಕೃಷ್ಣದಲ್ಲಿ ಮಂಗಳವಾರ ಮುಖ್ಯಮಂತ್ರಿ ಚರ್ಚೆ ನಡೆಸಿದರು.

'ಮದ್ಯ ಮಾರಾಟಗಾರರ ಸಂಘದ ಪದಾಧಿಕಾರಿಗಳ ಜೊತೆ ಮುಖ್ಯಮಂತ್ರಿ ನಡೆಸಿದ ಸಭೆ ಯಶಸ್ವಿಯಾಗಿದೆ. ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ರಾಜ್ಯಪಾಲರಿಗೆ ನಾವು ದೂರು ಕೊಟ್ಟಿಲ್ಲ. ಈ ಬಗ್ಗೆ ಸುಳ್ಳು ಹಬ್ಬಿಸಿದ್ದಾರೆ. ದೂರು ಕೊಟ್ಟವರಿಗೂ ನಮಗೂ ಯಾವುದೇ ಸಂಬಂಧವೇ ಇಲ್ಲ. ಬೇಕಿದ್ದರೆ ಈ ಬಗ್ಗೆ ತನಿಖೆ ನಡೆಸುವಂತೆ ಪದಾಧಿಕಾರಿಗಳು ಸಭೆಯಲ್ಲಿ ಸ್ಪಷ್ಟಪಡಿಸಿದರು' ಎಂದು ಮುಖ್ಯಮಂತ್ರಿ ಸಚಿವಾಲಯ ತಿಳಿಸಿದೆ.

'ನಮ್ಮ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸಂಘದ ಪದಾಧಿಕಾರಿಗಳ ಜೊತೆ ಚರ್ಚಿಸಿ 10 ದಿನಗಳ ಒಳಗೆ ವರದಿ ನೀಡುವಂತೆ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಕಾರ್ಯದರ್ಶಿ ಪಿ.ಸಿ. ಜಾಫರ್ ಮತ್ತು ಅಬಕಾರಿ ಇಲಾಖೆಯ ಆಯುಕ್ತ ರವಿಶಂಕರ್ ಅವರಿಗೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. ಹೀಗಾಗಿ, ಮದ್ಯ ಮಾರಾಟ ಬಂದ್ ಹಿಂಪಡೆದಿದ್ದೇವೆ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಗೋವಿಂದರಾಜ್ ಹೆಗ್ಡೆ ತಿಳಿಸಿದರು.

ಸಿ.ಎಂ ನೀಡಿದ ಭರವಸೆಗಳೇನು?

- ಬೇಡಿಕೆಗಳ ಬಗ್ಗೆ ಸಹಾನುಭೂತಿಯಿಂದ ಪರಿಶೀಲಿಸಿ ನಿರ್ಣಯ
- ಮದ್ಯ ವ್ಯಾಪಾರ ಹೆಚ್ಚಳವಾಗಿ, ಸರ್ಕಾರಕ್ಕೆ ಆದಾಯ ಬರುವಂತೆ ಕ್ರಮ
- ಅಬಕಾರಿ ಇಲಾಖೆಯಲ್ಲಿ ವರ್ಗಾವಣೆಗೆ ಕೌನ್ಸೆಲಿಂಗ್ ಪದ್ಧತಿ ಜಾರಿಗೆ ಪರಿಶೀಲನೆ
- ಸಮಸ್ಯೆಗಳ ಕುರಿತು ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ
- ಕಿರುಕುಳ ನೀಡುವ ಅಧಿಕಾರಿಗಳ ವಿರುದ್ಧ ಮುಲಾಜಿಲ್ಲದೆ ಕ್ರಮ
- ಕಿರುಕುಳ ನೀಡದಂತೆ ನಿಗಾ ವಹಿಸಲು ಅಬಕಾರಿ ಆಯುಕ್ತರಿಗೆ ಸೂಚನೆ



ಮುಖ್ಯಾಂಶಗಳು

- ಬಂದ್‌ಗೆ ಕರೆ ನೀಡಿದ್ದ ಮದ್ಯ ಮಾರಾಟಗಾರರ ಸಂಘ
- ಸಂಘದ ಸದಸ್ಯರ ಜೊತೆ ಮುಖ್ಯಮಂತ್ರಿ ಚರ್ಚೆ

'ಅಪೂರ್ಣ ಕಾಮಗಾರಿಗಳ ಪಟ್ಟಿ ಸಿದ್ಧಪಡಿಸಲು ಸೂಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ ಅಪೂರ್ಣ ಕಾಮಗಾರಿಗಳ ವರದಿ ಸಿದ್ದಪಡಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬೊಮ್ಮನಹಳ್ಳಿ ವಲಯ ಜಂಟಿ ಆಯುಕ್ತರ ಕಚೇರಿಯಲ್ಲಿ ಮಂಗಳವಾರ ನಡೆದ 'ಆಯುಕ್ತರ ನಡೆ ವಲಯದ ಕಡೆ' ಕಾರ್ಯಕ್ರಮದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿ ಅವರು ಮಾತನಾಡಿದರು.

ವಲಯದ ಎಲ್ಲ ಪ್ರಮುಖ ರಸ್ತೆಗಳಲ್ಲಿ ರಸ್ತೆ ಮೇಲ್ಮೈ ಪದರ ಹಾಳಾಗಿರುವ ಹಾಗೂ ರಸ್ತೆ ಗುಂಡಿಗಳನ್ನು ಮುಚ್ಚಬೇಕು. ಆಟದ ಮೈದಾನಗಳು, ಕೆರೆಗಳು ಹಾಗೂ ಉದ್ಯಾನಗಳ ನಿರ್ವಹಣೆ ಮಾಡಬೇಕು. ಬೇಗೂರು ರಸ್ತೆ ವಿಸ್ತರಣೆಗೆ, ಆಸ್ತಿ ಮಾಲೀಕರ ಜೊತೆ ಸಭೆ ನಡೆಸಿ ಟಿಡಿಆರ್ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಜಂಟಿ ಆಯುಕ್ತರಿಗೆ ಸೂಚನೆ ನೀಡಿದರು.

ಮಡಿವಾಳ ಕೆರೆ ಭಾಗದಲ್ಲಿ ಪಾಲಿಕೆಯ 3 ಎಕರೆ ಜಾಗವಿದ್ದು, ಆ ಸ್ಥಳದಲ್ಲಿ 45 ಎಂಎಲ್‌ಡಿ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಾಣ ಮಾಡಲು ಸ್ಥಳಾವಕಾಶ ಕಲ್ಪಿಸಿಕೊಡಲು ಜಲಮಂಡಳಿ ಅಧಿಕಾರಿಗಳು ಮನವಿಗೆ ಸ್ಪಂದಿಸಿ, ಪ್ರಸ್ತಾವ ಸಲ್ಲಿಸಲು ಸೂಚಿಸಿದರು.

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಸತೀಶ್ ರೆಡ್ಡಿ, ವಲಯ ಜಂಟಿ ಆಯುಕ್ತ ಅಜಿತ್, ಉಪ ಆಯುಕ್ತ ಡಿ.ಕೆ ಬಾಬು, ಮುಖ್ಯ ಎಂಜಿನಿಯರ್ ಶಶಿಕುಮಾರ್ ಉಪಸ್ಥಿತರಿದ್ದರು.

17,423 ಬೀದಿ ಬದಿ ವ್ಯಾಪಾರಿಗಳು

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಬೀದಿಬದಿ ವ್ಯಾಪಾರಿಗಳ ಸಮೀಕ್ಷೆಯಲ್ಲಿ ಈವರೆಗೆ 17,423 ಮಂದಿಯನ್ನು ಗುರುತಿಸಲಾಗಿದ್ದು, ಶೀಘ್ರ ಪೂರ್ಣ ವರದಿ ಸಿದ್ದಪಡಿಸಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ವ್ಯಾಪಾರ ವಲಯ ಗುರುತಿಸುವ ಕೆಲಸ ಆಯಾ ವಲಯ ವ್ಯಾಪ್ತಿಯಲ್ಲಿ ನಡೆಸಲಾಗುತ್ತಿದೆ. ಇದರ ಸಮೀಕ್ಷೆಯನ್ನು ಪೂರ್ಣಗೊಳಿಸಬೇಕು ಎಂದರು.









ಕಂಪ್ಯೂಟರ್‌ಗಳಿಗೂ ಲಿಕ್ವಿಡ್ ಕೂಲಿಂಗ್

ಇ.ಎಸ್. ಸುಧೀಂದ್ರ ಪ್ರಸಾದ್

ಪ್ರತಿ ಎರಡು ವರ್ಷಗಳಿಗೊಮ್ಮೆ ಕಂಪ್ಯೂಟರ್‌ಗಳ ಸಾಮರ್ಥ್ಯ ದ್ವಿಗುಣವಾಗುತ್ತಾ ಸಾಗುತ್ತದೆ ಎಂಬ ಮಾತನ್ನು 60 ವರ್ಷಗಳ ಹಿಂದೆ ಗೊರ್ಡನ್ ಮೂರ್ ಎಂಬ ತಂತ್ರಜ್ಞ ಹೇಳಿದ್ದರು. ಇದೀಗ ಮಾಹಿತಿ ತಂತ್ರಜ್ಞಾನ ಜಗತ್ತು ಕೃತಕ ಬುದ್ಧಿಮತ್ತೆಯವರೆಗೂ ಬಂದು ನಿಂತಿರುವಾಗ, ಮೂರ್ ಸಿದ್ಧಾಂತವನ್ನು ಆಧರಿಸಿ ಕಂಪ್ಯೂಟರ್ ಕ್ಷೇತ್ರದಲ್ಲಿ ಆಗಿರುವ ಬದಲಾವಣೆಗಳು ಹೊಸ ಹಾದಿಯತ್ತ ಕರೆದೊಯ್ಯುತ್ತಿದೆ.

ಕೇಳಿದ ಮಾಹಿತಿಯನ್ನು ಕ್ಷಣಮಾತ್ರದಲ್ಲಿ ನೀಡುವಂಥ ಕೃತಕ ಬುದ್ಧಿಮತ್ತೆಗಳಿರುವ ಕಾಲದಲ್ಲಿ ನಾವಿದ್ದೇವೆ. ಬೃಹತ್ ದಾಖಲೆಗಳ ಪರಿಶೀಲನೆ, ಆಗಾಗ ಬದಲಾಗುವ ಹವಾಮಾನದ ನಿಖರ ಮಾಹಿತಿ, ಉಪಗ್ರಹಗಳು ಕಳುಹಿಸುವ ಭೂಮಿಯ ಚಿತ್ರಗಳನ್ನು ಜೋಡಿಸಿ, ಸಂಯೋಜಿಸಿ, ವಿಶ್ಲೇಷಿಸಿ ಮಾಹಿತಿ ನೀಡುವ ಬಿಗ್ ಡೇಟಾ ತಂತ್ರಜ್ಞಾನ – ಹೀಗೆ ಯಾವುದೇ ಮಾಹಿತಿ ಇರಲಿ, ತಡಮಾಡದೆ ಸಿದ್ಧಪಡಿಸುವ ವೇಗದ ತಂತ್ರಜ್ಞಾನ ಕಾಲದಲ್ಲಿ, ಅದಕ್ಕೆ ತಕ್ಕ ಸಾಧನಗಳು ಇರಬೇಕಾದ್ದೂ ಜರೂರು.

ಫೇರ್‌ಚೈಲ್ಡ್ ಸೆಮಿಕಂಡಕ್ಟರ್ ಹಾಗೂ ಇಂಟೆಲ್‌ನ ಸಂಸ್ಥಾಪಕರೂ ಆಗಿದ್ದ ಮೂರ್ ಅವರ ಪ್ರಕಾರ, ಪ್ರತಿ ಎರಡು ವರ್ಷಗಳಿಗೊಮ್ಮೆ ಕಂಪ್ಯೂಟರ್ ಒಳಗಿನ ಟ್ರಾನ್ಸಿಸ್ಟರ್‌ಗಳ ಸಂಖ್ಯೆ ದ್ವಿಗುಣಗೊಳ್ಳುತ್ತಾ ಸಾಗುತ್ತದೆ. ಅದರ ಆಧಾರದ ಮೇಲೆ ಕಂಪ್ಯೂಟರ್‌ಗಳೂ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳುತ್ತವೆ. ಆದರೆ, ಹೀಗೆ ಗ್ರಾಹಕರ ಅತಿಯಾದ ನಿರೀಕ್ಷೆಯನ್ನು ಪೂರೈಸುವ ಹೊಣೆಯನ್ನು ಹೊತ್ತಿರುವ ಸೂಪರ್ ಕಂಪ್ಯೂಟರ್‌ಗಳಲ್ಲಿನ ಎಲೆಕ್ಟ್ರಾನಿಕ್ ಉಪಕರಣಗಳನ್ನು ಅತಿಯಾದ ತಾಪಮಾನದಿಂದ ರಕ್ಷಿಸಲು ವಿಶೇಷ ತಂತ್ರಜ್ಞಾನದ ಹುಡುಕಾಟವೂ ದಶಕದಿಂದ ನಡೆಯುತ್ತಲೇ ಇದೆ. ಅದಕ್ಕೆ ಉತ್ತರ ಎಂಬಂತೆ ದ್ರವರೂಪದಲ್ಲಿ ಕಂಪ್ಯೂಟರ್ ಒಳಗಿನ ತಾಪಮಾನ ಕಾಪಾಡುವ ತಂತ್ರಜ್ಞಾನ ಈಗ ಸುದ್ದಿಯಲ್ಲಿದೆ.

ವಿದ್ಯುತ್ ಉತ್ಪಾದನೆಯ ಶೇ 1.3ರಷ್ಟು ಡೇಟಾ ಸೆಂಟರ್‌ಗಳಿಗೆ: ಕಾರು ಹಾಗೂ ಬೈಕ್‌ಗಳಲ್ಲಿ ಲಿಕ್ವಿಡ್ ಕೂಲ್ಡ್ ಎಂಜಿನ್‌ಗಳು ಸಾಮಾನ್ಯ ಸಂಗತಿ. ಆದರೆ ದ್ರವವೆಂದರೇ ಹೌಹಾರುವ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳುಳ್ಳ ಕಂಪ್ಯೂಟರ್ ಹಾಗೂ ಸರ್ವರ್‌ಗಳ ಕ್ಷೇತ್ರಕ್ಕೂ ಫ್ಯಾನ್ ರಹಿತ ಲಿಕ್ವಿಡ್ ಕೂಲ್ಡ್ ಸಾಧನಗಳು ಇದೀಗ ಕಾಲಿಟ್ಟಿದೆ. ಇದು ಪರಿಸರಕ್ಕೆ ಪೂರಕವಾಗುವುದರ ಜತೆಗೆ, ಇಂಧನ ಉಳಿತಾಯದ ಮೂಲಕ ಕೈಗಾರಿಕೆಗಳಿಗೂ ಹೆಚ್ಚಿನ ಲಾಭವನ್ನು ತಂದುಕೊಡಬಲ್ಲದು. ಏಕೆಂದರೆ, ಅಂತರರಾಷ್ಟ್ರೀಯ ವಿದ್ಯುತ್ ಏಜೆನ್ಸಿಯು 2022ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಜಗತ್ತಿನಲ್ಲಿರುವ ಡೇಟಾ ಸೆಂಟರ್‌ಗಳ ವಿದ್ಯುತ್ ಬಳಕೆ 220ರಿಂದ 320 ಟೆರಾವ್ಯಾಟ್ ಗಂಟೆಗಳಷ್ಟಿದೆ. ಎಂದರೆ ಜಗತ್ತಿನ ಒಟ್ಟು ವಿದ್ಯುತ್ ಬೇಡಿಕೆಯ ಶೇ 0.9ರಿಂದ ಶೇ 1.3ರಷ್ಟು ವಿದ್ಯುತ್ ಕೇವಲ ಡೇಟಾ ಸೆಂಟರ್‌ಗಳಿಗೆ ಮಾತ್ರವೇ ಬೇಕಿದೆ.

ಇಂಥದ್ದೊಂದು ಲಿಕ್ವಿಡ್ ಕೂಲ್ಡ್ ಸರ್ವರ್ ಅನ್ನು ಅಭಿವೃದ್ಧಿಪಡಿಸಿರುವುದಾಗಿ 'ಹ್ಯೂಲೆಟ್ ಪ್ಯಾಕರ್ಡ್' ಇತ್ತೀಚೆಗೆ ಹೇಳಿದೆ. ಇದು ಕಂಪ್ಯೂಟರ್ ಕ್ಷೇತ್ರದಲ್ಲೇ ಶೇ 100ರಷ್ಟು ಫ್ಯಾನ್‌ಲೆಸ್ ಮತ್ತು ನೇರ ಲಿಕ್ವಿಡ್ ಕೂಲಿಂಗ್ ಸಿಸ್ಟಂ ಎಂದು ಹೇಳಿಕೊಂಡಿದೆ. ಇಂಟೆಲ್ ಕಂಪನಿ ಕೂಡ ಇಂಥದ್ದೇ ತಂತ್ರಜ್ಞಾನ ತನ್ನ ಬಳಿಯೂ ಇದೆ ಎಂದಿದೆ. ಸಾಮಾನ್ಯವಾಗಿ ಹೆಚ್ಚಿನ ಕಾರ್ಯವನ್ನು ಕಂಪ್ಯೂಟರ್‌ಗಳಿಗೆ ನೀಡಿದಾಗ ಅದನ್ನು ಒದಗಿಸುವ ಒತ್ತಡದಲ್ಲಿ ಒಳಗಿನ ಎಲೆಕ್ಟ್ರಾನಿಕ್ ಉಪಕರಣಗಳ ಶಾಖ ಏರುವುದು ಸಾಮಾನ್ಯ. ಇದನ್ನು ತಗ್ಗಿಸುವ ನಿಟ್ಟಿನಲ್ಲಿ ಫ್ಯಾನ್‌ಗಳನ್ನು ಅಳವಡಿಸಿ, ಹೊರಗಿನ ಗಾಳಿಯನ್ನು ತಂಪಾಗಿಸಿ ಒಳಗಿನ ತಾಪಮಾನವನ್ನು ಸಮತೋಲನದಲ್ಲಿಡುವ ತಂತ್ರಜ್ಞಾನ ಸದ್ಯದ ಅಗತ್ಯ. ಆದರೆ ಡೈರೆಕ್ಟ್ ಲಿಕ್ವಿಡ್ ಕೂಲಿಂಗ್ ತಂತ್ರಜ್ಞಾನದಲ್ಲಿ ಇಂಥ ಫ್ಯಾನ್‌ಗಳ ಅಗತ್ಯವಿಲ್ಲ. ಬದಲಿಗೆ ದ್ರವವನ್ನು ನೇರವಾಗಿ ಕಂಪ್ಯೂಟರ್ ತಂಪಾಗಿಸಲು ಬಳಸುವುದರಿಂದ ಫ್ಯಾನ್‌ಗಳ ಅಗತ್ಯವಿಲ್ಲ. ಇದರಿಂದ ಶೇ 90ರಷ್ಟು ಇಂಧನ ಉಳಿತಾಯವಾಗಲಿದೆ ಎನ್ನುವುದು ಎಚ್‌ಪಿಇ ಸಿಇಒ ಆ್ಯಂಟೊನಿ ನೆರಿ ಅವರ ಮಾತು. ಲಿಕ್ವಿಡ್ ಕೂಲ್ಡ್ ತಂತ್ರಜ್ಞಾನವನ್ನು ಜಿಪಿಯು, ಸಿಪಿಯು, ಸಂಪೂರ್ಣ ಸರ್ವರ್ ಬ್ಲೇಡ್, ಸ್ಥಳೀಯ ಸ್ಟೋರೇಜ್, ನೆಟ್‌ವರ್ಕ್ ಫ್ಯಾಬ್ರಿಕ್, ಕ್ಯಾಬಿನೆಟ್, ಕ್ಲಸ್ಟರ್ ಮತ್ತು ಕೂಲೆಂಟ್ ಡಿಸ್ಟ್ರಿಬ್ಯೂಷನ್ ಯೂನಿಟ್ ಸೇರಿದಂತೆ ಎಂಟು ಸ್ತರಗಳಲ್ಲಿ ಬಳಸಲಾಗಿದೆ. ಪ್ರತಿ ಸರ್ವರ್ ಬ್ಲೇಡ್‌ಗಳನ್ನು ತಣ್ಣಗಾಗಿಸುವ ಪ್ರಕ್ರಿಯೆಯಲ್ಲಿ ಶೇ 37ರಷ್ಟು ಇಂಧನ ಉಳಿತಾಯವಾಗಲಿದೆ. ಇದರಿಂದ ನಿರ್ವಹಣೆ ವೆಚ್ಚ ಉಳಿಯುವುದರ ಜತೆಗೆ, ಇಂಗಾಲ ಉತ್ಪಾದನೆಯೂ ಗಣನೀಯವಾಗಿ ತಗ್ಗಲಿದೆ. ಜತೆಗೆ ಡಾಟಾ ಸೆಂಟರ್‌ಗಳಲ್ಲಿನ ಶಬ್ದಮಾಲಿನ್ಯವೂ ಕಡಿಮೆಯಾಗಲಿದೆ. ಅನಗತ್ಯ ಕೂಲಿಂಗ್ ಉಪಕರಣಗಳನ್ನು ಈ ತಂತ್ರಜ್ಞಾನ ತಗ್ಗಿಸುವುದರಿಂದ, ಸರ್ವರ್‌ಗಳ ಗಾತ್ರವೂ ಕಿರಿದಾಗಲಿದೆ. ಇದರಿಂದ ಹೆಚ್ಚಿನ ಸ್ಥಳಾವಕಾಶ ದೊರಕಲಿದೆ ಎನ್ನುವುದು ತಜ್ಞರ ಲೆಕ್ಕಾಚಾರ.

3ಡಿ ಆವಿ ಘಟಕ, ಕೂಲಿಂಗ್ ಜೆಟ್‌ಗಳ ಬಳಕೆ: ಪ್ರಾಸೆಸರ್‌ಗಳ ಉತ್ಪಾದನೆಯಲ್ಲಿ ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿರುವ ಇಂಟೆಲ್ ಕೂಡ ಇಂಥ ಲಿಕ್ವಿಡ್ ಕೂಲ್ಡ್ ತಂತ್ರಜ್ಞಾನ ಕ್ಷೇತ್ರದಲ್ಲಿ ಕಳೆದ ಒಂದು ದಶಕಗಳಿಂದ ಕೆಲಸ ಮಾಡುತ್ತಿದ್ದು, ಸುಮಾರು ಒಂದು ಸಾವಿರ ಟೆರಾವ್ಯಾಟ್ ಗಂಟೆಗಳಷ್ಟು ವಿದ್ಯುತ್ ಉಳಿತಾಯ ಮಾಡಿರುವುದಾಗಿ ಹೇಳಿದೆ.

ಥರ್ಮಲ್ ಪ್ರಯೋಗಾಲಯದಲ್ಲಿ ನಡೆಸಿದ ಬಹಳಷ್ಟು ಪ್ರಯೋಗಗಳ ಮೂಲಕ 3ಡಿ ಆವಿಯ ಘಟಕಗಳನ್ನು ನಿರ್ಮಿಸಿ, ಅವುಗಳು ಹೆಚ್ಚು ಬಿಸಿಯಾಗುವ ಚಿಪ್‌ಗಳಿಗೆ ತಣ್ಣನೆಯ ದ್ರವವನ್ನು ಹದವಾಗಿ ಸಿಂಪಡಿಸುವುದರ ಜತೆಗೆ, ಉಪಕರಣಗಳಿಗೂ ಹಾನಿಯಾಗದಂತೆ ತಡೆಯುವ ಸಾಮರ್ಥ್ಯವನ್ನು ಹೊಂದಿವೆ. ಇಂಟೆಲ್ ಕಂಪನಿಯು ತನ್ನ ಕ್ಸೆನಾನ್ ಪ್ರಾಸೆಸರ್ ಮೂಲಕ ಹೊಸ ಬಗೆಯ ಕೂಲಿಂಗ್ ತಂತ್ರಜ್ಞಾನ ಆಧಾರಿತ ಸಾಧನವನ್ನು ಪರಿಚಯಿಸಿತು. ಇದಕ್ಕಾಗಿ ಸಬ್ಮೆರ್ ಕಂಪನಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿತ್ತು. ಗ್ರೀನ್ ರೆವಲೂಷನ್ ಕೂಲಿಂಗ್ ಜತೆಗೆ ವಿನ್ಯಾಸಕ್ಕೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಂಡಿತು. ಇಂಥ ತಂತ್ರಜ್ಞಾನವನ್ನು ಪರಿಚಯಿಸಲು ಮೈಕ್ರೊಸಾಫ್ಟ್ ಮತ್ತು ಅಲಿಬಾಬಾದಂತ ಬೃಹತ್ ಕಂಪನಿಗಳ ನೆರವು ಪಡೆದು ಗ್ರಾಹಕರನ್ನು ತಲುಪುವ ಪ್ರಯತ್ನ ನಡೆಸಿತು. ಬೃಹತ್ ಕಂಪ್ಯೂಟರ್‌ಗಳು ಉತ್ಪಾದಿಸುವ ಶೇ 99ರಷ್ಟು ಶಾಖವನ್ನು ನೀರು ಅಥವಾ ದ್ರವರೂಪದ ಕೂಲಂಟ್‌ಗಳು ತಗ್ಗಿಸುತ್ತವೆ. ಈ ಕೂಲಂಟ್ ಮೂಲಕ ಸಾಗುವ ಶಾಖವು ನಂತರ ಇಂಧನವಾಗಿ ಪರಿವರ್ತನೆ ಹೊಂದುತ್ತದೆ. ಒಂದರ್ಥದಲ್ಲಿ ಹವಾನಿಯಂತ್ರಿತ ಸಾಧನದಂತೆಯೇ ಇದು ಕೆಲಸ ಮಾಡುತ್ತದೆ. ಹೀಗಾಗಿ ಈ ಶಾಖವನ್ನು ಮರುಬಳಕೆ ಮಾಡಬಹುದು. ಇದಕ್ಕಾಗಿ 3ಡಿ ಆವಿಕೋಣೆಗಳನ್ನು ನಿರ್ಮಿಸಲಾಗಿದೆ. ಇವುಗಳನ್ನು ಲೋಹದ ಪೊಟ್ಟಣದೊಳಗೆ ಕೂರಿಸಿ, ಅದರಿಂದ ಆವಿ ಹೊರಹೋಗದಂತೆ ವ್ಯವಸ್ಥೆ ಮಾಡಲಾಗಿದೆ. ಅಷ್ಟು ಮಾತ್ರವಲ್ಲದೆ, ಒಳಗಿನ ಶಾಖದಿಂದ ಪೊಟ್ಟಣದ ಮೇಲೆ ಆವಿಗುಳ್ಳೆಗಳು ಮೂಡದಂತೆಯೂ ಈ ಸಾಧನವನ್ನು ಸಿದ್ಧಪಡಿಸಲಾಗಿದೆ. ಇದರಿಂದ ಅತಿ ಹೆಚ್ಚು ಕಾರ್ಯಕ್ಷಮತೆಯ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಉಷ್ಣಾಂಶದ ಸಮತೋಲನವನ್ನು ಕಾಪಾಡಲು ನೆರವಾಗಲಿದೆ.

ಸರ್ವರ್‌ಗಳಲ್ಲಿನ ಎಲೆಕ್ಟ್ರಾನಿಕ್ ಉಪಕರಣಗಳನ್ನು ಕಾಪಾಡಲು ಜೆಟ್ ಮಾದರಿಯಲ್ಲಿ ದ್ರವವನ್ನು ಸಿಂಪಡಿಸುವ ಸಾಧನಗಳ ಆವಿಷ್ಕಾರವೂ ಆಗಿದೆ. ಇದು ಉಪಕರಣಗಳ ಮೇಲೆ ದ್ರವವನ್ನು ಸಿಂಪಡಿಸಿ ತಾಪಮಾನ ಕಾಪಾಡುತ್ತದೆ. ಉಪಕರಣದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗುವ ಭಾಗವನ್ನು ಗುರುತಿಸಿ, ಅಲ್ಲಿಗೆ ಮಾತ್ರ ದ್ರವವನ್ನು ಸಿಂಪಡಿಸಲು ಈ ತಂತ್ರಜ್ಞಾನ ನೆರವಾಗಲಿದೆ. ಇದರಿಂದ ಪ್ರಾಸೆಸರ್‌ಗಳು ಕಡಿಮೆ ತಾಪಮಾನದಲ್ಲಿ ಕೆಲಸ ಮಾಡುವುದರ ಜತೆಗೆ, ಶೇ 5ರಿಂದ 7ರಷ್ಟು ಕಾರ್ಯಕ್ಷಮತೆ ಹೆಚ್ಚಿಸಿಕೊಂಡಿದ್ದೂ ದಾಖಲಾಗಿದೆ ಎಂದು ತಜ್ಞರು ಹೇಳುತ್ತಾರೆ.

ಕೃತಕ ಬುದ್ಧಿಮತ್ತೆ, ಬಿಗ್ ಡೇಟಾಗಳ ನಿರ್ವಹಣೆಯಲ್ಲಿರುವ ಸೂಪರ್ ಕಂಪ್ಯೂಟರ್‌ಗಳಿಗೆ ಬಂದಿರುವ ಈ ದ್ರವರೂಪದ ಕೂಲಿಂಗ್ ತಂತ್ರಜ್ಞಾನವು ಭವಿಷ್ಯದಲ್ಲಿ ಪರ್ಸನಲ್ ಕಂಪ್ಯೂಟರ್‌ಗಳಿಗೂ ಬರುವ ಸಾಧ್ಯತೆ ಕುರಿತು ಕೂಡ ತಜ್ಞರು ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ❖

ಇಮೇಲ್ ಜತೆಗೆ 'ಅಲಿಯಾಸ್ ಇಮೇಲ್'

ಕೃಷ್ಣ ಭಟ್

ಇ-ಕಾಮರ್ಸ್ ಮತ್ತು ಯುಪಿಐ ಯುಗದಲ್ಲಿ ಅತ್ಯಂತ ದುರ್ಬಳಕೆಗೆ ಒಳಗಾಗುವ ಎರಡು ಸಂಗತಿಗಳೆಂದರೆ ನಮ್ಮ ಇಮೇಲ್ ಮತ್ತು ಫೋನ್ ನಂಬರ್. ಒಂದು ಯುಪಿಐ ವಹಿವಾಟು ನಡೆಸಿದರೆ, ಇನ್ನೊಂದು ಮೆಸೇಜ್ ಮೊಬೈಲ್‌ಗೆ ಹಾಗೂ ಒಂದು ಮೇಲ್ ಇಮೇಲ್‌ಗೆ ಬಂದಿಳಿದಿರುತ್ತದೆ. ಒಂದು ಟೀ ಕುಡಿದರೂ ನಾವು ₹15 ಅನ್ನು ಯುಪಿಐ ಮೂಲಕ ಕಳುಹಿಸಿರುತ್ತೇವೆ. ಅದಾದ ಮೇಲೆ, ಒಂದು ಇಮೇಲ್ ಮತ್ತು ಒಂದು ಮೆಸೇಜ್ ಬಂದು ಕುಳಿತಿರುತ್ತದೆ. ಅಂಥ ಹತ್ತು ಟೀ ಕುಡಿದಾಗ ಬಂದು ಬಿದ್ದ ಮೆಸೇಜ್ ಡಿಲೀಟ್ ಮಾಡುವುದಕ್ಕೆ ಒಂದು ಟೀ ಕುಡಿದಷ್ಟು ಸಮಯ ಬೇಕೇನೋ!

ಇನ್ನು ಕಾರಿದ್ದರಂತೂ ಮತ್ತಷ್ಟು ಇಮೇಲ್, ಮೆಸೇಜಿನ ಹೊಳೆಯೇ ಹರಿಯುತ್ತಿರುತ್ತದೆ. ಒಂದು ಲಾಂಗ್ ಟ್ರಿಪ್ ಹೊರಟಿದ್ದೀರಿ ಎಂದುಕೊಳ್ಳಿ. ಹೈವೆಗಳಲ್ಲಿ ಹೊರಟರೆ ಕನಿಷ್ಠ 60 ಕಿ.ಮೀ.ಗೊಂದು ಟೋಲ್ ಸಿಗುತ್ತದೆ. ಪ್ರತಿ ಟೋಲ್ ದಾಟಿ ಹೋದಾಗಲೂ, ಫಾಸ್ಟ್ಯಾಗ್‌ನಿಂದ ಕಡಿತವಾದ ಮೊತ್ತದ ವಿವರ ಇರುವ ಮೆಸೇಜ್ ಮತ್ತು ಇಮೇಲ್ ಬಂದು ಬೀಳುತ್ತದೆ. ಸರಾಸರಿ ಗಂಟೆಗೊಂದು ಇಮೇಲ್ ಮತ್ತು ಮೆಸೇಜ್ ಬಂದಿರುತ್ತದೆ.

ಈಗಂತೂ ಯಾವ ವೆಬ್‌ಸೈಟ್‌ಗೆ ಹೋದರೂ ಮೊದಲು ವೆಬ್‌ಸೈಟ್‌ಗಳು ನಮ್ಮ ಫೋನ್ ನಂಬರ್ ಮತ್ತು ಇಮೇಲ್ ಐಡಿ ಕೇಳುತ್ತವೆ. ಅದನ್ನು ಕೊಟ್ಟ ಹೊರತು ನಾವು ಅಲ್ಲಿಂದ ಮುಂದೆ ಹೋಗಲು ಸಾಧ್ಯವೇ ಇಲ್ಲ. ನಮಗೆ ಇದು ಬಹಳ ಬಾರಿ ಕಿರಿಕಿರಿ ಎನಿಸಿದರೂ, ಇದರಲ್ಲಿ ಅಗತ್ಯ ಮಾಹಿತಿ ಇರುತ್ತದೆ. ಇನ್ನು ಕೆಲವು ಬಾರಿ ಅನಿವಾರ್ಯವಾಗಿ ನಾವು ನಮ್ಮ ಇಮೇಲ್ ಐಡಿ ಮತ್ತು ಮೊಬೈಲ್ ನಂಬರ್ ಕೊಟ್ಟಿರುತ್ತೇವೆ.

ಯುಪಿಐ ಮತ್ತು ಫಾಸ್ಟ್ಯಾಗ್‌ನಂತಹ ಪ್ರಕರಣಗಳಲ್ಲಿ ಮೇಲ್ ಮತ್ತು ಮೆಸೇಜ್‌ಗಳ ಪ್ರವಾಹವೇ ಆಗುತ್ತದೆ. ಆದರೆ, ಅದನ್ನು ನಾವು ಒಂದೆರಡು ಕ್ಲಿಕ್‌ನಲ್ಲಿ ಅಳಿಸಿ ಹಾಕಬಹುದು. ಆದರೆ, ಬೇರೆ ವೆಬ್‌ಸೈಟ್‌ಗಳಿಗೆ ನಾವು ಕೊಡುವ ನಮ್ಮ ಇಮೇಲ್ ಐಡಿ ಮತ್ತು ಮೊಬೈಲ್ ನಂಬರ್‌ಗಳು ಯಾವ ಯಾವ ರೂಪದಲ್ಲಿ ಎಲ್ಲೆಲ್ಲಿಗೆ ಹೋಗುತ್ತವೆ ಎಂದು ಹೇಳಲಾಗದು. ಮೊಬೈಲ್ ನಂಬರ್‌ಗಾದರೆ ಒಂದು ಹಂತಕ್ಕೆ ಡಿಎನ್‌ಡಿ ಅಂದರೆ 'ಡು ನಾಟ್ ಡಿಸ್ಟರ್ಬ್ ರಿಜಿಸ್ಟ್ರಿ' ಇದೆ. ಅದರಲ್ಲಿ ನೋಂದಣಿ ಮಾಡಿಕೊಂಡರೆ 'ಸ್ಪ್ಯಾಮ್ ಕಾಲ್'ಗಳಿಗೆ ತಡೆ ಒಡ್ಡಬಹುದು. ಆದರೆ ಅವು ಅಷ್ಟೇನೂ ಪರಿಣಾಮಕಾರಿಯಲ್ಲ ಎಂಬುದು ನಮಗೆಲ್ಲರಿಗೂ ಅನುಭವಕ್ಕೆ ಬಂದಿದೆ. ಇನ್ನು, ಇಮೇಲ್‌ನಲ್ಲಂತೂ ಇದು ಇಷ್ಟೂ ಪರಿಣಾಮಕಾರಿಯಾಗಿಲ್ಲ. ಫೋನ್‌ನಲ್ಲಿ ನಮಗೆ ಕರೆ ಬಂದಾಗ ಅದನ್ನು ರಿಸೀವ್ ಮಾಡದೇ ಇರುವ ಆಯ್ಕೆಯಾದರೂ ಇದೆ. ಆದರೆ, ಇಮೇಲ್‌ನಲ್ಲಿ ಹಾಗಲ್ಲ. ಮೇಲ್ ಬಂದು ಕುಳಿತ ಮೇಲೆ ಅದನ್ನು ಅಳಿಸುವ ಕೆಲಸವನ್ನೂ ನಾವೇ ಮಾಡಬೇಕು! ಎಲ್ಲ ಇಮೇಲ್ ಪ್ರೊವೈಡರ್‌ಗಳೂ ತಮ್ಮದೇ ಆದ ಸ್ಪ್ಯಾಮ್ ಫಿಲ್ಟರ್‌ಗಳನ್ನು ಹೊಂದಿವೆ. ಅದು ಪರಿಣಾಮಕಾರಿತ್ವದ ಬಗ್ಗೆ ತುಂಬಾ ಕಡಿಮೆ. ಮೇಲ್‌ಗಳು ಸ್ಪ್ಯಾಮ್‌ಗೆ ಹೋಗಿ ಕುಳಿತುಕೊಳ್ಳುವುದೇನೋ ಸರಿ. ಅಲ್ಲಿ ಕುಳಿತೂ ನಮ್ಮ ಇಮೇಲ್ ಐಡಿಯಲ್ಲಿ ಇಮೇಲ್ ಪ್ರೊವೈಡರ್ ನಮಗೆ ಕೊಟ್ಟಿರುವ ಸ್ಥಳವನ್ನು ತಿಂದುಹಾಕುತ್ತಿರುತ್ತವೆ. ನಾಲ್ಕಾರು ವರ್ಷ ಈ ಸ್ಪ್ಯಾಮ್ ಮೇಲ್‌ಗಳನ್ನು ಅಳಿಸದೇ ಬಿಟ್ಟರೆ, ಇಮೇಲ್ ಪ್ರೊವೈಡರ್ ಒದಗಿಸಿದ ಸ್ಪೇಸ್ ಅನ್ನೇ ನುಂಗಿ ಹಾಕಿ, ಹೊಸ ಇಮೇಲ್‌ಗಳನ್ನು ಬರದಂತೆ ತಡೆದಿರುತ್ತವೆ.

ಇಮೇಲ್‌ನಲ್ಲಿ ಈ ಸಮಸ್ಯೆಯನ್ನು ನಿವಾರಿಸುವುದಕ್ಕೆ ಅಂತಲೇ ಕೆಲವು ಇಮೇಲ್ ಪ್ರೊವೈಡರ್‌ಗಳು ಈಗ 'ಶೀಲ್ಡೆಡ್ ಇಮೇಲ್' ಸೌಲಭ್ಯವನ್ನು ತಂದಿವೆ. ಇದರಲ್ಲಿ ನಮ್ಮ ಮೂಲ ಇಮೇಲ್ ಐಡಿಯನ್ನು ನಾವು ನಮಗೆ ಬೇಕಾದವರಿಗೆ ಮಾತ್ರ ಕೊಡಬಹುದು. ಸ್ಪ್ಯಾಮ್ ಮಾಡುತ್ತಾರೆ ಎಂಬ ಅನುಮಾನ ಇದ್ದವರಿಗೆ ಈ ಅಲಿಯಾಸ್ ಇಮೇಲ್ ಐಡಿಯನ್ನು ನೀಡಿದರಾಯಿತು. ನಮ್ಮ ಬಳಿ ಈಗಿರುವ ಕಾರನ್ನು ಮಾರಿದರೆ ಎಷ್ಟು ರೇಟ್ ಬರಬಹುದು ಎಂದು ನಾವು ತಿಳಿದುಕೊಳ್ಳಬೇಕು ಎಂದಿದ್ದರೆ, ಯಾವುದಾದರೂ ಕಾರು ಮಾರಾಟದ ವೆಬ್‌ಸೈಟ್‌ಗೆ ಹೋದರೆ, ಅಲ್ಲಿ ಲಾಗಿನ್ ಮಾಡುವುದಕ್ಕೆ ನಮ್ಮ ಮೂಲ ಇಮೇಲ್ ಐಡಿ ಬದಲಿಗೆ ಈ ಅಲಿಯಾಸ್ ಐಡಿಯನ್ನು ಕೊಡಬಹುದು. ಆಗ ಆ ವೆಬ್‌ಸೈಟ್ ಸ್ಪ್ಯಾಮ್ ಮಾಡುವುದಕ್ಕೆ ಶುರು ಮಾಡಿದರೆ, ಅದರ ಅಷ್ಟೂ ಇಮೇಲ್‌ಗಳು ನಮ್ಮ ಅಲಿಯಾಸ್ ಐಡಿಗೆ ಬಂದು ಕೂತಿರುತ್ತವೆ. ನಮ್ಮ ಮೂಲ ಇಮೇಲ್ ಐಡಿಗೆ ಬರುವುದಿಲ್ಲ. ಇದರ ಇನ್ನೂ ಒಂದು ಅನುಕೂಲವೆಂದರೆ, ಈ ಅಲಿಯಾಸ್ ಐಡಿಯನ್ನು ನಮಗೆ ಬೇಡ ಎಂದಾಗ ಅಳಿಸಿಹಾಕಬಹುದು. ಒಂದು ನಾಲ್ಕಾರು ವೆಬ್‌ಸೈಟ್‌ಗಳಿಗೆ ಒಂದೇ ಅಲಿಯಾಸ್ ಇಮೇಲ್ ಐಡಿಯನ್ನು ಕೊಟ್ಟಿದ್ದರೆ, ಆ ಇಮೇಲ್ ಐಡಿಯನ್ನೇ ಅಳಿಸಿಹಾಕಿದರೆ, ಸ್ಪ್ಯಾಮ್‌ನ ಸಮಸ್ಯೆ ನಿವಾರಣೆಯಾದ ಹಾಗೆ! ಇಲ್ಲಿ ನಮ್ಮ ಮೂಲ ಇಮೇಲ್ ಐಡಿಗೆ ಯಾವ ಧಕ್ಕೆಯೂ ಆಗುವುದಿಲ್ಲ.

ಈ ಸೌಲಭ್ಯ ಈಗ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿದೆ. ಬಹುತೇಕ ಇಮೇಲ್ ಪ್ರೊವೈಡರ್‌ಗಳು ಪ್ರೀಮಿಯಂ ಬಳಕೆದಾರರಿಗೆ ಈ ಸೌಲಭ್ಯವನ್ನು ಒದಗಿಸುತ್ತಿವೆ. ಆದರೆ, ಉಚಿತ ಬಳಕೆದಾರರಿಗೆ ಇನ್ನೂ ಇದರ ಅನುಕೂಲವಿಲ್ಲ. ಹೀಗಾಗಿ, ಜಿಮೇಲ್ ಈಗ ಇದನ್ನು ಉಚಿತವಾಗಿ ಇಮೇಲ್ ಬಳಸುತ್ತಿರುವವರಿಗೂ ಪರಿಚಯಿಸುವುದಕ್ಕೆ ಹೊರಟಿದೆಯಂತೆ! ಇದರ ಮುಖ್ಯ ಅನುಕೂಲವೆಂದರೆ, ಇದನ್ನು ನಾವು ಸರಿಯಾದ ರೀತಿಯಲ್ಲಿ ಬಳಸಿಕೊಂಡರೆ, ನಮ್ಮ ಇಡೀ ಇಮೇಲ್ ಇನ್‌ಬಾಕ್ಸ್‌ನಲ್ಲಿ ನಮಗೆ ಬೇಕಾದ ಮೆಸೇಜ್‌ಗಳು ಮಾತ್ರ ಇರುತ್ತವೆ. ಈ ಅಲಿಯಾಸ್‌ನಲ್ಲಿ ಬೇಡದ, ಪ್ರಚಾರಕ್ಕೆ ಸಂಬಂಧಿಸಿದ ಇಮೇಲ್‌ಗಳು, ಸ್ಪ್ಯಾಮ್ ಮೇಲ್‌ಗಳು ಸೇರಿಕೊಳ್ಳುತ್ತವೆ. ಅವನ್ನು ಬೇಡವಾದಾಗ ಅಳಿಸಿ, ಸ್ಪ್ಯಾಮ್‌ನಿಂದ ನಾವು ಬಚಾವಾಗಬಹುದು! ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ –ವಿಜ್ಞಾನ

ಲೋಹಗಳು ಮತ್ತು ಅಲೋಹಗಳು

ಪ್ರಶ್ನೋತ್ತರ

25) ಯಾವುದರ ಮೂಲಕ ಕಬ್ಬಿಣ ತುಕ್ಕು ಹಿಡಿಯುವುದನ್ನು ತಡೆಗಟ್ಟಬಹುದು?

ಉತ್ತರ:– ಬಣ್ಣ ಹಚ್ಚುವುದು, ಎಣ್ಣೆ ಸವರುವುದು, ಗ್ರೀಸ್ ಹಚ್ಚುವುದು, ಗ್ಯಾಲ್ವನೀಕರಣ, ಕ್ರೋಮಿಯಂ ಲೇಪನ, ಆನೋಡೀಕರಣ ಅಥವಾ ಮಿಶ್ರಲೋಹಗಳನ್ನಾಗಿ ಮಾಡುವುದರ ಮೂಲಕ ಕಬ್ಬಿಣ ತುಕ್ಕು ಹಿಡಿಯುವುದನ್ನು ತಡೆಗಟ್ಟಬಹುದು.

26) ಮಿಶ್ರ ಲೋಹದ ಬಗ್ಗೆ ಬರೆಯಿರಿ

ಉತ್ತರ:– ಮಿಶ್ರಲೋಹವು ಎರಡು ಅಥವಾ ಹೆಚ್ಚು ಲೋಹ ಅಥವಾ ಲೋಹ–ಅಲೋಹಗಳ ಸಮರೂಪದ ಮಿಶ್ರಣವಾಗಿದೆ. ಇದನ್ನು ಮೊದಲು ಪ್ರಾಥಮಿಕ ಲೋಹವನ್ನು ಕರಗಿಸಿ ನಂತರ ನಿರ್ದಿಷ್ಟ ಅನುಪಾತದಲ್ಲಿ ಬೇರೆ ಧಾತುಗಳನ್ನು ವಿಲೀನಗೊಳಿಸಿ ತಯಾರಿಸಲಾಗುತ್ತದೆ.

ಮಿಶ್ರಲೋಹಗೊಳಿಸುವಿಕೆಯು ಲೋಹದ ಗುಣಗಳನ್ನು ಹೆಚ್ಚಿಸಬಲ್ಲ ಒಂದು ಉತ್ತಮ ವಿಧಾನವಾಗಿದೆ. ಇದರಿಂದ ನಮಗೆ ಬೇಕಾದ ಗುಣಗಳನ್ನು ಪಡೆಯಬಹುದು. ಉದಾಹರಣೆಗೆ ಕಬ್ಬಿಣವು ಅತ್ಯಂತ ವ್ಯಾಪಕವಾಗಿ ಬಳಸುವ ಲೋಹ. ಆದರೆ ಇದನ್ನು ಶುದ್ಧರೂಪದಲ್ಲಿ ಎಂದಿಗೂ ಉಪಯೋಗಿಸಲು ಸಾಧ್ಯವಿಲ್ಲ. ಕಾರಣ ಶುದ್ಧ ಕಬ್ಬಿಣವು ತುಂಬಾ ಮೃದುವಾಗಿರುತ್ತದೆ ಮತ್ತು ಉಷ್ಣತೆ ನೀಡಿದಾಗ ಸುಲಭವಾಗಿ ಹಿಗ್ಗುತ್ತದೆ. ಆದರೆ ಇದಕ್ಕೆ ಸ್ವಲ್ಪ ಕಾರ್ಬನ್ ಅನ್ನು (0.05%) ಸೇರಿಸಿದರೆ ಗಟ್ಟಿ ಮತ್ತು ಬಲಯುತವಾಗುತ್ತದೆ. ಕಬ್ಬಿಣಕ್ಕೆ ನಿಕ್ಕಲ್ ಮತ್ತು ಕ್ರೋಮಿಯಂ ಅನ್ನು ಸೇರಿಸಿದರೆ ಕಲೆರಹಿತ ಉಕ್ಕನ್ನು ಪಡೆಯಬಹುದು. ಇದು ಗಟ್ಟಿಯಾಗಿರುತ್ತದೆ ಮತ್ತು ತುಕ್ಕು ಹಿಡಿಯುವುದಿಲ್ಲ. ಹಾಗೆಯೇ ಕಬ್ಬಿಣವನ್ನು ಬೇರೆ ವಸ್ತುಗಳ ಜೊತೆ ಮಿಶ್ರಗೊಳಿಸಿದರೆ ಅದರ ಗುಣದಲ್ಲಿ ಬದಲಾವಣೆಯಾಗುತ್ತದೆ. ವಾಸ್ತವವಾಗಿ, ಕೆಲವು ವಸ್ತುಗಳ ಮಿಶ್ರಣದಿಂದ ಯಾವುದೇ ಲೋಹದ ಗುಣಗಳನ್ನು ಬದಲಾಯಿಸಬಹುದು. ಸೇರಿಸುವ ವಸ್ತುವು ಲೋಹ ಅಥವಾ ಅಲೋಹವಾಗಿರಬಹುದು.

27) ಬಿಟ್ಟ ಸ್ಥಳ ತುಂಬಿ

1) ಲೋಹಗಳನ್ನು ಅವುಗಳ ಕ್ರಿಯಾಶೀಲತೆಯ ಆಧಾರದ ಮೇಲೆ ಇಳಿಕೆ ಕ್ರಮದಲ್ಲಿ ಬರೆಯುವುದಕ್ಕೆ .... ಎನ್ನುವರು

ಉತ್ತರ:– ಕ್ರಿಯಾಶೀಲತೆ ಸರಣಿ

2) ಕ್ರಿಯಾಶೀಲತೆಯ ಸರಣಿಯಲ್ಲಿ ಹೈಡ್ರೋಜನಿಗಿಂತ ಮೇಲ್ಭಾದಲ್ಲಿರುವ ಲೋಹಗಳು ಸಾರರಿಕ್ತ ಆಮ್ಲಗಳಲ್ಲಿರುವ .... ಅನ್ನು ಪಲ್ಲಟಗೊಳಿಸುತ್ತವೆ

ಉತ್ತರ:– ಹೈಡ್ರೋಜನ್

3) ಹೆಚ್ಚು ಕ್ರಿಯಾಪಟುತ್ವ ಹೊಂದಿರುವ ಲೋಹವು ತನಗಿಂತ ಕಡಿಮೆ ಕ್ರಿಯಾಪಟುತ್ವ ಹೊಂದಿರುವ ಲೋಹವನ್ನು ಅದರ .... ಪಲ್ಲಟಗೊಳಿಸುತ್ತದೆ

ಉತ್ತರ:– ಲವಣ ದ್ರಾವಣ ದಿಂದ

ಬಹು ಆಯ್ಕೆ ಪ್ರಶ್ನೆಗಳು

1. ಈ ಕೆಳಗಿನವುಗಳಲ್ಲಿ ಯಾವ ಜೋಡಿಯು ಸ್ಥಾನಪಲ್ಲಟ ಕ್ರಿಯೆಯನ್ನು ಉಂಟುಮಾಡುತ್ತದೆ?

(a) $NaCl$ ದ್ರಾವಣ ಮತ್ತು ತಾಮ್ರದ ಲೋಹ

(b) $MgCl_2$ ದ್ರಾವಣ ಮತ್ತು ಅಲ್ಯುಮಿನಿಯಂ ಲೋಹ

(c) $FeSO_4$ ದ್ರಾವಣ ಮತ್ತು ಬೆಳ್ಳಿಯ ಲೋಹ

(d) $AgNO_3$ ದ್ರಾವಣ ಮತ್ತು ತಾಮ್ರದ ಲೋಹ.

2. ಕಬ್ಬಿಣದ ಕಾವಲಿ ತುಕ್ಕು ಹಿಡಿಯದಂತೆ ತಡೆಗಟ್ಟಲು ಈ ಕೆಳಗಿನವುಗಳಲ್ಲಿ ಯಾವ ವಿಧಾನ ಸೂಕ್ತವಾಗಿದೆ?

(ಎ) ಗ್ರೀಸ್ ಹಚ್ಚುವುದು (ಬಿ) ಬಣ್ಣ ಹಚ್ಚುವುದು

(ಸಿ) ಸತುವಿನ ಲೇಪನ ಮಾಡುವುದು (ಡಿ) ಮೇಲಿನ ಎಲ್ಲವೂ

3. ಒಂದು ಧಾತುವು ಆಕ್ಸಿಜನ್‌ನ ಜೊತೆ ಪ್ರತಿವರ್ತಿಸಿ ಹೆಚ್ಚಿನ ಕರಗುವ ಬಿಂದುವನ್ನು ಹೊಂದಿರುವ ಸಂಯುಕ್ತವನ್ನು ಉಂಟುಮಾಡುತ್ತದೆ. ಈ ಸಂಯುಕ್ತವು ನೀರಿನಲ್ಲಿ ಸುಲಭವಾಗಿ ಕರಗುತ್ತದೆ. ಸಾಮಾನ್ಯವಾಗಿ ಆ ಧಾತು ಯಾವುದಾಗಿರಬಹುದೆಂದರೆ..............................

(ಎ) ಕ್ಯಾಲ್ಸಿಯಂ (ಬಿ) ಕಾರ್ಬನ್

(ಸಿ) ಸಿಲಿಕಾನ್ (ಡಿ) ಕಬ್ಬಿಣ

4. ಆಹಾರ ಪದಾರ್ಥಗಳ ಡಬ್ಬಿಗಳನ್ನು ತವರದಿಂದ ಲೇಪನಮಾಡಲಾಗಿರುತ್ತದೆಯೇ ಹೊರತು ಸತುವಿನಿಂದಲ್ಲ ಕಾರಣ......

(ಎ) ಸತು ತವರಕ್ಕಿಂತ ದುಬಾರಿ.

(ಬಿ) ಸತುವಿನ ಕರಗುವ ಬಿಂದು ತವರಕ್ಕಿಂತ ಹೆಚ್ಚು.

(ಸಿ) ಸತುವು ತವರಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದೆ.

(ಡಿ) ಸತುವು ತವರಕ್ಕಿಂತ ಕಡಿಮೆ ಕ್ರಿಯಾಶೀಲವಾಗಿದೆ.

ಉತ್ತರ:– (1)ಡಿ (2)ಸಿ (3)ಎ (4)ಸಿ

* * * * * * * * * * * * *

ನಮ್ಮ ಪರಿಸರ

1) ಪರಿಸರ ಯಾವುದಕ್ಕೆ ಕರೆಯುತ್ತಾರೆ?

ಉತ್ತರ:– ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಪರಿಸರ ಎನ್ನುತ್ತಾರೆ. ಇದು ಜೈವಿಕ ಮತ್ತು ಅಜೈವಿಕ ಘಟಕಗಳನ್ನು ಒಳಗೊಂಡಿದೆ.

2) ನೈಸರ್ಗಿಕ ಪರಿಸರ ವ್ಯವಸ್ಥೆ ಮತ್ತು ಕೃತಕ ಪರಿಸರ ವ್ಯವಸ್ಥೆಗಳಿಗೆ ಉದಾಹರಣೆ ಕೊಡಿ

ಉತ್ತರ:–

***) ನೈಸರ್ಗಿಕ ಪರಿಸರ ವ್ಯವಸ್ಥೆಗಳು:–** ಅರಣ್ಯ, ಕೆರೆಗಳು, ಸರೋವರ ಇತ್ಯಾದಿ

***) ಕೃತಕ ಪರಿಸರ ವ್ಯವಸ್ಥೆಗಳು:–** ಉದ್ಯಾನ, ಮತ್ಸ್ಯಾಗಾರ ಇತ್ಯಾದಿ

3) ಕೆಲವು ವಸ್ತುಗಳು ಜೈವಿಕ ವಿಘಟನೀಯ ಮತ್ತು ಕೆಲವು ಜೈವಿಕ ವಿಘಟನೀಯವಲ್ಲ ಏಕೆ?

ಉತ್ತರ:– ಸೂಕ್ಷ್ಮ ಜೀವಿಗಳಿಂದ ಸರಳ ವಸ್ತುಗಳಾಗಿ ವಿಭಜಿಸಲ್ಪಡುವ ವಸ್ತುಗಳನ್ನು ಜೈವಿಕ ವಿಘಟನೀಯ ವಸ್ತುಗಳು ಎನ್ನುತ್ತಾರೆ, **ಉದಾ:–** ಹತ್ತಿ, ಮರ, ಕಾಗದ, ಉಣ್ಣೆ ಇತ್ಯಾದಿ

ಕೆಲವು ಮಾನವ ನಿರ್ಮಿತ ವಸ್ತುಗಳು ಬ್ಯಾಕ್ಟೀರಿಯಾ ಅಥವಾ ಕೊಳೆತಿನಿಗಳಿಂದ ಸರಳ ವಸ್ತುಗಳಾಗಿ ವಿಭಜಿಸಲ್ಪಡುವುದಿಲ್ಲ, ಅಂತಹ ವಸ್ತುಗಳನ್ನು ಜೈವಿಕ ವಿಘಟನೀಯವಲ್ಲದ ವಸ್ತುಗಳು ಎನ್ನುತ್ತಾರೆ, **ಉದಾ:–** ಪ್ಲಾಸ್ಟಿಕ್, ಪಾಲಿಥೀನ್, ಡಿಡಿಟಿ

4) ಪೋಷಣಾ ಸ್ತರಗಳು ಎಂದರೇನು? ಆಹಾರ ಸರಪಳಿಗೆ ಒಂದು ಉದಾಹಣೆ ಕೊಡಿ ಮತ್ತು ಅದರಲ್ಲಿನ ವಿವಿಧ ಪೋಷಣಾ ಸ್ತರಗಳನ್ನು ಹೆಸರಿಸಿ.

ಉತ್ತರ:– ಆಹಾರ ಶಕ್ತಿಯು ವರ್ಗಾವಣೆಯಾಗುವ ಆಹಾರಸರಪಳಿಯ ಹಂತಗಳನ್ನು ಪೋಷಣಾ ಸ್ತರಗಳು ಎನ್ನುತ್ತಾರೆ ಉದಾ ಹುಲ್ಲುಗಾವಲಿನಲ್ಲಿ ಕಂಡುಬರುವ ಆಹಾರ ಸರಪಳಿ

ಹುಲ್ಲು ⇨ ಕೀಟಗಳು ⇨ ಕಪ್ಪೆಗಳು ⇨ ಹಾವುಗಳು

ಹುಲ್ಲು...........ಪೋಷಣಾ ಸ್ತರ–1 *(ಮುಂದುವರಿಯುವುದು)*

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

II PUC BIOLOGY

EVOLUTION

14. Did aquatic life forms get fossilised? If yes, where do we come across such fossils?

Ans:- Yes. The fossils which were formed at the bottom of water bodies became part of the sedimentary rocks.

Such rocks came to the surface through upheavals in the crust of earth. We come across such type of fossils from the exposed sedimentary rocks.

15. How is the age of a fossil computed?

Ans:- (i) With the help of radiocarbon dating in case the fossil is of recent origin.

(ii) Uranium-Lead or Potassium – Argon dating if the fossil is very old.


16. Describe the Miller and Urey's experiment.

Ans:- Miller and Urey's Experiment

It is an apparatus designed for simulating conditions prevalent on earth at the time of abiogenic evolution of organic substances by Stanley Miller.

The apparatus has a **spark** chamber with two electrodes (providing 75000 volts of energy for simulation of lightning), a flask for boiling (simulation for evaporation and circulation) to a temperature of 800° C and a condenser (simulation of raining and Haldane's soup). A control apparatus was also prepared but without electrodes in the spark chamber.

Miller used a mixture of methane, ammonia, hydrogen and water. The mixture was exposed to electric discharges, followed by condensation and then boiling. It was continued for 18 days. The experiment was repeated for a number of times.



Miller and Urey's experiment to simulate conditions of Primeval atmosphere that produced organic compounds.

The products were extracted and identified through chromatography.


Miller was able to identify 15 amino acids (e.g., glycine, alanine, aspartic acid), organic acids (e.g., lactic acid, succinic acid, propionic acid, acetic acid), ribose sugar and purine adenine.

Using different combinations, UV light and other sources of energy, later workers have obtained a number of organic compounds like sugars, nitrogen bases, pigments and fats. Nitrogen bases are formed if the starting combination contained HCN. Occurrence of similar compounds in the meteorites shows that similar process are also occurring elsewhere in the space.

17. Write brief note on vestigial organs in man.


Ans:- Vestigial organs are reduced and functionless organs present in organisms which are homologous to fully formed and functional structures in related organisms. Human body contains approximately 180 vestigial organs. The important ones are plica semilunaris, vermiform appendix, coccyx, wisdom teeth, canines, ear muscles, abdominal muscles, fore head muscles, body hair, etc.

(i) **Plica semilunaris** –is a vestige of nictitating membrane, it is crescent – shaped pinkish patch in the inner angle of each eye.



Nictitating membrane or third eye lid is used in acquatic and burrowing animals for cleaning cornea, e.g., frog, rabbit, cat. The function is performed by upper eye lid in apes and man. Therefore, the same has become reduced.

(2) Wisdom teeth – they are the third or last molars which develop in human beings quite late at the age of 20 -25 years. They are also the first to decay. They do not develop at all in some persons, they have a little role



(3) Canine teeth – They are sharp pointed teeth found between incisors and premolars. They are large and projecting in carnivorous animals. In carnivores, the canine teeth are used for tearing flesh of prey. Due to consumption of cooked food in human beings, there is little use for canine teeth.

(Contd.....)

ನಿಯಮ ಮೀರಿ ಬದಲಿ ನಿವೇಶನ ಹಂಚಿಕೆ • ಲೋಕಾಯುಕ್ತ ಅಧಿಕಾರಿಗಳಿಂದ 8 ತಾಸು ಪ್ರಶ್ನೆ

ಮುಡಾ ಮಾಜಿ ಆಯುಕ್ತ ನಟೇಶ್ ವಿಚಾರಣೆ

ಪ್ರಜಾವಾಣಿ ವಾರ್ತೆ



ಡಿ.ಬಿ.ನಟೇಶ್

ಮೈಸೂರು: ಮುಡಾದ ಹಿಂದಿನ ಆಯುಕ್ತ ಡಿ.ಬಿ. ನಟೇಶ್ ಮಂಗಳವಾರ ಇಲ್ಲಿನ ಲೋಕಾಯುಕ್ತ ಎಸ್‌.ಪಿ. ಕಚೇರಿಯಲ್ಲಿ ವಿಚಾರಣೆಗೆ ಹಾಜರಾದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಮುಡಾದಿಂದ ವಿಜಯನಗರದಲ್ಲಿ 14 ಬದಲಿ ನಿವೇಶನಗಳನ್ನು ನಿಯಮ ಮೀರಿ ಹಂಚಿಕೆ ಮಾಡಿದ ಆರೋಪ ಅವರ ಮೇಲಿದೆ. ಈ ಸಂಬಂಧ ವಿಚಾರಣೆಗೆ ಬರುವಂತೆ ಪ್ರಕರಣದ ತನಿಖಾಧಿಕಾರಿ ಟಿ.ಜೆ. ಉದೇಶ್ ನೋಟಿಸ್ ನೀಡಿದ್ದರು.

ಬೆಳಿಗ್ಗೆ 10.30ಕ್ಕೆ ಆಟೊದಲ್ಲಿ ಲೋಕಾಯುಕ್ತ ಕಚೇರಿಗೆ ಬಂದ ಅಧಿಕಾರಿಯು ಸಂಜೆ 7ರವರೆಗೂ ವಿಚಾರಣೆ ಎದುರಿಸಿದರು. ಬದಲಿ ನಿವೇಶನಗಳ ಹಂಚಿಕೆಯ ನಿರ್ಣಯ, ವಿಜಯನಗರದಲ್ಲೇ ನಿವೇಶನಗಳ ಹಂಚಿಕೆ ಹಾಗೂ ಅದರಲ್ಲಿ ಸಿದ್ದರಾಮಯ್ಯ ಕುಟುಂಬದ ಪ್ರಭಾವ ಕುರಿತು ಅಧಿಕಾರಿಗಳ ತಂಡವು ಮಾಹಿತಿ ಪಡೆಯಿತು.

ನಂತರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ನಟೇಶ್, 'ವಿಚಾರಣೆ ವೇಳೆ ಅಧಿಕಾರಿಗಳು ಕೇಳಿದ ಎಲ್ಲ ಮಾಹಿತಿ ಒದಗಿಸಿದ್ದೇನೆ. ಯಾವ ಕಾಯ್ದೆ ಪ್ರಕಾರ ನಿವೇಶನ ಕೊಟ್ಟಿದ್ದೇವೆ? ಅದು ಸರಿಯೇ ಎಂದು ಈಗ ಹೇಳಲಾಗದು. ನಾವೊಂದು ಕಾಯ್ದೆಯ ಪ್ರಕಾರ ನಿವೇಶನ ಕೊಟ್ಟಿದ್ದು ಸರಿ ಎನ್ನುತ್ತೇವೆ. ಇನ್ನೊಂದು ಕಾಯ್ದೆಯಲ್ಲಿ ಬೇರೆಯವರು ಬೇರೊಂದು ರೀತಿ ಅರ್ಥೈಸುತ್ತಾರೆ. ವಿಚಾರಣೆ ವರದಿ ಬಂದ ಬಳಿಕ ಯಾವುದು ಸರಿ ಎಂದು ನ್ಯಾಯಾಲಯವು ತೀರ್ಮಾನಿಸಲಿದೆ' ಎಂದರು.

'ಇನ್ನೂ ಒಂದೆರಡು ದಿನ ವಿಚಾರಣೆಗೆ ಕರೆಯುವ ಸಾಧ್ಯತೆ ಇದ್ದು, ನೋಟಿಸ್ ಕೊಟ್ಟಾಗ ಮತ್ತೆ ಬರುತ್ತೇನೆ' ಎಂದರು.

ಲೋಕಾಯುಕ್ತ ಕಚೇರಿಗೆ ಹೋಗುವುದನ್ನು ವಿಡಿಯೊ ಚಿತ್ರೀಕರಣ ಮಾಡುತ್ತಿದ್ದ ಮಾಧ್ಯಮದವರನ್ನು ಕಂಡು 'ನಿಮಗೆ ಕಾಮನ್‌ಸೆನ್ಸ್ ಇಲ್ಲವೇ. ನಾನೇನು ಡಾನ್ಸ್ ಮಾಡ್ತಾ ಇದ್ದೇನ?' ಎಂದು ನಟೇಶ್ ಗರಂ ಆದ ಘಟನೆಯೂ ನಡೆಯಿತು.

ದೇವರಾಜುಗೆ ಮತ್ತೆ ನೋಟಿಸ್: ಪ್ರಕರಣದ ನಾಲ್ಕನೇ ಆರೋಪಿ, ಜಮೀನಿನ ಮೂಲ ಮಾಲೀಕ ದೇವರಾಜು ಅವರಿಗೆ ಲೋಕಾಯುಕ್ತ ಪೊಲೀಸರು ಮತ್ತೊಂದು ನೋಟಿಸ್ ನೀಡಿದ್ದು, ಎರಡನೇ ಬಾರಿಗೆ ಅವರಿಗೆ ವಿಚಾರಣೆಗೆ ಹಾಜರಾಗಲಿದ್ದಾರೆ. ಇದಲ್ಲದೇ ಮುಡಾದ ಹಿಂದಿನ ಕೆಲವು ಅಧಿಕಾರಿಗಳಿಗೂ ವಿಚಾರಣಾ ನೋಟಿಸ್ ಜಾರಿಯಾಗಿದೆ.

ಕಪ್ಪು ಬಟ್ಟೆ ಪ್ರದರ್ಶನ

ಲೋಕಾಯುಕ್ತ ವಿಚಾರಣೆಗೆ ಹಾಜರಾಗಿರುವ ಡಿ.ಬಿ. ನಟೇಶ್‌ಗೆ ಕಪ್ಪು ಬಟ್ಟೆ ಪ್ರದರ್ಶಿಸಿ ಆರ್‌ಟಿಐ ಕಾರ್ಯಕರ್ತ ಗಂಗರಾಜು ಹಾಗೂ ಮುಡಾದ ನಿವೃತ್ತ ಅಧಿಕಾರಿ ಪಿ.ಎಸ್. ನಟರಾಜು ಮಂಗಳವಾರ ಪ್ರತಿಭಟನೆ ನಡೆಸಿದರು.

ಈ ಸಂದರ್ಭ ಪತ್ರಕರ್ತರ ಜೊತೆ ಮಾತನಾಡಿದ ಗಂಗರಾಜು, 'ಪಾರ್ವತಿ ಅವರಿಗೆ ನಿವೇಶನ ಹಂಚಿಕೆ ಸಂಬಂಧ ನಿರ್ದೇಶನ ಕೋರಿ ನಟೇಶ್ 2021ರ ಜುಲೈ 14ರಂದು ಸರ್ಕಾರಕ್ಕೆ ಪತ್ರ ಬರೆದಿದ್ದರು. ಅದರಲ್ಲಿ ಪಾರ್ವತಿ ಅವರು ಈ ಜಮೀನನ್ನು ಮಲ್ಲಿಕಾರ್ಜುನ ಸ್ವಾಮಿ ಅವರಿಂದ ಖರೀದಿ ಮಾಡಿದ್ದಾರೆ ಎಂದು ತಪ್ಪು ಮಾಹಿತಿ ನೀಡಿದ್ದರು. ಸರ್ಕಾರದಿಂದ ನಿರ್ದೇಶನ ಬರುವ ಮುನ್ನವೇ ಬದಲಿ ನಿವೇಶನ ಹಂಚಿಕೆ ಮಾಡಿದ್ದರು. ನಟೇಶ್ ಮುಡಾ ಹಗರಣದ ರೂವಾರಿ. ಅವರನ್ನು ಕೂಡಲೇ ಬಂಧಿಸಬೇಕು' ಎಂದು ಆಗ್ರಹಿಸಿದರು.


ನಿವೇಶನ ಪಡೆಯಲು ಸಿದ್ದರಾಮಯ್ಯ ಒಪ್ಪಿರಲಿಲ್ಲ: ಮಾಜಿ ಅಧ್ಯಕ್ಷ

ಮೈಸೂರು: 'ನಾನು ಮುಡಾ ಅಧ್ಯಕ್ಷನಾಗಿದ್ದ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಕೆಸರೆ ಜಮೀನಿಗೆ ಬದಲಾಗಿ ಸಮನಾಂತರ ಬಡಾವಣೆಯಲ್ಲಿ ಬದಲಿ ಜಾಗ ಕೊಡಲು ತೀರ್ಮಾನ ಆಗಿತ್ತು. ಆದರೆ ಅದಕ್ಕೆ ಸಿದ್ದರಾಮಯ್ಯ ಒಪ್ಪಿರಲಿಲ್ಲ' ಎಂದು ಮುಡಾ ಮಾಜಿ ಅಧ್ಯಕ್ಷ ಧ್ರುವಕುಮಾರ್ ಹೇಳಿದರು.

ಲೋಕಾಯುಕ್ತ ಕಚೇರಿ ಬಳಿ ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು 'ಪಾರ್ವತಿ ಅವರ ಜಮೀನನ್ನು ಮುಡಾ ವಶಪಡಿಸಿಕೊಂಡಿದ್ದು, ಬದಲಿ ನಿವೇಶನ ನೀಡುವ ವಿಚಾರ ಸಭೆಯಲ್ಲಿ ಚರ್ಚೆಗೆ ಬಂದು, ಬದಲಿ ಜಾಗ ನೀಡಲು ತೀರ್ಮಾನಿಸಲಾಯಿತು. ನಾನೇ ಸಿದ್ದರಾಮಯ್ಯ ಅವರಿಗೆ ಈ ವಿಚಾರ ತಿಳಿಸಿ ಬದಲಿ ಜಾಗ ಪಡೆಯುವಂತೆ ಕೋರಿದ್ದೆ. ಆದರೆ ಮುಖ್ಯಮಂತ್ರಿ ಆಗಿರುವ ಕಾರಣ ಈ ರೀತಿ ನಿರ್ಣಯಗಳು ಬೇಡ ಎಂದು ಸಿದ್ದರಾಮಯ್ಯ ನಿರಾಕರಿಸಿದ್ದರು' ಎಂದರು.

'ನನ್ನ ಅವಧಿಯಲ್ಲಿ ನಿವೇಶನ ಸಂಬಂಧ ಸಿದ್ದರಾಮಯ್ಯ ಕುಟುಂಬದವರು ಯಾರೂ ಪತ್ರ ಬರೆದಿಲ್ಲ. ಪ್ರಭಾವ ಬೀರಿಲ್ಲ. ಇ.ಡಿ.ಯಿಂದ ಯಾವುದೇ ನೋಟಿಸ್ ಬಂದಿಲ್ಲ. ಬಂದರೆ ವಿಚಾರಣೆ ಎದುರಿಸುತ್ತೇನೆ' ಎಂದರು.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಧ್ರುವಕುಮಾರ್ ಅವರಿಗೆ ಲೋಕಾಯುಕ್ತ ನೋಟಿಸ್ ನೀಡಿದ್ದು, ಸದ್ಯದಲ್ಲೇ ವಿಚಾರಣೆಗೆ ಬರಲಿದ್ದಾರೆ.



ಬಂಡೀಪುರ ಹುಲಿ ಸಂರಕ್ಷಿತಾರಣ್ಯದಲ್ಲಿ ಚಿರತೆಯೊಂದು ಜಿಂಕೆಯನ್ನು ಬೇಟೆಯಾಡಿತು

ಬಂಡೀಪುರ: ಪ್ರವಾಸಿಗರ ಮುಂದೆಯೇ ಜಿಂಕೆ ಹಿಡಿದ ಚಿರತೆ

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತಾರಣ್ಯದಲ್ಲಿ ಪ್ರವಾಸಿಗರ ಮುಂದೆ ಚಿರತೆಯೊಂದು ಜಿಂಕೆಯನ್ನು ಬೇಟೆಯಾಡಿರುವುದು ಸಫಾರಿ ಸಂದರ್ಭ ನಡೆದಿದ್ದು, ಈ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ಬಂಡೀಪುರದ ಸಫಾರಿ ವಲಯದಲ್ಲಿ ಚಿರತೆಯೊಂದು ಜಿಂಕೆಯನ್ನು ಬೇಟೆ ಆಡಿದೆ. ಬಳಿಕ, ಜಿಂಕೆಯನ್ನು ಹೊತ್ತು ಮರವನ್ನೇರಿ ಹಸಿವು ನೀಗಿಸಿಕೊಂಡಿದೆ. ಬೇಟೆ ದೃಶ್ಯವನ್ನು ಪ್ರವಾಸಿಗರು ಕ್ಯಾಮೆರಾದಲ್ಲಿ ದಾಖಲಿಸಿಕೊಂಡಿದ್ದಾರೆ.

ನನಗೆ ಹಕ್ಕಿಲ್ವಾ –ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಪ್ರಶ್ನೆ

'ಸಚಿವ ಸ್ಥಾನ ಪಡೆದೇ ತೀರುವೆ'

ಪ್ರಜಾವಾಣಿ ವಾರ್ತೆ



ಪಿ.ಎಂ. ನರೇಂದ್ರಸ್ವಾಮಿ

ಮಂಡ್ಯ: 'ಸಚಿವ ಸ್ಥಾನ ಬೇಡಿಕೆಯಲ್ಲ, ನನ್ನ ಹಕ್ಕು. ಮುಂದಿನ ಸಚಿವ ಸಂಪುಟದ ಪುನರ್ ರಚನೆ ವೇಳೆ ದಕ್ಕಿಸಿಕೊಳ್ಳುತ್ತೇನೆ' ಎಂದು ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್‌ನಲ್ಲೂ ಕಿಂಡರ್ ಗಾರ್ಟನ್ ಇದೆ. ರಾಜಕೀಯ ಹಿನ್ನೆಲೆ ಇದ್ದರೆ ಸ್ಥಾನಮಾನ ಸಿಗುತ್ತದೆ. ಆದರೆ, ನನಗೆ ಯಾವುದೇ ರಾಜಕೀಯ ಹಿನ್ನೆಲೆ ಇಲ್ಲ. ಜಿಲ್ಲೆಯ ಕಾಂಗ್ರೆಸ್‌ನಲ್ಲಿ ನಾನೇ ಹಿರಿಯ. ಪಕ್ಷ ಕಟ್ಟಿದ್ದೇ ನಾನು. ನನಗೆ ಹಕ್ಕಿಲ್ವಾ? ಯೋಗ್ಯತೆ, ಅರ್ಹತೆ, ಹಿರಿತನ ಎಲ್ಲವೂ ಇವೆ' ಎಂದಿದ್ದಾರೆ.

'ವಿದ್ಯಾರ್ಥಿ ದೆಸೆಯಿಂದಲೂ ಪಕ್ಷ ಕಟ್ಟಿದವನು ನಾನು. ಸಚಿವ ಸ್ಥಾನಕ್ಕೆ ಮೊದಲು ನನ್ನ ಹೆಸರಿತ್ತು. ನಂತರ ಬದಲಾವಣೆಯಾಯಿತು. ನನ್ನ ಹಣೆಬರಹ ಸರಿಯಿಲ್ಲ. ನತದೃಷ್ಟ ನಾನು. ಇದರಿಂದಾಗಿ ಪಕ್ಷದೊಂದಿಗೆ ಸಂಘರ್ಷ ಮಾಡುವ ಪರಿಸ್ಥಿತಿ ಇದೆ' ಎಂದರು.

ಯಾರೂ ಸಂಪರ್ಕಿಸಿಲ್ಲ: 'ನನ್ನನ್ನು ಬೇರೆ ಯಾವ ಪಕ್ಷದವರೂ ಸಂಪರ್ಕಿಸಿಲ್ಲ. ಬಿಜೆಪಿ ಸ್ವಂತ ಕಾಲಿನ ಮೇಲೆ ನಿಂತಿಲ್ಲ, ನಿಲ್ಲುವುದಕ್ಕೂ ಆಗಲ್ಲ. ಅದಿನ್ನು ಮುಳುಗುವ ಹಡಗು. ಮಣಿಪುರದಲ್ಲಿ ಏನಾಗುತ್ತಿದೆ? ರೈತರಿಗಾಗಿ ಕೇಂದ್ರ ಸರ್ಕಾರ ಏನು ಮಾಡುತ್ತಿದೆ? ನಬಾರ್ಡ್ ಅನುದಾನ ಏಕೆ ಕಡಿಮೆ ಮಾಡಿದೆ? ಇವೆಲ್ಲವೂ ಬಿಜೆಪಿಗೆ ಮುಳುವಾಗಿದೆ' ಎಂದು ಟೀಕಿಸಿದರು.

'ಮುಂದಿನ ಚುನಾವಣೆಯಲ್ಲೂ ಯಾವುದೇ ಕಾರಣಕ್ಕೂ ಬಹುಮತದಿಂದ ಅಧಿಕಾರಕ್ಕೆ ಬರಲು ಬಿಜೆಪಿಗೆ ಸಾಧ್ಯವಿಲ್ಲ. ಗತಿ ಇಲ್ಲದೇ ಸದಾಕಾಲ 'ಆಪರೇಷನ್'ನಲ್ಲಿ ಮುಳುಗಿದೆ. ಕಾಂಗ್ರೆಸ್ ಶಾಸಕರಿಗೆ ಆಮಿಷ ಒಡ್ಡುವ ಯತ್ನ ವಿಫಲವಾಗಿದೆ. ಹೀಗಾಗಿ ನಮ್ಮ ಸರ್ಕಾರದ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದಾರೆ' ಎಂದರು.

ಬೆಳಗಾವಿಗೆ ಬೇಕು ಇನ್ನೊಂದು ಸಚಿವ ಸ್ಥಾನ: ಆಸಿಫ್ ಸೇಠ್

ಬೆಳಗಾವಿ: 'ಬೆಳಗಾವಿ ಜಿಲ್ಲೆ ಅತ್ಯಂತ ದೊಡ್ಡದು. ಕನಿಷ್ಠ ಇನ್ನೊಂದು ಸಚಿವ ಸ್ಥಾನ ಕೊಡಬೇಕು. ಇಲ್ಲದಿದ್ದರೆ, ಜಿಲ್ಲೆಗೆ ಅನ್ಯಾಯ ಮಾಡಿದಂತಾಗುತ್ತದೆ' ಎಂದು ಶಾಸಕ ಆಸಿಫ್ ಸೇಠ್ ಅಸಮಾಧಾನ ವ್ಯಕ್ತಪಡಿಸಿದರು.

'ಬೆಂಗಳೂರು ಮೊದಲನೇ ಮತ್ತು ಬೆಳಗಾವಿ ಎರಡನೇ ಅತಿ ದೊಡ್ಡ ಜಿಲ್ಲೆ. ಬೆಂಗಳೂರಿಗೆ ಎಷ್ಟು ಸಚಿವ ಸ್ಥಾನ ನೀಡಿದ್ದೀರಿ, ಬೆಳಗಾವಿಗೆ ಎಷ್ಟು ನೀಡಿದ್ದೀರಿ ಯೋಚಿಸಿ. ನಾನು ಕೂಡ ಸಚಿವ ಸ್ಥಾನದ ಆಕಾಂಕ್ಷಿ. ನನ್ನ ಸಮುದಾಯ ನನ್ನನ್ನೂ ಪ್ರಶ್ನಿಸುತ್ತಿದೆ. ಉತ್ತರ ಕರ್ನಾಟಕದಲ್ಲಿ ಏಕೆ ಅಲ್ಪಸಂಖ್ಯಾತರಿಗೆ ಸಚಿವ ಸ್ಥಾನ ನೀಡಿಲ್ಲ. ಏಕೆ ಅನ್ಯಾಯ ಮಾಡಲಾಗಿದೆ ಎಂದು ಪ್ರಶ್ನೆ ಮಾಡುತ್ತೇನೆ' ಎಂದು ಅವರು ಸುದ್ದಿಗಾರರಿಗೆ ಮಂಗಳವಾರ ತಿಳಿಸಿದರು.

'ಕಾಂಗ್ರೆಸ್‌ನ ಕೆಲ ಶಾಸಕರಿಗೆ ಬಿಜೆಪಿ ಮುಖಂಡರು ₹100 ಕೋಟಿ ಆಮಿಷ ಒಡ್ಡಿದ್ದಾರೆ. ನನ್ನನ್ನು ಯಾರೂ ಸಂಪರ್ಕಿಸಿಲ್ಲ. 135 ಶಾಸಕರೆಲ್ಲ ಒಟ್ಟಾಗಿದ್ದೇವೆ. ಯಾರೂ ಪಕ್ಷ ಬಿಟ್ಟು ಹೋಗುವುದಿಲ್ಲ. ನಾನಂತೂ ಸಾವಿರ ಕೋಟಿ ಕೊಟ್ಟರೂ ಬಿಜೆಪಿಗೆ ಹೋಗುವುದಿಲ್ಲ' ಎಂದರು.

'50 ಜನರಿಗೆ ತಲಾ ₹100 ಕೋಟಿ ಕೊಡುವ ವಿಚಾರ ಬಿಜೆಪಿಯವರು ಮಾಡಿರಬಹುದು. ಅದಕ್ಕೆ ₹5,000 ಕೋಟಿ ಬೇಕು. ಇಷ್ಟೊಂದು ಹಣ ಎಲ್ಲಿಂದ ತಂದರು ಎಂಬುದು ತನಿಖೆಯಾಗಬೇಕು' ಎಂದರು.

'ಡಿಕುನ್ಹ ವರದಿ: ಸಿ.ಎಂ ಕಚೇರಿಯಿಂದಲೇ ಮಾಹಿತಿ ಸೋರಿಕೆ'

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನ್ಯಾಯಮೂರ್ತಿ ಜಾನ್ ಮೈಕಲ್ ಡಿಕುನ್ಹ ಆಯೋಗದ ಕೋವಿಡ್ ತನಿಖಾ ವರದಿಯ ಒಂದೊಂದೇ ಅಂಶಗಳನ್ನು ಮುಖ್ಯಮಂತ್ರಿ ಕಚೇರಿಯಿಂದಲೇ ಕಾನೂನು ಬಾಹಿರವಾಗಿ ಮಾಧ್ಯಮಗಳಿಗೆ ಸೋರಿಕೆ ಮಾಡಲಾಗುತ್ತಿದೆ ಎಂದು ಸಂಸದ ಡಾ.ಕೆ.ಸುಧಾಕರ್ ಆರೋಪಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾನೂನು ಪ್ರಕಾರ ಈ ವರದಿಯನ್ನು ಸಚಿವ ಸಂಪುಟದ ಮುಂದಿಟ್ಟು ನಂತರ ಸದನದಲ್ಲಿ ಮಂಡಿಸಬೇಕಾಗಿತ್ತು. ಮಾಧ್ಯಮಗಳಿಗೆ ಮಾಹಿತಿ ಸೋರಿಕೆ ಹಿಂದೆ ಯಾರು ಇದ್ದಾರೆ ಎನ್ನುವುದು ಗೊತ್ತು ಎಂದು ಹೇಳಿದರು.

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ದಾಸ್ತಾನು ಇರಬೇಕಾಗಿದ್ದ 250 ಔಷಧಿಗಳ ಕೊರತೆ ಉಂಟಾಗಿದೆ. ಹಾಗಾದರೆ ಕಾಂಗ್ರೆಸ್ ಅವಧಿಯಲ್ಲಿ ಕೋವಿಡ್ ಬಂದಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು ಎಂದು ಪ್ರಶ್ನಿಸಿದರು.

'ಗುತ್ತಿಗೆದಾರರ ಸಂಘಕ್ಕೆ ಸಂಬಂಧವಿಲ್ಲ'

ಶೇ 40 ಲಂಚ ಆರೋಪಕ್ಕೆ ಲೋಕಾಯುಕ್ತರ ಕ್ಲೀನ್‌ಚಿಟ್

ಪ್ರಜಾವಾಣಿ ವಾರ್ತೆ

ಕಲಬುರಗಿ: 'ರಾಜ್ಯ ಗುತ್ತಿಗೆದಾರರ ಸಂಘವು ಈ ಹಿಂದಿನ ಸರ್ಕಾರದ ವಿರುದ್ಧ ಮಾಡಿದ್ದ 40 ಪರ್ಸೆಂಟ್ ಕಮಿಷನ್ ಆರೋಪವು ಸತ್ಯವಾಗಿದೆ. ಈ ಸಂಬಂಧ ನ್ಯಾ.ನಾಗಮೋಹನ್ ದಾಸ್ ಆಯೋಗಕ್ಕೆ 2,000 ಪುಟಗಳ ದಾಖಲೆಗಳನ್ನೂ ನೀಡಲಾಗಿದೆ. ಲೋಕಾಯುಕ್ತ ತನಿಖೆಯ ಕ್ಲೀನ್‌ಚಿಟ್ ನಮ್ಮ ಸಂಘಕ್ಕೆ ಸಂಬಂಧಿಸಿದ್ದಲ್ಲ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಪ್ರಭಾರ ಅಧ್ಯಕ್ಷ ಜಗನ್ನಾಥ ಶೇಗಜಿ ಸ್ಪಷ್ಟನೆ ನೀಡಿದರು.

'ಬಿಬಿಎಂಪಿ ಗುತ್ತಿಗೆದಾರ, ಸಂಘದ ಉಪಾಧ್ಯಕ್ಷರಾಗಿದ್ದ ದಿ. ಅಂಬಿಕಾಪತಿ ಅವರು ಸಂಘದ ಲೆಟರ್ ಹೆಡ್ ಬಳಸಿ ಲೋಕಾಯುಕ್ತಕ್ಕೆ ಪತ್ರ ಬರೆದಿರುವುದು ಸಂಘದ ಗಮನಕ್ಕೆ ಬಂದಿಲ್ಲ. ಅದರ ಪತ್ರವೂ ಸಂಘದಲ್ಲಿ ಇಲ್ಲ. 40 ಪರ್ಸೆಂಟ್ ಕಮಿಷನ್ ಆರೋಪ ಸಂಬಂಧ ಲೋಕಾಯುಕ್ತರ ತನಿಖೆಯು ನಮ್ಮ ಸಂಘದ ಆರೋಪಕ್ಕೆ ಸಂಬಂಧಪಟ್ಟಿಲ್ಲ' ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಈ ಪ್ರಕರಣದ ಬಗ್ಗೆ ಸ್ಪಷ್ಟತೆ ಇಲ್ಲದೆ ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರು ದಿ. ಕೆಂಪಣ್ಣ ಸೇರಿದಂತೆ ಸಂಘದ ಮುಖಂಡರ ಆರೋಪದ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ. ಇದರಿಂದ ನೋವಾಗಿದೆ. ನಮ್ಮ ಆರೋಪ ಸತ್ಯವಾಗಿದ್ದು, ಆಯೋಗದ ಮುಂದೆ ಬುಧವಾರ ವಿಚಾರಣೆಗೆ ಹಾಜರಾಗುತ್ತಿದ್ದೇನೆ' ಎಂದರು.

'ಒಂದು ಟೆಂಡರ್ ಕರೆದು 6ರಿಂದ 7 ಮಂದಿ ಗುತ್ತಿಗೆದಾರರು ಭಾಗವಹಿಸಿದ್ದರು. ಎಲ್–1 ಇದ್ದ ಗುತ್ತಿಗೆದಾರರಿಗೆ ಕಾಮಗಾರಿ ವಹಿಸಬೇಕು. ಆದರೆ, ಕಡಿಮೆ ದರ ನಮೂದಿಸಿದ್ದ ಗುತ್ತಿಗೆದಾರನ ಟೆಂಡರ್ ತಿರಸ್ಕರಿಸಿ, ಹೆಚ್ಚಿನ ದರದವರಿಗೆ ಅವಕಾಶ ನೀಡುತ್ತಾರೆ. ಭೂಮಿಪೂಜೆಯ ನೆಪ ಮತ್ತು ಬಿಲ್ ನೀಡುವಲ್ಲಿನ ವಿಳಂಬ, ಜ್ಯೇಷ್ಠತೆ ಆಧಾರದ ಮೇಲೆ ಬಿಲ್ ಪಾವತಿಸದಿರುವುದೂ 40 ಪರ್ಸೆಂಟ್ ಕಮಿಷನ್ ರೂಪಗಳಾಗಿದ್ದವು. ಈ ಅಂಶಗಳ ಮೇಲೆ ಆಯೋಗವು ತನಿಖೆ ನಡೆಸುತ್ತಿದೆ' ಎಂದು ಮಾಹಿತಿ ನೀಡಿದರು.

ಬಾಂಗ್ಲಾದಿಂದ ಅಕ್ರಮ ವಲಸೆ: ಬಂಧಿತರ ಸಂಖ್ಯೆ 6ಕ್ಕೆ

ಚಿತ್ರದುರ್ಗ: ಬಾಂಗ್ಲಾದೇಶದಿಂದ ಅಕ್ರಮವಾಗಿ ಭಾರತಕ್ಕೆ ಬಂದು ನಗರದಲ್ಲಿನ ಖಾಸಗಿ ಸಿದ್ಧ ಉಡುಪುಗಳ ಕಾರ್ಖಾನೆ (ಗಾರ್ಮೆಂಟ್ಸ್)ಗಳಲ್ಲಿ ಕೆಲಸಕ್ಕಿದ್ದ ಮತ್ತೆ ನಾಲ್ವರನ್ನು ಪೊಲೀಸರು ಪತ್ತೆ ಬಂಧಿಸಿದ್ದು, ಬಂಧಿತರ ಸಂಖ್ಯೆ 6ಕ್ಕೇರಿದೆ.

ಸೋಮವಾರ ಸಂಜೆಯವರೆಗೆ ಒಟ್ಟು 15 ಜನ ಕಾರ್ಮಿಕರ ಹಿನ್ನೆಲೆ ಪರಿಶೀಲಿಸಿದ ಸಂದರ್ಭ ಬಾಂಗ್ಲಾದ ಇಬ್ಬರು ಅಕ್ರಮ ವಲಸಿಗರು ಪತ್ತೆಯಾಗಿದ್ದರು. ರಾತ್ರಿ ಮತ್ತೆ ಐವರನ್ನು ವಶಕ್ಕೆ ಪಡೆದು ಪರಿಶೀಲಿಸಿದಾಗ ಮತ್ತೆ ನಾಲ್ವರು ಪತ್ತೆಯಾದರು ಎಂದು ಪೊಲೀಸರು ತಿಳಿಸಿದ್ದಾರೆ.

ಶೇಖ್ ಸೈಪೂರ್ ರೆಹಮಾನ್, ಮೊಹಮ್ಮದ್ ಹುಸೇನ್ ಅಲಿ, ಮಹರೂಲ್, ಅಜೀಜ್ ಶೇಖ್, ಮೊಹಮ್ಮದ್ ಸಾಕಿಬ್, ಸೊನಾವರ್ ಹುಸೇನ್ ಬಂಧಿತರು. 'ಸಿಇಎನ್ ಅಪರಾಧ ಠಾಣೆ, ಕೋಟೆ, 20 ಮಂದಿ ಶಂಕಿತರನ್ನು ಗುರುತಿಸಲಾಗಿತ್ತು. ಇವರ ದಾಖಲೆಗಳನ್ನು ಪರಿಶೀಲಿಸಿದಾಗ ಒಟ್ಟು 6 ಮಂದಿ ಬಾಂಗ್ಲಾದೇಶ ಪ್ರಜೆಗಳಿರುವ ವಿಷಯ ಗೊತ್ತಾಯಿತು. ಈ ಕುರಿತ ವರದಿಯನ್ನು ಬೆಂಗಳೂರಿನ ವಿದೇಶಿಗರ ಪ್ರಾದೇಶಿಕ ನೋಂದಣಿ ಕಚೇರಿಗೆ ಕಳುಹಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಬಂಧಿತರೆಲ್ಲರೂ ಪಶ್ಚಿಮ ಬಂಗಾಳ, ಜಾರ್ಖಂಡ್ ರಾಜ್ಯಗಳ ನಕಲಿ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಕಾರ್ಮಿಕರ ಗುರುತಿನ ಚೀಟಿ, ಮತದಾರರ ಗುರುತಿನ ಚೀಟಿ ಹೊಂದಿದ್ದರು' ಎಂದರು.

'ಅಧಿವೇಶನದಲ್ಲಿ ವಕ್ಫ್ ಪ್ರಸ್ತಾಪ'



ಆರ್. ಅಶೋಕ

ಚಿಕ್ಕಬಳ್ಳಾಪುರ: ರೈತರು, ಮಠ, ಮಂದಿರಗಳ ಜಮೀನುಗಳ ಪಹಣಿಯಲ್ಲಿ ವಕ್ಫ್ ಹೆಸರು ನಮೂದಾಗಿರುವ ವಿಚಾರವನ್ನು ಡಿ. 9ರಿಂದ ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಮಂಡಲದ ಅಧಿವೇಶನದಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಲಾಗುವುದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ತಿಳಿಸಿದರು.


ನಗರದಲ್ಲಿ ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ವಕ್ಫ್ ಬೋರ್ಡ್ ಎನ್ನುವುದು ತಿಮಿಂಗಲದ ಬೋರ್ಡ್. ಕಾಂಗ್ರೆಸ್‌ನವರು ಸಂವಿಧಾನದ ಪುಸ್ತಕ ಇಟ್ಟುಕೊಂಡಿರುವರು. ಆದರೆ ಸಂವಿಧಾನಕ್ಕೆ ವಿರುದ್ಧವಾಗಿ ವಕ್ಫ್ ಬೋರ್ಡ್‌ಗೆ ನ್ಯಾಯಾಂಗದ ಸ್ಥಾನ ನೀಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ವಕ್ಫ್ ಬೋರ್ಡ್‌ನವರು ಆಕಾಶದಿಂದ ಇಳಿದು ಬಂದವರಾ? ಇರಾನ್, ಇರಾಕ್‌ನಿಂದ ಬಂದವರಿಗಾಗಿ ಕಾಂಗ್ರೆಸ್ ಪಕ್ಷವು ಸಂವಿಧಾನದ ಆಶಯಕ್ಕೆ ವಿರುದ್ಧ ನಡೆದುಕೊಳ್ಳುತ್ತಿದೆ ಎಂದು ಟೀಕಿಸಿದರು.

'ವಕ್ಫ್ ಬೋರ್ಡ್‌ನಲ್ಲಿ ಮೌಲ್ವಿಗಳಿಗೆ ನ್ಯಾಯಾಧೀಶರ ಸ್ಥಾನ ನೀಡಲಾಗಿದೆ. ವಕ್ಫ್ ಬೋರ್ಡ್ ವಜಾ ಆಗಲೇಬೇಕು. ಸಿದ್ದರಾಮಯ್ಯ ಅಲ್ಪಸಂಖ್ಯಾತರ ಚಾಂಪಿಯನ್ ಆಗಲು ಹೊರಟಿದ್ದಾರೆ' ಎಂದರು.

'ಚಿಕ್ಕಬಳ್ಳಾಪುರದ ಕಂದವಾರ ಶಾಲೆಯಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಓದಿದ್ದಾರೆ. ಇಂತಹ ಶಾಲೆ ಆವರಣದಲ್ಲಿ ಈಗ ಗೋರಿ ನಿರ್ಮಾಣವಾಗಿದೆ. ಶಾಲೆ ಆವರಣದಲ್ಲಿ ಗೋರಿ ಹೇಗೆ ಸಾಧ್ಯ? ಈ ಗೋರಿ ಮೇಲಿನ ಹಸಿರು ಹೊದಿಕೆಗಳನ್ನು 15 ದಿನಗಳ ಒಳಗೆ ತೆರವುಗೊಳಿಸಬೇಕು. ಇಲ್ಲದಿದ್ದರೆ ನಾವೇ ಹೋರಾಟ ನಡೆಸಿ ತೆರವುಗೊಳಿಸುತ್ತೇವೆ' ಎಂದರು.

ಏಕಕಾಲಕ್ಕೆ 2,200 ಲೈನ್‌ಮನ್‌ಗಳ ನೇಮಕಾತಿ: ಕೆ.ಜೆ. ಜಾರ್ಜ್



ಚಾಮರಾಜನಗರ: 'ರಾಜ್ಯದಾದ್ಯಂತ ಏಕಕಾಲದಲ್ಲಿ 2,200 ಲೈನ್‌ಮನ್‌ಗಳ ನೇಮಕಾತಿ ಪ್ರಕ್ರಿಯೆ ನಡೆಸಲು ಸರ್ಕಾರ ನಿರ್ಧರಿಸಿದ್ದು, ಸ್ಥಳೀಯರಿಗೆ ಹೆಚ್ಚು ಉದ್ಯೋಗ ದೊರೆಯಲಿದೆ' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಮಂಗಳವಾರ ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಹಿಂದೆ ಲೈನ್‌ಮನ್‌ಗಳ ನೇಮಕಾತಿ ಏಕಕಾಲದಲ್ಲಿ ನಡೆಯದೆ, ಒಂದು ಕಡೆ ಅರ್ಜಿ ಸಲ್ಲಿಸಿದವರು ಮತ್ತೊಂದು ಜಿಲ್ಲೆಗೂ ಅರ್ಜಿ ಹಾಕುತ್ತಿದ್ದರು. ಉದ್ಯೋಗ ಪಡೆದವರು ಕರ್ತವ್ಯಕ್ಕೆ ಗೈರಾಗುತ್ತಿದ್ದರು. ಮುಂದೆ, ಇಂತಹ ಸಮಸ್ಯೆಗಳು ತಲೆದೋರುವುದಿಲ್ಲ' ಎಂದು ಸಚಿವರು ತಿಳಿಸಿದರು.

'ಕೃಷಿ ಪಂಪ್‌ಸೆಟ್‌ನ ಆರ್‌ಆರ್ ನಂಬರ್‌ಗೆ ಆಧಾರ್ ಜೋಡಣೆ ಮಾಡಲು ರೈತರು ವಿರೋಧಿಸುವುದು ಸರಿಯಲ್ಲ. ಶೇ 98ರಷ್ಟು ಆಧಾರ್ ಜೋಡಣೆ ಮುಗಿದಿದ್ದು, ಪೂರ್ಣ ಗೊಂಡರೆ ವಿದ್ಯುತ್ ಬಳಕೆಯ ನಿಖರ ಲೆಕ್ಕ ಸಿಗಲಿದೆ. ರೈತರು ಭಯಪಡುವ ಅಗತ್ಯವಿಲ್ಲ. ಕೆಪಿಟಿಸಿಎಲ್ ಖಾಸಗೀಕರಣ ಪ್ರಸ್ತಾವ ಸರ್ಕಾರದ ಮುಂದಿಲ್ಲ' ಎಂದು ಸ್ಪಷ್ಟಪಡಿಸಿದರು.

ಉದ್ಯೋಗ ವಾಣಿ

ಕಸ್ತೂರಿರಂಗನ್ ವರದಿಗೆ ವಿರೋಧ: 'ಬೆಂಗಳೂರು ಚಲೋ' ನಾಳೆ

ಪ್ರಜಾವಾಣಿ ವಾರ್ತೆ



ರವೀಂದ್ರ ನಾಯ್ಕ

ಬೆಂಗಳೂರು: 'ಕೇಂದ್ರ ಸರ್ಕಾರ ಕಸ್ತೂರಿ ರಂಗನ್ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು' ಎಂಬುದೂ ಸೇರಿದಂತೆ ಒಟ್ಟು ಆರು ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಇದೇ 21ರಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ 'ಬೆಂಗಳೂರು ಚಲೋ' ಹಮ್ಮಿಕೊಳ್ಳಲಾಗಿದೆ' ಎಂದು ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ತಿಳಿಸಿದ್ದಾರೆ.

'ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕು ಕಾಯ್ದೆ, ಬುಡಕಟ್ಟು ಮಂತ್ರಾಲಯ ಹಕ್ಕು ಮತ್ತು ಗುಜರಾತ್ ಹೈಕೋರ್ಟ್ ಆದೇಶದಂತೆ ಮೂರು ತಲೆಮಾರಿನ ದಾಖಲೆಗಳಿಗೆ ಅರಣ್ಯವಾಸಿಗಳ ಮೇಲೆ ಒತ್ತಡ ಹೇರಬಾರದು ಎಂಬ ಬೇಡಿಕೆಯೂ ಇದೆ' ಎಂದಿದ್ದಾರೆ.

'1978 ಏಪ್ರಿಲ್ 27ರ ಪೂರ್ವದ 19,348 ಅರಣ್ಯವಾಸಿ ಕುಟುಂಬಗಳಿಗೆ 14,848.83 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಣ್ಯ ಸಂರಕ್ಷಣಾ ಕಾಯ್ದೆ 1980 ಅಡಿಯಲ್ಲಿ ಷರತ್ತುಬದ್ಧ ಮಂಜೂರಿಗೆ ಕೇಂದ್ರ ಸರ್ಕಾರ 1996 ಮೇ 15ರಂದು ಆದೇಶ ನೀಡಿತ್ತು. ಈ ಕುಟುಂಬಗಳಿಗೆ ಹಕ್ಕು ಪತ್ರ ವಿತರಿಸಬೇಕು, ಅಸಮರ್ಪಕ ಜಿಪಿಎಸ್ ಕುರಿತು ಸಲ್ಲಿಸಿದ ಮೇಲ್ಮನವಿಗೆ ಮಾನ್ಯತೆ ನೀಡಬೇಕು, ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಅರ್ಜಿ ಸಲ್ಲಿಸದ ಅರಣ್ಯವಾಸಿಗಳ ಕುಟುಂಬಗಳಿಗೆ ಅರ್ಜಿ ಸಲ್ಲಿಸಲು ಮತ್ತೊಂದು ಅವಕಾಶ ನೀಡಬೇಕು ಎಂದೂ ಆಗ್ರಹಿಸಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದೂ ಅವರು ತಿಳಿಸಿದ್ದಾರೆ.

ಮಹೇಶ ಜೋಶಿ ಟೀಕಾಕಾರರಿಗೆ ಕಸಾಪ ಕಾರ್ಯಕಾರಿ ಸಮಿತಿ ಸದಸ್ಯ ಮುದ್ದೇಗೌಡ ತಿರುಗೇಟು

'ಬಯ್ಯುವುದೇ ಸಂಸ್ಕೃತಿಯಾಗದಿರಲಿ'

ಪ್ರಜಾವಾಣಿ ವಾರ್ತೆ



ಎಚ್.ಎಸ್. ಮುದ್ದೇಗೌಡ

ಮಂಡ್ಯ: '87ನೇ ನುಡಿಜಾತ್ರೆಯ ಉಪ ಸಮಿತಿಗಳಿಗೆ ಸದಸ್ಯರ ನೇಮಕ ಮತ್ತು ಜಾಗದ ವಿವಾದ ಸೇರಿ ಎಲ್ಲದಕ್ಕೂ ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರನ್ನು ಹೊಣೆ ಮಾಡುವುದು ಸರಿಯಲ್ಲ. ಕೆಲವರು ನಿಂದಿಸಿ, ಏಕವಚನ ಬಳಸಿದ್ದಾರೆ. ಬಯ್ಯುವುದೇ ನಮ್ಮ ಸಂಸ್ಕೃತಿಯಾಗಬಾರದು. ಅಧ್ಯಕ್ಷರಿಗೆ ಗೌರವ ಕೊಡಬೇಕು' ಎಂದು ಕಸಾಪ ಕಾರ್ಯಕಾರಿ ಸಮಿತಿ ಸದಸ್ಯ ಎಚ್.ಎಸ್. ಮುದ್ದೇಗೌಡ ಪ್ರತಿಪಾದಿಸಿದರು.

ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಸದಸ್ಯರ ನೇಮಕ, ಜಾಗದ ಆಯ್ಕೆಗೂ ಜೋಶಿಯವರಿಗೂ ಸಂಬಂಧವಿಲ್ಲ. ಜಿಲ್ಲಾಡಳಿತ, ಶಾಸಕರು, ಕಸಾಪ ಸದಸ್ಯರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಸೇರಿ ಎಲ್ಲರ ಒಪ್ಪಿಗೆ ಮೇರೆಗೆ ತೀರ್ಮಾನಿಸಲಾಗಿದೆ' ಎಂದು ಸ್ಪಷ್ಟಪಡಿಸಿದರು.

'ಪ್ರತಿಭಟನೆಯ ಮುಂಚೂಣಿಯಲ್ಲಿದ್ದ ಜಗದೀಶ ಕೊಪ್ಪ ಕಸಾಪ ಸದಸ್ಯರೇ ಅಲ್ಲ. ಅವರು ಮಂಡ್ಯದಲ್ಲಿ ಈ ಹಿಂದಿನ ಸಭೆಗೆ ಬಂದು ಅಭಿಪ್ರಾಯವನ್ನೇ ಹೇಳದೇ ಬಹಿಷ್ಕರಿಸಿ ಹೋದದ್ದು ಸರಿಯಲ್ಲ. ಭಿನ್ನಾಭಿಪ್ರಾಯಗಳಿದ್ದರೆ ಮಾತನಾಡಿ ಬಗೆಹರಿಸಿಕೊಳ್ಳದೆ, ಬಹಿಷ್ಕಾರ ಹಾಕುತ್ತೇನೆಂದರೆ ಏನರ್ಥ' ಎಂದರು.

'ಸಮ್ಮೇಳನದಲ್ಲಿ ಪ್ರಕಟವಾಗಲಿರುವ 87 ಪುಸ್ತಕಗಳಲ್ಲಿ ಪರಿಷತ್ತಿನ ಅಧ್ಯಕ್ಷರ ಭಾವಚಿತ್ರವಿರಬಾರದು ಎಂದು ಸಾಂಸ್ಕೃತಿಕ ಉಪಸಮಿತಿಯ ಉಪಾಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಆಗ್ರಹಿಸಿದ್ದಾರೆ. ಎಲ್ಲ ಪುಸ್ತಕಗಳಿಗೂ ಕಸಾಪ ಅಧ್ಯಕ್ಷರೇ ಪ್ರಧಾನ ಸಂಪಾದಕರಲ್ಲವೇ? ಸಭೆಯಲ್ಲಿ ಸಲಹೆ ನೀಡುವ ಬದಲು, ಟೀಕೆಗಳನ್ನಷ್ಟೇ ಮಾಡುವುದು ಎಷ್ಟು ಸರಿ' ಎಂದು ಬೇಸರ ವ್ಯಕ್ತಪಡಿಸಿದರು.

'ಸಮ್ಮೇಳನದಲ್ಲಿಕಸಾಪಪದಾಧಿಕಾರಿಗಳ ಪುಸ್ತಕಗಳನ್ನು ಪ್ರಕಟಿಸಿದರೆ ತಪ್ಪು ಅರ್ಥ ಹೋಗುತ್ತದೆ ಎಂದು, ಐದಾರು ಪುಸ್ತಕಗಳನ್ನು ಜೋಶಿಯವರು ಪಟ್ಟಿಯಿಂದ ಹೊರಗಿಡಿಸಿದ್ದಾರೆ. ಮುಖ್ಯಮಂತ್ರಿಯ ಅನುಮತಿ ಪಡೆದು, ವಿದೇಶಗಳಲ್ಲಿರುವ 500 ಭಾರತೀಯರನ್ನು ಆಹ್ವಾನಿಸಿದ್ದಾರೆ. ಇದನ್ನು ನಾವು ಸ್ವಾಗತಿಸಬೇಕು. ಆದರೆ ಅದನ್ನೂ ಕೆಲವರು ಟೀಕಿಸಿದ್ದಾರೆ' ಎಂದರು.

'ಹಾವೇರಿ ನಂತರ ಮಂಡ್ಯದಲ್ಲಿ ಸಮ್ಮೇಳನ ಆಯೋಜಿಸಲಾಗುವುದು ಎಂದಿದ್ದ ಜೋಶಿಯವರು ನುಡಿದಂತೆ ನಡೆದಿದ್ದಾರೆ. ಅವರ ಬಗ್ಗೆ ವಿನಾಕಾರಣ ಟೀಕೆ ಮಾಡುತ್ತಾ, ಅವರ ಉತ್ಸಾಹಕ್ಕೆ ತಣ್ಣೀರು ಎರಚಬೇಡಿ. ಅವರೊಂದಿಗೆ ಕೈಜೋಡಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸೋಣ' ಎಂದು ಕೋರಿದರು.

'ಪಂಚಾಯಿತಿ ಸದಸ್ಯರನ್ನು ಪರಿಗಣಿಸದಿದ್ದರೆ ಬಹಿಷ್ಕಾರ'

ಮಂಡ್ಯ: '87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 28 ಉಪಸಮಿತಿಗಳಿಗೆ ಗ್ರಾಮ ಪಂಚಾಯಿತಿ ಸದಸ್ಯರನ್ನು ಪರಿಗಣಿಸದೇ ಹೊರಗಿಡಲಾಗಿದೆ. ಈ ನಡೆಯನ್ನು ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟ ತೀವ್ರವಾಗಿ ಖಂಡಿಸುತ್ತದೆ' ಎಂದು ಒಕ್ಕೂಟದ ರಾಜ್ಯ ಸಂಚಾಲಕ ನಾಗೇಶ್ ಉಪ್ಪರಕನಹಳ್ಳಿ ಹೇಳಿದರು.

'ತಾತ್ಸಾರ ಧೋರಣೆಯನ್ನು ಮುಂದುವರಿಸಿದರೆ, 250ಕ್ಕೂ ಹೆಚ್ಚು ಪಂಚಾಯಿತಿಗಳಿಂದ ನೀಡಲಾಗುತ್ತಿರುವ ತಲಾ ₹5 ಸಾವಿರ ವಂತಿಗೆಯನ್ನು ನಿಲ್ಲಿಸಿ ಸಮ್ಮೇಳನವನ್ನು ಬಹಿಷ್ಕರಿಸುತ್ತೇವೆ. ಪ್ರಚಾರ ರಥಯಾತ್ರೆಯಲ್ಲೂ ಸಿಬ್ಬಂದಿ ಮತ್ತು ಸದಸ್ಯರು ಪಾಲ್ಗೊಳ್ಳುವುದಿಲ್ಲ. ಬೇಲೂರು, ಬೂದನೂರು ಹಾಗೂ ಉಮ್ಮಡಹಳ್ಳಿ ಪಂಚಾಯಿತಿ ವ್ಯಾಪ್ತಿಯ ಜಾಗದಲ್ಲಿ ನಡೆಯಲಿರುವ ಸಮ್ಮೇಳನವನ್ನು ನಗರ ಪ್ರದೇಶಕ್ಕೆ ಸ್ಥಳಾಂತರಿಸಿಕೊಳ್ಳುವಂತೆ ಧರಣಿ ನಡೆಸುತ್ತೇವೆ' ಎಂದು ಎಂದು ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.



'ಅನುದಾನ ನೀಡದಿದ್ದರೆ ಪ್ರತಿಭಟನೆ'



ಕೆ.ಟಿ. ಶ್ರೀಕಂಠೇಗೌಡ

'1995ರ ನಂತರ ಆರಂಭವಾದ ಅನುದಾನ ರಹಿತ ಕನ್ನಡ ಮಾಧ್ಯಮ ಶಾಲಾ ಕಾಲೇಜುಗಳಿಗೆ ರಾಜ್ಯ ಸರ್ಕಾರ ಕೂಡಲೇ ಅನುದಾನ ನೀಡದಿದ್ದರೆ ಸಾಹಿತ್ಯ ಸಮ್ಮೇಳನದಲ್ಲಿ ಪ್ರತಿಭಟಿಸುತ್ತೇವೆ' ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಎಚ್ಚರಿಕೆ ನೀಡಿದರು.

'ಸಮ್ಮೇಳನಕ್ಕೆ ₹30 ಕೋಟಿ ಅನುದಾನ ನೀಡುವುದಕ್ಕಿಂತ ಶಾಲೆಗಳಿಗೆ ಅನುದಾನ ಒದಗಿಸುವುದು ಒಳ್ಳೆಯದು. ಎಲ್ಲ ಸರ್ಕಾರಗಳು ಕೊಟ್ಟ ಮಾತು ತಪ್ಪಿವೆ' ಎಂದು ದೂರಿದರು.

'ನಮ್ಮ ಕನ್ನಡ ಶಾಲೆ ಉಳಿಸಿ ಅಭಿಯಾನದಡಿ ಶಾಲಾ–ಕಾಲೇಜುಗಳಿಗೆ ಅನುದಾನ ಪಡೆಯುವ ಉದ್ದೇಶದಿಂದ ರಾಜ್ಯಮಟ್ಟದ ಸಮಾವೇಶವನ್ನು ನವೆಂಬರ್ 22ರಂದು ಹುಬ್ಬಳ್ಳಿಯ ಬಿವಿಬಿ ಎಂಜಿನಿಯರಿಂಗ್ ಕಾಲೇಜಿನ ಬಯೋಟೆಕ್ ಭವನದಲ್ಲಿ ಹಮ್ಮಿಕೊಂಡಿದ್ದೇವೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉದ್ಘಾಟಿಸಲಿದ್ದಾರೆ. ಶಿಕ್ಷಣ ಸಚಿವ ಮಧು ಬಂಗಾರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದು ತಿಳಿಸಿದರು.

'ಟಿಪ್ಪು ಕುರಿತು ಗೋಷ್ಠಿ ಆಯೋಜಿಸದಿರಿ'



ಮಂಜುನಾಥ್

ಮಂಡ್ಯ: 'ಬುದ್ಧಿಜೀವಿಗಳ ಆಗ್ರಹಕ್ಕೆ ಮಣಿದು, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಟಿಪ್ಪು ಸುಲ್ತಾನ್ ಬಗ್ಗೆ ವಿಚಾರಗೋಷ್ಠಿ ನಡೆಸಿದರೆ ಉಗ್ರ ಪ್ರತಿಭಟನೆ ನಡೆಸುತ್ತೇವೆ' ಎಂದು 'ಬಜರಂಗಸೇನೆ ಕರ್ನಾಟಕ' ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಬಿ. ಮಂಜುನಾಥ್ ಎಚ್ಚರಿಕೆ ನೀಡಿದರು.

'ಟಿಪ್ಪು ಆಡಳಿತದಲ್ಲಿ ಕನ್ನಡವನ್ನು ಕಡೆಗಣಿಸಿ, ಪರ್ಷಿಯನ್ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡಿದ್ದ. ಪಹಣಿ, ಅಸಾಮಿ, ಕವಾಯತು, ಮೊಹರು, ಅಸಲು, ಇನಾಮು, ಉಮೇದು, ತೂಫಾನು, ಇರಾದೆಯಂಥ ಪರ್ಷಿಯನ್ ಪದಗಳು ಆತನ ಕಾರಣಕ್ಕೆ ಬಳಕೆಗೆ ಬಂದವು' ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

ಸುದ್ದಿ 2 ನಿಮಿಷ

ಪಾವಿನಕುರ್ವೆ ಸಮೀಪ 'ಸರ್ವ ಋತು ಬಂದರು'

ಬೆಂಗಳೂರು: ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಪಾವಿನ ಕುರ್ವೆ ಸಮೀಪದ ಶರಾವತಿ ಮತ್ತು ಬಡಗಣಿ ನದಿ ಮುಖಜ ಭೂಮಿಯಲ್ಲಿ ಖಾಸಗಿ ಸಹಭಾಗಿತ್ವದಡಿ ಸರ್ವ ಋತು ಬಂದರು ಅಭಿವೃದ್ಧಿಪಡಿಸಲು ಕರ್ನಾಟಕ ಜಲಸಾರಿಗೆ ಮಂಡಳಿ ಮುಂದಾಗಿದೆ.

₹3,047.86 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಈ ಬಂದರಿನಲ್ಲಿ ಆರಂಭದಲ್ಲಿ ವಾರ್ಷಿಕವಾಗಿ 14 ಲಕ್ಷ ಟನ್ ಸರಕು ನಿರ್ವಹಣೆ ಮಾಡಬಹುದು. ಭವಿಷ್ಯದಲ್ಲಿ ಇದನ್ನು 40 ಲಕ್ಷ ಟನ್‌ಗೆ ವಿಸ್ತರಿಸುವಂತಹ ಸಾಮರ್ಥ್ಯವನ್ನು ಈ ಬಂದರು ಹೊಂದಲಿದೆ. 214 ಹೆಕ್ಟೇರ್ ವಿಶಾಲವಾದ ಸ್ಥಳವಿದ್ದು, ಬಂದರು ನಿರ್ವಹಣೆಗೆ ಅಗತ್ಯವಾದ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಅವಕಾಶವಿದೆ ಎಂದು ಜಲ ಸಾರಿಗೆ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಯರಾಮ್ ರಾಯ್‌ಪುರ ತಿಳಿಸಿದ್ದಾರೆ.

ಈ ಬಂದರಿನಲ್ಲಿ ಕಬ್ಬಿಣದ ಅದಿರು, ಕಲ್ಲಿದ್ದಲು ಮತ್ತು ಕೋಕಿಂಗ್ ಕಲ್ಲಿದ್ದಲು, ಸುಣ್ಣದ ಕಲ್ಲು ಮತ್ತು ಡೊಲಮೈಟ್, ಹಸಿರು ಹೈಡ್ರೋಜನ್, ಹಸಿರು ಅಮೋನಿಯಾ, ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಮತ್ತು ಸಿದ್ಧಪಡಿಸಿದ ಉಕ್ಕಿನ ಉತ್ಪನ್ನಗಳ ಸರಕುಗಳನ್ನು ನಿರ್ವಹಣೆ ಮಾಡಬಹುದು ಎಂದಿದ್ದಾರೆ.

1.80 ಲಕ್ಷ ಡಿಡಬ್ಲ್ಯುಟಿ ಸಾಮರ್ಥ್ಯದ ಬೃಹತ್ ಗಾತ್ರದ ಹಡಗುಗಳನ್ನು ನಿರ್ವಹಿಸಲು ಆಧುನಿಕ, ಪರಿಸರ ಸ್ನೇಹಿ ಸೌಲಭ್ಯಗಳನ್ನು ಅಳವಡಿಸಬಹುದು. ಅಧಿಕ ಸಾಮರ್ಥ್ಯದ ಉಪಕರಣಗಳೊಂದಿಗೆ ಆಳವಾದ ವಾಣಿಜ್ಯ ಹಡಗುಗಳು ತಂಗಲು ಅಗತ್ಯವಿರುವ ಮೂಲಸೌಲಭ್ಯಗಳನ್ನು ಅಳವಡಿಸಲು ಅವಕಾಶವಿದೆ ಎಂದೂ ಅವರು ಹೇಳಿದ್ದಾರೆ.

ಸರ್ವ ಋತು ಬಂದರು ಅಭಿವೃದ್ಧಿಪಡಿಸುವ ಸಂಬಂಧ ಕರ್ನಾಟಕ ಜಲಸಾರಿಗೆ ಮಂಡಳಿ ಇತ್ತೀಚೆಗೆ ಜಾಗತಿಕ ಟೆಂಡರ್ ಕರೆದಿದೆ.

ಮೆಕ್ಕೆಜೋಳ ರಾಶಿಗೆ ಬೆಂಕಿ




ಹೂವಿನಹಡಗಲಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಮಿರಾಕೊರನಹಳ್ಳಿ ಬಳಿ ಹೊಲದಲ್ಲಿ ಸಂಗ್ರಹಿಸಿದ್ದ ಮೆಕ್ಕೆಜೋಳ ತೆನೆ ರಾಶಿಗಳಿಗೆ ಸೋಮವಾರ ರಾತ್ರಿ ಬೆಂಕಿ ಬಿದ್ದು ಸಂಪೂರ್ಣ ಭಸ್ಮವಾಗಿದೆ. ₹6 ಲಕ್ಷಕ್ಕೂ ಅಧಿಕ ಮೌಲ್ಯದ ನಷ್ಟ ಸಂಭವಿಸಿದೆ. ಇದು ಕಿಡಿಗೇಡಿಗಳ ಕೃತ್ಯ ಇರಬಹುದು ಎಂದು ಗ್ರಾಮಸ್ಥರು ಶಂಕೆ ವ್ಯಕ್ತಪಡಿಸಿದ್ದಾರೆ.

'ರೈತ ಎಂ.ಶಿವಕುಮಾರ್ ಅವರಿಗೆ ಸೇರಿದ 9 ಟ್ರ್ಯಾಕ್ಟರ್ ತೆನೆ, ಬಾರಿಕೇರ ಹಾಲೇಶ, ಎಚ್.ನಾಗರಾಜ ಸೇರಿದ ತಲಾ 2 ಟ್ರ್ಯಾಕ್ಟರ್ ತೆನೆ ಸುಟ್ಟು ಹೋಗಿದೆ. ಬೆಂಕಿ ನಂದಿಸುವ ವೇಳೆಗೆ ರಾಶಿಗಳು ಭಸ್ಮವಾಗಿದ್ದವು' ಎಂದು ಅಗ್ನಿಶಾಮಕ ಅಧಿಕಾರಿಗಳು ತಿಳಿಸಿದ್ದಾರೆ.

ಸರ್ಕಾರದ ಗುತ್ತಿಗೆಯಲ್ಲಿ ಮಧ್ಯಸ್ಥಿಕೆ ನಿಬಂಧನೆ ರದ್ದು

ಬೊಕ್ಕಸಕ್ಕೆ ಹೆಚ್ಚಿದ ಹೊರೆ • ನ.16ರಂದು ಹೊರಡಿಸಿದ ಸುತ್ತೋಲೆ • ಕಾನೂನು ಸಚಿವ ಎಚ್‌.ಕೆ.ಪಾಟೀಲ ಮಾಹಿತಿ

ಪ್ರಜಾವಾಣಿ ವಾರ್ತೆ



ಎಚ್‌.ಕೆ.ಪಾಟೀಲ

ಬೆಂಗಳೂರು: ಗುತ್ತಿಗೆ ಅಥವಾ ಟೆಂಡರ್ ಪ್ರಕ್ರಿಯೆಯಡಿ ಚಾಲ್ತಿಯಲ್ಲಿದ್ದ ಮಧ್ಯಸ್ಥಿಕೆ ವ್ಯವಸ್ಥೆಯು ಬೊಕ್ಕಸಕ್ಕೆ ಹೊರೆಯಾಗುತ್ತಿದ್ದನ್ನು ಗಂಭೀರವಾಗಿ ಪರಿಗಣಿಸಿರುವ, ರಾಜ್ಯ ಸರ್ಕಾರ, ಇದಕ್ಕೆ ಅವಕಾಶ ಕಲ್ಪಿಸಿದ್ದ ನಿಬಂಧನೆಯನ್ನು (ಆರ್ಬಿಟ್ರೇಷನ್ ಕಲಂ) ರದ್ದುಪಡಿಸುವ ನಿರ್ಧಾರ ಕೈಗೊಂಡಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು, ಇದೇ 16ರಂದು ಈ ಸಂಬಂಧ ಸುತ್ತೋಲೆ ಹೊರಡಿಸಲಾಗಿದೆ ಎಂದರು.

ಮಧ್ಯಸ್ಥಿಕೆ ನಿಬಂಧನೆಯಿಂದ ಹಲವು ಪ್ರಕರಣಗಳಲ್ಲಿ ಸರ್ಕಾರಕ್ಕೆ ಆರ್ಥಿಕವಾಗಿ ಹೊರೆ ಆಗುತ್ತಿರುವುದು ಕಾನೂನು ಇಲಾಖೆಯ ಗಮನಕ್ಕೆ ಬಂದಿದ್ದು, ಆದ್ದರಿಂದ ನಿಬಂಧನೆ ಕೈಬಿಡಲು ತೀರ್ಮಾನಿಸಲಾಗಿದೆ. ಇಲ್ಲಿಯವರೆಗೆ ಮಧ್ಯಸ್ಥಿಕೆ ನಿಬಂಧನೆ ಕಡ್ಡಾಯವಾಗಿತ್ತು ಎಂದು ಅವರು ವಿವರಿಸಿದರು.

ಈ ನಿಬಂಧನೆ ರದ್ದುಪಡಿಸಿರುವುದರಿಂದ ಗುತ್ತಿಗೆದಾರರು ಮತ್ತು ಟೆಂಡರ್ ಪಡೆದವರು ಮೇಲ್ಮನವಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಹಲವು ಪ್ರಕರಣಗಳಲ್ಲಿ ಈ ನಿಬಂಧನೆಯನ್ನು ಬಳಸಿಕೊಂಡು ನ್ಯಾಯಾಲಯಗಳ ಮೆಟ್ಟಿಲು ಏರಿದ ಕಾರಣ ಸರ್ಕಾರಕ್ಕೆ ಆರ್ಥಿಕವಾಗಿ ನಷ್ಟ ಆಗಿತ್ತು. ಅತ್ಯಂತ ಪ್ರಮುಖ ಎನಿಸುವ ಒಂದೆರಡು ಪ್ರಕರಣಗಳಲ್ಲಿ ಮಧ್ಯಸ್ಥಿಕೆಯ ಅಗತ್ಯ ಇದೆ ಎಂದು ಕಂಡುಬಂದರೆ ಕಾನೂನು ಇಲಾಖೆ ಅದನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲು ಅವಕಾಶ ಈಗಲೂ ಇದೆ ಎಂದು ಪಾಟೀಲ ಹೇಳಿದರು.

'ಮಧ್ಯಸ್ಥಿಕೆ ನಿಬಂಧನೆ ಅನ್ವಯ ಈ ಹಿಂದೆ ವ್ಯಕ್ತಿಗಳ ಜತೆ ಸರ್ಕಾರ ರಾಜಿ ಮಾಡಿಕೊಳ್ಳುವ ವ್ಯವಸ್ಥೆ ಇತ್ತು. ಆದರೆ ಗುತ್ತಿಗೆ ಅಥವಾ ಟೆಂಡರ್ ಪಡೆದವರು ಸಣ್ಣಪುಟ್ಟ ತಕರಾರು ಎತ್ತಿ ನ್ಯಾಯಾಲಯದ ಮೆಟ್ಟಿಲು ಹತ್ತುತ್ತಿದ್ದರು. ಅದು ಸರಿಯಾದ ವ್ಯವಸ್ಥೆಯಲ್ಲ. ಇಂತಹ ನೂರಾರು ಪ್ರಕರಣಗಳು ಮುಂದಿನ ದಿನಗಳಲ್ಲಿ ಬರುವ ಸಾಧ್ಯತೆ ಇರುವುದರಿಂದ, ನಿಬಂಧನೆ ಮುಂದುವರೆಸುವುದು ಸರಿಯಲ್ಲ ಎಂಬ ತೀರ್ಮಾನಕ್ಕೆ ಬರಲಾಯಿತು. ಈ ನಿಬಂಧನೆಯು ವ್ಯವಸ್ಥೆಯ ಕತ್ತು ಹಿಸುಕುವ ಕೆಲಸ ಮಾಡುತ್ತಿದೆ' ಎಂದು ಅವರು ವಿವರಿಸಿದರು.

ಟೆಂಡರ್ ಪ್ರಕ್ರಿಯೆಯಲ್ಲಿ ಸಣ್ಣಪುಟ್ಟ ಲೋಪಗಳನ್ನು ಮುಂದಿಟ್ಟುಕೊಂಡು ಗುತ್ತಿಗೆ/ಟೆಂಡರ್ ಪಡೆದ ಸಂಸ್ಥೆ ಅಥವಾ ವ್ಯಕ್ತಿಗಳು ಮಧ್ಯಸ್ಥಿಕೆ ನಿಬಂಧನೆ ಅವಕಾಶವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಪೌಷ್ಟಿಕ ಆಹಾರ ಪೂರೈಕೆ ಗುತ್ತಿಗೆ ಸಂಬಂಧಿಸಿದ ಕ್ರಿಸ್ಟಿ ಪ್ರಕರಣ ಅದಕ್ಕೊಂದು ಉದಾಹರಣೆ. ಈ ಪ್ರಕರಣದಲ್ಲಿ ಸರ್ಕಾರವು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರಿಂದ ₹60 ಕೋಟಿ ಉಳಿಯಿತು ಎಂದು ಪಾಟೀಲ ಹೇಳಿದರು.

ಸುತ್ತೋಲೆಯಲ್ಲೇನಿದೆ: ಸರ್ಕಾರ ಹೊರಡಿಸಿದ ಸುತ್ತೋಲೆ (ಸಾಮಾನ್ಯ ನಿಬಂಧನೆಗಳ ಕಾಯ್ದೆ 1897, ಉಪಬಂಧ 21, ಸುತ್ತೋಲೆ ಸಂಖ್ಯೆ 273 ಎಲ್‌ಎಸಿ 2012(ಪಿ) ದಿನಾಂಕ: 10-1-2014)ಯನ್ನು ನ.16ರಿಂದ ಅನ್ವಯಿಸಿ ಹಿಂಪಡೆಯಲಾಗಿದೆ. ಇನ್ನು ಮುಂದೆ ಏನೇ ತಗಾದೆಗಳಿದ್ದರೂ ವಾಣಿಜ್ಯಿಕ ನ್ಯಾಯಾಲಯಗಳಿಗೆ ಹೋಗಬಹುದು ಎಂದು ಅವರು ತಿಳಿಸಿದರು.

ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣ ತಗ್ಗಿಸಲು ಕ್ರಮ

ರಾಜ್ಯದಲ್ಲಿ 1,006 ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣಗಳು ಬಾಕಿ ಉಳಿದಿದ್ದು, ಮುಂದಿನ ಮಾರ್ಚ್ 31ರೊಳಗೆ ಆ ಸಂಖ್ಯೆಯನ್ನು ಎರಡು ಅಂಕಿಗೆ ಇಳಿಸಲು ತೀರ್ಮಾನಿಸಲಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ನ್ಯಾಯಾಲಯಗಳ ಆದೇಶ ಮತ್ತು ಸೂಚನೆಗಳನ್ನು ಅಧಿಕಾರಿಗಳು ಪಾಲಿಸದ ಕಾರಣ ಹಿಂದೆ 2,500ಕ್ಕೂ ಹೆಚ್ಚು ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣಗಳು ಇದ್ದವು. ಈಗ ಆ ಸಂಖ್ಯೆ 1,006ಕ್ಕೆ ಇಳಿದಿದೆ ಎಂದು ಅವರು ವಿವರಿಸಿದರು.

ಇತ್ತೀಚೆಗೆ ನಡೆದ ಕಾನೂನು ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಈ ಕುರಿತು ವಿವರವಾಗಿ ಚರ್ಚಿಸಲಾಯಿತು. 10 ವರ್ಷಗಳಲ್ಲಿ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣಗಳು ಏರಿಕೆ ಆಗುತ್ತಿರುವುದು ಆರೋಗ್ಯಕರ ಲಕ್ಷಣವಲ್ಲ. ನ್ಯಾಯಾಲಯಗಳು ಕೊಟ್ಟ ಆದೇಶ ಮತ್ತು ಸೂಚನೆಗಳ ಬಗ್ಗೆ ಗೌರವ ಕಡಿಮೆ ಆಗುತ್ತಿದೆ ಎಂಬುದರ ಸೂಚಕವಿದು. ಅಧಿಕಾರಿಗಳು ಕಟ್ಟುನಿಟ್ಟಾಗಿ ನ್ಯಾಯಾಲಯದ ಆದೇಶಗಳನ್ನು ಪಾಲಿಸಬೇಕು ಮತ್ತು ಸ್ಪಂದನಶೀಲರಾಗಬೇಕು ಎಂದು ಪಾಟೀಲ ಹೇಳಿದರು.

ಆದ್ದರಿಂದ, ನ್ಯಾಯಾಂಗ ನಿಂದನೆ ಪ್ರಕರಣ ಸಂಖ್ಯೆಯನ್ನು ಗಣನೀಯವಾಗಿ ತಗ್ಗಿಸಲು ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಮಾರ್ಚ್ 31 ಗುರಿ ನಿಗದಿ ಮಾಡಲಾಗಿದೆ. ಶೇ 99ರಷ್ಟು ಪ್ರಕರಣಗಳನ್ನು ಇತ್ಯರ್ಥ ಮಾಡಲು ಸೂಚನೆ ನೀಡಿದ್ದೇವೆ ಎಂದು ತಿಳಿಸಿದರು.

'ಮಹಾರಾಷ್ಟ್ರ ವಿರುದ್ಧ ಕಾನೂನು ಹೋರಾಟ ಆಗದು'

ಮಹಾರಾಷ್ಟ್ರ ಚುನಾವಣಾ ಪ್ರಚಾರದ ವೇಳೆಯಲ್ಲಿ ಬಿಜೆಪಿ ಗ್ಯಾರಂಟಿ ಯೋಜನೆಗಳ ಬಗ್ಗೆ ಸುಳ್ಳು ಹೇಳಿರುವ ಕಾರಣ ಬಿಜೆಪಿ ವಿರುದ್ಧ ಕಾನೂನು ಹೋರಾಟ ಮಾಡಬಹುದೇ ಹೊರತು ಅಲ್ಲಿನ ಸರ್ಕಾರದ ವಿರುದ್ಧ ಕಾನೂನು ಹೋರಾಟ ನಡೆಸಲು ಆಗುವುದಿಲ್ಲ ಎಂದು ಸಚಿವ ಎಚ್.ಕೆ.ಪಾಟೀಲ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ದೇಶದ ಇತಿಹಾಸದಲ್ಲಿ ಯಾವುದೇ ರಾಜ್ಯ ಸರ್ಕಾರದ ವಿರುದ್ಧ ಇಂತಹ ವಿಚಾರಗಳಲ್ಲಿ ಕಾನೂನು ಸಮರ ಈವರೆಗೆ ನಡೆದಿಲ್ಲ. ನಾವೂ ಕೂಡ ಅಲ್ಲಿ ಸರ್ಕಾರದ ವಿರುದ್ಧ ಕಾನೂನು ಹೋರಾಟ ಮಾಡಲು ಆಗುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ಎಸ್‌ಸಿ, ಎಸ್‌ಟಿ ಸಂಪಾದಕರ ಸಂಘದ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಎಸ್‌ಸಿ, ಎಸ್‌ಟಿ ಪತ್ರಿಕಾ ಸಂಪಾದಕರ ಸಂಘವು 2024ನೇ ಸಾಲಿನ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ಪ್ರಕಟಿಸಿದೆ.

ಪತ್ರಕರ್ತ ಜಿ.ಎನ್. ಮೋಹನ್‌ಗೆ 'ಡಾ. ಬಾಬಾಸಾಹೇಬ್ ಅಂಬೇಡ್ಕರ್ ದತ್ತಿ ಪ್ರಶಸ್ತಿ', ಪತ್ರಕರ್ತ ಬಿ.ಎಂ. ಹನೀಫ್‌ಗೆ 'ಬಿ ರಾಚಯ್ಯ ದತ್ತಿ ಪ್ರಶಸ್ತಿ', ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್‌ಗೆ 'ಪ್ರೊ. ಬಿ. ಕೃಷ್ಣಪ್ಪ ದತ್ತಿ ಪ್ರಶಸ್ತಿ', ಪತ್ರಕರ್ತೆ ಮಂಜುಳಾ ಹುಲಿಕುಂಟೆಗೆ 'ಬಿ. ಬಸವಲಿಂಗಪ್ಪ ದತ್ತಿ ಪ್ರಶಸ್ತಿ' ಪ್ರಕಟಿಸಲಾಗಿದೆ. ಈ ಪ್ರಶಸ್ತಿಗಳು ಫಲಕ ಹಾಗೂ ತಲಾ ₹10 ಸಾವಿರ ನಗದನ್ನು ಒಳಗೊಂಡಿವೆ.

'ಶಿವಮೊಗ್ಗ ಮಲ್ನಾಡ್‌ವಾಣಿ' ಪತ್ರಿಕೆ ಸಂಪಾದಕ ಕೆ. ಏಕಾಂತಪ್ಪ, ತುಮಕೂರಿನ 'ವಿಶಾಲವಾರ್ತೆ' ಪತ್ರಿಕೆ ಸಂಪಾದಕ ಸೊಗಡು ವೆಂಕಟೇಶ್, ಮಂಡ್ಯದ 'ಜನೋದಯ' ಪತ್ರಿಕೆ ಸಂಪಾದಕಿ ಮಂಜುಳಾ ಕಿರುಗಾವಲು, ಕಲಬುರಗಿಯ 'ಹೈದ್ರಾಬಾದ್ ಕರ್ನಾಟಕ ಮುಂಜಾವು' ಪತ್ರಿಕೆ ಸಂಪಾದಕ ಸುರೇಶ್ ಸಿಂಧ್ಯೆ ಅವರಿಗೆ ಸಂಘದ ಗೌರವ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದ್ದು, ಇವು ತಲಾ ₹5 ಸಾವಿರ ನಗದನ್ನು ಒಳಗೊಂಡಿವೆ ಎಂದು ಸಂಘದ ಅಧ್ಯಕ್ಷ ಚೆಲುವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರಿನ ಗಾಂಧಿಭವನದಲ್ಲಿ ಇದೇ 29ರಂದು ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಅವರು ಹೇಳಿದ್ದಾರೆ.

'ನಮ್ಮ ಭೂಮಿ ನಮ್ಮ ಹಕ್ಕು' ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ಭೂಮಿ, ಮಠ, ದೇವಸ್ಥಾನಗಳ ಜಮೀನುಗಳ ಸ್ವಾದೀನಕ್ಕೆ ವಕ್ಫ್ ನೋಟಿಸ್ ನೀಡಿರುವುದನ್ನು ವಿರೋಧಿಸಿ 'ನಮ್ಮ ಭೂಮಿ ನಮ್ಮ ಹಕ್ಕು' ಹೆಸರಿನಲ್ಲಿ ಇದೇ 21 ಮತ್ತು 22ರಂದು ರಾಜ್ಯದ ಎಲ್ಲ ಜಿಲ್ಲಾಧಿಕಾರಿ ಕಚೇರಿಗಳು ಮತ್ತು ತಹಶೀಲ್ದಾರ್‌ಗಳ ಕಚೇರಿಗಳ ಮುಂದೆ ಪ್ರತಿಭಟನೆ ನಡೆಸಲಾಗುವುದು' ಎಂದು ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಪ್ರತಿಭಟನೆಯ ಜತೆಗೆ ಸಂತ್ರಸ್ತರಿಂದ ಅರ್ಜಿಗಳ ಸ್ವೀಕಾರ, ವಕ್ಫ್ ಅಧಿಕಾರ ದುರ್ಬಳಕೆಯಿಂದ ಸಮಸ್ಯೆ– ಶೋಷಣೆಗೆ ಒಳಗಾದವರ ಮಾಹಿತಿ ಸಂಗ್ರಹಿಸಲಾಗುವುದು ಎಂದು ಅವರು ಸುದ್ದಿಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಈ ಜನಾಂದೋಲನ ನಡೆಸಲು ಈಗಾಗಲೇ ಮೂರು ತಂಡಗಳನ್ನು ರಚಿಸಲಾಗಿದೆ. ಪಕ್ಷದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧಪಕ್ಷದ ನಾಯಕ ಆರ್.ಅಶೋಕ ಮತ್ತು ವಿಧಾನಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ತಂಡಗಳ ನೇತೃತ್ವ ವಹಿಸಲಿದ್ದಾರೆ.

'ಈ ತಂಡಗಳು ಡಿಸೆಂಬರ್ ಮೊದಲನೇ ವಾರದಲ್ಲಿ ರಾಜ್ಯದಾದ್ಯಂತ ಪ್ರವಾಸ ಮಾಡಲಿವೆ. ರೈತರು, ಮಠಾಧೀಶರು ಸೇರಿ ತೊಂದರೆಗೆ ಒಳಗಾದವರಿಂದ ಮಾಹಿತಿ ಪಡೆಯಲಿವೆ. ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ, ಜನರ ಸಮಸ್ಯೆ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಿದ್ದೇವೆ. ಅಧಿವೇಶನಕ್ಕೂ ಮೊದಲು ಬೆಳಗಾವಿಯಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗುವುದು' ಎಂದು ತಿಳಿಸಿದರು.

ತೊಂದರೆಗೆ ಒಳಗಾದವರಿಂದ ಅಹವಾಲು ಮತ್ತು ಮಾಹಿತಿ ಸಂಗ್ರಹಕ್ಕಾಗಿ ಪ್ರತಿ ಜಿಲ್ಲೆಯಲ್ಲೂ ರೈತರು, ವಕೀಲರು ಸೇರಿ ಪ್ರಮುಖರನ್ನು ಒಳಗೊಂಡ ಐದು ಜನರ ತಂಡ ರಚಿಸಲಾಗಿದೆ ಎಂದು ಅಶ್ವತ್ಥ ನಾರಾಯಣ ಹೇಳಿದರು.

ಬಿಜೆಪಿ ಹೋರಾಟದಿಂದ ರಾಜ್ಯ ಸರ್ಕಾರವು ನೋಟಿಸ್ ಹಿಂದಕ್ಕೆ ಪಡೆಯಲು ಸೂಚನೆ ನೀಡಿದೆ. ಪಹಣಿಯಲ್ಲಿ ವಕ್ಫ್ ಹೆಸರು ಇದ್ದರೆ ಅದನ್ನೂ ತೆಗೆದುಹಾಕಬೇಕು. 1974ರ ಗೆಜೆಟ್ ಅಧಿಸೂಚನೆ ಹಿಂದಕ್ಕೆ ಪಡೆಯಬೇಕು ಎಂದು ಅವರು ಹೇಳಿದರು.

ವಕ್ಫ್ ಮೂಲಕ ಆಸ್ತಿ ವಶಪಡಿಸಿಕೊಳ್ಳುವ ವಿಚಾರದಲ್ಲಿ ಜನಜಾಗೃತಿ ಆಗಿದೆ. ವಕ್ಫ್ ಮತ್ತು ಕಾಂಗ್ರೆಸ್ ಸರ್ಕಾರದ ಅಧಿಕಾರ ದುರ್ಬಳಕೆ, ಜಮೀರ್ ಅಹಮ್ಮದ್ ಖಾನ್ ಅವರು ಮುಖ್ಯಮಂತ್ರಿಯವರ ಆದೇಶ ಎಂದು ತಿಳಿಸಿ ತ್ವರಿತವಾಗಿ ಕಲಂ 9 ಮತ್ತು 11ರಲ್ಲಿ ಇಂಡೀಕರಣ, ಆಸ್ತಿ ಬದಲಾವಣೆ ಪ್ರಯತ್ನ ಮಾಡಿದ್ದರು ಎಂದು ಅವರು ದೂರಿದರು.

ಸುದ್ದಿಗೋಷ್ಠಿಯಲ್ಲಿ ಸಂಸದ ಪಿ.ಸಿ. ಮೋಹನ್, ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷ ಸಿ.ಕೆ. ರಾಮಮೂರ್ತಿ ಮತ್ತು ಕೇಂದ್ರ ಜಿಲ್ಲಾ ಅಧ್ಯಕ್ಷ ಸಪ್ತಗಿರಿ ಗೌಡ ಇದ್ದರು.

ಸುರಕ್ಷತೆಗೆ ಸಂಬಂಧಿಸಿದ ಕಾಮಗಾರಿ: 3 ರೈಲು ಸಂಚಾರ ರದ್ದು

ಪ್ರಜಾವಾಣಿ ವಾರ್ತೆ

ತುಮಕೂರು: ನಿಡವಂದ ಯಾರ್ಡ್‌ನಲ್ಲಿ ಸುರಕ್ಷತೆಗೆ ಸಂಬಂಧಿಸಿದ ಕಾಮಗಾರಿ ಕೈಗೊಂಡಿದ್ದು, 3 ರೈಲು ಸಂಚಾರ ರದ್ದುಗೊಳಿಸಿದ್ದು, ಕೆಲ ರೈಲುಗಳನ್ನು ಭಾಗಶಃ ರದ್ದು ಮಾಡಲಾಗಿದೆ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಸಂಚಾರ ರದ್ದು: ನ.23 ರಂದು ತುಮಕೂರು-ಬಾಣಸವಾಡಿ ಮೆಮು ವಿಶೇಷ ರೈಲು (ಸಂಖ್ಯೆ 06512), ಚಿಕ್ಕಮಗಳೂರು-ಯಶವಂತಪುರ ಡೈಲಿ ಎಕ್ಸ್‌ಪ್ರೆಸ್ (16239) ಮತ್ತು ಯಶವಂತಪುರ-ಚಿಕ್ಕಮಗಳೂರು ಡೈಲಿ ಎಕ್ಸ್‌ಪ್ರೆಸ್ (16240).

ಭಾಗಶಃ ರದ್ದು: ನ.23 ಮತ್ತು 24 ರಂದು ಕೆಎಸ್‌ಆರ್ ಬೆಂಗಳೂರು-ತುಮಕೂರು ಮೆಮು ವಿಶೇಷ (06571) ರೈಲು ದೊಡ್ಡಬೆಲೆ-ತುಮಕೂರು ಮಧ್ಯೆ, ತುಮಕೂರು-ಕೆಎಸ್‌ಆರ್ ಬೆಂಗಳೂರು ಮೆಮು ವಿಶೇಷ (06576) ಸೇವೆಯನ್ನು ತುಮಕೂರು-ದೊಡ್ಡಬೆಲೆ ನಿಲ್ದಾಣದ ಮಧ್ಯೆ ಭಾಗಶಃ ರದ್ದು ಮಾಡಲಾಗಿದೆ.

ನ.23 ರಂದು ಕೆಎಸ್‌ಆರ್ ಬೆಂಗಳೂರು-ತುಮಕೂರು ಮೆಮು ವಿಶೇಷ (06575) ರೈಲು ದೊಡ್ಡಬೆಲೆ-ತುಮಕೂರು ಮಧ್ಯೆ, ತುಮಕೂರು-ಕೆಎಸ್‌ಆರ್ ಬೆಂಗಳೂರು ಮೆಮು ವಿಶೇಷ (06572) ರೈಲು ತುಮಕೂರು-ದೊಡ್ಡಬೆಲೆ ನಿಲ್ದಾಣದ ಮಧ್ಯೆ ಸಂಚರಿಸುವುದಿಲ್ಲ.

ನಿಯಂತ್ರಣ: ನ.22 ರಂದು ಎಸ್‌ಎಸ್‌ಎಸ್ ಹುಬ್ಬಳ್ಳಿ-ಕೆಎಸ್‌ಆರ್ ಬೆಂಗಳೂರು ಡೈಲಿ ಎಕ್ಸ್‌ಪ್ರೆಸ್ (17392) 20 ನಿಮಿಷ, ನ.24 ರಂದು ತಾಳಗುಪ್ಪ-ಕೆಎಸ್‌ಆರ್ ಬೆಂಗಳೂರು ಡೈಲಿ ಎಕ್ಸ್‌ಪ್ರೆಸ್ (20652) 30 ನಿಮಿಷ, ಮೈಸೂರು-ಬೆಳಗಾವಿ ವಿಶ್ವಮಾನವ ಡೈಲಿ ಎಕ್ಸ್‌ಪ್ರೆಸ್ ರೈಲು (17326) ರೈಲನ್ನು ಎರಡು ಗಂಟೆ ನಿಯಂತ್ರಿಸಲಾಗುತ್ತದೆ.

ತಡವಾಗಿ ಆರಂಭ: ನ.24 ರಂದು ಕೆಎಸ್‌ಆರ್ ಬೆಂಗಳೂರು-ಧಾರವಾಡ ಸಿದ್ಧಗಂಗಾ ಡೈಲಿ ಎಕ್ಸ್‌ಪ್ರೆಸ್ (12725) ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬೆಂಗಳೂರು ನಿಲ್ದಾಣದಿಂದ 30 ನಿಮಿಷ, ಯಶವಂತಪುರ-ಶಿವಮೊಗ್ಗ ಟೌನ್ ಇಂಟರ್ ಸಿಟಿ ಡೈಲಿ ಎಕ್ಸ್‌ಪ್ರೆಸ್ (16579) ಯಶವಂತಪುರದಿಂದ 90 ನಿಮಿಷ ತಡವಾಗಿ ಹೊರಡಲಿದೆ.

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶ

'ಅಂಧ ಮಹಿಳೆಗೆ ಶಿಕ್ಷಕಿ ಹುದ್ದೆ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾನ್ಯ ಶಿಕ್ಷಕರು ಮಾಡುವ ಕೆಲಸವನ್ನು ಸಂಪೂರ್ಣ ಅಂಧತ್ವ ಹೊಂದಿರುವ ವ್ಯಕ್ತಿಗಳು ನಿರ್ವಹಣೆ ಮಾಡಲು ಸಾಧ್ಯವಿಲ್ಲ' ಎಂಬ ರಾಜ್ಯ ಸರ್ಕಾರದ ವಾದವನ್ನು ತಿರಸ್ಕರಿಸಿರುವ ಹೈಕೋರ್ಟ್, ಪ್ರಕರಣವೊಂದರಲ್ಲಿ, 'ಆಯ್ಕೆಪಟ್ಟಿಯ ಅನುಸಾರ ಅರ್ಜಿದಾರರಾದ ಪರಿಶಿಷ್ಟ ಜಾತಿಯ ಅಂಧ ಮಹಿಳೆಯನ್ನು ಶಿಕ್ಷಕರ ಹುದ್ದೆಗೆ ಪರಿಗಣಿಸಿ' ಎಂದು ರಾಜ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ನಿರ್ದೇಶಿಸಿದೆ.

ಸಂಪೂರ್ಣ (ಶೇ 100ರಷ್ಟು) ಅಂಧತ್ವ ಹೊಂದಿರುವ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಹಂಡಿತವಳ್ಳಿಯ ಎಚ್.ಎನ್.ಲತಾ ಅವರಿಗೆ, ಶಿಕ್ಷಕರ ಹುದ್ದೆಗೆ ಅರ್ಜಿ (ಡಬ್ಲ್ಯು.ಪಿ 19994/2024) ಸಲ್ಲಿಸಲು ಅವಕಾಶ ಮಾಡಿಕೊಟ್ಟಿದ್ದ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಯ (ಕೆಎಟಿ) ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಇಲಾಖೆಯು, ಶಿಕ್ಷಕರ ಹುದ್ದೆ ಪಡೆಯುವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕಡಿಮೆ ದೃಷ್ಟಿ ಹೊಂದಿದವರ ಜೊತೆಗೆ ಸಂಪೂರ್ಣ ಅಂಧತ್ವಕ್ಕೆ ಗುರಿಯಾದವರಿಗೂ ಅವಕಾಶ ನೀಡಬೇಕಾಗಿತ್ತು. ಇದಕ್ಕೆ ವಿರೋಧ ವ್ಯಕ್ತಪಡಿಸಿದರೆ; ಅಂಗವಿಕಲರ ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಪಾಲುದಾರಿಕೆಯ ಸಂಪೂರ್ಣ ಅವಕಾಶ ಕಾಯ್ದೆ–1995 ಹಾಗೂ ಅಂಗವಿಕಲರ ಕಾಯ್ದೆ–2016 ಅನ್ನು ಉಲ್ಲಂಘಿಸಿದಂತಾಗುತ್ತದೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

'ಹುದ್ದೆಗಳನ್ನು ಕಡಿಮೆ ದೃಷ್ಟಿದೋಷ ಉಳ್ಳವರಿಗೆ ಮಾತ್ರವೇ ಮೀಸಲಿಟ್ಟಿದ್ದು, ಸಂಪೂರ್ಣ ಅಂಧತ್ವ ಹೊಂದಿರುವವರಿಗೆ ಅರ್ಜಿ ಸಲ್ಲಿಸುವುದಕ್ಕೆ ಅವಕಾಶ ನೀಡಲಾಗುವುದಿಲ್ಲ ಎಂಬ ಸರ್ಕಾರದ ವಾದವನ್ನು ಒಪ್ಪಲಾಗುವುದಿಲ್ಲ. ಜೀವನದಲ್ಲಿ ಮಹತ್ತರ ಸಾಧನೆ ಮಾಡಿದ ಅಂಧರ ಉದಾಹರಣೆಗಳು ಚರಿತ್ರೆಯಲ್ಲಿ ಅಚ್ಚಳಿಯದೆ ಉಳಿದಿವೆ. ಗ್ರೀಕ್ ಕವಿ ಹೋಮರ್, ಇಂಗ್ಲಿಷ್ ಕವಿ ಜಾನ್ ಮಿಲ್ಟನ್, ವಕೀಲೆ ಮತ್ತು ಲೇಖಕಿಯಾದ ಅಮೆರಿಕದ ಹೆಲೆನ್ ಕೆಲ್ಲರ್ ಮತ್ತು ಫ್ರೆಂಚ್ ಶಿಕ್ಷಕ ಲೂಯಿ ಬ್ರೈಲ್... ಇದಕ್ಕೆಲ್ಲಾ ಉದಾಹರಣೆ' ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ಉಲ್ಲೇಖಿಸಿದೆ.

ಕಲಾವಿದರಿಗೆ ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ, ಯಕ್ಷಸಿರಿ ವಾರ್ಷಿಕ ಪ್ರಶಸ್ತಿಯ ಗರಿ

ಸಂಜೀವ ಸುವರ್ಣಗೆ ಪಾರ್ತಿಸುಬ್ಬ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಮಂಗಳೂರು: ಯಕ್ಷಗುರು, ಉಡುಪಿಯ ಬನ್ನಂಜೆ ಸಂಜೀವ ಸುವರ್ಣ ಅವರಿಗೆ ಕರ್ನಾಟಕ ಯಕ್ಷಗಾನ ಅಕಾಡೆಮಿ ವತಿಯಿಂದ 2023 ನೇ ಸಾಲಿನ ಪಾರ್ತಿ ಸುಬ್ಬ ಪ್ರಶಸ್ತಿಯನ್ನು ಇಲ್ಲಿ ಮಂಗಳವಾರ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ₹ 1 ಲಕ್ಷ ನಗದು ಒಳಗೊಂಡಿದೆ.

ಯಕ್ಷಗಾನದ ತೆಂಕು ತಿಟ್ಟಿನ ಭಾಗವತ ಬೆಳ್ತಂಗಡಿಯ ದಿನೇಶ ಅಮ್ಮಣ್ಣಾಯ, ಮೂಡಲಪಾಯದ ಭಾಗವತ ಬೆಂಗಳೂರಿನ ನಾರಾಯಣಪ್ಪ ಎ.ಆರ್., ತೆಂಕು ಬಡಗು ತಿಟ್ಟುಗಳ ಭಾಗವತ ಮುಂಬೈನ ಪೊಲ್ಯ ಲಕ್ಷ್ಮೀನಾರಾಯಣ ಶೆಟ್ಟಿ, ತೆಂಕು ತಿಟ್ಟಿನ ವೇಷಧಾರಿ ಬಂಟ್ವಾಳದ ಚೆನ್ನಪ್ಪ ಗೌಡ ಸಜಿಪ, ಅರ್ಥಧಾರಿ ಪುತ್ತೂರಿನ ಎಂ. ಜಬ್ಬಾರ್ ಸಮೋ ಅವರಿಗೆ 2023ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ₹ 50 ಸಾವಿರ ನಗದು ಹಾಗೂ ಪುರಸ್ಕಾರವನ್ನು ಒಳಗೊಂಡಿದೆ.

ಕಾಸರಗೋಡಿನ ತೆಂಕುತಿಟ್ಟಿನ ವೇಷಧಾರಿ ರಘುನಾಥ ಶೆಟ್ಟಿ ಬಾಯಾರು, ಪ್ರಸಾದನ ಕಲಾವಿದ ದಿವಾಕರ ದಾಸ ಕಾವಳಕಟ್ಟೆ, ತೆಂಕುತಿಟ್ಟಿನ ಬಣ್ಣದ ವೇಷಧಾರಿ ಸುಬ್ರಾಯ ಪಾಟಾಳಿ ಸಂಪಾಜೆ, ಬಡಗುತಿಟ್ಟು ವೇಷಧಾರಿ ಕುಂದಾಪುರದ ನರಾಡಿ ಭೋಜರಾಜ ಶೆಟ್ಟಿ, ಬಡಗುತಿಟ್ಟಿನ ಚೆಂಡೆವಾದಕ ಸದಾನಂದ ಪ್ರಭು ಬೈಂದೂರು, ಬಡಗು ತಿಟ್ಟಿನ ಹಾಸ್ಯಗಾರ ಬೈಂದೂರಿನ ಹೊಳೆಮಗೆ ನಾಗಪ್ಪ ಮರಕಾಲ, ಬಡಗುತಿಟ್ಟು ವೇಷಧಾರಿ ಸಿದ್ದಾಪುರದ ಶಿರಳಗಿ ತಿಮ್ಮಪ್ಪ ಹೆಗಡೆ, ತೆಂಕು ಮತ್ತು ಬಡಗು ತಿಟ್ಟುಗಳ ವೇಷಧಾರಿ ಕುಂದಾಪುರದ ಬಾಬು ಕುಲಾಲ್ ಹಳ್ಳಾಡಿ, ಮೂಡಲಪಾಯ ಯಕ್ಷಗಾನದ ಭಾಗವತರಾದ ತುಮಕೂರಿನ ಶಿವಯ್ಯ ಮತ್ತು ಕೋಲಾರದ ಜೀಯಪ್ಪ ಅವರಿಗೆ 2023ನೇ ಸಾಲಿನ ಯಕ್ಷಸಿರಿ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ₹ 25 ಸಾವಿರ ನಗದು ಹಾಗೂ ಪುರಸ್ಕಾರವನ್ನು ಒಳಗೊಂಡಿದೆ.

2023ನೆ ಸಾಲಿನ ಕರ್ಕಿ ಹಿರಿಯ ಪರಮಯ್ಯ ಹಾಸ್ಯಗಾರ ಪ್ರಶಸ್ತಿಯನ್ನು ಬಡಗುತಿಟ್ಟು ಭಾಗವತ ಹೊನ್ನಾವರದ ಗೋಪಾಲಕೃಷ್ಣ ಶಂಕರ ಭಟ್ ಅವರಿಗೆ, 2023ನೇ ಸಾಲಿನ ಪುಸ್ತಕ ಬಹುಮಾನವನ್ನು ಉತ್ತರ ಕನ್ನಡದ ಸತೀಶ್ ಜಿ.ನಾಯ್ಕ ಹಾಗೂ ಉಡುಪಿಯ ಎಚ್.ಸುಜಯೀಂದ್ರ ಹಂದೆ ಅವರಿಗೆ, 2022ನೇ ಸಾಲಿನ ಪುಸ್ತಕ ಬಹುಮಾನವನ್ನು ಉಡುಪಿಯ ಗಣಪತಿ ಭಟ್ ಹಾಗೂ ಬೆಂಗಳೂರಿನ ಮನೋರಮಾ ಬಿ.ಎನ್. ಹಾಗೂ 2021ನೇ ಸಾಲಿನ ಪುಸ್ತಕ ಪ್ರಶಸ್ತಿಯನ್ನು ಪ್ರಸಂಗಕರ್ತ ಪೊಳಲಿ ನಿತ್ಯಾನಂದ ಕಾರಂತ ಅವರಿಗೆ ಪ್ರದಾನ ಮಾಡಲಾಯಿತು.



ಕರ್ನಾಟಕ ಯಕ್ಷಗಾನ ಅಕಾಡೆಮಿಯಿಂದ ನೀಡುವ 2023ನೇ ಸಾಲಿನ ಪಾರ್ತಿಸುಬ್ಬ ಪ್ರಶಸ್ತಿ, ಗೌರವ ಪ್ರಶಸ್ತಿ, ಯಕ್ಷಸಿರಿ, ದತ್ತಿನಿಧಿ ಪ್ರಶಸ್ತಿಗಳನ್ನು ಹಾಗೂ ಪುಸ್ತಕ ಬಹುಮಾನಗಳನ್ನು ಮಂಗಳೂರಿನಲ್ಲಿ ಮಂಗಳವಾರ ಪ್ರದಾನ ಮಾಡಲಾಯಿತು. ನಮ್ರತಾ ಎನ್, ಶಿವಯ್ಯ, ಬನ್ನಂಜೆ ಸಂಜೀವ ಸುವರ್ಣ, ಜಬ್ಬಾರ್ ಸಮೋ, ಪ್ರೊ.ಎಂ.ಎಲ್. ಸಾಮಗ, ಜೋಕಿಂ ಸ್ಟ್ಯಾನಿ ಅಲ್ವಾರಿಸ್, ತಾರಾನಾಥ ಗಟ್ಟಿ ಕಾಪಿಕಾಡ್, ತಲ್ಲೂರು ಶಿವರಾಮ ಶೆಟ್ಟಿ, ಡಿ.ವೇದವ್ಯಾಸ ಕಾಮತ್, ಮನೋಜ್ ಕುಮಾರ್, ಮಮತಾ ಡಿ.ಎಸ್.ಗಟ್ಟಿ, ಸುರೇಂದ್ರ ಕಂಬಳಿ, ಸದಾನಂದ ಮಾವಜಿ, ರಾಜೇಶ್ ಜಿ ಮತ್ತಿತರರು ಭಾಗವಹಿಸಿದ್ದರು — ಪ್ರಜಾವಾಣಿ ಚಿತ್ರ

ಗಣ್ಯರ ಗೈರು: ಕಲಾವಿದರಿಗೆ ಇರುಸು–ಮುರುಸು

ಪ್ರಶಸ್ತಿ ಪ್ರದಾನ ಸಮಾರಂಭದ ಆಹ್ವಾನ ಪತ್ರಿಕೆಯಲ್ಲಿ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್, ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್.ತಂಗಡಗಿ, ಸಂಸದ ಕ್ಯಾ.ಬ್ರಿಜೇಶ್ ಚೌಟ, ರಾಜ್ಯಸಭಾ ಸದಸ್ಯ ಡಿ.ವೀರೇಂದ್ರ ಹೆಗ್ಗಡೆ, ಆರು ಶಾಸಕರು, ಐವರು ವಿಧಾನ ಪರಿಷತ್ ಸದಸ್ಯರ ಹೆಸರಿತ್ತು. ಸ್ಥಳೀಯ ಶಾಸಕ ಡಿ.ವೇದವ್ಯಾಸ ಕಾಮತ್ ಹಾಗೂ ಮೇಯರ್ ಮನೋಜ್ ಕುಮಾರ್ ಅವರು ಕಾರ್ಯಕ್ರಮದಲ್ಲಿ ಕೆಲಹೊತ್ತು ಇದ್ದು ನಿರ್ಗಮಿಸಿದರು. ಇವರ ಹೊರತಾಗಿ, ಬೇರೆ ಯಾವೊಬ್ಬ ಜನಪ್ರತಿನಿಧಿಯೂ ಭಾಗವಹಿಸಿರಲಿಲ್ಲ. ಇದು ಪ್ರಶಸ್ತಿ ಪುರಸ್ಕೃತ ಕಲಾವಿದರಿಗೆ ಇರುಸು–ಮುರುಸು ಉಂಟು ಮಾಡಿತು.

> **ನಾನು ಮೇಳಕ್ಕೆ ಸೇರಿದಾಗ 'ಅವನನ್ನು ಚೌಕಿಗೆ ಬರಲಿಕ್ಕೆ ಬಿಡಬೇಡಿ' ಎಂದ ಕಲಾವಿದರೇ ಹೆಚ್ಚು. ಅಂತಹ ಕಲಾವಿದನಿಗೆ ಪಾರ್ತಿಸುಬ್ಬ ಪ್ರಶಸ್ತಿ ನೀಡಿದ್ದಕ್ಕೆ ಧನ್ಯವಾದ**
> **ಬನ್ನಂಜೆ ಸಂಜೀವ ಸುವರ್ಣ**
> ಪಾರ್ತಿಸುಬ್ಬ ಪ್ರಶಸ್ತಿ ಪುರಸ್ಕೃತ ಕಲಾವಿದ

ಅಪಪ್ರಚಾರಕ್ಕಾಗಿ ಬಿಜೆಪಿಯಿಂದ ₹500 ಕೋಟಿ ವ್ಯಯ: ಸೊರೇನ್


ಹೇಮಂತ್ ಸೊರೇನ್

ಪ್ರಜಾ ಮತ
ಜನತಂತ್ರದ ಹಬ್ಬ

ರಾಂಚಿ (ಪಿಟಿಐ): 'ನನ್ನ ಬಗ್ಗೆ ಅಪಪ್ರಚಾರ ನಡೆಸಿ ರಾಜಕೀಯ ಲಾಭ ಗಿಟ್ಟಿಸಿ ಕೊಳ್ಳಲು ಬಿಜೆಪಿಯು ₹500 ಕೋಟಿ ವ್ಯಯ ಮಾಡಿದೆ' ಎಂದು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಮಂಗಳವಾರ ಗಂಭೀರ ಆರೋಪ ಮಾಡಿದ್ದಾರೆ.

'ಒಂದು ಅಂದಾಜಿನ ಪ್ರಕಾರ, ಬಿಜೆಪಿಯು ನನ್ನ ಬಗ್ಗೆ ಸುಳ್ಳುಸುದ್ದಿ ಹರಡುವುದು ಹಾಗೂ ದ್ವೇಷದ ಪ್ರಚಾರಕ್ಕಾಗಿ ₹500 ಕೋಟಿ ವೆಚ್ಚ ಮಾಡಿದೆ. ಅಲ್ಲದೆ, ನನ್ನ ವಿರುದ್ಧ ಅಪಪ್ರಚಾರ ನಡೆಸಲಿಕ್ಕಾಗಿಯೇ ಬಿಹಾರ, ಛತ್ತೀಸಗಢ, ಒಡಿಶಾ ಹಾಗೂ ಪಶ್ಚಿಮ ಬಂಗಾಳದಿಂದ ಜನರನ್ನು ಕರೆತರಲಾಗಿದೆ' ಎಂದು ಸೊರೇನ್ ಆರೋಪಿಸಿದ್ದಾರೆ.

'ಜನರ ನಡುವೆ ದ್ವೇಷ ಹುಟ್ಟುಹಾಕುವ ಮೂಲಕ ರಾಜಕೀಯ ಮಹತ್ವಾಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವುದು ಯಾವುದೇ ನಾಯಕನಿಗೂ ಸುಲಭವಾದ್ದು ಹಾಗೂ ಈ ವಿಷಯದಲ್ಲಿ ಬಿಜೆಪಿ ಅತಿ ನಿಪುಣ ಪಕ್ಷ. ಆದರೆ, ಈ ಕುತಂತ್ರಗಳನ್ನು ಜಾರ್ಖಂಡ್‌ನ ಸಂಸ್ಕೃತಿಯು ಎಂದಿಗೂ ಒಪ್ಪಿಕೊಳ್ಳುವುದಿಲ್ಲ. ನಾನು ಕೂಡ ಎಂದಿಗೂ ಇಂತಹ ವಾಮಮಾರ್ಗಗಳನ್ನು ಅನುಸರಿಸುವುದಿಲ್ಲ' ಎಂದು ಸೊರೇನ್ 'ಎಕ್ಸ್‌'ನಲ್ಲಿ ಹೇಳಿದ್ದಾರೆ.

ಬಿಜೆಪಿ ಕಾರ್ಯಕರ್ತರು ನನ್ನ ಬಗ್ಗೆ ಇಲ್ಲಸಲ್ಲದ ಸುದ್ದಿಗಳನ್ನು ಸ್ಥಳೀಯ ಮಟ್ಟದಲ್ಲಿ ಹರಡುತ್ತಿದ್ದಾರೆ. ಬಿಜೆಪಿಯು ನನ್ನ ಹೆಸರಿಗೆ ಮಸಿ ಬಳಿಯಲೆಂದೇ ವ್ಯವಸ್ಥಿತವಾದ ಈ ಆಂದೋಲನವನ್ನು ರೂಪಿಸಿದೆ. ಇದಕ್ಕಾಗಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿಯೂ ₹1 ಕೋಟಿಗೂ ಅಧಿಕ ಖರ್ಚು ಮಾಡಿದೆ ಎಂದು ಸೊರೇನ್ ಸೋಮವಾರ ಆರೋಪಿಸಿದ್ದರು.

ದೇವಬಂದ್ ಬಾಂಬ್ ಸ್ಫೋಟ: 31 ವರ್ಷದ ಬಳಿಕ ಉಗ್ರನ ಸೆರೆ

ಸಹರಾನ್‌ಪುರ (ಉತ್ತರಪ್ರದೇಶ) (ಪಿಟಿಐ): ದೇವಬಂದ್ ಬಾಂಬ್ ಸ್ಫೋಟದ ಪ್ರಮುಖ ಆರೋಪಿ ನಜೀರ್ ಅಹಮದ್ ವಾನಿಯನ್ನು 31 ವರ್ಷಗಳ ಬಳಿಕ ಉತ್ತರ ಪ್ರದೇಶ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಮತ್ತು ಸ್ಥಳೀಯ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ, ಶ್ರೀನಗರದಲ್ಲಿ ಬಂಧಿಸಿದ್ದಾರೆ.

'ಭಾನುವಾರ ಶ್ರೀನಗರದಲ್ಲಿ ವಾನಿಯನ್ನು ಬಂಧಿಸಲಾಗಿದೆ. ಜಾಮೀನಿನ ಮೂಲಕ ಬಿಡುಗಡೆಯಾದ ನಂತರ ವಾನಿ ತನ್ನ ಗುರುತನ್ನು ಬದಲಿಸಿಕೊಂಡು ತಲೆಮರೆಸಿಕೊಂಡಿದ್ದ' ಎಂದು ಪೊಲೀಸ್ ವರಿಷ್ಠಾಧಿಕಾರಿ ಸಾಗರ್ ಜೈನ್ ತಿಳಿಸಿದರು.

ಹಿಜ್ಬುಲ್ ಮುಜಾಹಿದೀನ್ ನೊಂದಿಗೆ ಸಂಬಂಧ ಹೊಂದಿದ್ದ ವಾನಿ ನಾಪತ್ತೆಯಾದ ನಂತರ ಜಮ್ಮು ಮತ್ತು ಕಾಶ್ಮೀರದಲ್ಲಿ ನೆಲಸಿದ್ದ ಎಂದು ಜೈನ್ ಅವರು ತಿಳಿಸಿದರು.

ಬಾಬರಿ ಮಸೀದಿ ಧ್ವಂಸದ ನಂತರ 1993ರಲ್ಲಿ ದೇವಬಂದ್‌ನಲ್ಲಿ ಬಾಂಬ್ ಸ್ಫೋಟಗೊಂಡು, ಗಲಭೆಗಳು ನಡೆದಿದ್ದವು. ಹಿಂಸಾಚಾರದ ವೇಳೆ ವಾನಿ ಮತ್ತು ಆತನ ಸಹಚರರು ಪೊಲೀಸರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದ್ದರು. ಇದರಿಂದ ಇಬ್ಬರು ಅಧಿಕಾರಿಗಳು ಸೇರಿದಂತೆ ನಾಲ್ವರಿಗೆ ಗಾಯಗಳಾಗಿದ್ದವು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಾನಿಯನ್ನು ಬಂಧಿಸಲಾಗಿತ್ತು. 1994ರಲ್ಲಿ ಜಾಮೀನು ಪಡೆದ ಆತನು ಸ್ವಲ್ಪ ಸಮಯದ ನಂತರ ನಾಪತ್ತೆಯಾಗಿದ್ದನು. 2024ರ ಮೇ 20ರಂದು ಅವರ ಬಂಧನಕ್ಕೆ ಕೋರ್ಟ್ ಶಾಶ್ವತ ವಾರಂಟ್ ಹೊರಡಿಸಿತು.

ವಾನಿ ಸುಳಿವು ನೀಡಿದವರಿಗೆ ₹25,000 ಬಹುಮಾನ ನೀಡುವುದಾಗಿ ಎಟಿಎಸ್ ಘೋಷಿಸಿತ್ತು. ಆತನನ್ನು ಕೋರ್ಟ್‌ಗೆ ಹಾಜರುಪಡಿಸಿ ಜೈಲಿಗೆ ಕಳುಹಿಸಲಾಗಿದೆ.

ನುಸುಳುಕೋರರ ಬಂಧನ

ಗುವಾಹಟಿ (ಪಿಟಿಐ): 'ಅಸ್ಸಾಂನ ಕರೀಮ್‌ಗಂಜ್ ಜಿಲ್ಲೆಯಲ್ಲಿ ಮಂಗಳವಾರ ಅಕ್ರಮವಾಗಿ ನುಸುಳಲು ಯತ್ನಿಸುತ್ತಿದ್ದ ಬಾಂಗ್ಲಾದೇಶದ 9 ಮಂದಿಯನ್ನು ಅಸ್ಸಾಂ ಪೊಲೀಸರು ಬಂಧಿಸಿದ್ದಾರೆ. ಈ ಎಲ್ಲರನ್ನೂ ಅವರ ದೇಶಕ್ಕೆ ವಾಪಸು ಕಳುಹಿಸಲಾಗಿದೆ' ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದರು.

ಹಣ ಹಂಚಿದ ತಾವ್ಡೆ: ಆರೋಪ

ಒಂದನೇ ಪುಟದಿಂದ...

ಮುಂಬೈನಿಂದ 60 ಕಿ.ಮೀ. ದೂರದ ಪೂರ್ವ ವಿರಾರ್‌ನಲ್ಲಿರುವ ವಿವಾಂತ ಹೋಟೆಲ್‌ನಲ್ಲಿ ಈ ಘಟನೆ ನಡೆದಿದೆ. ತಾವ್ಡೆ ಅವರು ಹಣ ಹಂಚುತ್ತಿದ್ದಾರೆ ಎಂದು ಆರೋಪಿಸಲಾದ ಸ್ಥಳಕ್ಕೆ ನುಗ್ಗಿದ ಬಿವಿಎ ಕಾರ್ಯಕರ್ತರು, ಘಟನೆಯ ವಿಡಿಯೊ ಮಾಡಿದ್ದಾರೆ. ನೋಟುಗಳನ್ನು ತೋರಿಸುತ್ತಾ, ತಾವ್ಡೆ ಅವರನ್ನು ತರಾಟೆಗೆ ತೆಗೆದುಕೊಂಡ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

'ಮತದಾರರ ಮೇಲೆ ಪ್ರಭಾವ ಬೀರುವುದಕ್ಕೆ ₹5 ಕೋಟಿ ಹಂಚಲು ಪಕ್ಷದ ಪ್ರಧಾನ ಕಾರ್ಯದರ್ಶಿ ತಾವ್ಡೆ ಅವರು ವಾಡಾದಿಂದ ಹಣದೊಂದಿಗೆ ವಿರಾರ್‌ಗೆ ಬಂದಿದ್ದಾರೆ ಎಂದು ಬಿಜೆಪಿಯ ನಾಯಕರೊಬ್ಬರು ನನಗೆ ಮಾಹಿತಿ ನೀಡಿದರು. ಅಪಾರ ಪ್ರಮಾಣದ ನಗದು, ಡೈರಿ ಮತ್ತು ಲ್ಯಾಪ್‌ಟಾಪ್ ಅನ್ನು ನಾವು ಸ್ಥಳದಲ್ಲಿ ನೋಡಿದ್ದೇವೆ' ಎಂದು 'ಅಪ್ಪಾ' ಎಂದೇ ಜನಪ್ರಿಯರಾಗಿರುವ ಠಾಕೂರ್ ಹೇಳಿದ್ದಾರೆ. ಆದರೆ ತಾವ್ಡೆ ಅವರ ಚಲನವಲನದ ಬಗ್ಗೆ ಸುಳಿವು ನೀಡಿದ ಬಿಜೆಪಿ ನಾಯಕನ ಹೆಸರನ್ನು ಅವರು ಬಹಿರಂಗಪಡಿಸಲಿಲ್ಲ.

'ಅವರಂತಹ ರಾಷ್ಟ್ರೀಯ ನಾಯಕರು ಇಂತಹ ಕೆಲಸಕ್ಕೆ (ಹಣ ಹಂಚುವ) ಮುಂದಾಗಲಿಕ್ಕಿಲ್ಲ ಎಂದು ನಾನು ಭಾವಿಸಿದೆ. ಆದರೆ, ಅವರು ವಿರಾರ್‌ಗೆ ಬಂದದ್ದನ್ನು ನಾನು ನೋಡಿದೆ. ಹೋಟೆಲ್‌ನಲ್ಲಿ ಏನಾಯಿತು ಮತ್ತು ಅಲ್ಲಿ ಯಾರೆಲ್ಲಾ ಇದ್ದರು ಎಂಬುದನ್ನು ನೀವೆಲ್ಲರೂ ನೋಡಿದ್ದೀರಿ' ಎಂದರು.

ಆರೋಪ ಅಲ್ಲಗಳೆದ ತಾವ್ಡೆ: ಬಿವಿಎ ಆರೋಪವನ್ನು ತಾವ್ಡೆ ಹಾಗೂ ಬಿಜೆಪಿ ಮಹಾರಾಷ್ಟ್ರ ಘಟಕದ ಅಧ್ಯಕ್ಷರು ಅಲ್ಲಗಳೆದಿದ್ದಾರೆ. 'ನಾನು ನಾಲಾಸೋಪಾರ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಸಭೆ ನಡೆಸುತ್ತಿದ್ದೆ. ಮತದಾನ ದಿನದ ನೀತಿಸಂಹಿತೆ ಬಗ್ಗೆ ಮಾಹಿತಿ ನೀಡಲು ಸಭೆ ಕರೆದಿದ್ದೆ' ಎಂದು ತಾವ್ಡೆ ಪ್ರತಿಕ್ರಿಯಿಸಿದ್ದು, 'ತನಿಖೆ ಎದುರಿಸಲು ಸಿದ್ಧನಿದ್ದೇನೆ' ಎಂದಿದ್ದಾರೆ.

'ಚುನಾವಣಾ ಆಯೋಗವು ಮುಕ್ತ ಮತ್ತು ನ್ಯಾಯಸಮ್ಮತ ತನಿಖೆ ನಡೆಸಬೇಕು. ನಾನು 40 ವರ್ಷಗಳಿಂದ ರಾಜಕೀಯದಲ್ಲಿದ್ದೇನೆ. ಅಪ್ಪಾ (ಹಿತೇಂದ್ರ ಠಾಕೂರ್) ಮತ್ತು ಕ್ಷಿತಿಜ್ ಅವರನ್ನು ಚೆನ್ನಾಗಿ ಬಲ್ಲೆ' ಎಂದು ಹೇಳಿದ್ದಾರೆ.

ಬಿಜೆಪಿ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಚಂದ್ರಶೇಖರ ಬಾವಂಕುಲೆ, 'ತಾವ್ಡೆ ಅವರು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದು, ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳು ಈ ರೀತಿ ಹಣ ಹಂಚುವರೇ? ಅವರು ರಾಜಕೀಯ ವಿರೋಧಿಗಳ ಷಡ್ಯಂತ್ರಕ್ಕೆ ಬಲಿಯಾಗಿದ್ದಾರೆ' ಎಂದಿದ್ದಾರೆ.

ಮುಚ್ಚಿಹಾಕಲು ಸಾಧ್ಯವಿಲ್ಲ: 'ಬಿಜೆಪಿ ಎಷ್ಟೇ ಪ್ರಯತ್ನಿಸಿದರೂ ಇದನ್ನು ಮುಚ್ಚಿಹಾಕಲು ಸಾಧ್ಯವಿಲ್ಲ. ಏಕೆಂದರೆ ವಿರಾರ್‌ನಲ್ಲಿ ಏನು ನಡೆದಿದೆಯೋ, ಅವೆಲ್ಲವೂ ಕ್ಯಾಮೆರಾ ಮುಂದೆ ನಡೆದಿದೆ. ಬಿಜೆಪಿಯ ಕೆಲವು ನಾಯಕರೇ ಅವರ ವಿರುದ್ಧ ಷಡ್ಯಂತ್ರ ರೂಪಿಸಿದ್ದಾರೆ' ಎಂದು ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಹೇಳಿದ್ದಾರೆ.

ಬಂಧನಕ್ಕೆ ಆಗ್ರಹ: ತಾವ್ಡೆ ಅವರನ್ನು ಬಂಧಿಸಬೇಕೆಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಮಹಾರಾಷ್ಟ್ರ ಉಸ್ತುವಾರಿ ರಮೇಶ್ ಚೆನ್ನಿತ್ತಲ ಆಗ್ರಹಿಸಿದ್ದಾರೆ.

ಮೋದೀಜಿ ಅವರೇ, ಈ ₹5 ಕೋಟಿ ಎಲ್ಲಿಂದ ಬಂತು? ಸಾರ್ವಜನಿಕರ ಹಣ ಲೂಟಿ ಮಾಡಿ ನಿಮಗೆ ಟೆಂಪೊದಲ್ಲಿ ಕಳುಹಿಸಿದ್ದು ಯಾರು?

ರಾಹುಲ್ ಗಾಂಧಿ
ಲೋಕಸಭೆ ವಿರೋಧ ಪಕ್ಷದ ನಾಯಕ

ಬಿಜೆಪಿಯವರು 'ವೋಟ್‌-ಜಿಹಾದ್' ಆರೋಪ ಮಾಡುತ್ತಿದ್ದಾರೆ. ಆದರೆ, ವಾಸ್ತವವಾಗಿ ನಡೆಯುತ್ತಿರುವುದು 'ನೋಟ್‌- ಜಿಹಾದ್'

ಉದ್ಧವ್ ಠಾಕ್ರೆ
ಶಿವಸೇನಾ (ಯುಬಿಟಿ) ಮುಖ್ಯಸ್ಥ

₹9.93 ಲಕ್ಷ ನಗದು ವಶ

ಬಿಜೆಪಿ ಕಾರ್ಯಕರ್ತರು ಹಣ ಹಂಚುತ್ತಿದ್ದರು ಎನ್ನಲಾದ ಹೋಟೆಲ್‌ನಿಂದ ಹಿರಿಯ ಅಧಿಕಾರಿಗಳನ್ನೊಳಗೊಂಡ ಪೊಲೀಸ್ ತಂಡವು ನಗದು ವಶಪಡಿಸಿಕೊಂಡಿದೆ.

'ಹಣ ಹಂಚುತ್ತಿದ್ದಾರೆ ಎಂಬ ದೂರು ಬಂದ ತಕ್ಷಣವೇ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿದರು. ₹9.93 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದ್ದು, ಪ್ರಕರಣ ದಾಖಲಿಸಲಾಗಿದೆ' ಎಂದು ಪಾಲ್ಘರ್ ಜಿಲ್ಲಾಧಿಕಾರಿ ಗೋವಿಂದ ಬೋಡ್ಕೆ ತಿಳಿಸಿದ್ದಾರೆ.

ಎರಡು ಎಫ್‌ಐಆರ್: ತಾವ್ಡೆ ವಿರುದ್ಧ ಪೊಲೀಸರು ಮಂಗಳವಾರ ಎರಡು ಎಫ್‌ಐಆರ್ ದಾಖಲಿಸಿದ್ದಾರೆ. ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸಿ ಹೋಟೆಲ್‌ನಲ್ಲಿ ಸೇರಿದ್ದಕ್ಕೆ ತಾವ್ಡೆ ಹಾಗೂ ಇತರರ ವಿರುದ್ಧ ಮೊದಲ ಎಫ್‌ಐಆರ್ ದಾಖಲಾದರೆ, ಮತದಾರರಿಗೆ ಹಣ ಹಂಚಿ, ಆಮಿಷ ಒಡ್ಡಿದ ಆರೋಪದಲ್ಲಿ ಎರಡನೇ ಎಫ್‌ಐಆರ್ ದಾಖಲಿಸಲಾಗಿದೆ.

ನಕ್ಸಲ್ ನಾಯಕ ವಿಕ್ರಂ ಗೌಡ ಹತ್ಯೆ

ಒಂದನೇ ಪುಟದಿಂದ...

ಇಲ್ಲಿ ಮೂರು ಮನೆಗಳಿದ್ದು, ನಕ್ಸಲರಿಗಾಗಿ ಶೋಧ ಕಾರ್ಯಾಚರಣೆ ನಡೆಯುತ್ತಿದ್ದ ಕಾರಣ ಮನೆಯವರನ್ನು ಮೂರು ದಿನಗಳ ಹಿಂದೆಯೇ ಸ್ಥಳಾಂತರಿಸಲಾಗಿತ್ತು ಎಂದು ಸ್ಥಳೀಯರು ತಿಳಿಸಿದ್ದಾರೆ.

ವಿಕ್ರಂ ಗೌಡನ ತಾಯಿ ಕೆಲವು ವರ್ಷಗಳ ಹಿಂದೆ ನಿಧನರಾಗಿದ್ದು, ತಂಗಿ ಮತ್ತು ತಮ್ಮ ಇದ್ದಾರೆ. ಅವರ ಜೊತೆ ಆತನಿಗೆ ಹಲವು ವರ್ಷಗಳಿಂದ ಯಾವುದೇ ಸಂಪರ್ಕ ಇರಲಿಲ್ಲ ಎನ್ನಲಾಗಿದೆ.

ನಾಲ್ಕನೇ ತರಗತಿವರೆಗೆ ವ್ಯಾಸಂಗ ಮಾಡಿದ್ದ ವಿಕ್ರಂ ಗೌಡ, ಹೆಬ್ರಿಯಲ್ಲಿ ಹೋಟೆಲೊಂದರಲ್ಲಿ ಕೆಲಸ ಮಾಡಿಕೊಂಡಿದ್ದ. ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆಯನ್ನು ವಿರೋಧಿಸಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವ ಮೂಲಕ ನಕ್ಸಲ್ ಚಟುವಟಿಕೆಯತ್ತ ಆಕರ್ಷಿತನಾಗಿದ್ದ.

ಮಾಧ್ಯಮದವರಿಗೆ ತಡೆ: ಎನ್‌ಕೌಂಟರ್ ನಡೆದ ಸ್ಥಳದಿಂದ ಅರ್ಧ ಕಿ.ಮೀ. ದೂರದಲ್ಲೇ ಮಾಧ್ಯಮದವರನ್ನು ಪೊಲೀಸರು ತಡೆದರು. ಶವ ಮಹಜರು ಪ್ರಕ್ರಿಯೆ ನಡೆದ ಬಳಿಕವೂ ಘಟನಾ ಸ್ಥಳಕ್ಕೆ ತೆರಳಲು ಅನುವು ಮಾಡಿಕೊಡಲಿಲ್ಲ.

ಕಾರ್ಕಳದ ಈದು ಪ್ರದೇಶದಲ್ಲಿ ಈಚೆಗೆ ನಕ್ಸಲರು ಕಾಣಿಸಿಕೊಂಡಿರುವ ಬಗ್ಗೆ ವರದಿಯಾದ ಬಳಿಕ ನಕ್ಸಲ್ ನಿಗ್ರಹ ಪಡೆಯವರು ಜಿಲ್ಲೆಯ ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ಶೋಧ ಕಾರ್ಯಾಚರಣೆ ಚುರುಕುಗೊಳಿಸಿದ್ದರು.

ಕೇರಳದಲ್ಲಿ 'ಥಂಡರ್ ಬೋಲ್ಟ್' ಪಡೆಯು ನಕ್ಸಲ್ ನಿಗ್ರಹ ಕಾರ್ಯಾಚರಣೆ ಚುರುಕುಗೊಳಿಸಿದ ಬಳಿಕ ನಕ್ಸಲರು ಕರ್ನಾಟಕದ ಪಶ್ಚಿಮಘಟ್ಟ ಪ್ರದೇಶದತ್ತ ಮುಖಮಾಡಿದ್ದರು ಎನ್ನಲಾಗಿದೆ.

ಗುಂಡಿನ ಸದ್ದು: ಎನ್‌ಕೌಂಟರ್ ನಡೆದ ಪರಿಸರದಲ್ಲಿ ಮಂಗಳವಾರ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೂ ಆರಕ್ಕೂ ಹೆಚ್ಚು ಬಾರಿ ಗುಂಡಿನ ಸದ್ದು ಕೇಳಿಸಿದೆ.

ಕಸ್ತೂರಿ ರಂಗನ್ ವರದಿ: ಮತ್ತೆ ಸಕ್ರಿಯರಾದ ನಕ್ಸಲರು

ಕಸ್ತೂರಿ ರಂಗನ್ ವರದಿ ಜಾರಿ ವಿಷಯ ಮತ್ತೆ ಮುನ್ನೆಲೆಗೆ ಬಂದಿರುವ ಕಾರಣ ಆ ವಿಚಾರವನ್ನು ಮುಂದಿಟ್ಟುಕೊಂಡು ನಕ್ಸಲ್ ಚಟುವಟಿಕೆಯನ್ನು ರಾಜ್ಯದಲ್ಲಿ ಮತ್ತೆ ಸಕ್ರಿಯಗೊಳಿಸಲು ನಕ್ಸಲರು ಯತ್ನಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಕಸ್ತೂರಿ ರಂಗನ್ ವರದಿ ಜಾರಿ, ಅರಣ್ಯ ಒತ್ತುವರಿ ತೆರವು ವಿಚಾರವಾಗಿ ನಕ್ಸಲರು ಸಭೆಗಳನ್ನು ನಡೆಸಿದ್ದರು ಎನ್ನಲಾಗಿದೆ.

ಮೂರು ಬಾರಿ ಕರ್ನಾಟಕ ಪೊಲೀಸರಿಂದ ತಪ್ಪಿಸಿಕೊಂಡಿದ್ದ ವಿಕ್ರಂ ಗೌಡ ನಕ್ಸಲರನ್ನು ಮುಖ್ಯವಾಹಿನಿಗೆ ಕರೆತರುವ ಸರ್ಕಾರದ ಯೋಜನೆಗೆ ವಿರೋಧ ಹೊಂದಿದ್ದ ಎನ್ನಲಾಗಿದೆ. ವಿಕ್ರಂ ಗೌಡ, ಮುಂಡಗಾರು ಲತಾ, ಜಯಣ್ಣ, ವನಜಾಕ್ಷಿ, ಸುಂದರಿ ಪತ್ತೆಗೆ ಸರ್ಕಾರ ಈ ಹಿಂದೆ ₹5 ಲಕ್ಷ ಬಹುಮಾನ ಘೋಷಣೆ ಮಾಡಿತ್ತು.

ಸಾಮಾನ್ಯ ಹುಡುಗನಾಗಿದ್ದ ವಿಕ್ರಂ

ಪ್ರಜಾವಾಣಿ ವಾರ್ತೆ

ಹೆಬ್ರಿ: ಅಂದು ಬಡ ಕುಟುಂಬವನ್ನು ಮುನ್ನಡೆಸುವ ಹೊಣೆ ಹೊತ್ತಿದ್ದ ವಿಕ್ರಂ ಗೌಡ ಹೆಬ್ರಿಯ ಹೊಟೇಲ್ ಒಂದರಲ್ಲಿ ಕಾರ್ಮಿಕನಾಗಿ ದುಡಿಯುತ್ತಿದ್ದ. ಒಂದು ದಿನ ರಜೆ ಮೇಲೆ ಕೂಡ್ಲುವಿನ ಮನೆಗೆ ಹೋಗಿದ್ದ ಆತನನ್ನು ಯಾವುದೋ ಕಾರಣಕ್ಕೆ ಅರಣ್ಯ ಇಲಾಖೆಯವರು ಮತ್ತು ಪೊಲೀಸರು ಬಂಧಿಸಿ ಚಿತ್ರಹಿಂಸೆ ನೀಡಿದ್ದರು ಎನ್ನಲಾಗಿತ್ತು. ಆ ಘಟನೆಯಿಂದ ವಿಕ್ರಂ ಅರಣ್ಯ ಇಲಾಖೆ, ಸರ್ಕಾರದ ವ್ಯವಸ್ಥೆ ವಿರುದ್ಧ ಕೋಪಗೊಂಡು ಹೋರಾಟದ ಕಿಚ್ಚು ಹತ್ತಿಸಿಕೊಂಡಿದ್ದ.

ವಿಕ್ರಂ ಗೌಡ ಕಾಯಿಲೆಯಿಂದ ಹಲವು ವರ್ಷದ ಹಿಂದೆಯೇ ಮೃತಪಟ್ಟಿದ್ದಾನೆ, ನಕ್ಸಲ್ ಕಾರ್ಯಾಚರಣೆಯಲ್ಲೇ ಹತನಾಗಿದ್ದ ಎಂಬ ಸುದ್ದಿಯೂ ಹರಡಿತ್ತು. ಈ ನಡುವೆ ನಕ್ಸಲ್ ತಂಡದ ಸದಸ್ಯೆಯನ್ನೇ ಆತ ಮದುವೆಯಾಗಿದ್ದು, ಆತನ ನೇತೃತ್ವದ ತಂಡ ಪೊಲೀಸರಿಗೆ ಶರಣಾಗಿ ಮುಖ್ಯವಾಹಿನಿಗೆ ಬರಲು ಸಿದ್ಧತೆ ನಡೆಯುತ್ತಿದೆ ಎಂಬ ಸುದ್ದಿಯೂ ಹರಿದಾಡಿತ್ತು.



ಸುಭಾಷಿತ

ಸರಳವಾಗಿ ಇದ್ದು, ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಹೋದರೆ ಅದೇ ಒಂದು ದೊಡ್ಡ ಸಾಧನೆ.

-ಸುಧಾಮೂರ್ತಿ

ದೆಹಲಿಯಲ್ಲಿ ತೀವ್ರಗೊಂಡ ಮಾಲಿನ್ಯ ಪರಿಣಾಮಕಾರಿ ಪರಿಹಾರ ಬೇಕಿದೆ

ಗಾಳಿಯ ಗುಣಮಟ್ಟ ತೀವ್ರವಾಗಿ ಕುಸಿದು ದೆಹಲಿಯು ಮಾಲಿನ್ಯದಿಂದ ತತ್ತರಿಸುತ್ತಿದೆ. ನಗರದಲ್ಲಿ ಜನಜೀವನದ ಮೇಲೆ ಇದು ತೀವ್ರ ಪ್ರತಿಕೂಲ ಪರಿಣಾಮ ಬೀರಿದೆ. ಇದು, ಜನರಲ್ಲಿ ಅನಾರೋಗ್ಯಕ್ಕೆ ಕಾರಣವಾಗಿದೆ, ಅನಾರೋಗ್ಯದಿಂದ ಈ ಮೊದಲೇ ತೊಂದರೆಗೆ ಒಳಗಾಗಿದ್ದವರು ಇನ್ನಷ್ಟು ಸಂಕಟ ಪಡುವಂತಾಗಿದೆ. ಶಾಲೆ ಮತ್ತು ಇತರ ಹಲವು ಸಂಸ್ಥೆಗಳ ಕಾರ್ಯನಿರ್ವಹಣೆಗೆ ಅಡಚಣೆ ಉಂಟಾಗಿದೆ. ಗಾಳಿಯ ಗುಣಮಟ್ಟ ಸೂಚ್ಯಂಕವು 'ಅತಿ ತೀವ್ರ ಕುಸಿತ'ವನ್ನೂ ದಾಟಿ ಹೋಗಿದೆ. ಗಾಳಿಯ ಗುಣಮಟ್ಟ ಕುಸಿತ ತಡೆಯುವ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಳಂಬ ಮಾಡಿರುವ ದೆಹಲಿ ಸರ್ಕಾರವನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಲಾರಿಗಳಿಗೆ ನಗರಕ್ಕೆ ಪ್ರವೇಶ ನಿಷೇಧ ಮತ್ತು ಸರ್ಕಾರ ಕೈಗೆತ್ತಿಕೊಂಡಿರುವ ನಿರ್ಮಾಣ ಕಾಮಗಾರಿಗಳಿಗೆ ತಾತ್ಕಾಲಿಕ ತಡೆಯಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕಿತ್ತು. ಗಾಳಿಯ ಗುಣಮಟ್ಟ ಸೂಚ್ಯಂಕವು (ಎಕ್ಯೂಐ) ಕೆಲವು ಪ್ರದೇಶಗಳಲ್ಲಿ 500 ದಾಟಿದೆ. ಸಾಮಾನ್ಯವಾಗಿ ಇದು 100 ಅಥವಾ ಅದಕ್ಕಿಂತ ಕಡಿಮೆ ಇರಬೇಕು. ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ ಈಗ ಗಾಳಿಯ ಗುಣಮಟ್ಟದ ತುರ್ತುಸ್ಥಿತಿ ಎದುರಾಗಿದೆ.

ದೆಹಲಿಯಲ್ಲಿ ಚಳಿಗಾಲದಲ್ಲಿ ಗಾಳಿಯ ಗುಣಮಟ್ಟ ತೀವ್ರವಾಗಿ ಕುಸಿಯುವುದು ಪ್ರತಿವರ್ಷವೂ ಕಾಡುವ ಬಿಕ್ಕಟ್ಟಾಗಿದೆ. ಈ ವರ್ಷದ ಆರಂಭದಿಂದಲೂ ಗಾಳಿಯ ಗುಣಮಟ್ಟ ಕಳಪೆಯಾಗಿಯೇ ಇದೆ. ಜಗತ್ತಿನ ಅತ್ಯಂತ ಮಲಿನ ನಗರ ಎಂಬ ಕುಖ್ಯಾತಿಯನ್ನು ದೆಹಲಿ ಕೆಲವು ವರ್ಷಗಳಿಂದ ಹೊಂದಿದೆ. ಪಂಜಾಬ್ ಮತ್ತು ಹರಿಯಾಣದಲ್ಲಿ ಕೊಯ್ಲಿನ ಬಳಿಕ ಕೂಳೆಗೆ ಬೆಂಕಿ ಹಾಕುವುದರಿಂದ ದೆಹಲಿಯ ಗಾಳಿಯ ಗುಣಮಟ್ಟ ಕುಸಿಯುತ್ತದೆ. ಚಳಿಗಾಲದಲ್ಲಿ ಇದರ ಪರಿಣಾಮ ಇನ್ನೂ ಹೆಚ್ಚು. ಕೂಳೆಗೆ ಬೆಂಕಿ ಹಾಕುವುದನ್ನು ತಡೆಯಲು ತಾಂತ್ರಿಕ, ಆರ್ಥಿಕ ಮತ್ತು ಇತರ ಕಾರಣಗಳಿಂದಾಗಿ ಸಾಧ್ಯವಾಗಿಲ್ಲ. ಬಿತ್ತನೆಗೂ ಮುನ್ನ ಹೊಲಕ್ಕೆ ಬೆಂಕಿ ಇಟ್ಟು ಕೂಳೆಯನ್ನು ಸುಡುವುದು ರೈತರಿಗೆ ಅನಿವಾರ್ಯ. ಈ ಸಮಸ್ಯೆಗೆ ಕಾರ್ಯಸಾಧುವಾದ ಪರಿಹಾರವೊಂದನ್ನು ಕಂಡುಕೊಳ್ಳಬೇಕು. ರೈತರ ಹಿತಾಸಕ್ತಿಯನ್ನೂ ಕಾಯ್ದುಕೊಂಡು ಮಾಲಿನ್ಯವನ್ನೂ ತಗ್ಗಿಸುವ ಪರಿಣಾಮಕಾರಿ ಪರಿಹಾರ ಬೇಕಾಗಿದೆ. ಹಲವು ವರ್ಷಗಳಿಂದ ಈ ಕುರಿತು ಚಿಂತನೆ, ಯೋಜನೆ ಮತ್ತು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೂ ದೊಡ್ಡ ಮಟ್ಟದಲ್ಲಿ ಪ್ರಯೋಜನ ಆಗಿಲ್ಲ. ಸರ್ಕಾರಗಳು ಮತ್ತು ಇತರ ಸಂಸ್ಥೆಗಳ ವೈಫಲ್ಯವನ್ನು ಇದು ತೋರುತ್ತದೆ.



ಮಾಲಿನ್ಯದ ವಿರುದ್ಧದ ಹೋರಾಟವು ನಿರಂತರವಾಗಿರಬೇಕು. ಇದಕ್ಕೆ ಎಲ್ಲರ ಬೆಂಬಲವೂ ಇರಬೇಕು

ದೆಹಲಿಯಲ್ಲಿ ಮಾಲಿನ್ಯವು ಇಷ್ಟೊಂದು ತೀವ್ರವಾಗಿ ಏಕಿದೆ? ದೆಹಲಿಯದ್ದೇ ಆದ ಕೆಲವು ಕಾರಣಗಳು ಇವೆ. ಹೆಚ್ಚುತ್ತಲೇ ಇರುವ ವಾಹನಗಳ ಸಂಖ್ಯೆ ಮತ್ತು ನಿರ್ಮಾಣ ಚಟುವಟಿಕೆಗಳು, ಹಬ್ಬಗಳ ಸಂದರ್ಭದಲ್ಲಿ ಪಟಾಕಿ ಸಿಡಿಸುವುದು, ಕಾರ್ಖಾನೆಗಳಿಂದ ಹೊರಬರುವ ಹೊಗೆ ಈ ಎಲ್ಲವೂ ನಗರದ ಮಾಲಿನ್ಯಕ್ಕೆ ಕಾರಣಗಳು. ವಾಹನಗಳ ಮೇಲೆ ನಿರ್ಬಂಧ, ಮೋಡ ಬಿತ್ತನೆ, ಡ್ರೋನ್‌ಗಳ ಬಳಕೆ, ನೀರು ಚಿಮುಕಿಸುವಿಕೆಯಂತಹ ಕ್ರಮಗಳಿಂದಲೂ ಹೆಚ್ಚಿನ ಪ್ರಯೋಜನ ಆಗಿಲ್ಲ. ಕಾರ್ಯಸಾಧುವಾದ ಮತ್ತು ದೀರ್ಘಾವಧಿಯ ಪರಿಹಾರಕ್ಕಾಗಿ ಬಲವಾದ ರಾಜಕೀಯ ಇಚ್ಛಾಶಕ್ತಿ ಇರಬೇಕು. ಕೇಂದ್ರ, ರಾಜ್ಯ ಸರ್ಕಾರ ಹಾಗೂ ವಿವಿಧ ಸಂಸ್ಥೆಗಳ ನಡುವೆ ಸಹಕಾರ ಹಾಗೂ ಸಮನ್ವಯ ಇರಬೇಕು. ಸ್ಪಷ್ಟ ಮತ್ತು ಸಮಗ್ರವಾದ ಕಾರ್ಯತಂತ್ರ, ಸಾರ್ವಜನಿಕರ ಬೆಂಬಲವೂ ಇರಬೇಕು. ಸರ್ಕಾರಗಳು ಮತ್ತು ಸರ್ಕಾರದ ಅಧೀನದ ಸಂಸ್ಥೆಗಳು ಪರಸ್ಪರ ದೂಷಣೆಯಲ್ಲಿಯೇ ತೊಡಗಿವೆ ಮತ್ತು ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಿವೆ. ಮಾಲಿನ್ಯದ ವಿರುದ್ಧದ ಹೋರಾಟವು ನಿರಂತರವಾಗಿರಬೇಕು ಮತ್ತು ಅದು ಯಾವುದೇ ಒಂದು ಋತುವಿಗೆ ಸೀಮಿತವಾಗಿ ಇರಬಾರದು. ಇತರ ಹಲವು ನಗರಗಳು, ಕೆಲವು ಸಣ್ಣ ಪಟ್ಟಣಗಳು ಕೂಡ ಮಾಲಿನ್ಯದ ಅಪಾಯ ಎದುರಿಸುತ್ತಿವೆ. ಚಳಿಗಾಲದ ಋತುವಿನಲ್ಲಿ ಮಾಲಿನ್ಯಕ್ಕೆ ತಾತ್ಕಾಲಿಕ ಪರಿಹಾರ ಕಂಡುಕೊಳ್ಳುವುದಕ್ಕೆ ನಡೆಸಿದ ಪ್ರಯತ್ನದಲ್ಲಿಯೇ ಬಹಳ ಸಮಯ ಕಳೆದುಹೋಗಿದೆ.

ದಿನದ ಟ್ವೀಟ್

ಗಂಭೀರವಾಗಿ ಪರಿಗಣಿಸಬೇಕಿದೆ



ದೆಹಲಿಯ ವಾಯುಗುಣ ಅಷ್ಟೊಂದು ಹದಗೆಟ್ಟಿದ್ದರೂ ಯಾವುದೇ ಸಚಿವರು ಅಥವಾ ಇಂತಹ ದುಃಸ್ಥಿತಿಗೆ ಅವಕಾಶವಾಗದಂತೆ ಈ ದಿಸೆಯಲ್ಲಿ ಹಗಲು- ರಾತ್ರಿ ಕೆಲಸ ಮಾಡಬೇಕಾಗಿದ್ದ ಯಾರೊಬ್ಬರೂ ಈ ಬಗ್ಗೆ ಚಕಾರ ಎತ್ತುತ್ತಿಲ್ಲ... ಮಾಲಿನ್ಯ, ಮಣಿಪುರ ಮತ್ತು ಇತರ ಗಂಭೀರವಾದ ವಿಷಯಗಳಿಗೆ ಪರಿಹಾರ ಸಿಗುವವರೆಗೂ ಎಲ್ಲ ಬಗೆಯ ಚುನಾವಣೆಗಳನ್ನೂ ತಡೆಹಿಡಿಯುವುದಾಗಿ ಸುಪ್ರೀಂ ಕೋರ್ಟ್ ಆದೇಶಿಸಬೇಕು...

ಯಶೋವರ್ಧನ್ ಝಾ ಆಜಾದ್, ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

ಕಿಡಿನುಡಿ

ಒಕ್ಕೂಟ ಸರ್ಕಾರದಿಂದ ಅನುದಾನ ತರುವ ವಿಚಾರದಲ್ಲಿ ನಮ್ಮ ಜನಪ್ರತಿನಿಧಿಗಳು ಪಕ್ಷಾತೀತವಾಗಿ ನಡೆದುಕೊಳ್ಳಬೇಕು. ಒಬ್ಬರ ಬಗ್ಗೆ ಇನ್ನೊಬ್ಬರು ಆರೋಪ ಮಾಡುತ್ತಾ ಕುಳಿತರೆ, ದೆಹಲಿಯಲ್ಲಿರೋ ಕರ್ನಾಟಕದ ವಿರೋಧಿಗಳು ನಗುತ್ತಿರುತ್ತಾರೆ.



ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

25 ವರ್ಷಗಳ ಹಿಂದೆ

ಶನಿವಾರ, 20-11-1999

• ಒಣಭೂಮಿ ಅಭಿವೃದ್ಧಿ ವಿದೇಶಿ ನೆರವಿಗೆ ಯತ್ನ

ಬೆಂಗಳೂರು, ನ. 19– ರಾಜ್ಯದಲ್ಲಿ ಒಣಭೂಮಿ ಅಭಿವೃದ್ಧಿಗಾಗಿ ವಿದೇಶಿ ನೆರವು ಪಡೆಯಲು ಪೂರಕವಾಗುವ ನೀತಿಯನ್ನು ಸದ್ಯದಲ್ಲೇ ರೂಪಿಸುವುದಾಗಿ ಕೃಷಿ ಸಚಿವ ಟಿ.ಬಿ.ಜಯಚಂದ್ರ ಇಂದು ಇಲ್ಲಿ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ರಾಜ್ಯ ತೋಟಗಾರಿಕೆ ಮತ್ತು ಕೃಷಿ ಇಲಾಖೆ ಹಾಗೂ ಎಂಜಿನಿಯರುಗಳ ಸಂಸ್ಥೆ ಜಂಟಿಯಾಗಿ ಏರ್ಪಡಿಸಿದ್ದ 'ಹನಿ ನೀರಾವರಿಯ ಸಮಸ್ಯೆಗಳು ಮತ್ತು ಉದ್ದೇಶಗಳು' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದ ಅದರಲ್ಲೂ ಮುಖ್ಯವಾಗಿ ದಕ್ಷಿಣ ಭಾಗದ ಸುಮಾರು 32 ತಾಲ್ಲೂಕುಗಳಲ್ಲಿ ಅಂತರ್ಜಲ ಕಡಿಮೆಯಾಗಿರುವ ಕಾರಣ, ಈ ಭಾಗಗಳಲ್ಲಿ ರೈತರು ಕೃಷಿ ಚಟುವಟಿಕೆಗಳಲ್ಲಿ ತೊಡಗಲು ಕಷ್ಟವಾಗಿದೆ. ರೈತರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಒಣಭೂಮಿ ಅಭಿವೃದ್ಧಿಗೆ ವಿದೇಶದಿಂದ ಹಣ ತರುವ ಸಂಬಂಧ ಈ ನಿರ್ಧಾರ ತೆಗೆದುಕೊಂಡಿರುವುದಾಗಿ ಹೇಳಿದರು.

• ನಗರ ಸಾರಿಗೆಗೆ ಖಾಸಗಿ ಬಸ್– ಯಶಸ್ವಿಯತ್ತ

ಬೆಂಗಳೂರು, ನ. 19– ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು (ಬಿಎಂಟಿಸಿ) ನಗರ ಹಾಗೂ ಉಪನಗರಗಳಲ್ಲಿನ ಪ್ರಯಾಣಿಕರ ಒತ್ತಡವನ್ನು ನೀಗಿಸುವ ಉದ್ದೇಶದಿಂದ, ಖಾಸಗಿ ಬಸ್‌ಗಳ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟ ಹೊಸ ಯೋಜನೆ ಯಶಸ್ಸಿನ ಹಾದಿಯಲ್ಲಿದೆ.

ಕೇವಲ ಐದು ಖಾಸಗಿ ಬಸ್‌ಗಳನ್ನು ಬಿಎಂಟಿಸಿ ಸರಹದ್ದಿನ ರಸ್ತೆಗಳಲ್ಲಿ ಸಂಚಾರಕ್ಕೆ ಬಿಡುವುದರ ಮೂಲಕ 1997ರ ಡಿಸೆಂಬರ್ 31ರಿಂದ ಪ್ರಾಯೋಗಿಕವಾಗಿ ಆರಂಭವಾದ ಈ ಯೋಜನೆಯಿಂದ ಬಿಎಂಟಿಸಿಗೆ ಪ್ರತಿ ಕಿಲೊಮೀಟರ್‌ಗೆ ಒಂದು ರೂಪಾಯಿಯಂತೆ ಇಲ್ಲಿಯವರೆಗೆ ಸುಮಾರು ಒಂದು ಕೋಟಿ ರೂಪಾಯಿ ಲಾಭ ಬಂದಿದೆ ಎನ್ನಲಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 20-11-1974

• ಪ್ರಧಾನಿ ಸೊಸೆಗೆ ವಿಮಾ ಏಜೆನ್ಸಿ ನೀಡಿಕೆ ಬಗ್ಗೆ ಟೀಕೆ

ನವದೆಹಲಿ, ನ. 19– ಪ್ರಧಾನಿಯವರ ಸೊಸೆ ಸೋನಿಯಾ ಗಾಂಧಿ ಅವರ ಬಗ್ಗೆ ಮಾಡಲಾದ ಪ್ರಸ್ತಾಪವೊಂದು ಇಂದು ರಾಜ್ಯಸಭೆಯಲ್ಲಿ ವಾದ ವಿವಾದ, ಚಕಮಕಿ, ಗಲಭೆ, ಗೊಂದಲಗಳಿಗೆ ಕಾರಣವಾಯಿತು.

ಪ್ರಧಾನಿ ಸೊಸೆ ಬಗ್ಗೆ ಮಾಡಿದ ಪ್ರಸ್ತಾಪವನ್ನು ದಾಖಲೆಯಿಂದ ತೆಗೆದುಹಾಕಬೇಕೆಂದು ಕಾಂಗ್ರೆಸ್ ಸದಸ್ಯರೂ ತೆಗೆದುಹಾಕಬಾರದೆಂದು ಕಮ್ಯುನಿಸ್ಟೇತರ ವಿರೋಧ ಪಕ್ಷಗಳ ಸದಸ್ಯರೂ ಒತ್ತಾಯಪಡಿಸಿದಾಗ ಈ ಗಲಭೆ ಆರಂಭವಾಯಿತು.

ಜನಸಂಘದ ಸದಸ್ಯ ಸುಬ್ರಹ್ಮಣ್ಯಸ್ವಾಮಿ ಅವರು 'ಶ್ರೀಮತಿ ಸೋನಿಯಾ ಗಾಂಧಿ ಅವರು ತಮ್ಮ ಹೆಸರಿನಲ್ಲಿ ವಿಮಾ ಏಜೆನ್ಸಿ ಪಡೆದಿದ್ದಾರೆ' ಎಂದು ಆಪಾದಿಸಿ, ಹೀಗೆ ನೀಡುವುದು ನೈತಿಕವಾಗಿ ಅನುಚಿತವೆಂದು ವಾದಿಸಿದಾಗ ವಿಷಯ ಪ್ರಸ್ತಾಪಕ್ಕೆ ಬಂದಿತು.

• 'ಬೇಡಿ ಇಲ್ಲದೆ ಟೆಸ್ಟ್ ಬೇಡಿ'

ಬೆಂಗಳೂರು, ನ. 19– ನಗರದ ಎರಡು ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿಗಳು ಇಂದು ಮಧ್ಯಾಹ್ನ ತರಗತಿಗಳಿಂದ ಹೊರಬಂದು, ಘೋಷಣೆಗಳನ್ನು ಕೂಗಿ, ನಗರದಲ್ಲಿ ನಡೆಯಲಿರುವ ಪ್ರಥಮ ಕ್ರಿಕೆಟ್ ಟೆಸ್ಟ್ ಪಂದ್ಯಕ್ಕೆ ಭಾರತದ ಟೀಮಿನಲ್ಲಿ ಸ್ಪಿನ್ ಬೌಲರ್ ಬಿ.ಎಸ್. ಬೇಡಿ ಅವರನ್ನು ಸೇರಿಸದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರಿ ಲಾ ಕಾಲೇಜಿನಿಂದ ಸುಮಾರು 50 ವಿದ್ಯಾರ್ಥಿಗಳು ಹಾಗೂ ಸರ್ಕಾರಿ ಸೈನ್ಸ್ ಕಾಲೇಜಿನಿಂದ ಸುಮಾರು 500 ವಿದ್ಯಾರ್ಥಿಗಳು ಕಾಲೇಜಿನಿಂದ ಹೊರಬಂದು ಘೋಷಣೆಗಳನ್ನು ಕೂಗಿದರಲ್ಲದೆ, ಆಟೊರಿಕ್ಷಾ, ಬಿ.ಟಿ.ಎಸ್. ಬಸ್ಸು ಮತ್ತಿತರ ವಾಹನಗಳನ್ನು ನಿಲ್ಲಿಸಿ, ಅವುಗಳ ಮೇಲೆ 'ಬೇಡಿ ಇಲ್ಲದೆ ಟೆಸ್ಟ್ ಇಲ್ಲ' ಎಂದು ಬರೆದರು.

ಕರ್ನಾಟಕಕ್ಕೆ ರಣಜಿ ಟ್ರೋಫಿ ಗೆಲುವು ಕೈಗೂಡುವುದು ಯಾವಾಗ?

ಆಟಗಾರರ ಆಯ್ಕೆ ಹೀಗೇಕೆ?



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಕೃಷ್ಣನ್ ಲಕ್ಷ್ಮಣ್ ಶ್ರೀಜಿತ್ ಅವರು ಈಚೆಗೆ ಲಖನೌನಲ್ಲಿ ಉತ್ತರಪ್ರದೇಶ ಎದುರು ನಡೆದ ರಣಜಿ ಟ್ರೋಫಿ ಪಂದ್ಯದಲ್ಲಿ ಕರ್ನಾಟಕ ತಂಡಕ್ಕೆ ಪದಾರ್ಪಣೆ ಮಾಡಿ ಶತಕ ಗಳಿಸಿದರು. ಆಗ ಕರ್ನಾಟಕದ ಹಲವು ಕ್ರಿಕೆಟ್ ಅಭಿಮಾನಿಗಳು 'ಇಷ್ಟು ದಿವಸ ಎಲ್ಲಿದ್ದ ಈ ಹುಡುಗ?' ಎಂದು ಅಚ್ಚರಿ ವ್ಯಕ್ತಪಡಿಸಿದ್ದರು. ಎಡಗೈ ಬ್ಯಾಟರ್ ಹಾಗೂ ವಿಕೆಟ್‌ಕೀಪರ್ ಶ್ರೀಜಿತ್‌ಗೆ ಈಗ 28 ವರ್ಷ ವಯಸ್ಸು. ಆದರೆ, ಬಿಸಿಸಿಐ ಆಯೋಜಿತ ಬೇರೆ ಟೂರ್ನಿಗಳನ್ನು ನೋಡಿದವರಿಗೆ ಶ್ರೀಜಿತ್ ಆಟ ಚಿರಪರಿಚಿತ. ಆದರೆ ಆಯ್ಕೆ ಸಮಿತಿಯವರಿಗೆ ಮಾತ್ರ ಈ ಆಟಗಾರ ಕಂಡಿರಲಿಲ್ಲವೇ?

ಅಭಿನವ್ ಮನೋಹರ್ ಅವರಿಗೆ ಈಗ 30 ವರ್ಷ ದಾಟಿದೆ. ಇಷ್ಟು ದಿನ ಅವರನ್ನು 'ವೈಟ್‌ಬಾಲ್ ಕ್ರಿಕೆಟ್ ಪರಿಣತ' ಎಂಬ ಹಣೆಪಟ್ಟಿ ಕಟ್ಟಿ ಕೆಂಪುಚೆಂಡಿನ ಪಂದ್ಯಗಳಿಂದ ದೂರವಿಡಲಾಗಿತ್ತು. ಆದರೆ ಈ ಬಾರಿ ರಣಜಿ ಋತುವಿನಲ್ಲಿ ಆಡುವ ಅವಕಾಶ ಪಡೆದಿರುವ ಮನೋಹರ್, ಮಧ್ಯಮ ಕ್ರಮಾಂಕದಲ್ಲಿ 'ಟೆಸ್ಟ್ ಮಾದರಿ' ಕ್ರಿಕೆಟ್ ಆಟಕ್ಕೂ ತಾವು ಸೈ ಎಂದು ತೋರಿಸಿದ್ದಾರೆ. ರಕ್ಷಣಾತ್ಮಕ ಮತ್ತು ಆಕ್ರಮಣಶೀಲ ಕೌಶಲಗಳ ಮಿಶ್ರಣದ ಮೂಲಕ ಬೌಲರ್‌ಗಳಿಗೆ ಸವಾಲೊಡ್ಡಿದ್ದಾರೆ.

ಹೋದ ವರ್ಷದ ರಣಜಿ ಟೂರ್ನಿಯಲ್ಲಿ ಕೆ.ವಿ. ಅನೀಶ್, ಹಾರ್ದಿಕ್ ರಾಜ್, ಸುಜಯ್ ಸತೇರಿ, ಧೀರಜ್ ಗೌಡ, ಎಡಗೈ ಸ್ಪಿನ್ನರ್ ರೋಹಿತ್ ಕುಮಾರ್, ಆಫ್‌ಸ್ಪಿನ್ನರ್ ಶಶಿಕುಮಾರ್ ಕಾಂಬ್ಳೆ ಮತ್ತು ಕಿಶನ್ ಬೆದಾರೆ ಅವರು ಕರ್ನಾಟಕ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಇವರಲ್ಲಿ ಈ ಬಾರಿ ತಂಡದಲ್ಲಿ ಉಳಿದಿದ್ದು ಹಾರ್ದಿಕ್, ಸುಜಯ್ ಹಾಗೂ ಕಿಶನ್ ಮಾತ್ರ. ಹೋದ ಋತುವಿನಲ್ಲಿ ತಲಾ ಮೂರು ಪಂದ್ಯ ಆಡಿದ್ದ ರೋಹಿತ್ 14 ವಿಕೆಟ್ ಹಾಗೂ ಶಶಿಕುಮಾರ್ 6 ವಿಕೆಟ್ ಗಳಿಸಿದ್ದರು. ಆದರೆ ಈ ಬಾರಿ ಅವರಿಗೆ ಸ್ಥಾನವೇ ಇಲ್ಲ. ಕೇರಳ ತಂಡಕ್ಕೆ ಆಡುತ್ತಿದ್ದ ಅನುಭವಿ ಶ್ರೇಯಸ್ ಗೋಪಾಲ್ ಈಗ ಕರ್ನಾಟಕ ತಂಡಕ್ಕೆ ಮರಳಿದ್ದಾರೆ ಮತ್ತು ನವಪ್ರತಿಭೆ ಮೊಹಸೀನ್ ಖಾನ್ ಸ್ಥಾನ ಪಡೆದಿದ್ದಾರೆ.

ಎರಡು ವರ್ಷಗಳ ಹಿಂದೆ, 19 ವರ್ಷದೊಳಗಿನವರ ಟೂರ್ನಿಯಲ್ಲಿ ರನ್‌ಗಳ ಹೊಳೆ ಹರಿಸಿದ್ದ ವಿಶಾಲ್ ಓನತ್ ಅವರಿಗೆ ಕರ್ನಾಟಕ ರಣಜಿ ತಂಡದಲ್ಲಿ ಆಡಲು ಇದ್ದಕ್ಕಿದ್ದಂತೆ ಅವಕಾಶ ನೀಡಲಾಯಿತು. ವೈಫಲ್ಯ ಅನುಭವಿಸಿದ ಆ ಹುಡುಗ ನಂತರ ರಣಜಿ ತಂಡದಲ್ಲಿ ಕಾಣಿಸಿಕೊಂಡಿಲ್ಲ. ವಿಶಾಲ್ ಅವರಿಗೆ ಅವಕಾಶ ಕಲ್ಪಿಸಿದ್ದರಿಂದ ಅನುಭವಿ ಆಟಗಾರರನ್ನು ಬೆಂಚ್ ಮೇಲೆ ಕೂರಿಸಬೇಕಾಯಿತು.

ಕಳೆದ 3–4 ವರ್ಷಗಳಲ್ಲಿ ಕರ್ನಾಟಕ ಕ್ರಿಕೆಟ್ ತಂಡದ ಆಯ್ಕೆಯಲ್ಲಿ ನಡೆಯುತ್ತಿರುವ ಪ್ರಯೋಗಗಳಲ್ಲಿ ಆಯ್ದ ಉದಾಹರಣೆಗಳು ಇವು. ಒಂದು ಬಲಿಷ್ಠ ತಂಡವನ್ನು ಕಟ್ಟಲು ಪ್ರಯೋಗಗಳು ಅಗತ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಸಿಕ್ಕ ಅವಕಾಶದಲ್ಲಿ ಚೆನ್ನಾಗಿ ಆಡುವ ಭರವಸೆ ಮೂಡಿಸಿದವರನ್ನು ಕೈಬಿಡುವುದು ಸರಿಯೇ? ಶ್ರೀಜಿತ್, ಮನೋಹರ್ ಅವರನ್ನು ಇಲ್ಲಿಯವರೆಗೆ ಆಯ್ಕೆ ಮಾಡದಿರುವುದು, ಅಲ್ಲದೆ, ಹೋದ ಋತುವಿನಲ್ಲಿ ತಂಡಕ್ಕೆ ಆಸರೆಯಾಗಿದ್ದ ಉದಯೋನ್ಮುಖ ಸ್ಪಿನ್ನರ್‌ಗಳಿಗೆ ಮತ್ತೊಂದು ಅವಕಾಶ ನೀಡದಿರುವುದು ಎಷ್ಟು ಸರಿ?

ಈ ಹಿಂದೆ ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್, ಕರುಣ್ ನಾಯರ್ ಸೇರಿದಂತೆ ಹಲವು ಆಟಗಾರರು ಆಡಲು ಅವಕಾಶ ಪಡೆಯುವ ಮುನ್ನ ಎರಡು–ಮೂರು ಋತುಗಳಲ್ಲಿ ತಂಡದ ಬೆಂಚ್‌ನಲ್ಲಿದ್ದರು. ಆದರೆ ಈಗ ತಂಡದೊಳಗೆ ಬಂದ ಕೂಡಲೇ ಆಡಲು ಅವಕಾಶ ಕಲ್ಪಿಸುವುದು, ನಂತರ ಕೈಬಿಡುವ ಪರಿಪಾಟ ಶುರುವಾಗಿದೆ. ಕರ್ನಾಟಕ ತಂಡವು 'ಪ್ರತಿಭಾ ನಿರ್ವಹಣೆ'ಯ ಒತ್ತಡವನ್ನು ಎದುರಿಸುತ್ತಿರುವುದರ ಸೂಚನೆ ಇದು. ದಶಕಗಳ ಹಿಂದೆ ಭಾರತ ತಂಡದಲ್ಲಿ ಆರು ಜನ ಕನ್ನಡಿಗರು ಸ್ಥಾನ ಪಡೆದಾಗ, ಬೆಂಚ್‌ನಲ್ಲಿ ಅವರಷ್ಟೇ ಸಮರ್ಥರು ಇದ್ದರು. ಪ್ರಮುಖರ ಗೈರಿನಲ್ಲಿಯೇ ಬೆಂಚ್ ಹುಡುಗರು ಕರ್ನಾಟಕ ತಂಡವನ್ನು ನಾಕೌಟ್‌ಗೆ ಪ್ರವೇಶಿಸುವಂತೆ ಮಾಡಿದ ಉದಾಹರಣೆಗಳು ಸಾಕಷ್ಟಿವೆ. ಆದರೆ ಈಗ ಬೆಂಚ್ ಶಕ್ತಿ ನಿಧಾನವಾಗಿ ಕ್ಷೀಣಿಸುತ್ತಿರುವುದು ಸುಳ್ಳಲ್ಲ. ಒಂದೆಡೆ ಅನುಭವಿ ಆಟಗಾರರು ವೈಫಲ್ಯ ಅನುಭವಿಸುತ್ತಿದ್ದಾರೆ. ಇನ್ನೊಂದೆಡೆ ಹೊಸ ಹುಡುಗರು ಅನುಭವದ ಕೊರತೆಯಿಂದ ಗೆಲ್ಲುವ ಪಂದ್ಯಗಳನ್ನು ಕೈಚೆಲ್ಲುತ್ತಿದ್ದಾರೆ.

ಅದರ ಪರಿಣಾಮ ಈ ಬಾರಿಯ ರಣಜಿ ಟೂರ್ನಿಯಲ್ಲಿ ಢಾಳಾಗಿ ಕಾಣಿಸುತ್ತಿದೆ. ಕರ್ನಾಟಕಕ್ಕೆ ಈಗ ನಾಕೌಟ್ ಹಂತ ತಲುಪುವುದು ದುಸ್ತರವಾಗಿದೆ. ಈ ಸಲದ ರಣಜಿ ಋತು ಎರಡು ಭಾಗಗಳಲ್ಲಿ ನಡೆಯುತ್ತಿದೆ. ಮೊದಲ ಹಂತದಲ್ಲಿ ನಡೆದ ಐದು ಪಂದ್ಯಗಳಲ್ಲಿ ಕರ್ನಾಟಕ ಒಂದರಲ್ಲೂ ಸೋತಿಲ್ಲ. ಗುಂಪಿನ ಇನ್ನೆರಡು ಪಂದ್ಯಗಳು ಮತ್ತು ನಾಕೌಟ್ ಹಣಾಹಣಿಗಳು ಮುಂದಿನ ಜನವರಿ–ಫೆಬ್ರುವರಿಯಲ್ಲಿ ನಡೆಯಲಿವೆ.

'ಸಿ' ಗುಂಪಿನ ಮೊದಲೆರಡೂ ಪಂದ್ಯಗಳು ಮಳೆಗೆ ಕೊಚ್ಚಿಹೋದವು. ಮೂರನೇ ಪಂದ್ಯದಲ್ಲಿ ಬಲಿಷ್ಠವಲ್ಲದ ಬಿಹಾರ ಎದುರು ಜಯಿಸಿತು. ಆದರೆ ಬೆಂಗಳೂರಿನಲ್ಲಿಯೇ ನಡೆದ ಪಂದ್ಯದಲ್ಲಿ ಬಂಗಾಳ ಎದುರು ಮೊದಲ ಇನಿಂಗ್ಸ್ ಹಿನ್ನಡೆ ಅನುಭವಿಸಿ ಡ್ರಾ ಮಾಡಿಕೊಂಡಿತು. ಈಚೆಗೆ ಲಖನೌನಲ್ಲಿ ಉತ್ತರಪ್ರದೇಶ ತಂಡವನ್ನು ಮೊದಲ ಇನಿಂಗ್ಸ್‌ನಲ್ಲಿ 89 ರನ್‌ಗಳಿಗೆ ಆಲೌಟ್ ಮಾಡಿತ್ತು. ನಂತರ ಉತ್ತಮ ಮುನ್ನಡೆ ಪಡೆಯುವಲ್ಲಿಯೂ ಯಶಸ್ವಿಯಾಗಿತ್ತು. ಆದರೆ ಎರಡನೇ ಇನಿಂಗ್ಸ್‌ನಲ್ಲಿ ಆತಿಥೇಯ ತಂಡವು 400ಕ್ಕೂ ಹೆಚ್ಚು ರನ್‌ಗಳ ಮೊತ್ತ ಪೇರಿಸಿತು. ಅದನ್ನು ತಡೆಯಲು ಕರ್ನಾಟಕ ಬೌಲರ್‌ಗಳಿಗೆ ಆಗಲಿಲ್ಲ.

ವೈಶಾಖ ವಿಜಯಕುಮಾರ್, ವಿದ್ವತ್ ಕಾವೇರಪ್ಪ ಮತ್ತು ಪ್ರಸಿದ್ಧ ಕೃಷ್ಣ ಅವರ ಗೈರುಹಾಜರಿಯಲ್ಲಿ ಮಧ್ಯಮ ವೇಗಿ ವಾಸುಕಿ ಕೌಶಿಕ್ ಅವರೊಬ್ಬರೇ ತಂಡಕ್ಕೆ ಆಸರೆಯಾಗಿದ್ದಾರೆ. ಅವರಿಗೆ ವಿದ್ಯಾಧರ್ ಪಾಟೀಲರು ಒಂದಿಷ್ಟು ಬೆಂಬಲ ನೀಡಿದರು. ಬಂಗಾಳ ಎದುರಿನ ಪಂದ್ಯದಲ್ಲಿ ಪದಾರ್ಪಣೆ ಮಾಡಿ ಒಟ್ಟು 3 ವಿಕೆಟ್ ಗಳಿಸಿದ್ದ ಎಡಗೈ ವೇಗಿ ಅಭಿಲಾಷ್ ಶೆಟ್ಟಿ ಅವರನ್ನು ಲಖನೌ ಪಂದ್ಯದಲ್ಲಿ ಕೈಬಿಡಲಾಗಿತ್ತು. ಎಸ್. ಅರವಿಂದ್ ನಂತರ ರಾಜ್ಯ ತಂಡಕ್ಕೆ ಒಬ್ಬ ಎಡಗೈ ವೇಗಿಯ ಸ್ಥಾನ ತುಂಬುವ ಭರವಸೆ ಮೂಡಿಸಿದ ಅಭಿಲಾಷ್ ಬದಲು ಬಲಗೈ ಬೌಲರ್ ಯಶೋವರ್ಧನ್ ಪರಂತಾಪ್ ಅವರನ್ನು ಕಣಕ್ಕಿಳಿಸಿದ್ದು ಅಚ್ಚರಿ ಮೂಡಿಸಿತ್ತು.

ಸ್ಪಿನ್ ವಿಭಾಗದಲ್ಲಿ ಮಾತ್ರ ರಾಜ್ಯದ ಸ್ಥಿತಿ ಅಷ್ಟೇನೂ ಉತ್ತಮವಾಗಿಲ್ಲ. ಲೆಗ್‌ಸ್ಪಿನ್ನರ್ ಶ್ರೇಯಸ್ ಅವರೊಬ್ಬರಿಗೇ ಒತ್ತಡ ನಿಭಾಯಿಸಲು ಸಾಧ್ಯವಾಗುತ್ತಿಲ್ಲ. ಬೌಲಿಂಗ್ ಜೊತೆಗೆ ಕೆಳಕ್ರಮಾಂಕದ ಬ್ಯಾಟಿಂಗ್‌ನಲ್ಲಿಯೂ ಅವರು ರನ್‌ಗಳ ಕಾಣಿಕೆ ನೀಡುವತ್ತ ಗಮನ ಕೊಡುತ್ತಿದ್ದಾರೆ. ಅವರಿಗೆ ಈ ಹಿಂದೆ ಕೃಷ್ಣಪ್ಪ ಗೌತಮ್ ಉತ್ತಮ ಜೊತೆಗಾರ ಆಗಿದ್ದರು. ಆದರೆ ಈಗ ಯಾರೂ ಇಲ್ಲ. ಇದರಿಂದಾಗಿ ಎದುರಾಳಿ ತಂಡದ ಪ್ರಮುಖ ಜೊತೆಯಾಟಗಳನ್ನು ಮುರಿಯುವ ಮತ್ತು ಪಂದ್ಯ ಗೆಲ್ಲಿಸುವ ಸ್ಪಿನ್ನರ್ ಆಗಿ ಹೊರಹೊಮ್ಮಲು ಶ್ರೇಯಸ್ ಅವರಿಗೆ ಸಾಧ್ಯವಾಗುತ್ತಿಲ್ಲ. ಕ್ರಿಕೆಟ್ ಲೋಕಕ್ಕೆ ಸ್ಪಿನ್ ದಿಗ್ಗಜರನ್ನು ನೀಡಿದ ತಂಡವು ಇಂತಹದ್ದೊಂದು ಪರಿಸ್ಥಿತಿ ಎದುರಿಸಲು ಕಾರಣಗಳಾದರೂ ಯಾವುವು?

ಬ್ಯಾಟಿಂಗ್‌ನಲ್ಲಿ ಆರಂಭಿಕ ಜೋಡಿ ಮಯಂಕ್ ಮತ್ತು ನಿಕಿನ್ ಜೋಸ್ ಅವರು ವಿಫಲರಾಗುತ್ತಿದ್ದಾರೆ. ಹೊಸ ಪ್ರತಿಭೆ ಆರ್. ಸ್ಮರಣ್ 30–35 ರನ್ ಗಳಿಸುವವರೆಗೆ ಚೆನ್ನಾಗಿಯೇ ಆಡುತ್ತಾರೆ. ಅವರ ಕೌಶಲಗಳು, ಬ್ಯಾಟ್ ಫ್ಲೋ ಮತ್ತು ಪಾದಚಲನೆ ಆಕರ್ಷಕವಾಗಿವೆ. ಆದರೆ ಅವರಿಗೆ ದೊಡ್ಡ ಇನಿಂಗ್ಸ್ ಕಟ್ಟಲಾಗುತ್ತಿಲ್ಲ. ಮನೀಷ್ ಪಾಂಡೆ ಅವರ ಬ್ಯಾಟ್‌ನಿಂದ ರನ್‌ಗಳು ಈ ಮೊದಲಿನಂತೆ ಹರಿಯುತ್ತಿಲ್ಲ. ಆದರೆ ಫೀಲ್ಡಿಂಗ್‌ನಲ್ಲಿ ಅವರು ಎಂದಿನಂತೆ ಚುರುಕಾಗಿದ್ದಾರೆ ಎನ್ನುವುದು ಸಮಾಧಾನಕರ.

'ನಮ್ಮ ತಂಡವು ಈಗ ಬದಲಾವಣೆ ಪರ್ವದಲ್ಲಿದೆ. ಹೊಸಬರು ಹೊಂದಿಕೊಳ್ಳಲು ಸಮಯ ಬೇಕು. ಅವರಿಗೆ ಅವಕಾಶ ನೀಡಲಾಗುತ್ತಿದೆ' ಎಂದು ನಾಯಕ ಮಯಂಕ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು. ಆದರೆ ಒಂದು ದಶಕದಿಂದ ರಾಜ್ಯ ತಂಡವು ಎದುರಿಸುತ್ತಿರುವ ರಣಜಿ ಟ್ರೋಫಿ ಗೆಲುವಿನ ಬರವನ್ನು ನೀಗಿಸುವುದು ಯಾವಾಗ ಎಂಬ ಪ್ರಶ್ನೆಗೆ ಮಾತ್ರ ಉತ್ತರ ಸುಲಭವಲ್ಲ. ಈ ರಣಜಿ ಋತುವಿನಲ್ಲಿ ಆ ಕನಸು ಕೈಗೂಡುವುದೇ?



ಚುರುಮುರಿ



ಖುಷಿ ಮೇಳ

• ಮಣ್ಣೆ ರಾಜು

ಕೃಷಿ ಕಲ್ಚರ್ ಪರಿಚಯಿಸಲು ಶಂಕ್ರಿ, ಸುಮಿ ಮಕ್ಕಳನ್ನು ಕೃಷಿಮೇಳಕ್ಕೆ ಕರೆತಂದಿದ್ದರು. ಶಾಲೆಯ ವೇಷಭೂಷಣ ಸ್ಪರ್ಧೆಯಲ್ಲಿ ಮಗಳು 'ರೈತ ಮಹಿಳೆ' ವೇಷದಲ್ಲಿ ಬಹುಮಾನ ವಂಚಿತಳಾಗಿದ್ದರಿಂದ ಸುಮಿಗೆ ಸಂಕಟವಾಗಿತ್ತು. ಕೃಷಿಮೇಳದಿಂದ ಮಗಳ ಭವಿಷ್ಯದ ಚಟುವಟಿಕೆಗೆ ಸಹಾಯವಾಗಬಹುದು ಎಂದುಕೊಂಡಳು.

ಕೃಷಿಮೇಳ ಮಕ್ಕಳಿಗೆ ಹೊಸ ಲೋಕದಂತೆ ಕಂಡಿತ್ತು. ಮನೆಗೆ ತರುತ್ತಿದ್ದ ಕೇಜಿ, ಅರ್ಧ ಕೇಜಿ ದವಸಧಾನ್ಯ ನೋಡಿದ್ದ ಮಕ್ಕಳು ಧಾನ್ಯದ ರಾಶಿಗಳನ್ನು ಕಂಡು ಅಚ್ಚರಿಪಟ್ಟರು. ಅಲಂಕರಿಸಿದ್ದ ದನಗಳ ಮೈ ಸವರಿದರು.

'ಡ್ಯಾಡಿ, ಹಸು ಹಾಲು ಕೊಡುತ್ತೆ, ಎತ್ತು ಏನು ಕೊಡುತ್ತೆ?' ಮಗ ಕೇಳಿದ.

'ಎತ್ತುಗಳು ಹೊಲ ಉಳುತ್ತವೆ. ಗಾಡಿ ಎಳೆಯುತ್ತವೆ. ರೈತರ ಕುಟುಂಬದ ಸದಸ್ಯರಂತೆ ದನಕರುಗಳು ದುಡಿಯುತ್ತವೆ. ಕುಟುಂಬ ಸದಸ್ಯರಾದರೂ ದನಕರುಗಳ ಹೆಸರು ರೇಷನ್ ಕಾರ್ಡಿನಲ್ಲಿ, ವೋಟರ್ ಲಿಸ್ಟಿನಲ್ಲಿ ಇರೊಲ್ಲ' ಅಂದ ಶಂಕ್ರಿ.

'ಮಮ್ಮೀ, ಅಲ್ಲಿ ದೊಡ್ಡ ಒನಕೆ!' ಮಗಳು ಗುರುತಿಸಿದಳು.

'ಒನಕೆಯ ಉಪಯೋಗ ಗೊತ್ತಾ?' ಸುಮಿ ಕೇಳಿದಳು.

'ಗೊತ್ತು, ಒನಕೆಯು ಓಬವ್ವನ ಆಯುಧ. ಹೈದರಾಲಿಯ ಸೈನಿಕರನ್ನು ಕೊಲ್ಲಲು ಬಳಸಿದ್ದು'.

'ಅಲ್ಲ, ಭತ್ತ ಕುಟ್ಟಲು ಒನಕೆ ಬಳಸ್ತಾರೆ, ಚಕ್ರದಂತೆ ಅಲ್ಲಿದೆಯಲ್ಲ, ಅದು ಬೀಸುವ ಕಲ್ಲು. ಧಾನ್ಯವನ್ನು ಹಿಟ್ಟು ಮಾಡಲು ಉಪಯೋಗಿಸ್ತಾರೆ' ಸುಮಿ ಪರಿಚಯಿಸಿದಳು.

'ಟ್ರಯಾಂಗಲ್ ರೀತಿ ಇದೆಯಲ್ಲ ಅದು ಏನು ಡ್ಯಾಡಿ?' ಮಗ ಕೇಳಿದ.

'ಅದು ನೇಗಿಲು. ಮನೆಗೆ ಹೋದ ಮೇಲೆ ನೇಗಿಲಿನ ಚಿತ್ರ ಬರೆದು ಭಾಗಗಳನ್ನು ಗುರುತಿಸಿ ಅದರ ಉಪಯೋಗ ತಿಳಿಸುತ್ತೇನೆ' ಅಂದ ಶಂಕ್ರಿ.

'ಕೃಷಿಮೇಳವನ್ನು ಜನ ಎಂಜಾಯ್ ಮಾಡ್ತಿದ್ದಾರೆ ಕಣ್ರೀ...' ಸುಮಿ ಸಂಭ್ರಮಿಸಿದಳು.

'ಕೃಷಿ ಬದುಕು ವಸ್ತುಪ್ರದರ್ಶನವಾಗಿ ಜನರ ಮನರಂಜನೆ ಆಗ್ತಿದೆಯಲ್ಲ ಎಂದು ದುಃಖವಾಗ್ತಿದೆ...' ಅಂದ ಶಂಕ್ರಿ.

ಸಂಗತ

ಕಂಗ್ಲಿಷ್‌ಗೆ ಒತ್ತು, ಲಿಪಿಗೆ ಕುತ್ತು

ಸರ್ಕಾರಿ ಶಾಲೆಗಳಲ್ಲಷ್ಟೇ ಅಲ್ಲ ಖಾಸಗಿ ಶಾಲೆಗಳಲ್ಲೂ ಸುಲಭ ನುಡಿಗನ್ನಡದ ಪರಿಣಾಮಕಾರಿ ಬೋಧನೆ ಕಡ್ಡಾಯವಾಗಬೇಕಿದೆ

• ಡಾ. ಮುರಳೀಧರ ಕಿರಣಕೆರೆ


ಕರ್ನಾಟಕ ರಾಜ್ಯೋತ್ಸವ ಮಾಸವಾಗಿರುವ ನವೆಂಬರ್‌ನಲ್ಲಿ ನಾಡು– ನುಡಿಯ ಕುರಿತಾಗಿ ಕನ್ನಡ ಡಿಂಡಿಮ, ನುಡಿಹಬ್ಬ, ನುಡಿತೇರು, ನುಡಿಜಾತ್ರೆ ಎಂದೆಲ್ಲಾ ವಿಶೇಷ ಕಾರ್ಯಕ್ರಮಗಳು, ಸಮಾರಂಭಗಳು ನಡೆಯುತ್ತಿವೆ. ಶಾಲೆ, ಕಾಲೇಜುಗಳು ಸೇರಿದಂತೆ ನಮ್ಮ ನಾಡು, ಹೊರನಾಡಿನ ಹಲವು ಸಂಘ–ಸಂಸ್ಥೆಗಳು, ಕನ್ನಡ ಕೂಟಗಳು, ಸಂಘಟನೆಗಳು ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಿ ಭಾಷೆ, ಸಂಸ್ಕೃತಿಯ ಶ್ರೇಷ್ಠತೆ ಸಾರುತ್ತಾ ಸಂಭ್ರಮಿಸುತ್ತಿವೆ. ಎಲ್ಲವೂ ಕನ್ನಡಮಯವಾಗಿವೆ ಎಂದೆನ್ನಿಸುವ ಈ ಆಚರಣೆಗಳು ಹೆಮ್ಮೆ ತರುವಂತಿದ್ದರೂ ಮರುಕ್ಷಣದಲ್ಲೇ ಮೂಡುವ ವಿಷಾದ ಭಾವ ಹೃದಯವನ್ನು ಭಾರವಾಗಿಸುತ್ತದೆ.

ಹೌದು, ನಮ್ಮ ತಾಯ್ನುಡಿಯ ಸದ್ಯದ ಪರಿಸ್ಥಿತಿ ಆಶಾದಾಯಕವಾಗಿಲ್ಲ. ಪಟ್ಟಣ ಹೋಗಲಿ ಹಳ್ಳಿ ಹಳ್ಳಿಯಲ್ಲೂ ಈ ಆತಂಕಕ್ಕೆ ಪುರಾವೆಗಳು ಕಣ್ಣಿಗೆ ರಾಚುತ್ತಿವೆ. ಪ್ರೌಢಶಾಲೆಯೊಂದರಲ್ಲಿ ಓದುತ್ತಿರುವ ಪರಿಚಯದ ಬಾಲಕನಿಗೆ ಕನ್ನಡ ದಿನಪತ್ರಿಕೆಯೊಂದರ ತಲೆಬರಹಗಳನ್ನು (ಹೆಡ್‌ಲೈನ್) ಓದಲು ಹೇಳಿದೆ. ಅಕ್ಷರಕ್ಕೆ ಅಕ್ಷರ ಜೋಡಿಸಿ ತುಂಬಾ ಕಷ್ಟಪಟ್ಟು ಓದಿದ. ಚೆನ್ನಾಗಿ ಕನ್ನಡ ಮಾತನಾಡುವ ಚುರುಕು ಬುದ್ಧಿಯ ಆ ಹಳ್ಳಿಹುಡುಗ ಓದಲು ಮಾತ್ರ ತುಂಬಾ ತಡವರಿಸಿದ. ಕಾರಣ, ಆತನನ್ನು ಪ್ರಾಥಮಿಕ ಶಾಲೆಯಿಂದಲೇ ಇಂಗ್ಲಿಷ್ ಮಾಧ್ಯಮಕ್ಕೆ ತಳ್ಳಿದ್ದ ಪೋಷಕರ ಇಂಗ್ಲಿಷ್ ಭ್ರಮೆ!

ಪೋಷಕರ ಅತಿಯಾದ ಇಂಗ್ಲಿಷ್ ವ್ಯಾಮೋಹ ಈಗ ವ್ಯಸನದ ರೂಪ ತಾಳಿದೆ. ಮಹಾನಗರಗಳು, ಪಟ್ಟಣಗಳನ್ನು ದಾಟಿ ಹಳ್ಳಿ ಹಳ್ಳಿಗೂ ಈ ಮಾಯೆ ಆವರಿಸಿದೆ. ಒಂದೊಳ್ಳೆ ನೌಕರಿ, ಸ್ಥಾನಮಾನ, ಗೌರವಕ್ಕೆಲ್ಲಾ ಇಂಗ್ಲಿಷೇ ಬುನಾದಿ ಎಂಬ ಮಿಥ್ಯೆಯೊಂದು ಗಾಢವಾಗಿ ಬೇರೂರಿದೆ. ಪರಿಣಾಮವಾಗಿ, ಇಂಗ್ಲಿಷ್ ಮಾಧ್ಯಮದ ಶಾಲೆಗಳು ಸಣ್ಣಪುಟ್ಟ ಊರುಗಳಲ್ಲೂ ಹುಟ್ಟಿಕೊಂಡಿವೆ. ಹತ್ತಿರದಲ್ಲಿ ಇಲ್ಲದಿದ್ದರೂ ಪಟ್ಟಣದ ಶಾಲೆಗೆ ಮಕ್ಕಳನ್ನು ಕರೆದೊಯ್ಯಲು ವಾಹನ ಸೌಲಭ್ಯವಿದೆ. ಈ ಇಂಗ್ಲಿಷ್ ಹುಚ್ಚಿನ ಹೊಡೆತಕ್ಕೆ ಕನ್ನಡ ಶಾಲೆಗಳು ನೆಲಕಚ್ಚುತ್ತಿವೆ. ಮಕ್ಕಳು ಸರ್ಕಾರಿ ಶಾಲೆ ಅಥವಾ ಕನ್ನಡ ಮಾಧ್ಯಮ ಶಾಲೆಗಳಿಗೆ ಹೋಗುತ್ತಾರೆಂದರೆ ಅವರನ್ನು, ಅವರ ಪೋಷಕರನ್ನು ಕೀಳಾಗಿ ಕಾಣುವ ಮನಃಸ್ಥಿತಿಯಿದೆ!

ಮಕ್ಕಳು ತಮ್ಮ ಮಾತೃಭಾಷೆಯ ಮೂಲಕ ವಿವಿಧ ವಿಷಯಗಳನ್ನು ಸುಲಭವಾಗಿ ಗ್ರಹಿಸಬಲ್ಲರು. ಇದರಿಂದ ಅರಿವು, ಬುದ್ಧಿಮತ್ತೆ ಹೆಚ್ಚುತ್ತದೆ, ಬದುಕಿನ ಸವಾಲುಗಳನ್ನು ಸಮರ್ಥವಾಗಿ ಎದುರಿಸಬಲ್ಲರು ಎಂಬ ವೈಜ್ಞಾನಿಕ ಸತ್ಯವನ್ನು ಮರೆಮಾಚಿ, ಉದ್ಯೋಗ ದೊರಕಿಸಿಕೊಡುವ ಸಾಮರ್ಥ್ಯ ಇಂಗ್ಲಿಷಿಗೆ ಮಾತ್ರ ಇದೆ ಎಂದು ವ್ಯವಸ್ಥಿತವಾಗಿ ನಂಬಿಸಲಾಗಿದೆ. ಪ್ರಾಥಮಿಕ ಹೋಗಲಿ, ಪೂರ್ವ ಪ್ರಾಥಮಿಕ ಹಂತದಿಂದಲೇ ಇಂಗ್ಲಿಷ್ ಮಾಧ್ಯಮಕ್ಕೆ ದೂಡಲ್ಪಡುವ ಮಕ್ಕಳಿಗೆ ಕನ್ನಡ ಎಂಬುದು ಉಪಯೋಗಕ್ಕೆ ಬಾರದ ಒಂದು ನುಡಿಯಷ್ಟೆ!

ಇಂಗ್ಲಿಷನ್ನು ಒಂದು ಭಾಷೆಯಾಗಿ ಚೆನ್ನಾಗಿ ಕಲಿತರೆ ಸಾಕು ಎಂಬ ಸತ್ಯ ಮಸುಕಾಗಿದೆ. ಅಗ್ರಪಂಕ್ತಿಯಲ್ಲಿ ಇರಬೇಕಾದ ಮಾತೃಭಾಷೆಯನ್ನು ಎರಡು, ಮೂರನೆಯ ಭಾಷೆಯಾಗಿ ಕಾಟಾಚಾರಕ್ಕೆ ಮಾತ್ರ ಕಲಿಸಲಾಗುತ್ತಿದೆ. ಒಂದೆಡೆ, ಕನ್ನಡದ ಬೋಧನೆಯಲ್ಲಿ ನಿರ್ಲಕ್ಷ್ಯ ವಹಿಸುವ ಖಾಸಗಿ ಶಾಲೆಗಳು, ಮತ್ತೊಂದೆಡೆ, ಪೋಷಕರ ಅಸಡ್ಡೆ. ಪಾಲಕರಿಗೇ ಬೇಡವಾದ ಮೇಲೆ ಕನ್ನಡದಲ್ಲಿ ಓದಿರಿ, ಬರೆಯಿರಿ ಎಂದು ಮಕ್ಕಳಿಗೆ ಹೇಳುವವರಾದರೂ ಯಾರು? ಪರಿಣಾಮವಾಗಿ, ಮಕ್ಕಳು ಕನ್ನಡದ ಬಗ್ಗೆ ತಿರಸ್ಕಾರ ಭಾವನೆ ಬೆಳೆಸಿಕೊಳ್ಳುತ್ತಿದ್ದಾರೆ. ಹಲವು ಸರ್ಕಾರಿ ಶಾಲೆಗಳೂ ಕನ್ನಡವನ್ನು ತಪ್ಪಿಲ್ಲದಂತೆ ಓದುವ, ಬರೆಯುವ ಕೌಶಲ ಕಲಿಸಲು ಸೋಲುತ್ತಿರುವುದು ದೊಡ್ಡ ದುರಂತವೇ ಸರಿ.



ಕನ್ನಡ ನುಡಿ ನಿಜಕ್ಕೂ ಸಂಕಷ್ಟದಲ್ಲಿದೆ. ಕನ್ನಡಕ್ಕೆ ಇಂಗ್ಲಿಷ್ ಬೆರೆಸಿ ಕಂಗ್ಲಿಷಲ್ಲಿ ಮಾತನಾಡುವ ಯುವ ಭಾಷಿಕರ ಸಂಖ್ಯೆಯೇನೋ ಇದೆ. ಆದರೆ ಹೆಚ್ಚು ಆತಂಕವಿರುವುದು ಕನ್ನಡ ಲಿಪಿಯ ಬಗ್ಗೆ. ಅದರಲ್ಲೂ ನಮ್ಮ ನವಪೀಳಿಗೆಗೆ ಕನ್ನಡದ ಬರಹವೆಂದರೆ ಅಪಥ್ಯ. ಈಗಂತೂ ಕೈಬರವಣಿಗೆಯೇ ನಿಷಿದ್ಧ ಎಂಬಂತಾಗಿದೆ. ಸಂವಹನವೆಂದರೆ ಮೊಬೈಲ್ ಫೋನ್, ಕಂಪ್ಯೂಟರ್‌ಗಳಲ್ಲಿ ಟೈಪಿಸುವುದು ಅಷ್ಟೆ. ಸಂಪರ್ಕಕ್ಕಾಗಿ ಸಾಮಾಜಿಕ ಮಾಧ್ಯಮಗಳನ್ನೇ ಹೆಚ್ಚು ಬಳಸುತ್ತಿರುವ ಯುವಪೀಳಿಗೆಗೆ ಎಲ್ಲವನ್ನೂ ಹ್ರಸ್ವಗೊಳಿಸುವ ಪ್ರವೃತ್ತಿ. ಕನ್ನಡದಲ್ಲೇ ಅಕ್ಷರಗಳನ್ನು ಮೂಡಿಸುವ ಅವಕಾಶ ಇದ್ದರೂ ಇಂಗ್ಲಿಷಿಗೆ ಹೋಲಿಸಿದರೆ ಕಠಿಣ, ಸಮಯವೂ ಜಾಸ್ತಿ ಬೇಕು ಎಂಬ ದೂರು.

ತೀರಾ ಅನಿವಾರ್ಯವಿದ್ದಲ್ಲಿ ಕನ್ನಡವನ್ನೇ ಇಂಗ್ಲಿಷ್ ಅಕ್ಷರಗಳಲ್ಲಿ ಪಟಪಟನೆ ಬರೆಯುತ್ತಾರೆ. ಇದರಿಂದ ನಮ್ಮ ಲಿಪಿಗೆ ಕುತ್ತು ಎಂಬ ಚಿಂತೆಯಿಲ್ಲ. ಭಾಷೆ ಮೇಲಿನ ಅಭಿಮಾನಕ್ಕಿಂತ ಸಂವಹನವಷ್ಟೇ ಮುಖ್ಯ ಎಂಬ ಧೋರಣೆ. ಹಾಗಾಗಿ, ಕನ್ನಡ ಲಿಪಿಯ ಬಳಕೆ ಎಳೆಯರಲ್ಲಿ, ತರುಣ ಪೀಳಿಗೆಯಲ್ಲಿ ಆಘಾತಕಾರಿಯಾಗಿ ಕಡಿಮೆಯಾಗುತ್ತಿದೆ. ಲಿಪಿಗಳ ರಾಣಿ, ಸುಂದರ, ಸಮಗ್ರ, ವೈಜ್ಞಾನಿಕ ಎಂದೆಲ್ಲಾ ವರ್ಣಿತವಾಗಿರುವ ಬರಹರೂಪಿ ಕನ್ನಡ ಮರೆಗೆ ಸರಿಯುತ್ತಿದೆ.

ಹೌದು, ಅತಿವೇಗದ ಈ ಡಿಜಿಟಲ್ ಯುಗದಲ್ಲಿ ಕನ್ನಡ ಪಠ್ಯದ ಸರಳೀಕರಣ ತುರ್ತಾಗಿ ಆಗಬೇಕಿರುವ ಕಾರ್ಯ. ಸರ್ಕಾರಿ ಶಾಲೆಗಳಲ್ಲಷ್ಟೇ ಅಲ್ಲ ಖಾಸಗಿ ಶಾಲೆಗಳಲ್ಲೂ ಸಾಹಿತ್ಯಕ್ಕೆ ಒತ್ತಿಲ್ಲದ ಸುಲಭ ನುಡಿಗನ್ನಡದ ಪರಿಣಾಮಕಾರಿ ಬೋಧನೆ ಕಡ್ಡಾಯವಾಗಬೇಕಿದೆ. ಕನ್ನಡ ಮಾಧ್ಯಮಕ್ಕೆ ಉತ್ತೇಜನ, ಕನ್ನಡಕ್ಕೆ ಅಗ್ರಪಟ್ಟ, ಉದ್ಯೋಗದಲ್ಲಿ ಆದ್ಯತೆ ನೀಡುವ ನೀತಿ ರೂಪಿಸಬೇಕಿದೆ. ಇಲ್ಲದಿದ್ದರೆ ಕನ್ನಡದಲ್ಲಿ ಓದಲು, ಬರೆಯಲು ಬಾರದ, ಕಂಗ್ಲಿಷಷ್ಟೇ ಮಾತನಾಡುವ ಭಾಷಾಭಿಮಾನವಿಲ್ಲದ ಕನ್ನಡಿಗರ ನವಸಂಕುಲವೊಂದು ಸೃಷ್ಟಿಯಾಗುವುದು ನಿಶ್ಚಿತ. ಈ ಆತಂಕ ನಿಜವಾಗದಿರಲಿ.

ವಾಚಕರ ವಾಣಿ

ಗಡಿ ಕನ್ನಡಿಗರಲ್ಲಿ ಅಭದ್ರ ಭಾವ ನಿವಾರಿಸಿ

ಮಹಾರಾಷ್ಟ್ರದಲ್ಲಿ ಚುನಾವಣೆ ವೇಳೆ ಗಡಿ ವಿಷಯ ಪ್ರಸ್ತಾಪವಾಗುವುದು ಸಾಮಾನ್ಯ ಎಂಬಂತಾಗಿತ್ತು. ಆದರೆ ಈ ಸಲ ಅಂತಹ ಪರಿಪಾಟಕ್ಕೆ ತಡೆ ಬಿದ್ದಿದೆ. ಕರ್ನಾಟಕ–ಮಹಾರಾಷ್ಟ್ರ ಗಡಿ ವಿಷಯವನ್ನು ಆ ರಾಜ್ಯದ ಯಾವ ಪ್ರಮುಖ ಪಕ್ಷವೂ ತನ್ನ ಪ್ರಣಾಳಿಕೆಯಲ್ಲಿ ಸೇರಿಸದಿರುವುದು ಸಮಾಧಾನ ತಂದಿದೆ. ಆ ರಾಜ್ಯದ ಸುಮಾರು 35 ವಿಧಾನಸಭಾ ಕ್ಷೇತ್ರಗಳಲ್ಲಿ ಕನ್ನಡ ಭಾಷಿಕರದು ನಿರ್ಣಾಯಕ ಪಾತ್ರ ಎಂಬ ಮಾಹಿತಿ (ಪ್ರ.ವಾ., ನ.18), ಕನ್ನಡಿಗರು ಗಣನೀಯ ಪ್ರಮಾಣದಲ್ಲಿ ಅಲ್ಲಿ ನೆಲಸಿರುವುದನ್ನು ಸ್ಪಷ್ಟಪಡಿಸುತ್ತದೆ.

ಸದಾ ಗದ್ದಲ ಎಬ್ಬಿಸುತ್ತಿದ್ದ ಮಹಾರಾಷ್ಟ್ರ ಏಕೀಕರಣ ಸಮಿತಿಗೆ ಈ ಚುನಾವಣೆ ಸಂದರ್ಭದಲ್ಲಿ ಭಾರಿ ಮುಖಭಂಗ ಆಗಿರುವುದು ಸರಿಯಾಗಿಯೇ ಇದೆ. ಅಲ್ಲಿನ ಕನ್ನಡಿಗರು ಈ ಬಾರಿ ಒಗ್ಗಟ್ಟಿನ ಮಂತ್ರ ಜಪಿಸಿರುವುದರ ಜೊತೆಗೆ 'ಕನ್ನಡಿಗರಿಗೆ ಗೌರವ ನೀಡುವವರಿಗೆ, ಕನ್ನಡಿಗರ ಬೇಡಿಕೆ ಈಡೇರಿಸುವವರಿಗೆ ನಮ್ಮ ಮತ' ಎಂಬಂತಹ ಹೇಳಿಕೆಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟು ಚುರುಕು ಮುಟ್ಟಿಸಿರುವುದು ಖುಷಿಯ ವಿಷಯ. ರಾಜ್ಯದ ಎಲ್ಲ ಗಡಿಭಾಗಗಳಲ್ಲಿ ಕನ್ನಡ ಅಭಿಮಾನ ಇದೇ ರೀತಿ ಚಿಗುರಲಿ, ಬೆಳೆಯಲಿ, ಮೊಳಗಲಿ. ಕನ್ನಡದ ಅಸ್ಮಿತೆ ಗಟ್ಟಿಯಾಗಲಿ. ಈ ದಿಸೆಯಲ್ಲಿ ರಾಜ್ಯ ಸರ್ಕಾರ ಅಲ್ಲಿನವರಿಗೆ ಕಾಲಕಾಲಕ್ಕೆ ಸರಿಯಾದ ಸಲಹೆ, ಸಹಕಾರ, ನೆರವು ನೀಡುವಂತೆ ಆಗಬೇಕು. ಅವರಲ್ಲಿ ಅಭದ್ರತೆ ಕಾಡದಂತೆ ನೋಡಿಕೊಳ್ಳುವ ಜವಾಬ್ದಾರಿಯುತ ನಡೆಯೂ ಮುಖ್ಯ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಸಾಹಿತ್ಯ ಕೃತಿ ಮತ್ತು ನ್ಯಾಯದಾನ ಪ್ರಕ್ರಿಯೆ

ನಿವೃತ್ತಿಯಾದ ಮೇಲೆ 'ಯೂಟ್ಯೂಬ್'ನಲ್ಲಿ ಕರ್ನಾಟಕ ಹೈಕೋರ್ಟ್‌ನ ಕಲಾಪಗಳನ್ನು ನೋಡುವ ಗೀಳು ನನಗೆ. ನ್ಯಾಯಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಮತ್ತು ಸಿ.ಎಂ.ಜೋಶಿ ಅವರಿದ್ದ ವಿಭಾಗೀಯ ಪೀಠದ ಮುಂದೆ ಮಂಗಳವಾರ ಒಂದು ಆಸಕ್ತಿದಾಯಕ ಪ್ರಕರಣ ಬಂದುದನ್ನು ನೋಡಿದೆ. ಒಬ್ಬ ಸರ್ಕಾರಿ ನೌಕರನಿಗೆ ನಿವೃತ್ತಿಯಾಗಿ 12 ವರ್ಷಗಳಾದರೂ ಪಿಂಚಣಿ ಸೌಲಭ್ಯ ಮಂಜೂರಾಗದಿರುವ ಬಗ್ಗೆ ಸಲ್ಲಿಸಿದ ದಾವೆ ಅದಾಗಿತ್ತು. ಪ್ರಕರಣದ ದಾಖಲೆ ಅವಗಾಹಿಸಿ ಮತ್ತು ಎರಡೂ ಕಡೆಯವರ ವಾದ ಆಲಿಸಿ, ಇಷ್ಟು ವರ್ಷಗಳಾದರೂ ಪಿಂಚಣಿ ಮಂಜೂರು ಮಾಡದ ಬಗ್ಗೆ ನ್ಯಾಯಮೂರ್ತಿಗಳು, ಸರ್ಕಾರವನ್ನು ಪ್ರತಿನಿಧಿಸಿದ್ದ ವಕೀಲರನ್ನು ತರಾಟೆಗೆ ತೆಗೆದುಕೊಂಡರು. ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ 'ತಬರನ ಕಥೆ' ಓದಿಕೊಂಡು ಬರಲು ಸೂಚಿಸಿ, ವಿಚಾರಣೆಯನ್ನು ಮುಂದೂಡಿದರು.

ನ್ಯಾಯಮೂರ್ತಿಗಳ ಸಂವೇದನಾಶೀಲತೆಗೆ ಮತ್ತು ಸಾಹಿತ್ಯ ಕೃತಿಗಳು ನ್ಯಾಯದಾನ ಪ್ರಕ್ರಿಯೆಯಲ್ಲಿ ಹೇಗೆ ಪರಿಣಾಮ ಬೀರಬಲ್ಲವು ಎನ್ನುವುದಕ್ಕೆ ಇದೊಂದು ದೃಷ್ಟಾಂತ.

ವೆಂಕಟೇಶ್ ಮುದಗಲ್, ಕಲಬುರಗಿ

ವಿವಾಹದ ಸಡಗರ ನಂತರವೂ ಉಳಿಯಲಿ

ಭಾರತದಲ್ಲಿ ಶಿಕ್ಷಣಕ್ಕಿಂತಲೂ ವಿವಾಹಕ್ಕೆ ಹೆಚ್ಚಿನ ಹಣ ವೆಚ್ಚವಾಗುತ್ತಿರುವ ಕುರಿತ ವಿಶೇಷ ವರದಿ (ಪ್ರ.ವಾ., ನ.18) ಓದಿ ವಿಷಾದವಾಯಿತು. ವಿವಾಹ ಎಂಬುದು ಕುಟುಂಬ, ಸ್ನೇಹ ಮತ್ತು ಸಂಬಂಧವನ್ನು ಬೆಸೆಯುವ ವೈಯಕ್ತಿಕ ವಿಚಾರವಾಗಿರದೆ, ವೈಭೋಗ, ಆಡಂಬರ ಪ್ರದರ್ಶನದ ವೇದಿಕೆಯಾಗಿರುವುದು ದುಃಖಕರ. ಇಂತಹ ವೈಭವೋಪೇತ ಮದುವೆಗೆ ಕಾರಣ ಅನುಕರಣೆ! ಒಬ್ಬರನ್ನು ಅನುಸರಿಸಿ ಸಾಲಸೋಲ ಮಾಡಿಯಾದರೂ ತಮ್ಮ ಕುಟುಂಬದವರ ಮದುವೆಗಳನ್ನೂ ಅದೇ ರೀತಿ ಏರ್ಪಡಿಸಲು ಮುಂದಾಗುವವರೇ ಹೆಚ್ಚು. ಇಂತಹವರ ನಡುವೆ, ಸರಳವಾಗಿ ಮದುವೆಯಾಗುವ ಮೂಲಕ ಮದುವೆಗೆ ಖರ್ಚು ಮಾಡಬೇಕಿದ್ದ ಹಣದಲ್ಲಿ ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರಿನ ಶುದ್ಧೀಕರಣ ಯಂತ್ರವನ್ನು ನೀಡಿದ ಅರಕಲಗೂಡಿನ ಎಂಜಿನಿಯರ್ ಶಿವಕುಮಾರ್ (ಪ್ರ.ವಾ., ನ. 12) ಮಾದರಿಯಾಗಿದ್ದಾರೆ. ಸರಳವಾಗಿ ಕುವೆಂಪು ಅವರ ಮಂತ್ರಮಾಂಗಲ್ಯದ ವಿಧಾನ ಅನುಸರಿಸುವವರೂ ಇದ್ದಾರೆ.

ಇಷ್ಟರ ನಡುವೆಯೂ ವಿವಾಹ ಸಮಾರಂಭ ಹೇಗಿರಬೇಕು ಎಂಬುದು ಅವರವರ ಇಚ್ಛೆಗೆ ಬಿಟ್ಟ ವಿಚಾರ. ಆದರೆ ವಿವಾಹದ ನಂತರದ ಬೆಳವಣಿಗೆಗಳು ಕಳವಳ ಮೂಡಿಸುವಂತಿವೆ. ವಿವಾಹಗಳು ಸಲೀಸಾಗಿ ನೆರವೇರುತ್ತಿರುವಂತೆಯೇ ವಿಚ್ಛೇದನಗಳೂ ಸಲೀಸಾಗಿ ನಡೆಯುತ್ತಿವೆ. ವಿವಾಹದ ಸಂದರ್ಭದಲ್ಲಿ ಇದ್ದ ಖುಷಿ, ಸಡಗರವು ವಿವಾಹದ ನಂತರ ಅದೂ ಬಲು ಬೇಗ ಮರೆಯಾಗುವುದೇಕೆ? ಮದುವೆ ಸಂದರ್ಭದಲ್ಲಿ ಬಟ್ಟೆಯಿಂದ ಹಿಡಿದು ಆಹಾರದವರೆಗೆ ಯೋಚಿಸಿ ಆಯ್ಕೆ ಮಾಡುವ ಜನ, ಅಷ್ಟು ಸಲೀಸಾಗಿ ವಿಚ್ಛೇದನ ನೀಡುತ್ತಿರುವುದೇಕೆ? ಇವೆಲ್ಲವುಗಳ ಬಗ್ಗೆ ಸೂಕ್ತ ಪರಾಮರ್ಶೆ ನಡೆಯಬೇಕಿದೆ.

ಗಿರೀಶ್ ಡಿ., ಬೆಳ್ಗಾವಿ

ಸಂಘರ್ಷದ ಬೆಂಕಿ ಆರುವುದೆಂದು?

ಮಣಿಪುರದಲ್ಲಿ ಹೊತ್ತಿ ಉರಿಯುತ್ತಿರುವ ಸಂಘರ್ಷದ ಬೆಂಕಿ ಆರುವ ಯಾವುದೇ ಲಕ್ಷಣ ಕಾಣುತ್ತಿಲ್ಲ. ಕೇಂದ್ರ ಸರ್ಕಾರವಾಗಲಿ, ಅಲ್ಲಿನ ರಾಜ್ಯ ಸರ್ಕಾರವಾಗಲಿ ಮಣಿಪುರದಲ್ಲಿ ಭುಗಿಲೆದ್ದಿರುವ ಹಿಂಸಾಚಾರವನ್ನು ತಹಬಂದಿಗೆ ತರುವ ಪ್ರಯತ್ನವನ್ನು ಬದ್ಧತೆಯಿಂದ ಮಾಡಿದಂತೆ ಕಾಣುವುದಿಲ್ಲ. ಮೈತೇಯಿ ಮತ್ತು ಕುಕಿ ಬುಡಕಟ್ಟು ಜನರ ನಡುವೆ ರಾಕ್ಷಸಾಕಾರದಲ್ಲಿ ಬೆಳೆದುನಿಂತಿರುವ ಅಪನಂಬಿಕೆ ಮತ್ತು ಅಸಹನೆಯನ್ನು ಬರೀ ಪೊಲೀಸ್ ಮತ್ತು ಸೇನೆಯ ನಿಯೋಜನೆಯಿಂದ ಬಗೆಹರಿಸಲಾಗದು. ಬಿರೇನ್ ಸಿಂಗ್ ನೇತೃತ್ವದ ಸರ್ಕಾರವು ಉಭಯ ಸಮುದಾಯಗಳ ನಡುವೆ ಸೌಹಾರ್ದದ ಸೇತುವೆ ಕಟ್ಟುವುದಿರಲಿ ಆ ಗುಂಪುಗಳ ಮುಂದಾಳುಗಳನ್ನು ಮಾತುಕತೆಯ ಮೇಜಿಗೆ ಕರೆತರುವುದಕ್ಕೂ ಮನಸ್ಸು ಮಾಡುತ್ತಿಲ್ಲ. ಸರ್ಕಾರ ಈಗ ರಾಜ್ಯದ ಕೆಲವು ಭಾಗಗಳಲ್ಲಿ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆಯನ್ನು ಜಾರಿಗೆ ತಂದಿದೆಯಾದರೂ ಅದರಿಂದ ಹೆಚ್ಚಿನ ಪ್ರಯೋಜನ ಸಿಗುವ ಸಾಧ್ಯತೆ ಇಲ್ಲ. ಅದು ಈ ಹಿಂದೆ ಮಾಡಿರುವ ಅವಾಂತರಗಳು ಮತ್ತು ಜನಮನದ ಮೇಲೆ ಮಾಡಿರುವ ಗಾಯಗಳನ್ನು ಮಣಿಪುರದ ಜನ ಇನ್ನೂ ಮರೆತಂತಿಲ್ಲ. ಪ್ರಾರಂಭದಿಂದಲೂ ಮಣಿಪುರದ ಬೆಳವಣಿಗೆಗಳನ್ನು ಸರ್ಕಾರಗಳು ಲಘುವಾಗಿ ಸ್ವೀಕರಿಸಿದ ಪರಿಣಾಮವಾಗಿ ಇಂದು ಅದು ಬೃಹದಾಕಾರವಾಗಿ ಬೆಳೆದಿದೆ. ಈಗ ಈ ಅಶಾಂತಿಯ ದಾವಾಗ್ನಿ ನಿಯಂತ್ರಿಸುವ ಹೊಣೆ ಈ ಸರ್ಕಾರಗಳದ್ದೇ ಆಗಿದೆ.

ಮೋದೂರು ಮಹೇಶಾರಾಧ್ಯ, ಹುಣಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

To know more about The Printers (Mysore) Private Ltd, visit www.printersmysore.com.

ಕರ್ನಾಟಕದಲ್ಲಿ ನಕ್ಸಲರ ಜಾಡು...

1980ರಿಂದ 2024ರ ವರೆಗೆ

ಕರ್ನಾಟಕದಲ್ಲಿ ನಕ್ಸಲ್ ಚಳವಳಿಗೆ ಸುಮಾರು ನಾಲ್ಕು ದಶಕಗಳ ಇತಿಹಾಸವಿದೆ. ಬೆಂಗಳೂರು, ಮೈಸೂರಿನಲ್ಲಿ ಆರಂಭವಾದ ಪ್ರಯತ್ನಗಳು ಬೀದರ್‌ನಲ್ಲಿ ಸಂಘಟಿತ ಹೋರಾಟದ ರೂಪ ಪಡೆದವು. ಆದರೆ, ಅಲ್ಲಿ ನೆಲೆ ನಿಲ್ಲಲಾಗದೆ ರಾಯಚೂರಿಗೆ ವಾಸ್ತವ್ಯ ಬದಲಿಸಿದ ನಕ್ಸಲೀಯರಿಗೆ ಅಲ್ಲೂ ನೆಲೆ ಕಂಡುಕೊಳ್ಳಲು ಸಾಧ್ಯವಾಗಲಿಲ್ಲ. ನಂತರ ನಕ್ಸಲರ ಹೆಜ್ಜೆ ಗುರುತು ಕಂಡುಬಂದಿದ್ದು ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿ.

ನಕ್ಸಲ್ ಚಳವಳಿ ಪಶ್ಚಿಮ ಘಟ್ಟದಲ್ಲಿ ಸದ್ದಿಲ್ಲದೆ ನಡೆಯುತ್ತಿದ್ದರೂ, 2002ರಲ್ಲಿ ಶರಬೇತಿ ವೇಳೆ ಹಾರಿದ ಗುಂಡಿನಿಂದ ಮಲೆನಾಡಿನಲ್ಲಿ ಶಸ್ತ್ರಾಸ್ತ್ರ ಚಟುವಟಿಕೆ ನಡೆಯುತ್ತಿರುವುದು ಮೊದಲ ಬಾರಿ ಬೆಳಕಿಗೆ ಬಂದಿತ್ತು. ಕೊಪ್ಪ ತಾಲ್ಲೂಕಿನ ಮೆಣಸಿನಹಾಡ್ಯ ಗ್ರಾಮದ ಚಿದಾನಂದ ಅವರ ಕಾಲಿಗೆ ಗುಂಡು ತಗುಲಿತ್ತು. ಅವರು ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಬಂದ ಬಳಿಕ ಪ್ರಕರಣ ಬಯಲಿಗೆ ಬಂದಿತ್ತು.

1980ರಲ್ಲಿ ಪೀಪಲ್ಸ್ ವಾರ್ ಪಕ್ಷದ ಪ್ರಭಾವಕ್ಕೆ ಒಳಗಾಗಿ ಬೆಂಗಳೂರಿನಲ್ಲಿ ಪ್ರಗತಿಪರ ವಿದ್ಯಾರ್ಥಿ ಕೇಂದ್ರ ಆರಂಭ. ದೆಹಲಿಯ ಜವಾಹರಲಾಲ್ ನೆಹರು ವಿವಿಯಲ್ಲಿ ಓದಿದ್ದ ಸಾಕೇತ್ ರಾಜನ್ ರಾಜ್ಯದಲ್ಲಿ ನಕ್ಸಲ್ ಚಳವಳಿ ಕಟ್ಟಿದ ರೂವಾರಿ. ನಂತರದ ವರ್ಷಗಳಲ್ಲಿ ಮೈಸೂರಿನಲ್ಲೂ ಚಳವಳಿ ಆರಂಭವಾಯಿತು.

1990 ದಶಕದ ಆರಂಭದಲ್ಲಿ ಬೀದರ್‌ನಲ್ಲಿ ಚಳವಳಿ ಕಟ್ಟುವ ಪ್ರಯತ್ನಕ್ಕೆ ಯಶಸ್ಸು ದೊರಕದೇ ಇದ್ದುದರಿಂದ ಚಳವಳಿಗಾರರ ತಂಡ ರಾಯಚೂರಿನತ್ತ ಮುಖಮಾಡಿತು. ಅಲ್ಲಿನ ಚಂದ್ರಬಂಡ ಪ್ರದೇಶದಲ್ಲಿ ಹೋರಾಟದ ಪಡೆಯನ್ನೇ ಕಟ್ಟಲಾಯಿತು.

1990ರ ದಶಕದಲ್ಲೇ ನಕ್ಸಲ್ ಚಳವಳಿಯ ಕಾವು ಶಿವಮೊಗ್ಗ, ಚಿಕ್ಕಮಗಳೂರು ಸೇರಿದಂತೆ ಮಲೆನಾಡು ಪ್ರದೇಶವನ್ನೂ ವ್ಯಾಪಿಸಿತು. 'ಕರ್ನಾಟಕ ವಿಮೋಚನಾ ರಂಗ'ದ ಬೆಂಬಲದಲ್ಲಿ ಚಳವಳಿಗಾರರು ಮಲೆನಾಡಿನ ಆದಿವಾಸಿಗಳ ವಿಶ್ವಾಸವನ್ನು ಪಡೆದುಕೊಂಡು ಸಂಘಟನೆಯನ್ನು ಬಲಪಡಿಸಿದರು.

2000 ದಶಕದಲ್ಲಿ ರಾಜ್ಯದಲ್ಲಿ ನಕ್ಸಲ್ ಚಟುವಟಿಕೆ ಜೋರಾಯಿತು.

2003: ಕುದುರೆಮುಖ ಬಳಿಯ ಸಿಂಗ್ಸಾರ್ ಗ್ರಾಮದ ರಾಮಚಂದ್ರಗೌಡ್ಲು ಮನೆ ಸಮೀಪ ನಕ್ಸಲರು ಮತ್ತು ಪೊಲೀಸರ ನಡುವೆ 2003ರ ಆಗಸ್ಟ್ 6ರಂದು ಗುಂಡಿನ ಚಕಮಕಿ ನಡೆದಿತ್ತು. ನವೆಂಬರ್ 17ರಂದು ಕಾರ್ಕಳ ತಾಲ್ಲೂಕಿನ ಈದು ಗ್ರಾಮದ ಬೊಲ್ಲೊಟ್ಟೋದಲ್ಲಿ ನಡೆದ ಎನ್‌ಕೌಂಟರ್‌ಗೆ ಪಾರ್ವತಿ ಮತ್ತು ಹಾಜಿಮಾ ಬಲಿಯಾಗಿದ್ದರು. ಅದೇ ವರ್ಷ ಡಿಸೆಂಬರ್ 29ರಂದು ಶೃಂಗೇರಿ ತಾಲ್ಲೂಕಿನ ನೆಮ್ಮಾರು ಅರಣ್ಯ ಪ್ರವಾಸಿ ಮಂದಿರಕ್ಕೆ ನಕ್ಸಲರು ಬೆಂಕಿ ಹಾಕಿದ್ದರು.

2004: ಶೃಂಗೇರಿ ತಾಲ್ಲೂಕಿನ ಬುಕಡಿಬೈಲು ಸಮೀಪ ತಲಗಾರು ರಾಮೇಗೌಡ್ರು ಅವರ ಮನೆ ಸಮೀಪ 2004ರ ಆಗಸ್ಟ್ 27ರಂದು ನಕ್ಸಲರು ಮತ್ತು ಪೊಲೀಸರ ನಡುವೆ ಗುಂಡಿನ ಚಕಮಕಿ ನಡೆದಿತ್ತು. ಅಕ್ಟೋಬರ್ 7 ರಂದು ಶೃಂಗೇರಿ ತಾಲ್ಲೂಕಿನ ಕಿಗ್ಗ ಸಮೀಪದ ಮಾವೆಬೈಲು ಬಳಿಯಿಂದ ಪೊಲೀಸ್ ಮುದ್ದಣ್ಣ ಅವರನ್ನು ನಕ್ಸಲರ ತಂಡ ಅಪಹರಿಸಿತ್ತು. ಅವರ ಬಳಿ ಇದ್ದ ಬಂದೂಕು ಕಸಿದುಕೊಂಡು ಬಿಡುಗಡೆ ಮಾಡಿದ್ದರು. ಅಕ್ಟೋಬರ್ 11ರಂದು ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಬಕಣ ಜಲಪಾತ ಬಳಿ ನಕ್ಸಲರು ಮತ್ತು ಪೊಲೀಸರ ನಡುವೆ ಗುಂಡಿನ ಚಕಮಕಿ ನಡೆದಿತ್ತು. ನವೆಂಬರ್ 21ರಂದು ಬುಕಡಿಬೈಲು ಸಮೀಪದ ಹೆಮ್ಮಿಗೆ ಬಳಿ ಪೊಲೀಸರಿಗೆ ಮಾಹಿತಿದಾರ ಎಂಬ ಆರೋಪದಲ್ಲಿ ಚಂದ್ರಶೇಖರ ಎಂಬುವರ ಮೇಲೆ ನಕ್ಸಲರ ತಂಡ ಮಾರಣಾಂತಿಕ ಹಲ್ಲೆ ನಡೆಸಿತ್ತು.

2005: ಶೃಂಗೇರಿ ತಾಲ್ಲೂಕಿನ ಸಿರಿಮನೆ ಬಳಿ ದೇವರಹಕ್ಲು ಗ್ರಾಮದ ಸಿಂಗನ್ನಗೌಡ ಅವರ ಮನೆಗೆ 7 ಜನರ ನಕ್ಸಲರ ತಂಡ ಜನವರಿ 10ರಂದು ಭೇಟಿ ನೀಡಿತ್ತು. ಜ.29 ರಂದು ಶೃಂಗೇರಿ ತಾಲ್ಲೂಕು ಕಿಗ್ಗ ಸಮೀಪ ಅರಣ್ಯ ಇಲಾಖೆ ಕಟ್ಟಡಕ್ಕೆ ಬೆಂಕಿ ಹಚ್ಚಿ ನಕ್ಸಲರು ದಾಳಿ ನಡೆಸಿದ್ದರು. ಜೂ.23ರಂದು ಕುಂದಾಪುರ ತಾಲ್ಲೂಕಿನ ಶಂಕರನಾರಾಯಣ ಸಮೀಪದ ದೇವರಬಾಳು ಬಳಿ ನಡೆದ ಎನ್‌ಕೌಂಟರ್‌ಗೆ ಮೂಡಿಗೆರೆ ತಾಲ್ಲೂಕಿನ ಸಬ್ಲಿ ಉಮೇಶ್ ಮತ್ತು ರಾಯಚೂರಿನ ಅಜಿತ್ ಕುಸಬಿ ಬಲಿಯಾಗಿದ್ದರು. ಜುಲೈ 28ರಂದು ಕಾರ್ಕಳ ತಾಲ್ಲೂಕಿನ ಹೆಬ್ರಿ ಬಳಿಕ ಕಬ್ಬಿನಾಲೆ ಬಳಿಯ ಮತ್ತಾವು ಬಳಿ ಪೊಲೀಸ್ ಜೀಪ್‌ವೊಂದನ್ನು ನಕ್ಸಲರು ಸ್ಫೋಟಿಸಿದ್ದರು. ಸೆ. 24 ರಂದು ಮೂಡಿಗೆರೆ ತಾಲ್ಲೂಕಿನ ಕಚೇರಿ ಗೋಡೆ ಮೇಲೆ ನಕ್ಸಲರು ಭಿತ್ತಿಪತ್ರ ಅಂಟಿಸಿದ್ದರು. ನ.4ರಂದು ಶೃಂಗೇರಿ ತಾಲ್ಲೂಕಿನ ತನಿಕೋಡು ಅರಣ್ಯ ತನಿಖಾ ಠಾಣೆ ಕಟ್ಟಡವನ್ನು ನಕ್ಸಲರು ಸ್ಫೋಟಿಸಿದ್ದರು.

2006: ಮೇ 30ರಂದು ಕೊಪ್ಪ ತಾಲ್ಲೂಕು ಹೆಗ್ಗಾರು ಕೊಡಿಗೆ ಕೃಷ್ಣನಾರಾಯಣಗೌಡ ಮನೆಗೆ 8 ನಕ್ಸಲರು ಭೇಟಿ ನೀಡಿ ಬಂದೂಕು ಅಪಹರಿಸಿದ್ದರು. ಆಗಸ್ಟ್ 23 ರಂದು ಶೃಂಗೇರಿ ತಾಲ್ಲೂಕು ಕೆರೆಕಟ್ಟೆ ಅರಣ್ಯ ಇಲಾಖೆ ವನ್ಯಜೀವಿ ವಿಭಾಗದ ಕಚೇರಿ ಮೇಲೆ ನಕ್ಸಲರು ದಾಳಿ ನಡೆಸಿ ಬೆಂಕಿ ಹಚ್ಚಿದ್ದರು. ಅರಣ್ಯ ಇಲಾಖೆ ವಾಹನ ಹಾಗೂ ಕಡತಗಳು ನಾಶವಾಗಿದ್ದವು. ಅ.12ರಂದು ಮೂಡಿಗೆರೆ ತಾಲ್ಲೂಕಿನ ಸಾರಗೋಡು-ಕುಂದೂರು ಬಳಿ ಚೆಕ್‌ಪೋಸ್ಟ್ ಮೇಲೆ ದಾಳಿ ನಡೆಸಿದ್ದರು. ಡಿಸೆಂಬರ್ 25ರಂದು ಶೃಂಗೇರಿ ತಾಲ್ಲೂಕಿನ ಕಿಗ್ಗ ಸಮೀಪದ ಕೆಸಮುಡಿಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ನಕ್ಸಲ್ ತಂಡದ ಬೆಳ್ತಂಗಡಿ ತಾಲ್ಲೂಕಿನ ನಾರಾವಿಯ ದಿನಕರ್ ಬಲಿಯಾಗಿದ್ದರು.

2007: ನಕ್ಸಲ್ ಶಂಕಿತ ಚನ್ನಮ್ಮ ಎಂಬುವರನ್ನು ಮಾ.13ರಂದು ಪೊಲೀಸರು ಬಂಧಿಸಿದ್ದರು. ಶೃಂಗೇರಿ ತಾಲ್ಲೂಕಿನ ಕಿಗ್ಗಾ ಸಮೀಪ ಗಂಡಘಟ್ಟದಲ್ಲಿ ಜೂನ್ 3ರಂದು ಕಾಂಗ್ರೆಸ್ ಮುಖಂಡ ವೆಂಕಟೇಶ್ ಅವರನ್ನು ನಕ್ಸಲರ ತಂಡ ಹತ್ಯೆ ಮಾಡಿತ್ತು. ಜುಲೈ 10 ರಂದು ಕೊಪ್ಪ ತಾಲ್ಲೂಕಿನ ಒಡೆಯರಮಠದ (ಮೆಣಸಿನಹಾಡ್ಯ) ಬಳಿ ನಡೆದ ಎನ್‌ಕೌಂಟರ್‌ಗೆ ನಕ್ಸಲ್ ಯುವಕ ಸಿಂಧನೂರಿನ ಗೌತಮ್, ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯಾಗಿದ್ದ ಪರಮೇಶ್ವರ್ ಮತ್ತು ಸುಂದರೇಶ್ ಹತ್ಯೆಯಾಗಿತ್ತು. ಅವರೊಂದಿಗೆ ಗ್ರಾಮಸ್ಥರಾದ ಕಾವೇರಮ್ಮ ಮತ್ತು ರಾಮೇಗೌಡ ಎಎನ್‌ಎಫ್ ಗುಂಡಿಗೆ ಬಲಿಯಾಗಿದ್ದರು. ಇದೇ ವೇಳೆ ಗುಂಡಿನ ಚಕಮಕಿಯಲ್ಲಿ ಸಬ್‌ಇನ್‌ಸ್ಪೆಕ್ಟರ್ ವೆಂಕಟೇಶ್ ಕೂಡ ಮೃತಪಟ್ಟಿದ್ದರು.

2008: ಹೊರನಾಡು ಸಮೀಪದ ಮಾವಿನಹೊಲ ಪ್ರದೇಶದಲ್ಲಿ ನ.19ರಂದು ನಡೆದ ಗುಂಡಿನ ಕಾಳಗದಲ್ಲಿ ನಕ್ಸಲರಾದ ರವಿ ದೇವಯ್ಯ ಮತ್ತು ಮನೋಹರ್ ಹತ್ಯೆಯಾಗಿತ್ತು. ಭಾಗಮಂಡಲದ ಕೆಎಸ್‌ಆರ್‌ಪಿ ಸಿಬ್ಬಂದಿ ಗುರುಪ್ರಸಾದ್ ಕೂಡ ಮೃತಪಟ್ಟಿದ್ದರು.

2010: ಮಾರ್ಚ್ 1ರಂದು ಕುಂದಾಪುರದ ಮುಟ್ಲುಪಾಡಿಯಲ್ಲಿ ಪೊಲೀಸ್ ಎನ್‌ಕೌಂಟರ್‌ನಲ್ಲಿ ಪಂಜಾಲು ಗ್ರಾಮದ ವಸಂತಗೌಡ ಅವರ ಹತ್ಯೆಯಾಯಿತು.

2011: ಕಬ್ಬಿನಾಲೆಯ ಸದಾಶಿವಗೌಡ ಎಂಬುವರನ್ನು ನಕ್ಸಲರು ಹತ್ಯೆ ಮಾಡಿದ್ದರು. ನಂತರ ಮಡಾಮಕ್ಕಿಯಲ್ಲಿ ಅರಣ್ಯ ಕಚೇರಿ ಹಾಗೂ ವಸತಿ ಗೃಹಗಳನ್ನು ನಕ್ಸಲರು ಧ್ವಂಸಗೊಳಿಸಿದ್ದರು. ಆಗುಂಬೆ ಸಮೀಪದ ಬಿದರಗೋಡು ಬಳಿ ಸರ್ಕಾರಿ ಬಸ್‌ಗೆ ಬೆಂಕಿ ಹಚ್ಚಿದ್ದರು.

2014: ಸುಬ್ರಹ್ಮಣ್ಯದ ಐನೆಕಿದು ಗ್ರಾಮದ ಅರಣ್ಯ ವ್ಯಾಪ್ತಿಯಲ್ಲಿ ಮನೆಗೆ ಶಂಕಿತ ನಕ್ಸಲರು ಭೇಟಿ ನೀಡಿದ್ದಾರೆ ಎಂಬ ಸುದ್ದಿಯ ನಂತರ ಎಎನ್‌ಎಫ್ ಕಾರ್ಯಾಚರಣೆಯನ್ನು ಕೈಗೆತ್ತಿಕೊಂಡಿತು.

2018: ಶಿರಾಡಿಯ ಮಿತ್ತಮಜಲು ಬಳಿ ಮೂರು ಮನೆಗಳಿಗೆ ಭೇಟಿ ನೀಡಿದ್ದರು.

2024: ನ.7ರಂದು ಉಡುಪಿಯ ಈದು ಗ್ರಾಮದಲ್ಲಿ ಶಂಕಿತ ನಕ್ಸಲರ ಚಲನವಲನ ಕಂಡುಬಂದ ನಂತರ ಎಎನ್‌ಎಫ್ ಕೂಂಬಿಂಗ್ ಅನ್ನು ತೀವ್ರಗೊಳಿಸಿತ್ತು. ನ.9ರಂದು ಚಿಕ್ಕಮಗಳೂರು ಜಿಲ್ಲೆಯ ಕಡೆಗುಂದಿ ಗ್ರಾಮದ ಮನೆಯೊಂದಕ್ಕೆ ಮುಂಡಗಾರು ಲತಾ ಮತ್ತು ಜಯಣ್ಣ ಭೇಟಿ ನೀಡಿದ್ದರಿಂದ ಭದ್ರತಾ ಸಿಬ್ಬಂದಿ ಶೋಧ ಕಾರ್ಯಾಚರಣೆಯನ್ನು ಮತ್ತಷ್ಟು ತೀವ್ರಗೊಳಿಸಿದ್ದರು.



ಸಾಕೇತ್ ರಾಜನ್ ಎನ್‌ಕೌಂಟರ್

2005ರ ಫೆ.6ರಂದು ಕೊಪ್ಪ ತಾಲ್ಲೂಕಿನ ಮೆಣಸಿನಹಾಡ್ಯದ ಬಲಿಗೆ ಬಳಿ ನಕ್ಸಲ್ ನಾಯಕ ಸಾಕೇತ್‌ರಾಜನ್ ಮತ್ತು ಶಿವಲಿಂಗು ಪೊಲೀಸರ ಗುಂಡಿಗೆ ಬಲಿಯಾಗಿದ್ದರು.

ಇದು ನಕ್ಸಲ್ ಚಳವಳಿಯ ಜಂಘಾಬಲವನ್ನೇ ಕುಸಿಯುವಂತೆ ಮಾಡಿತ್ತು. ಬಳಿಕ 2006ರಲ್ಲಿ ಅದೇ ಜಾಗದಲ್ಲಿ ನಕ್ಸಲರ ತಂಡ ಇಬ್ಬರ ಸ್ಮಾರಕ ನಿರ್ಮಿಸಿ ಶ್ರದ್ಧಾಂಜಲಿ ಸಲ್ಲಿಸಿತ್ತು. ಸಾಕೇತ್‌ರಾಜನ್ ಹತ್ಯೆ ಬಳಿಕ ಚಳವಳಿಗೆ ರಾಜ್ಯದಲ್ಲಿ ಹಿನ್ನಡೆಯಾಗಿತ್ತು

ಭಾರತದಲ್ಲಿ 'ಕೆಂಪು' ಕಾರಿಡಾರ್

10 2013ರಲ್ಲಿ ದೇಶದಲ್ಲಿದ್ದ ನಕ್ಸಲ್ ಪೀಡಿತ ರಾಜ್ಯಗಳು


126 2013ರಲ್ಲಿ ನಕ್ಸಲ್ ಪೀಡಿತ ಎಂದು ಗುರುತಿಸಲಾದ ಜಿಲ್ಲೆಗಳು

9 ಪ್ರಸ್ತುತ ದೇಶದಲ್ಲಿರುವ ನಕ್ಸಲ್ ಪೀಡಿತ ರಾಜ್ಯಗಳು

38 ಪ್ರಸ್ತುತ ದೇಶದಲ್ಲಿರುವ ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆ

647 ಐದು ವರ್ಷಗಳಲ್ಲಿ ದೇಶದ ವಿವಿಧ ಕಡೆಗಳಲ್ಲಿ ಭದ್ರತಾ ಪಡೆಗಳ ಕಾರ್ಯಾಚರಣೆ ವೇಳೆ ಮೃತಪಟ್ಟ ನಕ್ಸಲರು

207 ಐದು ವರ್ಷಗಳಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆ ವೇಳೆ ಹುತಾತ್ಮರಾದ ಭದ್ರತಾ ಸಿಬ್ಬಂದಿ



*ಈ ವರ್ಷದ ಜುಲೈವರೆಗಿನ ಮಾಹಿತಿ

ಊಟ ನೀಡಿದ್ದು ಮುಳುವಾಯಿತೇ...

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: 'ಬಂದೂಕುಧಾರಿಗಳಿಬ್ಬರು ರಾತ್ರಿ ಬಂದು ಊಟ ಕೇಳಿದರು ಕೊಟ್ಟೆವು. ಮರುದಿನವೂ ಅದೇ ಹೊತ್ತಿಗೆ ಬಂದು ಊಟ ಮಾಡಿದರು, ಇದೇ ನಮಗೆ ಮುಳುವಾಯಿತು...'

ನಕ್ಸಲರಿಬ್ಬರು ನ.9 ಮತ್ತು 10ರಂದು ಭೇಟಿ ನೀಡಿದ್ದ ಕೊಪ್ಪ ತಾಲ್ಲೂಕಿನ ಕಡೆಗುಂದಿ ಗ್ರಾಮದ ಸುಬ್ಬೇಗೌಡ ಕುಟುಂಬದ ಅಳಲು ಇದು.

ನಕ್ಸಲ್ ಚಳವಳಿಯಲ್ಲಿ ಸಕ್ರಿಯರಾಗಿದ್ದ ಮುಂಡಗಾರು ಲತಾ ಮತ್ತು ಜಯಣ್ಣ (ಜಾನ್) ಬಂದುಹೋದ ಜಾಡು ಹಿಡಿದು ನಕ್ಸಲ್ ನಿಗ್ರಹ ಪಡೆ (ಎಎನ್‌ಎಫ್) ಸಿಬ್ಬಂದಿ ಮತ್ತು ಪೊಲೀಸ್ ಅಧಿಕಾರಿಗಳು ವಾರವಿಡೀ ಸುಬ್ಬೇಗೌಡರ ಮನೆಯ ಹಟ್ಟಿ ಸವೆಸಿದ್ದರು. ಮನೆಯಲ್ಲಿದ್ದ ಎಲ್ಲಾ ವಸ್ತುಗಳನ್ನು ಜಾಲಾಡಿದ್ದರು. ಇದರಿಂದ ರೋಸಿ ಹೋಗಿದ್ದ ಸುಬ್ಬೇಗೌಡ ಮತ್ತು ಅವರ ಪತ್ನಿ ರತ್ನಾ ಅವರ ಮುಖದಲ್ಲಿ ಉತ್ಸಾಹ ಇಲ್ಲವಾಗಿತ್ತು. ಮೊದಲಿಗೆ ಮಾತನಾಡಲು ಹಿಂಜರಿದ ದಂಪತಿ ನಿಧಾನಕ್ಕೆ ತಮ್ಮ ಅಳಲು ಹೇಳಿಕೊಂಡರು.



ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಕಡೆಗುಂದಿಯ ಸುಬ್ಬೇಗೌಡರ ಮನೆ

'ನ.9ರಂದು ಶನಿವಾರ ಊಟ ಮುಗಿಸಿ ಟಿ.ವಿ ನೋಡುತ್ತಾ ಕುಳಿತಿದ್ದೆವು. ನೇರವಾಗಿ ಮನೆಯೊಳಗೆ ಬಂದ ಇಬ್ಬರು ಬಂದೂಕು ಹೊಂದಿದ್ದರು. ನಮ್ಮಿಂದ ನಿಮಗೆ ಏನೂ ತೊಂದರೆ ಆಗುವುದಿಲ್ಲ. ಊಟ ಮಾಡಿ ಹೋಗುತ್ತೇವೆ ಎಂದರು. ಅವರು ನಕ್ಸಲರು ಎಂಬುದು ನಮಗೆ ಅರ್ಥವಾಯಿತು. ಮನೆಯಲ್ಲಿದ್ದ ಅನ್ನ, ತರಕಾರಿ ಸಾರು ಬಡಿಸಿದೆವು, ಊಟ ಮಾಡಿ ಹೊರಟರು' ಎಂದು ರತ್ನಾ ಹೇಳಿದರು.

'ಮರುದಿನ ಅದೇ ಹೊತ್ತಿಗೆ ಮತ್ತೆ ಬಂದರು. ಭಾನುವಾರ ಆಗಿದ್ದರಿಂದ ಕೋಳಿ ಸಾರು ಮಾಡಿದ್ದೆವು. ಊಟ ಮುಗಿಸಿ ಹೊರಟರು. ಆ ದಿನ ಮಧ್ಯರಾತ್ರಿ ಪೊಲೀಸರು ಬಂದು ತಡಕಾಡಿದರು. ಮನೆಯಲ್ಲಿದ್ದ ಎಲ್ಲಾ ವಸ್ತುಗಳನ್ನು ಕೆದಕಿದರು. ಅನುಮಾನ ಬಂದ ವಸ್ತುಗಳನ್ನು (ಔಷಧಿ ಚೀಟಿ, ಔಷಧಿ ಬಾಟಲಿ) ಕೊಂಡೊಯ್ದರು' ಎಂದು ವಿವರಿಸಿದರು.

'ಮನೆಗೆ ಮೊದಲು ಬಂದಿದ್ದವರು ಯಾರು ಎಂಬುದು ಗೊತ್ತಿರಲಿಲ್ಲ. ಪೊಲೀಸರು ಬಂದು ಫೋಟೊಗಳನ್ನು ತೋರಿಸಿದ ಬಳಿಕ ಅವರು ಮುಂಡಗಾರು ಲತಾ ಮತ್ತು ಜಯಣ್ಣ ಎಂಬುದು ಗೊತ್ತಾಯಿತು. ನಡೆದ ವಿಷಯವನ್ನೆಲ್ಲಾ ಪೊಲೀಸರಿಗೆ ತಿಳಿಸಿದ್ದೇವೆ. ಊಟ ಹಾಕಿದ್ದೆ ನಮ್ಮ ತಪ್ಪು ಎಂಬಂತಾಗಿದೆ. ಬಂದೂಕು ಹೊಂದಿದ್ದವರಿಗೆ ಊಟ ಕೊಡುವುದಿಲ್ಲ ಎಂದು ಹೇಳಲು ಆಗಲಿಲ್ಲ' ಎಂದರು.

ವಾರದಿಂದ ವಿದ್ಯುತ್ ಕಡಿತ: 'ಅಂದಿನಿಂದ ವಿದ್ಯುತ್ ಕಡಿತಗೊಂಡಿದೆ. ನಮ್ಮ ಮನೆ ಮಾತ್ರವಲ್ಲ ಸುತ್ತಮುತ್ತಲ ಪ್ರದೇಶಕ್ಕೆ ವಿದ್ಯುತ್ ಸಂಪರ್ಕ ಇಲ್ಲ. ಕತ್ತಲಲ್ಲೇ ಜೀವನ ನಡೆಸುತ್ತಿದ್ದೇವೆ' ಎಂದು ರತ್ನಾ ಹೇಳಿದರು.

ಉಳಿದಿರುವುದು ಎಂಟೇ ಜನ

ಚಿಕ್ಕಮಗಳೂರು: 'ಕೇರಳದಲ್ಲಿದ್ದ ನಕ್ಸಲರ ತಂಡದಲ್ಲಿ ಬಹುತೇಕರ ಬಂಧನ, ರಾಷ್ಟ್ರ ಮಟ್ಟದಲ್ಲಿ ಕಾರ್ಯಕಾರಿ ಸಮಿತಿಯೊಂದಿಗೆ ಸಂಪರ್ಕ ಕಡಿತಗೊಂಡ ಬಳಿಕ ಕರ್ನಾಟಕದ ನಕ್ಸಲರು ಮತ್ತೆ ತಾಯ್ನಾಡಿನತ್ತ ಮರಳಲು ಯತ್ನಿಸಿದ್ದಾರೆ. ವಿಕ್ರಂ ಗೌಡ ಹತ್ಯೆ ಬಳಿಕ ಈಗ ದಕ್ಷಿಣ ಭಾರತದಲ್ಲಿ ಉಳಿದಿರುವುದು ಎಂಟು ನಕ್ಸಲರು ಮಾತ್ರ, ಅವರಲ್ಲಿ ಏಳು ಜನ ಈಗ ಉಡುಪಿ–ಚಿಕ್ಕಮಗಳೂರು ಜಿಲ್ಲೆಯಲ್ಲೇ ಇದ್ದಾರೆ' ಎಂದು ಹೇಳುತ್ತವೆ ಮೂಲಗಳು.

ಕೇರಳದ ನಕ್ಸಲ್ ನಾಯಕ ಸಂಜೊಯ್ ದೀಪಕ್, ಮೊಹಿಯುದ್ದೀನ್ ಸೇರಿ ಬಹುತೇಕರ ಬಂಧನವಾಯಿತು. ಅಲ್ಲಿ ಉಳಿದಿರುವುದು ಸಂತೋಷ್ ಮಾತ್ರ. ರಾಷ್ಟ್ರ ಮಟ್ಟದ ನಕ್ಸಲ್ ನಾಯಕರೊಂದಿಗೆ ಸಂಜೊಯ್ ದೀಪಕ್ ಸಂಪರ್ಕ ಹೊಂದಿದ್ದ. ಇವರ ಬಂಧನದ ಬಳಿಕ ಎಲ್ಲವೂ ಕಡಿತಗೊಂಡಿತು.

ವಯೋಸಹಜ ಅನಾರೋಗ್ಯವೂ ಉಳಿದವರನ್ನು ಕಾಡುತ್ತಿದೆ. ಕೇರಳದಲ್ಲಿ ಮುಂದುವರಿಯಲು ಯಾವುದೇ ಅವಕಾಶ ಇಲ್ಲದ್ದರಿಂದ 8 ಜನರ ತಂಡ ಕರ್ನಾಟಕದತ್ತ ಹೊರಟಿತು. ತಂಡದಲ್ಲಿ ಮುಂಡಗಾರು ಲತಾ, ಜಯಣ್ಣ (ಜಾನ್), ವನಜಾಕ್ಷಿ, ಸುಂದರಿ, ದಿಶಾ (ಕೇರಳ), ಕೋಟೆವುಂಡ ರವಿ, ರಮೇಶ್ (ತಮಿಳುನಾಡು), ವಿಕ್ರಂ ಗೌಡ ಸೇರಿ ಎಂಟು ಜನ ಇದ್ದರು. ಸಂತೋಷ್ ಎಲ್ಲಿದ್ದಾನೆ ಎಂಬ ಮಾಹಿತಿ ಇಲ್ಲ ಎಂದು ಮೂಲಗಳು ಖಚಿತಪಡಿಸಿವೆ.

ಎಂಟು ಜನ ಮಾರ್ಚ್‌ನಲ್ಲಿ ಕೊಡಗು ಜಿಲ್ಲೆಯಲ್ಲಿ ಕಾಣಿಸಿಕೊಂಡಿದ್ದು, ಒಂದು ಪ್ರಕರಣ ದಾಖಲಾಯಿತು. ನ. 7ರಂದು ಉಡುಪಿ ಜಿಲ್ಲೆಯಲ್ಲಿ ಕಾಣಿಸಿಕೊಂಡರು. ಮಾರ್ಚ್ 9 ಮತ್ತು 10ರಂದು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಕಡೆಗುಂದಿಯ ಮನೆಯೊಂದಕ್ಕೆ ಭೇಟಿ ನೀಡಿದ್ದರು. ಕೇರಳದಿಂದ ಕರ್ನಾಟಕದತ್ತ ತಂಡ ಹೊರಟಿದೆ ಎಂಬ ಮಾಹಿತಿ ಅರಿತು ನಕ್ಸಲ್ ನಿಗ್ರಹ ಪಡೆಯ (ಎಎನ್‌ಎಫ್) ಸಿಬ್ಬಂದಿ ನಿಗಾ ವಹಿಸಿದ್ದರು.

ಈ ಎಂಟರಲ್ಲಿ ಈಗ ವಿಕ್ರಂ ಗೌಡ ಹತ್ಯೆಯಾಗಿದೆ. ಉಳಿದವರು ಇದೇ ತಂಡದಲ್ಲಿ ಇದ್ದರು. ಕಡೆಗುಂದಿಯಲ್ಲಿ ಮುಂಡಗಾರು ಲತಾ ಮತ್ತು ಜಯಣ್ಣ ಮಾತ್ರ ಕಾಣಿಸಿಕೊಂಡಿದ್ದು, ಉಳಿದವರೂ ಸುತ್ತಮುತ್ತಲ ಕಾಡಿನಲ್ಲೇ ಇರಬಹುದು ಎಂಬ ಅನುಮಾನ ಇದೆ ಎಂದು ಮೂಲಗಳು ಹೇಳುತ್ತವೆ.

'ಮಲೆನಾಡಿನಲ್ಲಿ ಸರ್ಕಾರಿ ಭೂಮಿ ಒತ್ತುವರಿ ತೆರವಿಗೆ ಭಾರಿ ವಿರೋಧ ವ್ಯಕ್ತವಾಗುತ್ತಿದೆ. ಈ ಸಂದರ್ಭವನ್ನು ಬಳಸಿಕೊಂಡು ಚಳವಳಿ ಕಟ್ಟಲು ಸಾಧ್ಯವೆ ಎಂಬ ಬಗ್ಗೆಯೂ ನಕ್ಸಲ್ ತಂಡ ಆಲೋಚಿಸಿರಬಹುದು. ಸದ್ಯದಲ್ಲೇ ಈ ಎಲ್ಲ ನಕ್ಸಲರು ಸಿಕ್ಕಿಬೀಳುವ ಸಾಧ್ಯತೆಗಳಿವೆ. ತಾವಾಗಿಯೇ ಶರಣಾಗುವುದು ಉತ್ತಮ' ಎನ್ನುತ್ತವೆ ಈ ಮೂಲಗಳು.

'ವಿಕ್ರಂನಿಂದ ಜೈಲಿಗೆ ಹೋಗಬೇಕಾಯಿತು'

ಉಡುಪಿ: ವಿಕ್ರಂಗೆ ದುಡಿದು ತಿನ್ನು ಇದೆಲ್ಲ ಬೇಡ ಎಂದು ಬುದ್ಧಿವಾದ ಹೇಳಿದ್ದೆ. ಅವನು ಕೇಳಲಿಲ್ಲ. ಅವನಿಂದಾಗಿ ನಾನು, ನನ್ನ ಮಗ ಆರು ತಿಂಗಳು ಜೈಲುವಾಸ ಅನುಭವಿಸಬೇಕಾಯಿತು...

ಇದು ಪೊಲೀಸ್ ಎನ್‌ಕೌಂಟರ್‌ನಲ್ಲಿ ಹತನಾದ ನಕ್ಸಲ್ ನಾಯಕ ವಿಕ್ರಂ ಗೌಡನ ಸೋದರ ಮಾವ ಕರಿಯಗೌಡರ ನೋವಿನ ಮಾತು.

'ವಿಕ್ರಂ ನನ್ನ ತಂಗಿಯ ಮಗ, ಅವನಿಗೆ ಗಂಜಿಕೊಟ್ಟಿರುವ ಆರೋಪಕ್ಕಾಗಿ ನಾವು ಸೆರೆವಾಸ ಅನುಭವಿಸಬೇಕಾಯಿತು. ಅವನು ನಕ್ಸಲ್ ಚಟುವಟಿಕೆಯಲ್ಲಿದ್ದಾನೆ ಎಂಬುದು ತಿಳಿದ ಬಳಿಕ ನಾವು ಅವನ ಜೊತೆ ಸಂಪರ್ಕ ಇಟ್ಟುಕೊಂಡಿಲ್ಲ' ಎಂದರು.

'ಅವನಿಗೆ ಯಾವುದೇ ತೊಂದರೆ ಇರಲಿಲ್ಲ. ಮೈಮುರಿದು ದುಡಿದಿದ್ದರೆ ಉತ್ತಮ ಬದುಕು ಕಟ್ಟಿಕೊಳ್ಳಬಹುದಿತ್ತು. 20 ವರ್ಷಗಳಿಂದ ಆತ ಇಲ್ಲಿಗೆ ಬಂದಿಲ್ಲ. ಏಳು ವರ್ಷಗಳ ಹಿಂದೆ ಅವನ ತಾಯಿ ತೀರಿಕೊಂಡಾಗಲೂ ಬರಲಿಲ್ಲ' ಎಂದರು.

20 ವರ್ಷದ ಹಿಂದೆ ನಡೆದಿತ್ತು ಹತ್ಯಾಕಾಂಡ

ತುಮಕೂರು: ಆಂಧ್ರ ಗಡಿಭಾಗದಲ್ಲಿ ನಕ್ಸಲ್ ಚಟುವಟಿಕೆ ತೀವ್ರ ಸ್ವರೂಪ ಪಡೆದುಕೊಂಡಿದ್ದ ಸಂದರ್ಭದಲ್ಲಿ ನಡೆದ ನಕ್ಸಲ್ ದಾಳಿಯಲ್ಲಿ ಏಳು ಪೊಲೀಸರು ಸೇರಿ ಎಂಟು ಜನ ಹತರಾಗಿದ್ದರು. 2005ರ ಫೆಬ್ರುವರಿ 10ರಂದು ರಾತ್ರಿ ಪಾವಗಡ ತಾಲ್ಲೂಕಿನ ನಾಗಲಮಡಿಕೆ ಹೋಬಳಿ ವೆಂಕಟಮ್ಮನಹಳ್ಳಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಬೀಡುಬಿಟ್ಟಿದ್ದ ಕೆಎಸ್‌ಆರ್‌ಪಿ 9ನೇ ಕ್ಯಾಂಪ್ ಸಿಬ್ಬಂದಿ ಮೇಲೆ ನಕ್ಸಲರು ದಾಳಿ ನಡೆಸಿದ್ದರು. 300ಕ್ಕೂ ಹೆಚ್ಚು ನಕ್ಸಲರ ತಂಡ ಒಮ್ಮೆಲೇ ದಾಳಿ ನಡೆಸಿತ್ತು.

ಪೊಲೀಸರ ಬಳಿ ಇದ್ದ ಬಂದೂಕು, ಮದ್ದು ಗುಂಡುಗಳನ್ನು ದೋಚಿದ್ದರು. ನಂತರ ಮನ ಬಂದಂತೆ ಗುಂಡು ಹಾರಿಸಿದ್ದರು. ಇದರಲ್ಲಿ ಒಬ್ಬ ಖಾಸಗಿ ಬಸ್ ಕ್ಲೀನರ್ ಹಾಗೂ ಏಳು ಪೊಲೀಸರು ಮೃತಪಟ್ಟಿದ್ದರು.



ಬಂಗಾಳದ ನಕ್ಸಲ್ಬರಿಯಲ್ಲಿ ಆರಂಭವಾಗಿದ್ದ ನಕ್ಸಲಿಸಂ

ಪಶ್ಚಿಮ ಬಂಗಾಳದ ನಕ್ಸಲ್ಬರಿ ಎನ್ನುವ ಹಳ್ಳಿಯಲ್ಲಿ 1967ರಲ್ಲಿ ಕೃಷಿ ಕೂಲಿ ಕಾರ್ಮಿಕರು ಭೂಮಾಲೀಕರ ವಿರುದ್ಧ ಸಿಡಿದೆದ್ದು, ಸಶಸ್ತ್ರ ಹೋರಾಟದ ಘೋಷಣೆ ಮೊಳಗಿಸಿದರು. ಆ ಹಿಂಸಾತ್ಮಕ ಹೋರಾಟದ ನೇತೃತ್ವ ವಹಿಸಿದ್ದು ರಷ್ಯಾ ಹಾಗೂ ಚೀನಾದ ಹೋರಾಟದ ಮಾದರಿಯಿಂದ ಪ್ರಭಾವಿತರಾಗಿದ್ದ ಕಮ್ಯುನಿಸ್ಟ್ ಮುಖಂಡರಾಗಿದ್ದ ಚಾರು ಮಜುಂದಾರ್. ಮುಂದಿನ ದಿನಗಳಲ್ಲಿ ಅವರೊಂದಿಗೆ ಕನು ಸನ್ಯಾಲ್ ಮತ್ತು ಜಂಗಲ್ ಸಂತಾಲ್ ಅವರು ಸೇರಿದರು. ಈ ಹೋರಾಟ 'ನಕ್ಸಲಿಸಂ' ಎಂದು, ಹೋರಾಟಗಾರರನ್ನು 'ನಕ್ಸಲೀಯರು' ಎಂದು ಕರೆಯಲಾಯಿತು. ಮುಂದೆ ಈ ಹೋರಾಟದ ಮಾದರಿ ಇಡೀ ರಾಜ್ಯಕ್ಕೆ ಮತ್ತು ದೇಶದ ವಿವಿಧ ಭಾಗಗಳಿಗೆ ಹರಡಿತು. ವಿವಿಧ ಪಕ್ಷ, ಗುಂಪುಗಳ ಅಡಿಯಲ್ಲಿ ದೇಶದ ವಿವಿಧ ಭಾಗಗಳಲ್ಲಿ ಸಕ್ರಿಯವಾಗಿದ್ದವರೆಲ್ಲ 1969ರಲ್ಲಿ ಸಿಪಿಐ (ಎಂಎಲ್) ಪಕ್ಷ ಸ್ಥಾಪಿಸಿದರು.

ಪ್ರಸ್ತುತ ನಕ್ಸಲೀಯರು ಜಾರ್ಖಂಡ್, ಕೇರಳ, ತೆಲಂಗಾಣ, ಆಂಧ್ರಪ್ರದೇಶ ಸೇರಿದಂತೆ ದೇಶದ 9 ರಾಜ್ಯಗಳ 38 ಜಿಲ್ಲೆಗಳಲ್ಲಿ ವ್ಯಾಪಿಸಿದ್ದಾರೆ. ಛತ್ತೀಸಗಢದ ಬಸ್ತಾರ್ ಅರಣ್ಯ ಪ್ರದೇಶ ನಕ್ಸಲೀಯರ ಪ್ರಮುಖ ಅಡಗುದಾಣವಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಕ್ಸಲೀಯರನ್ನು ಉಗ್ರವಾದಿಗಳು ಎಂದು ಪರಿಗಣಿಸುತ್ತಿದ್ದು, ನಕ್ಸಲಿಸಂ ಎನ್ನುವುದು ಒಂದು ಕಾನೂನು ಸುವ್ಯವಸ್ಥೆಯ ಸಮಸ್ಯೆ ಎಂದು ನೋಡುತ್ತಿವೆ. ಆದರ ಜತೆಗೆ, ಇದನ್ನು ಒಂದು ಸಾಮಾಜಿಕ ಆರ್ಥಿಕ ಸಮಸ್ಯೆ ಎಂದೂ ಪರಿಗಣಿಸಿದರೆ, ಈ ಸಮಸ್ಯೆ ಪರಿಹಾರವಾಗುತ್ತದೆ ಎನ್ನುವುದು ಒಂದು ವರ್ಗದ ವಾದ.

ಮನಸ್ಸು ಕಸದ ಬುಟ್ಟಿ ಅಲ್ಲ!



ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ 70

ದಯಾನಂದ ಸರಸ್ವತಿ ಅಂತ ಒಬ್ಬರು ಸಂತರು ಇದ್ದರು. ಅವರು ಆರ್ಯ ಸಮಾಜವನ್ನು ಕಟ್ಟಿದರು. ಅವರು ಹೋದಲೆಲ್ಲ ಮೂರ್ತಿ ಪೂಜೆ ಮಾಡಬೇಡಿ ಅಂತಿದ್ದರು. ಕಾಶಿಗೆ ಹೋದರು. ಅಲ್ಲಿ ಬಹಳ ಜನ ಇವರ ಪ್ರಭಾವಕ್ಕೆ ಒಳಗಾಗಿ ಮೂರ್ತಿ ಪೂಜೆ ಮಾಡೋದು ಬಿಟ್ಟರು. ದೇವರ ಗುಡಿಗೆ ಹೋಗೋದು ಬಿಟ್ಟರು. ದೇವರ ಗುಡಿಯ ಅರ್ಚಕನಿಗೆ ಇದರಿಂದ ತ್ರಾಸಾಗಕೆ ಹತ್ತಿತು. ಜನ ದೇವರು ಗುಡಿಗೆ ಬಂದರೆ ನಾಲ್ಕು ಕಾಸು ಹಾಕುತ್ತಿದ್ದರು. ಅವನ ಜೀವನ ನಡೀತಿತ್ತು. ದಯಾನಂದ ಸರಸ್ವತಿ ಅವರು ಗಂಗಾನದಿಯಲ್ಲಿ ಸ್ನಾನ ಮಾಡಲು ಹೋಗುವಾಗ ಮತ್ತು ಬರುವಾಗ ಗುಡಿಯ ಮುಂದೇ ಹೋಗಿ ಬಂದು ಮಾಡುತ್ತಿದ್ದರು. ಇವರು ಸ್ನಾನಕ್ಕೆ ಹೋಗುವಾಗ ಒಮ್ಮೆ ಅರ್ಚಕ ಬೈತಿದ್ದ, ಬರುವಾಗಲೂ ಬೈತಿದ್ದ. ಪ್ರತಿ ನಿತ್ಯ ಇದು ನಡೀತಿತ್ತು. ದಯಾನಂದ ಸರಸ್ವತಿ ಅವರ ನಿಯಮ ಏನೆಂದರೆ ಪ್ರತಿ ನಿತ್ಯ ಯಾರಿಗಾದರೂ ಪ್ರಸಾದ ಮಾಡಿಸಿ ನಂತರ ತಾವು ಊಟ ಮಾಡುತ್ತಿದ್ದರು. ಒಂದಿನ ಯಾರೂ ಅತಿಥಿ ಸಿಗಲಿಲ್ಲ. ಈ ಅರ್ಚಕನಿಗೇ ಕರೆದು 'ನೀವು ನಮ್ಮ ಮನೆಯ ಅತಿಥಿಯಾಗಬೇಕು' ಎಂದರು. ಅವನಿಗೆ ಭಯ ಆಯಿತು. 'ನಾನು ದಿನಾ ಬೈತೀನಿ. ಆದರೂ ಇವ ನನ್ನ ಅತಿಥಿ ಅಂತ ಕರದಾರ ಅಂದ್ರ ಮನೆಗೆ ಕರೆದು ಹೊಡೀತಾರ' ಅಂದುಕೊಂಡ. ಆದರೂ ಧೈರ್ಯ ಮಾಡಿ ಮನೀಗೆ ಹೋದ.

ಅವನನ್ನು ಸ್ವಾಗತಿಸಿದ ದಯಾನಂದ ಸರಸ್ವತಿ ಅವರು ಕುರ್ಚಿ ಹಾಕಿ ಕುಳ್ಳಿರಿಸಿ ಹಾಲು ಹಣ್ಣು ಕೊಟ್ಟರು. ನಂತರ ಕೈ ಮುಗಿದು 'ನೀವು ನನ್ನ ಮನೆಯ ಅತಿಥಿಗಳಾಗಿ ನನ್ನನ್ನು ಕೃತಾರ್ಥನನ್ನಾಗಿ ಮಾಡಿದಿರಿ' ಅಂದರು. ಅರ್ಚಕನಿಗೆ ಆಶ್ಚರ್ಯವಾಯಿತು. 'ಒಂದು ಮಾತು ಕೇಳಲೇನು?' ಎಂದ. 'ಕೇಳಿ' ಎಂದರು. 'ನೀವು ಸ್ನಾನಕ್ಕೆ ಹೋಗುವಾಗ ಮತ್ತು ಬರುವಾಗ ಕೆಟ್ಟ ಕೆಟ್ಟ ಶಬ್ದಗಳಿಂದ ನಿಮ್ಮನ್ನು ಬೈದೀನಿ. ಅದನ್ನು ನೀವು ತಲೆಗೆ ಹಚ್ಚಿಕೊಂಡಿಲ್ಲೇನು?' ಎಂದು ಕೇಳಿದ. ಅದಕ್ಕೆ ದಯಾನಂದ ಸರಸ್ವತಿ 'ನೋಡು ಮಾರಾಯ, ದೇವನು ಕೊಟ್ಟ ತಲೆಯೊಳಗೆ ಒಳ್ಳೆಯ ವಿಚಾರಗಳನ್ನು ಇಟ್ಟುಕೊಳ್ಳುವುದಕ್ಕೇ ಜಾಗ ಇಲ್ಲ. ಇನ್ನು ನಿನ್ನ ಬೈಗುಳಕ್ಕೆ ಎಲ್ಲಿ ಜಾಗ ಕೊಡಲಿ' ಎಂದರು. ಜೀವನ ಸುಂದರ ಆಗಬೇಕು ಎಂದರೆ ನಿಮ್ಮ ತಲೆಯಲ್ಲಿ ಬೈಗುಳಕ್ಕೆ ಜಾಗ ಕೊಡದೆ ಒಳ್ಳೆಯ ವಿಚಾರಕ್ಕೆ ಜಾಗ ಕೊಡಿ ಅಷ್ಟೆ.

ಒಂದು ಸಣ್ಣ ಮಾತು ನಮ್ಮನ್ನು ಆಳುತ್ತವೆ. ಬಸವಣ್ಣನವರು 'ಬೈದವರು ಎನ್ನ ಬಂಧುಗಳು' ಎಂದು ಹೇಳಿದರು. ಶರಣರ ಮಾತುಗಳು ನಮ್ಮನ್ನು ಆಳುವುದಿಲ್ಲ. ಎಲ್ಲ ಕೆಟ್ಟ ಶಬ್ದಗಳನ್ನು ತಲೆಯಲ್ಲಿ ಇಟ್ಟುಕೊಂಡರೆ ತಲೆ ಎನ್ನುವುದು ಕಸದ ಬುಟ್ಟಿ ಆಗುತ್ತದೆ. ನಿನ್ನೆ ಮೊನ್ನೆ ಮಾಡಿದ ಹಳಸಿದ ಅಡುಗೆ ಉಂಡರೆ ಹೊಟ್ಟೆ ಕೆಡತೈತಿ ಅಂತ ನಮಗೆ ಗೊತ್ತೈತಿ. ಅದೇ ರೀತಿ ನಿನ್ನೆಯೋ ಮೊನ್ನೆಯೋ ಯಾರೋ ಆಡಿದ ಕೆಟ್ಟ ಮಾತುಗಳನ್ನು ತಲೆಯಲ್ಲಿ ಇಟ್ಟುಕೊಂಡರೆ ತಲೆ ಕೆಡುತೈತಿ ಅನ್ನೋದು ಗೊತ್ತಾಗೋದಿಲ್ಲ ಅಂದರೆ ಹ್ಯಾಂಗ? ಹಳಸಿದ ಅನ್ನ ಹೊಟ್ಟೆ ಕೆಡತೈತಿ, ಹಳಸಿದ ಮಾತು ತಲೆ ಕೆಡತೈತಿ ಇದೇ ಜ್ಞಾನ. ಇದೇ ಭಕ್ತಿ. ಚಲೋದು ಸ್ವೀಕಾರ ಮಾಡೋದು. ಅದೇ ಜ್ಞಾನ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ನವೆಂಬರ್ 20, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಪಂಚಮಿ ಗಂ. 16-50 ನಕ್ಷತ್ರ: ಪುನರ್ವಸು ಗಂ. 14-51 ಯೋಗ: ಶುಭ ಗಂ. 13-08 ಕರಣ: ತೈತಿಲ ಗಂ. 16-50, ವೃಶ್ಚಿಕ ಮಾಸದ 04 ನೇ ದಿನ, ಮಳೆನಕ್ಷತ್ರ: ಅನುರಾಧ 1.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-36 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 17 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 7, 5

ಮೇಷ: ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯಸಮ್ಮತವಾಗಿ ಬಗೆಹರಿಸಿಕೊಳ್ಳುವಿರಿ. ಶುಭಕಾರ್ಯಗಳಿಗಾಗಿ ಅಥವಾ ಕ್ಷೇತ್ರ ದರ್ಶನಕ್ಕಾಗಿ ಖರ್ಚಿನ ಸಂಭವವಿರುವುದು. ಬೇಡಿಕೆಯ ಅರ್ಜಿಗಳಿಗೆ ಪ್ರೋತ್ಸಾಹ ಸಿಗುವುದು.

ವೃಷಭ: ವಾಣಿಜ್ಯೋದ್ಯಮಿಗಳಿಗೆ ಉದ್ಯೋಗಕ್ಕೆ ಸಂಬಂಧಿಸಿದಂತೆ ವಿಶೇಷ ಅನುಭವ ಉಂಟಾಗುವುದು. ಅವಿವಾಹಿತರಿಗೆ ಉತ್ತಮ ಸಂಬಂಧ ಅರಸಿ ಬರುವುದು. ಮಕ್ಕಳ ಓದಿನ ಕಡೆ ಹೆಚ್ಚು ನಿಗಾವಹಿಸುವುದು ಉತ್ತಮ.

ಮಿಥುನ: ಅನಿವಾರ್ಯವಾಗಿ ನಿವೇಶನ ಮಾರುವ ಪರಿಸ್ಥಿತಿ ಎದುರಾದರೂ ಉತ್ತಮ ಲಾಭ ಪಡೆಯುವಿರಿ. ಅತಿಥಿಗಳ ಆತಿಥ್ಯಕ್ಕಾಗಿ ಖರ್ಚು ಮಾಡುವಲ್ಲಿ ಧಾರಾಳತನ ವ್ಯಕ್ತಪಡಿಸುವಿರಿ. ಮನೆಯಲ್ಲಿ ಹೊಂದಾಣಿಕೆ ಅಗತ್ಯ ಎನಿಸಲಿದೆ.

ಕರ್ಕಾಟಕ: ಮುಕ್ತ ಮಾತುಕತೆ ಮೂಲಕ ಕಾರ್ಮಿಕರಲ್ಲಿನ ಸಮಸ್ಯೆ ಬಗೆಹರಿಸಿಕೊಳ್ಳಿರಿ. ಕೃಷಿ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ. ಕೆಲಸ ಕಾರ್ಯಗಳು ಲಾಭಯುಕ್ತವಾಗಿ ಪೂರೈಸುವುದು.

ಸಿಂಹ: ನಾಜೂಕಿನ ಮಾತುಗಳು ಅಥವಾ ಹಿತವಚನಗಳು ಸಹೋದ್ಯೋಗಿಯನ್ನು ಧೈರ್ಯದಿಂದ ಇರುವಂತೆ ಮಾಡಲಿದೆ. ಅಕ್ಕಪಕ್ಕದವರೊಂದಿಗೆ ಇದ್ದಂಥ ವಿವಾದಗಳು ಹಂತ ಹಂತವಾಗಿ ಸರಿಯಾಗಲಿವೆ.

ಕನ್ಯಾ: ಕೆಲವು ಸೂಕ್ಷ್ಮವಾದ ಸನ್ನಿವೇಶಗಳು ಸಂಕುಚಿತ ಮನೋಭಾವನೆಯನ್ನು ದೂರಮಾಡಿ, ಎಲ್ಲವನ್ನೂ ಎದುರಿಸುವ ಮನೋಸ್ಥೈರ್ಯವನ್ನು ತಂದು ಕೊಡುವುದು.

ತುಲಾ: ಒಂದೇ ವಿಷಯದಲ್ಲಿ ಹಲವರ ಸಲಹೆ ಕೇಳುವುದು ಸರಿಯಾದರೂ ನಿಮ್ಮ ವಿಷಯದಲ್ಲಿ ಅದು ಹಲವು ಗೊಂದಲಗಳನ್ನು ಸೃಷ್ಟಿ ಮಾಡಬಹುದು. ಆಧ್ಯಾತ್ಮಿಕ ವಿಚಾರಗಳ ಪುಸ್ತಕ ಕೊಳ್ಳಲು ಧನ ವಿನಿಯೋಗವಾಗುವುದು.

ವೃಶ್ಚಿಕ: ಮನೆಯ ಹಿರಿಯರೊಬ್ಬರ ಮಧ್ಯಸ್ಥಿಕೆಯಿಂದ ನೆಂಟಸ್ತಿಕೆಯಲ್ಲಿ ಸಂಬಂಧ ಕೂಡಿ ಬರುವುದು. ನಿರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು ಸಂಗಾತಿಯಲ್ಲಿ ಒಪ್ಪಿಗೆ ಪಡೆಯಿರಿ. ದೇಹಾಯಾಸ ನಿರಾಸಕ್ತಿ ಮೂಡಿಸುತ್ತದೆ.

ಧನು: ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ಹೆಚ್ಚಿನ ಶ್ರಮ ಅಗತ್ಯವೆನಿಸುವುದು. ವಿಷಯಗಳನ್ನು ಗೌಪ್ಯವಾಗಿ ಇರಿಸಿದಲ್ಲಿ ಭವಿಷ್ಯದಲ್ಲಿ ತೊಂದರೆಯನ್ನು ಅನುಭವಿಸುವಂತೆ ಆಗುವುದು.

ಮಕರ: ಬರಲಿರುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವ ವಿಚಾರದಲ್ಲಿ ವಿಫಲರಾಗುವಿರಿ. ತುಮುಲಗಳನ್ನು ಮನಸ್ಸಿಗೆ ಹತ್ತಿರವಾದವರಲ್ಲಿ ಹೇಳಿಕೊಳ್ಳುವುದರಿಂದಾಗಿ ಮನಸ್ಸಿನ ಭಾರ ಕಡಿಮೆಯಾಗುವುದು.

ಕುಂಭ: ಬ್ಯಾಂಕ್ ನೌಕರರಿಗೆ ಕೆಲಸಗಳಲ್ಲಿ ಒತ್ತಡ ಕಡಿಮೆಯಾಗಿ ನೆಮ್ಮದಿಯು ಸಿಗುವುದು. ಸಣ್ಣ ವಿಚಾರಗಳನ್ನು ದೊಡ್ಡದಾಗಿ ಪರಿಗಣಿಸಿ ನಿರ್ಧಾರ ತೆಗೆದುಕೊಳ್ಳಬೇಡಿ. ಸಾಮಾಜಿಕ ಕಾರ್ಯದಲ್ಲಿ ಆಸಕ್ತಿ ಹೆಚ್ಚುವುದು.


ಮೀನ: ಅಂದುಕೊಂಡಿರುವ ಕೆಲಸಗಳನ್ನು ಉತ್ತಮವಾಗಿ ನೆರವೇರುವುದರಿಂದ ನೆಮ್ಮದಿ ಇರುವುದು. ಸಂಜೆಯ ಸಮಯದಲ್ಲಿ ಶಿರೋ ವೇದನದಿಂದ ಬಳಲುವ ಸಾಧ್ಯತೆ ಇರುವುದು. ಹೊಸದನ್ನು ಕಲಿಯುವ ಆಸೆಗಳು ಹೆಚ್ಚಲಿವೆ.

ಪದಬಂಧ 5867

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಂದಿಗೆಲ್ಲಾ ತಿಳಿದಿರುವ ಪ್ರಸಿದ್ಧ ವಿಷಯ (5)
3.ನೂರರ ಮೊತ್ತ (3)
5.ನಿಯೋಗವಿದ್ದರೆ ಮಾತ್ರ ಒಳ್ಳೆಯದಕ್ಕೆ ವ್ಯಯ! (5)
7.ನಗರದಲ್ಲಿ ಬಾರಿಸಿದ ಚರ್ಮವಾದ್ಯ ತಿರುವುಮುರುವಾಗಿದೆ (3)
9.ಆನೆ ನಡಿಗೆಯಿದು (5)
12.ದೇವಾಲಯಗಳ ಗೋಪುರ ಉಲ್ಟಾ ಆಗಿದೆ (3)
14.ಪ್ರಾಣವಾಯು ಇಲ್ಲಿದೆ (5)
16.ನಿಸ್ಸಾರವಾದುದು ಅಥವಾ ಗಸಿ (3)
17.ಕೆಟ್ಟ ಉದ್ದೇಶಕ್ಕೆ ಬಳಕೆಯಾಗಿರುವುದು (5)

ಮೇಲಿಂದ ಕೆಳಕ್ಕೆ
1.ಜರಿ ಸೀರೆಯಲ್ಲಿರುವುದು ತುಂಬಾ ಬೆಲೆಯುಳ್ಳ ಮಣಿ (4)
2.ಎಳೆದುಕೊಂಡಿರುವ ಉಸಿರನ್ನು ಹೊರಕ್ಕೆಬಿಡುವುದು (3)
4.ಅಂತರಂಗದ ಹೊಯ್ದಾಟದಲ್ಲಿ ಕಾಣಿಸಿರುವ ಅಲೆ (3)
6.ಯಮನಿದ್ದರೆ ಈ ಕಟ್ಟುಪಾಡು! (3)
8.ನಗರದಲ್ಲಿ ಖರೀದಿಸಿರುವ ಆಭರಣ (2)
10.ನೀರಿನಲ್ಲಿ ಹುಟ್ಟಿರುವುದು (3)
11. ನಮ್ಮೂರಲ್ಲಿರುವ ಮನುಷ್ಯ (2)
13. ಕಲ್ಲಿನ ಆಯುಧಗಳನ್ನು ಬಳಸುತ್ತಿದ್ದ ಕಾಲ (4)
14.ಕೈ ಕೊನೆಗಿಟ್ಟರೆ ಗಣಿ ಕಾಣುವುದೇ? (3)
15.ಕರುವಿನಲ್ಲಿರುವ ತೆನೆ (3)



5866ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಂಕ 5.ಸಮಂಜಸ
9.ರಾವುತ 10.ತವರೂರು
12.ಪ್ರಾಯ 13.ಹಾರ
14.ಅಡಮಾನ 16.ಉಗಹ
17.ಮದಗಜ 20.ಲಜ್ಜೆ

ಮೇಲಿಂದ ಕೆಳಕ್ಕೆ:
2.ಕಸ 3.ಹುಂಜ
4.ಪರಾಜಯ 5.ಸತತ
7.ಮಂಜೂರು 8.ಸದಾಚಾರ
11.ವರ್ದಮಾ 12.ಪ್ರಾಣಾಯಾಮ
13.ಹಾಲಾಹಲ 14.ಅಣುಗ
15.ನಲುಗು 18.ದರ
19.ಜಲ

ಸುಡೊಕು 6252

	4				1		2	
8		7		3				9
	2	5			9		8	3
	6					3		8
	7	4	1	8	3			
3						5		1
	8		3		4		1	5
		1		9		8		4
4	3		5			2		


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6251 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,453
ಇಂದಿನ ಅಂತ್ಯ	23,518
▲	64
ದಿನದ ಗರಿಷ್ಠ	23,780

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100ಕ್ಕೆ	₹585
12 ಕ್ಕೆ	₹75

ಮೈಸೂರು

100ಕ್ಕೆ	₹587

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹339-595

ದ್ವಿತಳಿ (ಬಿ.ವಿ) ₹333-766

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹178

ಆರ್‌ಎಸ್‌ಎಸ್-5 ₹172

ಗುಡ್ ಲಾಟ್ ₹168

(ಪ್ರತಿ ಕೆ.ಜಿಗೆ)

ದೇಶದ ಶೇ 30ರಷ್ಟು ಮಣ್ಣಿನ ಫಲವತ್ತತೆ ನಾಶ: ಕೇಂದ್ರ



ನವದೆಹಲಿ (ಪಿಟಿಐ): 'ದೇಶದ ಭೂಪ್ರದೇಶದಲ್ಲಿರುವ ಶೇ 30ರಷ್ಟು ಮಣ್ಣಿನ ಫಲವತ್ತತೆ ನಾಶವಾಗಿದೆ. ಸುಸ್ಥಿರ ಕೃಷಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಮಣ್ಣಿನ ಗುಣಮಟ್ಟದ ನಿರ್ವಹಣೆಗೆ ತುರ್ತು ಕ್ರಮ ಕೈಗೊಳ್ಳಬೇಕಿದೆ' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

ಮಣ್ಣಿನ ಸಂರಕ್ಷಣೆ ಬಗ್ಗೆ ಮಂಗಳವಾರ ಹಮ್ಮಿಕೊಂಡಿದ್ದ ಜಾಗತಿಕ ಸಮಾವೇಶದಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, ಶೂನ್ಯ ಹಸಿವು ಸೇರಿ ಸುಸ್ಥಿರ ಅಭಿವೃದ್ಧಿಯ ಗುರಿ ಸಾಧನೆಗೆ ಮಣ್ಣಿನ ಆರೋಗ್ಯವು ನಿರ್ಣಾಯಕವಾಗಿದೆ ಎಂದು ಹೇಳಿದರು.

ದೇಶದಲ್ಲಿ ಪ್ರತಿ ವರ್ಷ 330 ದಶಲಕ್ಷ ಟನ್ ಆಹಾರ ಧಾನ್ಯಗಳನ್ನು ಬೆಳೆಯಲಾಗುತ್ತದೆ. ₹4.22 ಲಕ್ಷ ಕೋಟಿ ಮೌಲ್ಯದ ಆಹಾರ ಧಾನ್ಯಗಳನ್ನು ರಫ್ತು ಮಾಡಲಾಗುತ್ತದೆ ಎಂದು ವಿವರಿಸಿದರು.

ಅತಿಯಾದ ರಸಗೊಬ್ಬರ ಬಳಕೆ, ನೈಸರ್ಗಿಕ ಸಂಪನ್ಮೂಲಗಳ ದುರ್ಬಳಕೆ ಹಾಗೂ ಮಣ್ಣಿನ ಅವೈಜ್ಞಾನಿಕ ನಿರ್ವಹಣೆಯೇ ಫಲವತ್ತತೆ ಕಳೆದುಕೊಳ್ಳಲು ಕಾರಣ ಎಂದರು. ರೈತರಿಗೆ ಸಣ್ಣ ನೀರಾವರಿ, ಸಾವಯವ ಮತ್ತು ನೈಸರ್ಗಿಕ ಕೃಷಿ ವಿಧಾನಕ್ಕೆ ಅನುಕೂಲ ಕಲ್ಪಿಸಲು 22 ಕೋಟಿ ಮಣ್ಣಿನ ಆರೋಗ್ಯ ಕಾರ್ಡ್ ವಿತರಿಸಲಾಗಿದೆ ಎಂದು ಹೇಳಿದರು.

ಅಡಿಕೆ ಧಾರಣೆ (₹ಗಳಲ್ಲಿ)

ಮಾರುಕಟ್ಟೆ	ತಳಿ	ಧಾರಣೆ
ಬಂಟ್ವಾಳ	ಕೋಕ	20000-27500
	ಹೊಸತು	30000-33500
	ಹಳತು	43000-50000
ಕಾರ್ಕಳ	ಹೊಸತು	25000-33000
	ಹಳತು	30000-50000
ಪುತ್ತೂರು	ಹೊಸತು	25000-33500
ಸಾಗರ	ಬಿಳಿಗೋಟು	21989-25699
	ಚಾಲಿ	30500-32199
	ಕೋಕ	23189-24289
	ರಾಶಿ	30099-47419
	ಸಿಪ್ಪೆಗೋಟು	15699-16325
ಶಿವಮೊಗ್ಗ	ಬೆಟ್ಟೆ	48799-57359
	ಗೊರಬಲು	17009-32159
	ರಾಶಿ	33000-49898
	ಸರಕು	46000-90699
ಸಿದ್ದಾಪುರ	ಬಿಳಿಗೋಟು	24319-27899
	ಚಾಲಿ	32099-35699
	ಕೋಕ	20689-25819
	ಕೆಂಪುಗೋಟು	21109-27689
	ರಾಶಿ	42099-46309
	ತಟ್ಟಿಬೆಟ್ಟೆ	27119-36189
ಶಿರಸಿ	ಬೆಟ್ಟೆ	30299-36749
	ಬಿಳಿಗೋಟು	24199-29600
	ಚಾಲಿ	33118-36561
	ರಾಶಿ	40318-45899
ಯಲ್ಲಾಪುರ	ಅಪಿ	60899-61279
	ಬಿಳಿಗೋಟು	15600-28600
	ಚಾಲಿ	29199-36315
	ಕೋಕ	4899-15109
	ಕೆಂಪುಗೋಟು	15109-24919
	ರಾಶಿ	38899-57115
	ತಟ್ಟಿಬೆಟ್ಟೆ	25399-35595

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹19100
ಎಸಿ	₹11070
ಆರ್‌ಪಿ	₹19000
ಆರ್‌ಸಿ	₹10790

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹6000-9000
ಮಧುಗಿರಿ	₹12000-14000
ತುರುವೇಕೆರೆ	₹14600-14600

ರಷ್ಯಾ–ಉಕ್ರೇನ್ ಯುದ್ಧ ಸಾವಿರ ದಿನ ಪೂರ್ಣ

ಕೀವ್(ಎಪಿ): ಉಕ್ರೇನ್ ಮತ್ತು ರಷ್ಯಾ ನಡುವಿನ ಯುದ್ಧಕ್ಕೆ 1,000 ದಿನ ತುಂಬಿದೆ. ಈ ನಡುವೆ, ಮೂರು ದಿನಗಳಲ್ಲಿ ಮೂರನೇ ಬಾರಿ ರಷ್ಯಾ ಪಡೆಗಳು ನಡೆಸಿರುವ ದಾಳಿಯಲ್ಲಿ ಮಗು ಸೇರಿದಂತೆ 12 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

ಉತ್ತರ ಭಾಗದಲ್ಲಿರುವ ಸುಮಿ ಪ್ರದೇಶದ ಮೇಲೆ ಶಹೀದ್ ಡ್ರೋನ್ ಬಳಸಿ ರಷ್ಯಾ ನಡೆಸಿರುವ ದಾಳಿಯಲ್ಲಿ ಇಬ್ಬರು ಮಕ್ಕಳು ಸೇರಿ 11 ಮಂದಿ ಗಾಯಗೊಂಡಿದ್ದಾರೆ. ಕಟ್ಟಡಗಳ ಅವಶೇಷಗಳಡಿ ಮತ್ತಷ್ಟು ಜನರು ಸಿಲುಕಿರುವ ಸಾಧ್ಯತೆ ಇದೆ ಎಂದು ಉಕ್ರೇನ್‌ನ ರಕ್ಷಣಾ ಸೇವೆಗಳ ಅಧಿಕಾರಿಗಳು ಹೇಳಿದ್ದಾರೆ.


ಲುಕೀವ್ ಪಟ್ಟಣದ ಶೈಕ್ಷಣಿಕ ಸಂಸ್ಥೆಯೊಂದರ ಮೇಲೆ ಸೋಮವಾರ ತಡರಾತ್ರಿ ದಾಳಿ ನಡೆಸಲಾಗಿದೆ.

'ರಷ್ಯಾ ಪಡೆಗಳು ಸರಣಿ ವೈಮಾನಿಕ ದಾಳಿಗಳನ್ನು ನಡೆಸುತ್ತಿವೆ. ಇದು ಯುದ್ಧ ನಿಲ್ಲಿಸಲು ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ಆಸಕ್ತಿ ಇಲ್ಲ ಎಂಬುದನ್ನು ತೋರಿಸುತ್ತದೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

'ರಷ್ಯಾ ನಡೆಸುವ ಪ್ರತಿ ಹೊಸ ದಾಳಿಯು ಪುಟಿನ್ ಅವರ ನಿಜವಾದ ಉದ್ದೇಶವನ್ನು ತೋರಿಸುತ್ತದೆ. ಅವರಿಗೆ ಯುದ್ಧ ಮುಂದುವರಿಸುವುದು ಬೇಕಾಗಿದೆ. ಶಾಂತಿ ಸ್ಥಾಪನೆ ಕುರಿತ ಮಾತುಗಳು ಅವರಲ್ಲಿ ಆಸಕ್ತಿ ಮೂಡಿಸುವುದಿಲ್ಲ' ಎಂದೂ ಹೇಳಿದ್ದಾರೆ.

ಬ್ಯಾಟರಿ ಮೇಲಿನ ಜಿಎಸ್‌ಟಿ ಇಳಿಸಿ: ಫಿಕ್ಕಿ ಒತ್ತಾಯ

'ಇ.ವಿಗೆ ಉತ್ತೇಜನ ನೀಡಿ'



ನವದೆಹಲಿ (ಪಿಟಿಐ): 'ಬ್ಯಾಟರಿಗಳು ಹಾಗೂ ಚಾರ್ಜಿಂಗ್ ಸೇವೆ ಮೇಲಿನ ಜಿಎಸ್‌ಟಿ ಕಡಿತಗೊಳಿಸುವ ಮೂಲಕ ವಿದ್ಯುತ್‌ಚಾಲಿತ ವಾಹನಗಳ ಸ್ಪರ್ಧಾತ್ಮಕತೆ ಹೆಚ್ಚಳಕ್ಕೆ ಕೇಂದ್ರ ಸರ್ಕಾರವು ಕ್ರಮವಹಿಸಬೇಕು' ಎಂದು ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘದ (ಫಿಕ್ಕಿ) ಎಲೆಕ್ಟ್ರಿಕ್ ವಾಹನಗಳ ಸಮಿತಿ ಅಧ್ಯಕ್ಷೆ ಸುಲಜ್ಜ ಫಿರೋಡಿಯಾ ಮೋಟ್ವಾನಿ ಒತ್ತಾಯಿಸಿದ್ದಾರೆ.

ವಿದ್ಯುತ್‌ಚಾಲಿತ ವಾಹನಗಳ ಬಗ್ಗೆ ಫಿಕ್ಕಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸಮ್ಮೇಳನ-ದಲ್ಲಿ ಅವರು ಮಾತನಾಡಿದರು.

ಚಾರ್ಜಿಂಗ್ ಸೇವೆ ಮತ್ತು ಬ್ಯಾಟರಿಗಳ ಮೇಲೆ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಇದನ್ನು ಶೇ 5ಕ್ಕೆ ತಗ್ಗಿಸಬೇಕು. ಇ.ವಿ ಸಂಬಂಧಿತ ವಲಯದ ಮೇಲಿನ ಜಿಎಸ್‌ಟಿ ದರ ಸರಳೀಕರಣಕ್ಕೆ ಸರಕು ಮತ್ತು ಸೇವಾ ತೆರಿಗೆ ಮಂಡಳಿಯು ಕ್ರಮವಹಿಸಬೇಕು ಎಂದರು.

'ಪಿಎಂ ಇ–ಡ್ರೈವ್' ಯೋಜನೆಯು ಈ ವಲಯ ಅಭಿವೃದ್ಧಿಗೆ ಉತ್ತೇಜನ ನೀಡುತ್ತಿದೆ ಎಂದು ಶ್ಲಾಘಿಸಿದರು.

ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ಮಾತನಾಡಿ, ವಿದ್ಯುತ್‌ಚಾಲಿತ ವಾಹನಗಳ ತಯಾರಿಕಾ ವೆಚ್ಚ ಕಡಿತಗೊಳಿಸುವುದು ಹಾಗೂ ಅವುಗಳ ಸಾಮರ್ಥ್ಯ ಸುಧಾರಣೆಗೆ ಸಂಬಂಧಿಸಿದ ಸಂಶೋಧನೆಗೆ ಸರ್ಕಾರ ಒತ್ತು ನೀಡಲಿದೆ ಎಂದರು.

ಬ್ಯಾಟರಿ ತಂತ್ರಜ್ಞಾನ, ಚಾರ್ಜಿಂಗ್ ಮೂಲ ಸೌಕರ್ಯ ಹಾಗೂ ಬ್ಯಾಟರಿ ಮರುಬಳಕೆಗೆ ಸಂಬಂಧಿಸಿದ ಸಂಶೋಧನೆಗೆ ಸರ್ಕಾರ ಪ್ರೋತ್ಸಾಹ ನೀಡಲಿದೆ ಎಂದು ತಿಳಿಸಿದರು.

ವಿದ್ಯುತ್‌ಚಾಲಿತ ವಾಹನಗಳಿಗೆ ಉತ್ತೇಜನ ನೀಡಲು ಪಿಎಂ ಇ–ಡ್ರೈವ್ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಇದಕ್ಕೆ ಉತ್ತಮ ಸ್ಪಂದನೆ ಸಿಕ್ಕಿದೆ ಎಂದು ತಿಳಿಸಿದರು.

'ಕಡಿಮೆ ಗುಣಮಟ್ಟದ ಉಕ್ಕು ಆಮದು'

ನವದೆಹಲಿ (ಪಿಟಿಐ): 'ವಿದೇಶಗಳಿಂದ ಆಮದಾಗುತ್ತಿರುವ ಕಡಿಮೆ ಗುಣ ಮಟ್ಟದ ಉಕ್ಕು ಸೇರಿದಂತೆ ಉಕ್ಕು ಉತ್ಪಾದನಾ ವಲಯವು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಕ್ರಮವಹಿಸಲಿದೆ' ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

'ಉಕ್ಕು ವಲಯ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಉದ್ದಿಮೆದಾರರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಕೆಲವು ರಾಷ್ಟ್ರಗಳಿಂದ ಕಡಿಮೆ ಗುಣಮಟ್ಟದ ಉಕ್ಕು ಉತ್ಪನ್ನಗಳು ಪೂರೈಕೆಯಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ' ಎಂದು ಮಂಗಳವಾರ ಪಿಟಿಐಗೆ ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

19-11-2024

ಜಾವಾ 70/80(ಹೊಸ)	11100-11000
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9100-9200
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525 (1530)
ಒಂದು ವಾರದ ಡೆಲಿವರಿ	1520 (1525)
ಪಾಮ್ ವಾರದ ಡೆಲಿವರಿ	1383 (1373)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1350)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹75,500 (74,700)

ಬೆಳ್ಳಿ ಕೆ.ಜಿ ₹90,900 (89,450)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1515 (1520)
ಸೋಯಾ (ರಿಫೈನ್ಡ್)	₹1350 (1365)
ಸೂರ್ಯಕಾಂತಿ (ರಿಫೈನ್ಡ್)	₹1410 (1400)
ಪಾಮೋಲಿನ್	₹1385 (1375)

ಸಂಕ್ಷಿಪ್ತ ಸುದ್ದಿ

ಶಕ್ತಿಕಾಂತ ದಾಸ್‌ಗೆ ಡೀಪ್‌ಫೇಕ್ ಕಾಟ

ಮುಂಬೈ (ಪಿಟಿಐ): ಗವರ್ನರ್ ಶಕ್ತಿಕಾಂತ ದಾಸ್ ಅವರ ಡೀಪ್‌ಫೇಕ್ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಈ ಬಗ್ಗೆ ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

ದಾಸ್ ಅವರು ಕೆಲವು ಹೊಸ ಹೂಡಿಕೆ ಯೋಜನೆಗಳಿಗೆ ಚಾಲನೆ ನೀಡಿದ್ದಾರೆ ಅಥವಾ ಅಂತಹ ಯೋಜನೆಗಳಲ್ಲಿ ಸಾರ್ವಜನಿಕರು ಹೂಡಿಕೆ ಮಾಡುವಂತೆ ಹೇಳಿದ್ದಾರೆ ಎಂಬ ಬಗ್ಗೆ ಕೃತಕ ಬುದ್ಧಿಮತ್ತೆ ಬಳಸಿ ಡೀಪ್‌ಫೇಕ್ ವಿಡಿಯೊಗಳನ್ನು ಸೃಷ್ಟಿಸಲಾಗಿದೆ ಎಂದು ಹೇಳಿದೆ.

ಹಣಕಾಸು ಹೂಡಿಕೆಗೆ ಸಂಬಂಧಿಸಿದಂತೆ ಆರ್‌ಬಿಐ ನಾಗರಿಕರಿಗೆ ಯಾವುದೇ ಸಲಹೆ ನೀಡುವುದಿಲ್ಲ ಎಂದು ಹೇಳಿದೆ.

ಮೆಟಾಗೆ ಸಿಸಿಐ ₹213 ಕೋಟಿ ದಂಡ

ನವದೆಹಲಿ (ಪಿಟಿಐ): ಭಾರತೀಯ ಸ್ಪರ್ಧಾತ್ಮಕ ಆಯೋಗ (ಸಿಸಿಐ) ವಿಧಿಸಿರುವ ₹213 ಕೋಟಿ ದಂಡದ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಫೇಸ್‌ಬುಕ್‌ನ ಮಾತೃಸಂಸ್ಥೆ ಮೆಟಾ ತಿಳಿಸಿದೆ.

ವಾಟ್ಸ್‌ಆ್ಯಪ್‌ನಲ್ಲಿ ಸಂಗ್ರಹಿಸುವ ಬಳಕೆದಾರರ ಮಾಹಿತಿಯನ್ನು ಜಾಹೀರಾತು ಉದ್ದೇಶಗಳಿಗೆ ಮೆಟಾ ಕಂಪನಿಯು ತನ್ನ ಇತರೆ ಅಪ್ಲಿಕೇಷನ್‌ಗಳಲ್ಲಿ ಬಳಸದಂತೆ ಆಯೋಗವು, ಐದು ವರ್ಷದವರೆಗೆ ನಿರ್ಬಂಧ ವಿಧಿಸಿದೆ.

ಆದರೆ, 2021ರಲ್ಲಿ ವಾಟ್ಸ್‌ಆ್ಯಪ್‌ನ ನವೀಕೃತ ನೀತಿ ಅನ್ವಯ ಎಲ್ಲಾ ಬಳಕೆದಾರರು ಮೆಟಾದೊಂದಿಗೆ ದತ್ತಾಂಶ ಹಂಚಿಕೊಳ್ಳುವುದನ್ನು ಕಡ್ಡಾಯಗೊಳಿಸಿದೆ. ಇದು ನ್ಯಾಯ ಸಮ್ಮತವಲ್ಲ ಎಂದು ಆಯೋಗ ಹೇಳಿದೆ.

ಸ್ಪರ್ಧಾತ್ಮಕತೆಗೆ ವಿರುದ್ಧವಾದ ನಿಯಮಗಳನ್ನು ಪಾಲಿಸಬಾರದು ಎಂದು ಮೆಟಾಗೆ ಸೂಚಿಸಿದೆ.

ಚಿನ್ನ, ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಮಂಗಳವಾರ ಮತ್ತೆ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹600 ಏರಿಕೆಯಾಗಿದ್ದು, ₹78,050 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ದರವು 10 ಗ್ರಾಂಗೆ ಇಷ್ಟೇ ಪ್ರಮಾಣದಲ್ಲಿ ಹೆಚ್ಚಳವಾಗಿ, ₹77,650 ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹1,500 ಏರಿಕೆಯಾಗಿದ್ದು, ₹93,500ರಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ವಿದೇಶದಲ್ಲಿ ಪೇಟಿಎಂ ವಹಿವಾಟು ವಿಸ್ತರಣೆ

ನವದೆಹಲಿ (ಪಿಟಿಐ): ಪೇಟಿಎಂ ಆ್ಯಪ್ ಬಳಕೆದಾರರು ಆಯ್ದ ದೇಶಗಳಲ್ಲಿ ಯುಪಿಐ ಮೂಲಕ ವಹಿವಾಟು ನಡೆಸಬಹುದಾಗಿದೆ ಎಂದು ಪೇಟಿಎಂನ ಮಾತೃಸಂಸ್ಥೆ ಒನ್‌97 ಕಮ್ಯುನಿಕೇಷನ್ ಮಂಗಳವಾರ ತಿಳಿಸಿದೆ.

ಅರಬ್ ಸಂಯುಕ್ತ ಸಂಸ್ಥಾನ (ಯುಎಇ), ಸಿಂಗಪುರ, ಫ್ರಾನ್ಸ್, ಮಾರಿಷಸ್, ಭೂತಾನ್ ಮತ್ತು ನೇಪಾಳದಲ್ಲಿ ಪೇಟಿಎಂ ಆ್ಯಪ್ ಬಳಕೆದಾರರು ಶಾಪಿಂಗ್, ಹೋಟೆಲ್ ಸೇರಿ ನಗದು ರಹಿತ ಪಾವತಿ ಮಾಡಬಹುದಾಗಿದೆ ಎಂದು ಕಂಪನಿ ತಿಳಿಸಿದೆ.





ರಿಯೊ ಡಿಜನೈರೊದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರೊಂದಿಗೆ ಮಾತುಕತೆ ನಡೆಸಿದರು (ಎಡ ಚಿತ್ರ). ಮೋದಿ ಅವರು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರನ್ನು ಭೇಟಿ ಮಾಡಿದರು — ಪಿಟಿಐ ಚಿತ್ರ

ಮಲ್ಯ, ನೀರವ್ ಹಸ್ತಾಂತರಿಸಿ: ಬ್ರಿಟನ್‌ಗೆ ಮೋದಿ ಮನವಿ

ಮುಕ್ತ ವ್ಯಾಪಾರಕ್ಕೆ ಮಾತುಕತೆ

ಲಂಡನ್/ರಿಯೊ ಡಿಜನೈರೊ (ಪಿಟಿಐ): ಭಾರತ ಮತ್ತು ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ಕುರಿತ ಸಮಾಲೋಚನೆ-ಗಳಿಗೆ ಮುಂದಿನ ವರ್ಷ ಮತ್ತೆ ಚಾಲನೆ ನೀಡಲಾಗುವುದು ಎಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಹೇಳಿದ್ದಾರೆ.

ಬ್ರೆಜಿಲ್‌ನ ರಿಯೊ ಡಿಜನೈರೊದಲ್ಲಿ ಜಿ20 ಶೃಂಗಸಭೆ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿರುವ ಸ್ಟಾರ್ಮರ್, ಈ ಘೋಷಣೆ ಮಾಡಿದ್ದಾರೆ.

'ಮುಕ್ತ ವ್ಯಾಪಾರ ಮಾತ್ರವಲ್ಲದೇ, ಭದ್ರತೆ, ಶಿಕ್ಷಣ, ತಂತ್ರಜ್ಞಾನ ಮತ್ತು ಹವಾಮಾನ ಬದಲಾವಣೆ ಕ್ಷೇತ್ರಗಳಲ್ಲಿ ಭಾರತದೊಂದಿಗಿನ ಸಹಕಾರವನ್ನು ಮತ್ತಷ್ಟು ಹೆಚ್ಚಿಸಲು ಬ್ರಿಟನ್ ಉತ್ಸುಕವಾಗಿದೆ' ಎಂದು ಪ್ರಧಾನಿ ಸ್ಟಾರ್ಮರ್ ಅವರ ಕಚೇರಿ ಹೇಳಿದೆ.

ಒತ್ತಾಯ: ಭಾರತದ ಬ್ಯಾಂಕುಗಳಿಗೆ ಕೋಟ್ಯಂತರ ರೂಪಾಯಿ ವಂಚಿಸಿದ ಆರೋಪ ಎದುರಿಸುತ್ತಿರುವ ಉದ್ಯಮಿಗಳಾದ ವಿಜಯ್ ಮಲ್ಯ ಹಾಗೂ ನೀರವ್ ಮೋದಿ ಅವರನ್ನು ಹಸ್ತಾಂತರಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರನ್ನು ಒತ್ತಾಯಿಸಿದ್ದಾರೆ.

ಜಿ20 ಶೃಂಗಸಭೆ ಸಂದರ್ಭದಲ್ಲಿ ನಡೆದ ಮಾತುಕತೆ ವೇಳೆ, ಮೋದಿ ಅವರು ಈ ಒತ್ತಾಯ ಮಾಡಿದ್ದಾರೆ.

ಹೊಸ ಕಾನ್ಸುಲೇಟ್ ಕಚೇರಿ: ಬ್ರಿಟನ್‌ನ ಬೆಲ್‌ಫಾಸ್ಟ್ ಹಾಗೂ ಮ್ಯಾಂಚೆಸ್ಟರ್‌ನಲ್ಲಿ ಭಾರತದ ಕಾನ್ಸುಲೇಟ್ ಕಚೇರಿಗಳನ್ನು ಆರಂಭಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಇದೇ ವೇಳೆ ಘೋಷಿಸಿದ್ದಾರೆ.

ಜಿ20 ಶೃಂಗಸಭೆ: ವಿಶ್ವ ನಾಯಕರೊಂದಿಗೆ ಮೋದಿ ಚರ್ಚೆ

ಇಟಲಿ–ಭಾರತ ಸಹಕಾರದ ಜಪ

ರಿಯೊ ಡಿಜನೈರೊ (ಬ್ರೆಜಿಲ್) (ಪಿಟಿಐ): ಜಿ20 ಶೃಂಗಸಭೆ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರು ಉಭಯ ದೇಶಗಳ ನಡುವೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿ ಐದು ವರ್ಷಗಳ ಕ್ರಿಯಾ ಯೋಜನೆ ಸಿದ್ಧಪಡಿಸುವ ಕುರಿತು ಮಾತುಕತೆ ನಡೆಸಿದರು.

2025–29ಕ್ಕೆ ಸಂಬಂಧಿಸಿದ ಈ ಕ್ರಿಯಾ ಯೋಜನೆ 10 ನಿರ್ದಿಷ್ಟ ಅಂಶಗಳನ್ನು ಒಳಗೊಂಡಿದೆ. ಆರ್ಥಿಕತೆ ಮತ್ತು ಹೂಡಿಕೆಯಲ್ಲಿ ಸಹಕಾರ, ಇಂಧನ, ಬಾಹ್ಯಾಕಾಶ, ರಕ್ಷಣೆ, ಸುರಕ್ಷತೆ, ವಲಸೆ ನೀತಿ, ಜನರ ವಿನಿಮಯ ಕಾರ್ಯಕ್ರಮಗಳು ಸೇರಿವೆ.

ಈ ಮಾತುಕತೆ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, 'ವಿವಿಧ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಂಬಂಧ ಗಟ್ಟಿಗೊಳಿಸುವುದಲ್ಲದೇ, ಸಂಸ್ಕೃತಿ, ಶಿಕ್ಷಣ ಮತ್ತಿತರ ಕ್ಷೇತ್ರಗಳಲ್ಲಿಯೂ ಸಹಕಾರ ಹೆಚ್ಚಿಸುವ ಕುರಿತು ಚರ್ಚೆ ನಡೆಸಿದೆವು' ಎಂದು ಹೇಳಿದ್ದಾರೆ.

ಭೇಟಿ–ಮಾತುಕತೆ: ಜಿ20 ಶೃಂಗಸಭೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಬ್ರೆಜಿಲ್‌ನ ರಿಯೊ ಡಿಜನೈರೊಗೆ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ದ್ವಿಪಕ್ಷೀಯ ವೃದ್ಧಿ ಉದ್ದೇಶದಿಂದ ಇಟಲಿ, ಇಂಡೊನೇಷ್ಯಾ, ನಾರ್ವೆ, ಪೋರ್ಚುಗಲ್, ಈಜಿಪ್ಟ್, ಸ್ಪೇನ್ ಹಾಗೂ ದಕ್ಷಿಣ ಕೊರಿಯಾ ನಾಯಕರನ್ನು ಭೇಟಿ ಮಾಡಿ, ಚರ್ಚೆ ನಡೆಸಿದ್ದಾರೆ.

ಜೊತೆಗೆ, ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಉಪ ವ್ಯವಸ್ಥಾಪಕ ನಿರ್ದೇಶಕಿ ಗೀತಾ ಗೋಪಿನಾಥ್ ಹಾಗೂ ಐರೋಪ್ಯ ಒಕ್ಕೂಟದ (ಇಯು) ಅಧ್ಯಕ್ಷೆ ಉರ್ಸುಲಾ ವಾನ್ ಡರ್ ಲೆಯೆನ್ ಅವರೊಂದಿಗೂ ಮೋದಿ ಮಾತುಕತೆ ನಡೆಸಿದ್ದಾರೆ.

ಹೊಸ ಅಣ್ವಸ್ತ್ರ ನೀತಿಗೆ ಪುಟಿನ್ ಸಹಿ

ಅಮೆರಿಕಕ್ಕೆ ಸಡ್ಡು ಹೊಡೆಯಲು ರಷ್ಯಾದ ಅಧ್ಯಕ್ಷರ ತಂತ್ರ



ಮಾಸ್ಕೊ (ಎಪಿ): ಅಣ್ವಸ್ತ್ರ ಹೊಂದಿರುವ ರಾಷ್ಟ್ರಗಳ ಬೆಂಬಲ ಹೊಂದಿರುವ ಯಾವುದೇ ರಾಷ್ಟ್ರ ರಷ್ಯಾದ ಮೇಲೆ ದಾಳಿ ಮಾಡಿದರೆ ಅದನ್ನು ಜಂಟಿ ದಾಳಿ ಎಂದು ಪರಿಗಣಿಸುವ ನಿರ್ಣಯಕ್ಕೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮಂಗಳವಾರ ಸಹಿ ಮಾಡಿದ್ದಾರೆ.

ಅಮೆರಿಕ ಪೂರೈಸಿರುವ ಕ್ಷಿಪಣಿಗಳ ಮೂಲಕ ರಷ್ಯಾದ ಒಳಗೆ ದಾಳಿ ಮಾಡಲು ಉಕ್ರೇನ್‌ಗೆ ಅನುಮತಿ ನೀಡಲು ನಿರ್ಧರಿಸಿರುವ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರಿಗೆ ತಿರುಗೇಟು ನೀಡಲು ರಷ್ಯಾ ಹೊಸ ಅಣ್ವಸ್ತ್ರ ನೀತಿಯನ್ನು ರೂಪಿಸಿರುವ ಸಾಧ್ಯತೆಗಳಿವೆ.

ಅಮೆರಿಕಕ್ಕೆ ಸಡ್ಡು ಹೊಡೆಯಲು ಹೊಸ ನೀತಿಯನ್ನು ರೂಪಿಸಲಾಗಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ರಷ್ಯಾದ ವಕ್ತಾರ ಡಿಮಿಟ್ರಿ ಪೆಸ್ಕೋವ್ ಅವರು, 'ಕಾಲ ಕಾಲಕ್ಕೆ ನಮ್ಮ ನೀತಿಗಳು ಬದಲಾಗುತ್ತಿರುತ್ತವೆ. ಈ ಬಗ್ಗೆ ವರ್ಷದ ಆರಂಭದಲ್ಲೇ ಪುಟಿನ್ ನಿರ್ದೇಶನ ನೀಡಿದ್ದರು' ಎಂದು ತಿಳಿಸಿದ್ದಾರೆ.

ಹೊಸ ನೀತಿಯ ಅನ್ವಯ, ಅಣ್ವಸ್ತ್ರ ಹೊಂದಿಲ್ಲದ ರಾಷ್ಟ್ರ ರಷ್ಯಾದ ಮೇಲೆ ದಾಳಿ ಮಾಡಿದರೆ, ಅದಕ್ಕೆ ಬೆಂಬಲ ನೀಡುತ್ತಿರುವ ಅಣ್ವಸ್ತ್ರ ಹೊಂದಿದ ರಾಷ್ಟ್ರವನ್ನು ಹೊಣೆಗಾರರನ್ನಾಗಿ ಪರಿಗಣಿಸಲಾಗುತ್ತದೆ.

ಇಂತಹ ದಾಳಿಗಳಿಗೆ ಪ್ರತ್ಯುತ್ತರವಾಗಿ ಅಣ್ವಸ್ತ್ರ ದಾಳಿ ನಡೆಸಲಾಗುತ್ತದೆಯೇ ಎಂಬ ಬಗ್ಗೆ ಸ್ಪಷ್ಟವಾಗಿ ತಿಳಿಸಿಲ್ಲ. ಅಣ್ವಸ್ತ್ರ ಬಳಕೆ ಬಗ್ಗೆ ಹಿಂದಿನ ನೀತಿಗಿಂತಲೂ ಹೊಸ ನೀತಿಯಲ್ಲಿ ಹೆಚ್ಚು ವಿವರಗಳನ್ನು ನೀಡಲಾಗಿದೆ. ಕ್ಷಿಪಣಿ, ಯುದ್ಧವಿಮಾನ ಮತ್ತು ಡ್ರೋನ್‌ಗಳ ಮೂಲಕ ತೀವ್ರ ದಾಳಿ ನಡೆದಾಗ ಅಣ್ವಸ್ತ್ರ ಬಳಕೆ ಮಾಡಬಹುದು ಎಂದು ಹೊಸ ನೀತಿಯಲ್ಲಿ ತಿಳಿಸಲಾಗಿದೆ.

ತನ್ನ ಮಿತ್ರರಾಷ್ಟ್ರ ಬೆಲಾರಸ್ ಮೇಲಿನ ದಾಳಿಗೆ ಪ್ರತಿಯಾಗಿ ರಷ್ಯಾದ ಅಣ್ವಸ್ತ್ರ ದಾಳಿ ನಡೆಸುವ ಸಾಧ್ಯತೆಗಳನ್ನು ಹೊಸ ನೀತಿ ತಿಳಿಸುತ್ತದೆ. ಅಣ್ವಸ್ತ್ರ ನೀತಿಯಲ್ಲಿನ ಬದಲಾವಣೆ ಬಗ್ಗೆ ಪುಟಿನ್ ಸೆಪ್ಟೆಂಬರ್‌ನಲ್ಲಿ ಘೋಷಿಸಿದ್ದರು.

2025ರಲ್ಲಿ ಪುಟಿನ್ ಭಾರತ ಭೇಟಿ ಸಾಧ್ಯತೆ (ನವದೆಹಲಿ–ಪಿಟಿಐ): ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಮುಂದಿನ ವರ್ಷ ಭಾರತಕ್ಕೆ ಭೇಟಿ ನೀಡಬಹುದು ಎಂದು ರಾಜತಾಂತ್ರಿಕ ಮೂಲಗಳು ಮಂಗಳವಾರ ತಿಳಿಸಿವೆ.

ರಷ್ಯಾ ಹಾಗೂ ಭಾರತದ ನಿಯೋಗ ಭೇಟಿಯಾಗುವ ಸಾಧ್ಯತೆ ಇದ್ದು, ಸಭೆಯ ಸ್ವರೂಪ ಇನ್ನೂ ಅಂತಿಮಗೊಂಡಿಲ್ಲ ಎಂದು ಹೇಳಿವೆ.

PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರು ಕೆಳಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಷೆಡ್ಯೂಲ್ ಸ್ವತ್ತುಗಳನ್ನು ಕೆಳಕಂಡ ಷೆಡ್ಯೂಲಿನಲ್ಲಿ ಕ್ರಮವಾಗಿ ಕಾಣಿಸಿರುವ ಮಾಲೀಕರುಗಳಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತು ಸದರಿಯವರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಷೆಡ್ಯೂಲ್ ಸ್ವತ್ತುಗಳ ಮೇಲೆ ಅನಿರ್ಬಂಧಿತ ಮಾಲೀಕತ್ವದ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತುಗಳು ಯಾವುದೇ ವ್ಯಕ್ತಿಯು ಯಾವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರೂ ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆ ಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 10 **ದಿನಗಳೊಳಗಾಗಿ** ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷಿದಾರರು ಸದರಿ ಕೆಳಕಂಡ ವ್ಯಕ್ತಿಗಳ ಮಾಲೀಕತ್ವಕ್ಕೆ ಹಾಗೂ ಸದರಿ ಖರೀದಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತನ್ನು ಖರೀದಿಸಲು ಮುಂದಾಗುವರು.

SCHEDULE

(Description of the Schedule Property)

All that piece and parcel of immovable properties being agricultural lands as specified in the table below, totally measuring **2 Acres 21 Guntas, situated in Naraganahalli Village, Kundana Hobli, Devanahalli Taluk, Bengaluru Rural District:**

No.	Survey Number	Extent	Name of Owner	Boundaries			
				East	West	North	South
1.	10/9	5 Guntas	Shri. M. Jagadish, son of Late Madappa	Land described in Item No. 2 hereunder;	Road;	Land bearing Survey No. 9/10;	Land bearing Survey No. 10/14.
2.	10/2	10 Guntas		Land bearing Survey No. 14/1;	Lands described in Item No. 1 herein above and Survey No. 10/14;	Lands bearing Survey Nos. 9/13, 9/1 & 9/8;	Land described in Item No. 4 hereunder.
3.	14/1	20 Guntas		Land bearing Survey No. 14/2;	Lands described in Item No. 2 herein above and & Item No. 4 hereunder	Land bearing Survey No. 16/1;	Lands bearing Survey Nos. 14/5 & 14/10.
4.	10/10	10 Guntas	Shri. T. R. Hanumanthaiah, son of Late T. H. Ramaiah	Landss described in Item No. 3 herein above and Survey No. 14/5;	Lands bearing Survey Nos. 10/14, 10/17 & 10/1;	Land described in Item No. 2 herein above;	Land bearing Survey No. 10/11.
5.	14/6	14 Guntas	Shri. A. V. Mallik and Smt. A. V. Nagashree, children of Late A. N. Vishweshwaraiah	Land bearing Survey No. 14/7;	Land bearing Survey No. 10/11;	Land bearing Survey No. 14/5;	Land described in Item No. 6 hereunder.
6.	13/1	1 Acre 2 Guntas	Shri. Anjinappa, son of Late Ramaiah; Shri. Narayanappa, son of Late Ramaiah; and Smt. Radhamma, wife of Late Ramanna	Land bearing Survey No. 13/2;	Lands bearing Survey Nos. 10/11 & 10/5.	Land described in Item No. 5 herein above;	Lands bearing Survey Nos. 12/1, 12/2, 12/3 & 12/4.

ಬೆಂಗಳೂರು.
ನವೆಂಬರ್ 19, 2024

ಸಹಿ/- ಎ. ಸುಪ್ರೀತ್, ಪಾಲುದಾರರು, ಕ್ರೆಸ್ಟ್‌ಲಾ ಪಾರ್ಟನರ್ಸ್, ವಕೀಲರು, ನಂ. 33, ಝೇವಿಯರ್ ಲೇಔಟ್, 1ನೇ ಅಡ್ಡರಸ್ತೆ, ವಿಕ್ಟೋರಿಯಾ ರಸ್ತೆ, ಬೆಂಗಳೂರು-560047. ಫೋ: 080-41473535 / 41473536

ಕುಕಿ ಉಗ್ರರ ವಿರುದ್ಧ ಕಠಿಣ ಕ್ರಮಕ್ಕೆ ಸಭೆಯಲ್ಲಿ ತೀರ್ಮಾನ • ಗೈರುಹಾಜರಾದ 11 ಶಾಸಕರಿಗೆ ನೋಟಿಸ್

ಬೃಹತ್ ಕಾರ್ಯಾಚರಣೆ: ಎನ್‌ಡಿಎ ನಿರ್ಣಯ

ಇಂಫಾಲ್ (ಪಿಟಿಐ): ಜಿರಿಬಾಮ್‌ನಲ್ಲಿ ಮೂವರು ಮಹಿಳೆಯರು ಮತ್ತು ಮೂವರು ಮಕ್ಕಳ ಸಾವಿಗೆ ಕಾರಣವಾದ ಕುಕಿ ಉಗ್ರರ ವಿರುದ್ಧ ಏಳು ದಿನಗಳ ಒಳಗಾಗಿ 'ಬೃಹತ್ ಕಾರ್ಯಾಚರಣೆ'ಗೆ ಕರೆ ನೀಡುವ ನಿರ್ಣಯವನ್ನು ಆಡಳಿತಾರೂಢ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಶಾಸಕರು ನಡೆಸಿದ ಸಭೆಯಲ್ಲಿ ಕೈಗೊಳ್ಳಲಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸೋಮವಾರ ರಾತ್ರಿ ಸಭೆ ನಡೆದಿದ್ದು, 27 ಶಾಸಕರು ಭಾಗವಹಿಸಿದ್ದರು.

ಹತ್ಯೆಗೆ ಕಾರಣವಾದ ಕುಕಿ ಉಗ್ರರ ಗುಂಪನ್ನು 'ಕಾನೂನುಬಾಹಿರ ಸಂಘಟನೆ' ಎಂದು ಘೋಷಿಸಬೇಕು. ಪ್ರಕರಣದ ತನಿಖೆಯ ಜವಾಬ್ದಾರಿಯನ್ನು ತಕ್ಷಣವೇ ಎನ್‌ಐಎಗೆ ವಹಿಸಬೇಕು. ರಾಜ್ಯದ ಕೆಲವೆಡೆ 'ಆಫ್ಸಾ' ಮರುಜಾರಿಗೊಳಿಸಿರುವ ಆದೇಶವನ್ನು ಕೇಂದ್ರ ಸರ್ಕಾರ ಮರುಪರಿಶೀಲಿಸಬೇಕು ಎಂದು ಸಭೆಯಲ್ಲಿ ನಿರ್ಣಯಿಸಲಾಗಿದೆ.

ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ನಿಗದಿತ ಕಾಲಮಿತಿ ಒಳಗಾಗಿ ಅನುಷ್ಠಾನ ಮಾಡದಿದ್ದರೆ ಎನ್‌ಡಿಎ ಶಾಸಕರು ಮುಂದಿನ ಹೆಜ್ಜೆ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಇದೇ ವೇಳೆ, ಶಾಸಕರು ಮತ್ತು ಸಚಿವರಿಗೆ ಸಂಬಂಧಿಸಿದ ಪ್ರದೇಶಗಳ ಮೇಲಿನ ದಾಳಿಯನ್ನು ಖಂಡಿಸಲಾಯಿತು.



ಮುಖ್ಯಮಂತ್ರಿ ಎನ್‌.ಬಿರೇನ್ ಸಿಂಗ್ ಅವರ ನೇತೃತ್ವದಲ್ಲಿ ಎನ್‌ಡಿಎ ಶಾಸಕರ ಸಭೆ ಇಂಫಾಲ್‌ನಲ್ಲಿ ನಡೆಯಿತು –ಪಿಟಿಐ ಚಿತ್ರ

ಶಾಸಕರ ಗೈರು: 'ಕೈ' ವಾಗ್ದಾಳಿ

ನವದೆಹಲಿ: ಮಣಿಪುರ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಅವರು ಕರೆದಿದ್ದ ಸಭೆಗೆ ಎನ್‌ಡಿಎ ಶಾಸಕರು ಗೈರಾಗಿದ್ದಕ್ಕೆ ಕಾಂಗ್ರೆಸ್ ಮಂಗಳವಾರ ವಾಗ್ದಾಳಿ ನಡೆಸಿದೆ.

ಮುಖ್ಯಮಂತ್ರಿ ಹೊರತಾಗಿ ಕೇವಲ 26 ಶಾಸಕರು ಭಾಗವಹಿಸಿದ್ದರು. ಈ ಪೈಕಿ ಇಬ್ಬರು ಎನ್‌ಪಿಪಿ ಶಾಸಕರು. ಬಿರೇನ್ ಸಿಂಗ್ ಅವರ ಸರ್ಕಾರಕ್ಕೆ ನೀಡಿರುವ ಬೆಂಬಲ ವಾಪಸ್ ಪಡೆಯುವುದಾಗಿ ಎನ್‌ಪಿಪಿ ಅಧ್ಯಕ್ಷರು, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ಈಗಾಗಲೇ ಪತ್ರ ಬರೆದಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಹೇಳಿದ್ದಾರೆ.

ಉನ್ನತ ಅಧಿಕಾರದ ಸಮಿತಿಯ ತನಿಖೆ ಆಧಾರದಲ್ಲಿ ದುಷ್ಕರ್ಮಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಶಾಸಕರ ಗೈರು: ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಅವರ ನೇತೃತ್ವ ದಲ್ಲಿ ನಡೆದ ಸಭೆಗೆ ಏಳು ಶಾಸಕರು ಆರೋಗ್ಯದ ಕಾರಣ ನೀಡಿ ಗೈರಾಗಿದ್ದರು. ಕಾರಣ ನೀಡದೆ ಗೈರಾಗಿದ್ದ 11 ಶಾಸಕರಿಗೆ ನೋಟಿಸ್ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಚುರಾಚಂದಪುರ: ಖಾಲಿ ಶವಪೆಟ್ಟಿಗೆ ಹೊತ್ತು ಪ್ರತಿಭಟನೆ

ಚುರಾಚಂದಪುರ (ಪಿಟಿಐ): ಮಣಿಪುರದ ಜಿರಿಬಾಮ್‌ನಲ್ಲಿ ಭದ್ರತಾ ಪಡೆಗಳ ಗುಂಡೇಟಿಗೆ ಬಲಿಯಾದವರಿಗೆ ನ್ಯಾಯ ನೀಡುವಂತೆ ಆಗ್ರಹಿಸಿ ಚುರಾಚಂದಪುರದಲ್ಲಿ ನೂರಾರು ಜನರು ಖಾಲಿ ಶವಪೆಟ್ಟಿಗೆ ಹೊತ್ತು ಮಂಗಳವಾರ ಮೆರವಣಿಗೆ ನಡೆಸಿದರು.

'ಜಾಯಿಂಟ್ ಫಿಲಾಂತ್ರೋಪಿಕ್ ಆರ್ಗನೈಜೇಷನ್' (ಜೆಪಿಒ) ರ‍್ಯಾಲಿಯನ್ನು ಆಯೋಜಿಸಿತ್ತು. ನೂರಾರು ಜನರು ಫಲಕಗಳನ್ನು ಹಿಡಿದು ನ್ಯಾಯಕ್ಕಾಗಿ ಆಗ್ರಹಿಸಿದರು. ನಂತರ ರಾಜ್ಯದಲ್ಲಿ ನಡೆಯುತ್ತಿರುವ ಸಂಘರ್ಷದಲ್ಲಿ ಮೃತಪಟ್ಟ ಕುಕಿ ಸಮುದಾಯದ ಜನರಿಗಾಗಿ ನಿರ್ಮಾಣ ಮಾಡಿರುವ ಸ್ಮಾರಕ 'ವಾಲ್ ಆಫ್ ರಿಮೆಂಬರೆನ್ಸ್' ಬಳಿ ಮೆರವಣಿಗೆಯನ್ನು ಸಮಾರೋಪಗೊಳಿಸಿದರು. ಬಳಿಕ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಬರೆದಿದ್ದ ಮನವಿಪತ್ರವನ್ನು ಜಿಲ್ಲಾಧಿಕಾರಿಗೆ ಹಸ್ತಾಂತರಿಸಿದರು.

ಜಿರಿಬಾಮ್‌ನಲ್ಲಿ ಹತ್ಯೆಗೀಡಾದವರು ಗ್ರಾಮದ ಸ್ವಯಂ ರಕ್ಷಕರು ಎಂದು ಕುಕಿ ಸಮುದಾಯ ಹೇಳಿಕೊಂಡಿದೆ. ಆದರೆ, ಗುಂಡಿನ ದಾಳಿ ನಡೆದ ಸ್ಥಳದಲ್ಲಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳು ಪತ್ತೆಯಾಗಿವೆ ಎಂದು ರಾಜ್ಯ ಪೊಲೀಸ್ ಹೇಳಿದೆ.

ಕರ್ಫ್ಯೂ ಉಲ್ಲಂಘಿಸಿ ನಡೆದ ಪ್ರತಿಭಟನೆಗೆ ತಡೆ

ಮಣಿಪುರದ ಹಲವು ಸಂಘಟನೆಗಳು, ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆ–1958 (ಆಫ್ಸಾ) ಮರುಜಾರಿ ವಿರೋಧಿಸಿ ಮಂಗಳವಾರ ಇಂಫಾಲ್‌ನಲ್ಲಿ ಪ್ರತಿಭಟನೆ ನಡೆಸಿದವು. ಆದರೆ ಕರ್ಫ್ಯೂ ಆದೇಶ ಧಿಕ್ಕರಿಸಿ ಪ್ರತಿಭಟನೆ ನಡೆಸಿದ ಕಾರಣ ಪೊಲೀಸರು ಕ್ವೆಸಂಪ್ಕ/ ಜಂಕ್ಷನ್‌ನಲ್ಲಿ ಪ್ರತಿಭಟನಾಕಾರರನ್ನು ತಡೆದರು. ಪೊಲೀಸರು ತಡೆಯುವ ಮುನ್ನ ಕವಾಕೈಟೆಲ್ ಪ್ರದೇಶದಿಂದ ಮೂರು ಕಿ.ಮೀ ರ‍್ಯಾಲಿ ನಡೆಸಿದ್ದಾಗಿ ಪ್ರತಿಭಟನಾಕಾರರೊಬ್ಬರು ತಿಳಿಸಿದರು.

ಜಿರಿಬಾಮ್ ಪ್ರಕರಣ: ಎಸ್ಪಿ ಕರ್ತವ್ಯದಿಂದ ಬಿಡುಗಡೆ

ಜಿರಿಬಾಮ್ ಗುಂಡಿನ ದಾಳಿ ಪ್ರಕರಣ ಸಂಬಂಧ ಮಣಿಪುರ ಸರ್ಕಾರವು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ನೆಕ್ಟರ್ ಸಂಜೆನ್‌ಬಮ್ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿದೆ.

ಭಾನುವಾರ ರಾತ್ರಿ ನಡೆದ ಗುಂಡಿನ ದಾಳಿಯ ಕಾರಣ ಪತ್ತೆ ಮಾಡಲು ಸರ್ಕಾರವು ಇಬ್ಬರು ಸದಸ್ಯರ ವಿಚಾರಣಾ ಸಮಿತಿಯನ್ನು ರಚಿಸಿದೆ. ಗೃಹಸಚಿವಾಲಯವು ಸೋಮವಾರ ತನ್ನ ಆದೇಶದಲ್ಲಿ 'ಕರ್ನಲ್ (ನಿವೃತ್ತ) ನೆಕ್ಟರ್ ಸಂಜೆನ್‌ಬಮ್ ಅವರ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ (ಕಂಬ್ಯಾಟ್) ಸೇವೆಯನ್ನು ರದ್ದುಗೊಳಿಸಲಾಗಿದೆ' ಎಂದು ತಿಳಿಸಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಮಧ್ಯಪ್ರವೇಶಿಸಲಿ: ಖರ್ಗೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಪರಿಸ್ಥಿತಿ ಗಂಭೀರವಾಗಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕೂಡಲೇ ಮಧ್ಯ ಪ್ರವೇಶಿಸಬೇಕು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಂಗಳವಾರ ಪತ್ರ ಮುಖೇನ ಒತ್ತಾಯಿಸಿದ್ದಾರೆ.

'ರಾಜ್ಯದ ಜನರ ಮತ್ತು ಅವರ ಆಸ್ತಿಪಾಸ್ತಿ ರಕ್ಷಣೆಗಾಗಿ ಕೂಡಲೇ ಮಧ್ಯ ಪ್ರವೇಶಿಸಬೇಕು. ನಿಮ್ಮ ಮಧ್ಯ ಪ್ರವೇಶದಿಂದ ಜನರು ತಮ್ಮ ತಮ್ಮ ನಿವಾಸಗಳಲ್ಲಿ ಮತ್ತೆ ಶಾಂತಿ ಮತ್ತು ಗೌರವದಿಂದ ಬಾಳುವಂತಾಗುತ್ತದೆ ಎಂಬ ವಿಶ್ವಾಸವಿದೆ' ಎಂದು ಮನವಿ ಮಾಡಿದ್ದಾರೆ.

ಎರಡು ಪುಟಗಳ ಪತ್ರದಲ್ಲಿ ಅವರು, 'ಮಣಿಪುರ ಸಂಘರ್ಷದಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿ 300ಕ್ಕೂ ಅಧಿಕ ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದರಿಂದ ಲಕ್ಷಾಂತರ ಜನರು ಆಂತರಿಕವಾಗಿ ಸ್ಥಳಾಂತರಗೊಂಡಿದ್ದಾರೆ. ಅವರೆಲ್ಲರೂ ತಮ್ಮ ಸೂರುಗಳನ್ನು ಕಳೆದುಕೊಂಡು ಪರಿಹಾರ ಶಿಬಿರಗಳಲ್ಲಿ ವಾಸಿಸುವಂತಾಗಿದೆ. ಜನರ ಸಂಕಟ ದಿನೇ ದಿನೇ ಹೆಚ್ಚುತ್ತಲೇ ಇದೆ' ಎಂದು ಹೇಳಿದ್ದಾರೆ.



'ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಮರುಸ್ಥಾಪಿಸುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಸಂಪೂರ್ಣ ವಿಫಲವಾಗಿವೆ. ಜನರು ಸರ್ಕಾರಗಳ ಮೇಲಿನ ವಿಶ್ವಾಸವನ್ನೇ ಕಳೆದುಕೊಂಡಿದ್ದಾರೆ' ಎಂದು ತಿಳಿಸಿದ್ದಾರೆ.

'ಮಣಿಪುರ ಜನರು 2023ರಿಂದಲೂ ಪ್ರಧಾನಿ ಭೇಟಿಗೆ ಆಗ್ರಹಿಸುತ್ತಿದ್ದಾರೆ. ಆದರೆ ಅವರು ಭೇಟಿ ನೀಡಿಲ್ಲ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು 18 ತಿಂಗಳಲ್ಲಿ ಮೂರು ಬಾರಿ ಭೇಟಿ ನೀಡಿದ್ದಾರೆ. ನಾನು ಸಹ ಭೇಟಿ ನೀಡಿದ್ದೇನೆ. ಪ್ರಧಾನಿ ನರೇಂದ್ರ ಮೋದಿ ಅವರು ಸಂಘರ್ಷಪೀಡಿತ ರಾಜ್ಯಕ್ಕೆ ಭೇಟಿ ನೀಡಲು ನಿರಾಕರಿಸುತ್ತಿರುವುದು ಏಕೆ ಎಂಬುದು ಯಾರಿಗೂ ಅರ್ಥವಾಗದ ಸಂಗತಿ' ಎಂದಿದ್ದಾರೆ.

ಬಿರೇನ್ ರಾಜೀನಾಮೆಗೆ ಶರ್ಮಿಳಾ ಆಗ್ರಹ

ಕೋಲ್ಕತ್ತ (ಪಿಟಿಐ): ಮಣಿಪುರದಲ್ಲಿ ಉಂಟಾಗಿರುವ ಬಿಕ್ಕಟ್ಟು ಪರಿಹಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ನೇರ ಮಧ್ಯಪ್ರವೇಶ ಅತ್ಯಗತ್ಯ ಎಂದು ಸಾಮಾಜಿಕ ಕಾರ್ಯಕರ್ತೆ ಇರೋಮ್ ಶರ್ಮಿಳಾ ಅವರು ಅಭಿಪ್ರಾಯಪಟ್ಟಿದ್ದಾರೆ.

'ಮಣಿಪುರದ ಉಕ್ಕಿನ ಮಹಿಳೆ' ಎಂದೇ ಹೆಸರಾಗಿರುವ ಇರೋಮ್ ಶರ್ಮಿಳಾ ಅವರು ಪಿಟಿಐ ಸುದ್ದಿಸಂಸ್ಥೆ ಫೋನ್ ಮೂಲಕ ನಡೆಸಿದ ಸಂದರ್ಶನದಲ್ಲಿ ಮಾತನಾಡಿದರು. ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಅವರು ರಾಜ್ಯದಲ್ಲಿ ಉಂಟಾಗಿರುವ ಗಲಭೆಗೆ ನೈತಿಕ ಹೊಣೆ ಹೊತ್ತು ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಅವರು ಒತ್ತಾಯಿಸಿದರು.

'ಮಹಾ' ಮತದಾನ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಆಡಳಿತಾರೂಢ 'ಮಹಾಯುತಿ' ಹಾಗೂ ವಿಪಕ್ಷ 'ಮಹಾ ವಿಕಾಸ ಆಘಾಡಿ' ಮೈತ್ರಿಕೂಟಗಳ ನೇರ ಹಣಾಹಣಿಗೆ ಸಾಕ್ಷಿಯಾಗಿರುವ ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಅಂತಿಮ ಘಟ್ಟಕ್ಕೆ ತಲುಪಿದ್ದು, ಮತದಾನ ಇದೇ 20ರಂದು ನಡೆಯಲಿದೆ.

ಜಾರ್ಖಂಡ್ ವಿಧಾನಸಭೆಯ ಎರಡನೇ ಹಂತದ 38 ಕ್ಷೇತ್ರಗಳಿಗೆ, ಉತ್ತರ ಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳ 15 ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ಹಾಗೂ ನಾಂದೇಡ್ ಲೋಕಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ಬುಧವಾರ ಜರುಗಲಿದೆ.


ಎಲ್ಲ 288 ವಿಧಾನಸಭಾ ಕ್ಷೇತ್ರ ಗಳಲ್ಲಿ ಬೆಳಿಗ್ಗೆ 7 ಗಂಟೆಗೆ ಮತದಾನ ಆರಂಭವಾಗಿ ಸಂಜೆ 6 ಗಂಟೆಗೆ ಮುಕ್ತಾಯವಾಗಲಿದೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ನವೆಂಬರ್ 23ರಂದು ಮಹಾರಾಷ್ಟ್ರ, ಜಾರ್ಖಂಡ್ ಮತ್ತು 46 ವಿಧಾನಸಭಾ ಕ್ಷೇತ್ರಗಳ ಮತ್ತು ಎರಡು ಲೋಕಸಭಾ ಸ್ಥಾನಗಳ ಉಪಚುನಾವಣೆಯ ಮತ ಎಣಿಕೆ ನಡೆಯಲಿದೆ.

ತಮ್ಮ ಮೈತ್ರಿಕೂಟದ ಅಭ್ಯರ್ಥಿಗಳ ಪರವಾಗಿ ಪ್ರಮುಖ ನಾಯಕರಾದ ನರೇಂದ್ರ ಮೋದಿ, ಅಮಿತ್ ಶಾ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಹಲವು ರ‍್ಯಾಲಿಗಳಲ್ಲಿ ಭಾಗಿಯಾಗಿ ಮತ ಸೆಳೆಯುವ ಕಸರತ್ತು ನಡೆಸಿದರು. ಲೋಕಸಭಾ ಚುನಾವಣೆಯ ಮಾದರಿಯಲ್ಲೇ 'ಮಹಾ ಕಣ'ದಲ್ಲಿ ಕಾಂಗ್ರೆಸ್ ಪಕ್ಷವು 'ಸಂವಿಧಾನ ಉಳಿಸಿ' ಅಭಿಯಾನ ನಡೆಸಿತು. ಬಿಜೆಪಿಯು 'ಬಟೋಗೆ ತೊ ಕಟೋಗೆ' (ಒಗ್ಗಟ್ಟು ಇಲ್ಲದಿದ್ದರೆ ನಮ್ಮನ್ನು ಮುಗಿಸುತ್ತಾರೆ) ನಿರೂಪಣೆ ಮುಂದಿಟ್ಟುಕೊಂಡು ಕಾಂಗ್ರೆಸ್ ತಂತ್ರಗಳಿಗೆ ಪ್ರತಿತಂತ್ರ ಹೂಡುವ ಪ್ರಯತ್ನ ನಡೆಸಿತು. ಕಣದಲ್ಲಿ ಕಮಲ ಪಾಳಯವು ಉಗ್ರ ಹಿಂದುತ್ವ ವಾದದ ಮೊರೆ ಹೋಯಿತು.

288 ಕ್ಷೇತ್ರಗಳ ಪೈಕಿ 75 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ. ಜಾತಿ ಆಧಾರಿತ ಜನಗಣತಿ, ಸಾಮಾಜಿಕ ನ್ಯಾಯ ಮತ್ತು ಸಂವಿಧಾನದ ರಕ್ಷಣೆಯಂತಹ ವಿಷಯಗಳನ್ನು 'ಕೈ' ಪಾಳಯ ಚುನಾವಣಾ ಅಸ್ತ್ರ ಮಾಡಿಕೊಂಡು ಪ್ರಚಾರ ನಡೆಸಿದೆ.

2019ರ ರಾಜ್ಯ ವಿಧಾನಸಭೆ ಚುನಾವಣೆಗೆ ಹೋಲಿಸಿದರೆ ಈ ಬಾರಿ ಅಭ್ಯರ್ಥಿಗಳ ಸಂಖ್ಯೆ ಶೇ 28ರಷ್ಟು ಹೆಚ್ಚಾಗಿದೆ.



ಪ್ರಜಾ ಮತ ಜನತಂತ್ರದ ಹಬ್ಬ

ಚಿತ್ರನಟ ಸಿದ್ದೀಕ್‌ಗೆ ನಿರೀಕ್ಷಣಾ ಜಾಮೀನು

ನವದೆಹಲಿ (ಪಿಟಿಐ): ಮಲಯಾಳ ಚಿತ್ರನಟ ಸಿದ್ದೀಕ್ ಅವರಿಗೆ ಅತ್ಯಾಚಾರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಮಂಗಳವಾರ ನಿರೀಕ್ಷಣಾ ಜಾಮೀನು ನೀಡಿದೆ.

ಪಾಸ್‌ಪೋರ್ಟ್ ಅನ್ನು ಪೊಲೀಸರಿಗೆ ಒಪ್ಪಿಸಿ ತನಿಖೆಗೆ ಸಹಕರಿಸುವಂತೆ ನ್ಯಾಯಮೂರ್ತಿಗಳಾದ ಬೇಲಾ ಎಂ.ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮ ಅವರ ಪೀಠವು ಸಿದ್ದೀಕ್ ಅವರಿಗೆ ಸೂಚಿಸಿದೆ.

'2016ರಲ್ಲಿ ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಆರೋಪಿಸಲಾಗಿದೆ. ಆದರೆ, ದೂರು ನೀಡಿದ್ದು 8 ವರ್ಷಗಳ ಬಳಿಕ. 2018ರಲ್ಲಿ ಸಂತ್ರಸ್ತೆಯು ಆರೋಪಿ ಸೇರಿದಂತೆ 14 ಮಂದಿ ವಿರುದ್ಧ ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ಆರೋಪ ಮಾಡಿದ್ದರು. ವಿಶೇಷವೆಂದರೆ, ಇಂತಹ ಪ್ರಕರಣಗಳ ಪರಿಶೀಲನೆಗಾಗಿ ಕೇರಳ ಸರ್ಕಾರ ರಚಿಸಿದ್ದ ನ್ಯಾಯಮೂರ್ತಿ ಹೇಮಾ ಸಮಿತಿಯ ಬಳಿಯೂ ದೂರು ನೀಡಿರುವ ಸಂತ್ರಸ್ತೆ ಹೋಗಿಲ್ಲ. ಹಾಗಾಗಿ ಕೆಲವು ಷರತ್ತುಗಳ ಆಧಾರದಲ್ಲಿ ಆರೋಪಿಗೆ ನಿರೀಕ್ಷಣಾ ಜಾಮೀನು ನೀಡುತ್ತಿದ್ದೇವೆ' ಎಂದು ಪೀಠ ತಿಳಿಸಿದೆ.

ಸಿನಿಮಾದಲ್ಲಿ ಅವಕಾಶ ನೀಡುವುದಾಗಿ ಆಮಿಷವೊಡ್ಡಿ ಸಿದ್ದೀಕ್ ಅವರು 2016ರಲ್ಲಿ ಅತ್ಯಾಚಾರ ಎಸಗಿದ್ದಾರೆ ಎಂದು ಕಲಾವಿದೆಯೊಬ್ಬರು ದೂರು ನೀಡಿದ್ದರು. ಆ ಬೆನ್ನಲ್ಲೇ ಸಿದ್ದೀಕ್ ವಿರುದ್ಧ ಪ್ರಕರಣ ದಾಖಲಾಗಿತ್ತು.

ಜಿಸ್ಯಾಟ್–ಎನ್2 ಯಶಸ್ವಿ ಉಡಾವಣೆ

ಬೆಂಗಳೂರು (ಪಿಟಿಐ): ದೇಶದ ಜಿಸ್ಯಾಟ್–ಎನ್2 ನೂತನ ಸಂವಹನ ಉಪಗ್ರಹವನ್ನು ಅಮೆರಿಕದ ಶತಕೋಟ್ಯಧಿಪತಿ ಎಲಾನ್ ಮಸ್ಕ್ ಸ್ಥಾಪಿಸಿರುವ 'ಸ್ಪೇಸ್‌ಎಕ್ಸ್' ನಿಂದ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು.

ಅಮೆರಿಕದ ಕೇಪ್ ಕೆನವೆರಲ್‌ನ 'ಸ್ಪೇಸ್‌ಎಕ್ಸ್' ನಿಂದ ಉಡಾವಣೆ ಮಾಡಲಾಯಿತು. ಈ ಸಂವಹನ ಉಪಗ್ರಹವು ಭಾರತದಲ್ಲಿ ಬ್ರಾಡ್‌ಬ್ಯಾಂಡ್ ಸೇವೆಗಳು ಹಾಗೂ ವಿಮಾನದಲ್ಲಿ ಸಂಪರ್ಕ ವ್ಯವಸ್ಥೆಯನ್ನು (ಇನ್–ಫ್ಲೈಟ್ ಕನೆಕ್ಟಿವಿಟಿ) ಹೆಚ್ಚಿಸಲಿದೆ ಎಂದು ಇಸ್ರೊದ ವಾಣಿಜ್ಯ ವಿಭಾಗದ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ (ಎನ್‌ಎಸ್‌ಐಎಲ್) ತಿಳಿಸಿದೆ.


ಈ ಉಪಗ್ರಹವು ಇಸ್ರೊದಲ್ಲಿರುವ ಸದ್ಯದ ಉಡಾವಣಾ ರಾಕೆಟ್‌ನ ಸಾಮರ್ಥ್ಯಕ್ಕಿಂತ ಹೆಚ್ಚಿನ ತೂಕವಿದ್ದ ಕಾರಣ ವಿದೇಶಿ ಉಡಾವಣಾ ರಾಕೆಟ್ ಆಯ್ಕೆ ಮಾಡಿಕೊಳ್ಳಬೇಕಾಯಿತು ಎಂದು ಬಾಹ್ಯಾಕಾಶ ವಿಜ್ಞಾನಿಗಳು ಮತ್ತು ಇಸ್ರೊದ ಮಾಜಿ ಅಧ್ಯಕ್ಷರು ತಿಳಿಸಿದ್ದಾರೆ.

'ಉಪಗ್ರಹವು ಇಸ್ರೊದ ಉಡಾವಣಾ ರಾಕೆಟ್ ಸಾಮರ್ಥ್ಯಕ್ಕಿಂತ ಹೆಚ್ಚು ತೂಕವಿತ್ತು. ಹೀಗಾಗಿ ದೇಶದ ಹೊರಗೆ ಉಡಾವಣೆ ಮಾಡಬೇಕಾಯಿತು' ಎಂದು ಇಸ್ರೊ ಮಾಜಿ ಅಧ್ಯಕ್ಷ ಕೆ.ಶಿವನ್ ತಿಳಿಸಿದ್ದಾರೆ.

'ಎನ್‌ಎಸ್‌ಐಎಲ್‌ನ ಜಿಸ್ಯಾಟ್–ಎನ್2 ಉತ್ಕೃಷ್ಟ (ಎಚ್‌ಟಿಎಸ್) ಸಂವಹನ ಉಪಗ್ರಹವನ್ನು ನ.19ರಂದು ಅಮೆರಿಕದ ಕೇಪ್ ಕೆನವೆರಲ್‌ನಿಂದ ಯಶಸ್ವಿಯಾಗಿ ಉಡಾಯಿಸಲಾಗಿದೆ. 4,400 ಕೆ.ಜಿ ತೂಕವಿರುವ ಈ ಉಪಗ್ರಹವನ್ನು ಫಾಲ್ಕನ್ 9 ರಾಕೆಟ್ ಮೂಲಕ ನಿಗದಿತ ಭೂಸ್ಥಿರ ವರ್ಗಾವಣೆ ಕಕ್ಷೆಗೆ (ಜಿಟಿಒ) ಸೇರಿಸಲಾಗಿದೆ. ಇಸ್ರೊದ ಮುಖ್ಯ ನಿಯಂತ್ರಣಾ ವ್ಯವಸ್ಥೆ (ಎಂಸಿಎಫ್) ಉಪಗ್ರಹವನ್ನು ನಿಯಂತ್ರಣಕ್ಕೆ ತೆಗೆದುಕೊಂಡಿದೆ. ಪ್ರಾಥಮಿಕ ಅಂಕಿಅಂಶಗಳ ಪ್ರಕಾರ ಉಪಗ್ರಹ ಉತ್ತಮ ಸ್ಥಿತಿಯಲ್ಲಿದೆ' ಎಂದು 'ಎಕ್ಸ್'ನಲ್ಲಿ ಎನ್‌ಎಸ್‌ಐಎಲ್ ತಿಳಿಸಿದೆ.

ಇಸ್ರೊದ ಉಡಾವಣಾ ಸಾಮರ್ಥ್ಯ ವೃದ್ಧಿಗೆ ಯೋಜನೆ

ಇಸ್ರೊಗೆ 4 ಟನ್ ತೂಕದ ಉಪಗ್ರಹ ಉಡಾಯಿಸುವ ಸಾಮರ್ಥ್ಯವಿದೆ. ಆದರೆ, ಈ ಹೊಸ ಉಪಗ್ರಹ 4.7 ಟನ್ ಇದೆ. ಇದೀಗ ಇಸ್ರೊದ ಉಡಾವಣಾ ಸಾಮರ್ಥ್ಯ ವೃದ್ಧಿಗೆ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ ಎಂದು ಇಸ್ರೊ ಮಾಜಿ ಅಧ್ಯಕ್ಷ ಶಿವನ್ ತಿಳಿಸಿದ್ದಾರೆ.



ಇದು ಕೆಎ–ಬ್ಯಾಂಡ್ ಉತ್ಕೃಷ್ಟ ಸಂವಹನ ಉಪಗ್ರಹವಾಗಿದ್ದು, ಬ್ರಾಡ್ ಬ್ಯಾಂಡ್ ಸೇವೆಗಳು ಮತ್ತು ವಿಮಾನದಲ್ಲಿನ (ಇನ್–ಫ್ಲೈಟ್) ಸಂಪರ್ಕ ವ್ಯವಸ್ಥೆಗಳನ್ನು ಹೆಚ್ಚಿಸಲಿದೆ. ಇದೇ ಸರಣಿಯ ಎನ್‌ಐಎಲ್‌ನ ಜಿಸ್ಯಾಟ್–24 ಉಪಗ್ರಹವವನ್ನು 2022ರ ಜೂ.23ರಂದು ಫ್ರೆಂಚ್ ಗಯಾನಾ ಕೌರೌನಿಂದ ಉಡಾಯಿಸಲಾಗಿತ್ತು ಎಂದು ಎನ್‌ಎಸ್‌ಐಎಲ್ ತಿಳಿಸಿದೆ.

ಹೊಸ ಉಪಗ್ರಹದ ಜೀವಿತಾವಧಿ 14 ವರ್ಷವಾಗಿದ್ದು, 32 ಬಳಕೆದಾರ ಕಿರಣಗಳ ವ್ಯವಸ್ಥೆ ಹೊಂದಿದೆ. ಇದರ ಪೇಲೋಡ್‌ನಲ್ಲಿ ಮೂರು ಪ್ಯಾರಾಬೋಲಿಕ್ (ಪಾತ್ರೆಯಾಕಾರ)ದ 2.5-ಮೀಟರ್ ಸಂಯೋಜನಾ ಪ್ರತಿಫಲಕಗಳು ಇವೆ.

ಏದುಸಿರು ಬಿಡುತ್ತಿದೆ ದೆಹಲಿ...

ನವದೆಹಲಿ (ಪಿಟಿಐ): ರಾಷ್ಟ್ರದ ರಾಜಧಾನಿಯಲ್ಲಿ ಸತತ ಮೂರನೇ ದಿನವಾದ ಮಂಗಳವಾರವೂ ದಟ್ಟವಾದ ವಿಷಕಾರಿ ಹೊಗೆ ಹಾಗೂ ಮಂಜು (ಹೊಂಜು) ಮುಸುಕಿದ ವಾತಾವರಣ ಮುಂದುವರಿಯಿತು. ವಾಯು ಗುಣಮಟ್ಟ ಸೂಚ್ಯಂಕವು (ಎಕ್ಯೂಐ) 488ಕ್ಕೆ ಮುಟ್ಟಿ, 'ತೀವ್ರ ಅಪಾಯ'ದ ಹಂತ ತಲುಪಿತ್ತು.

ಮಾಲಿನ್ಯದ ನಡುವೆಯೇ ತಾಪಮಾನ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ದೆಹಲಿ ಸುತ್ತಲಿನ ಪ್ರದೇಶಗಳಲ್ಲಿ ಕೃಷಿ ಜಮೀನಲ್ಲಿ ಕೂಳೆ ಸುಡುತ್ತಿರುವ ಪ್ರಮಾಣವು ಗಮನಾರ್ಹ ಮಟ್ಟದಲ್ಲಿರುವ ಕಾರಣ, ಜನಜೀವನ ಮತ್ತಷ್ಟು ಬಿಗಡಾಯಿಸಿದೆ.

ತಾಪಮಾನ ಇಳಿಕೆ: ದೆಹಲಿಯ ತಾಪಮಾನವು ಸೋಮವಾರ ರಾತ್ರಿ 12.3 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ನಗರದ ವಾಯು ಗುಣಮಟ್ಟ ಸೂಚ್ಯಂಕವು ಮಂಗಳವಾರ ಬೆಳಿಗ್ಗೆ 9ಕ್ಕೆ 488 ದಾಖಲಾಗಿದೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ದತ್ತಾಂಶಗಳು ದೃಢಪಡಿಸಿವೆ.

ರಾಜಧಾನಿಯಲ್ಲಿರುವ 32 ಮೇಲ್ವಿಚಾರಣಾ ಕೇಂದ್ರಗಳ ಪೈಕಿ 31ರಲ್ಲಿ ಎಕ್ಯೂಐ ಪ್ರಮಾಣವು 480ಕ್ಕಿಂತಲೂ ಹೆಚ್ಚು ದಾಖಲಾಗಿದೆ. ಅಲಿಪುರ್ ಹಾಗೂ ಸೋನಿಯಾ ವಿಹಾರ್‌ನಲ್ಲಿ 500ರ ಗಡಿ ದಾಟಿದೆ. ಕಳೆದ ಆರು ವರ್ಷದ ಬಳಿಕ ನ.18ರಂದು ದೆಹಲಿಯಲ್ಲಿ ಎಕ್ಯೂಐ ಪ್ರಮಾಣವು 494 ಗಡಿದಾಟಿತ್ತು ಎಂದು ತಿಳಿಸಿದೆ.



ನವದೆಹಲಿಯ ಗಾಜಿಪುರದಲ್ಲಿ ತ್ಯಾಜ್ಯಕ್ಕೆ ಬೆಂಕಿ ಹಾಕಿದ್ದರಿಂದ ದಟ್ಟವಾದ ಹೊಗೆ ಆವರಿಸಿತ್ತು –ಎಎಫ್‌ಪಿ ಚಿತ್ರ

ಕೃತಕ ಮಳೆ ಸುರಿಸಲು ಅವಕಾಶ ನೀಡಿ– ಕೇಂದ್ರಕ್ಕೆ ಆಗ್ರಹ: 'ಕೃತಕ ಮಳೆಗಾಗಿ ಮೋಡ ಬಿತ್ತನೆ ನಡೆಸಲು ತುರ್ತಾಗಿ ಅವಕಾಶ ನೀಡಬೇಕು ಎಂದು ಕೋರಿ ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಅವರಿಗೆ ನಾಲ್ಕು ಬಾರಿ ಪತ್ರ ಬರೆಯಲಾಗಿದೆ, ಯಾವುದೇ ಉತ್ತರ ಬಂದಿಲ್ಲ' ಎಂದು ದೆಹಲಿ ಪರಿಸರ ಸಚಿವ ಗೋಪಾಲ್ ರಾಯ್ ತಿಳಿಸಿದ್ದಾರೆ.

ವಾಯುಮಾಲಿನ್ಯ ಮಿತಿಮೀರಿದ್ದು, ಕೇಂದ್ರ ಸರ್ಕಾರ ಕೂಡಲೇ ಮಧ್ಯ ಪ್ರವೇಶಿಸಬೇಕು ಎಂದು ಮನವಿ ಮಾಡಿದ್ದಾರೆ.

ಆನ್‌ಲೈನ್ ತರಗತಿ: ಮಾಲಿನ್ಯ ಮಿತಿಮೀರಿದ್ದರಿಂದ ರಾಷ್ಟ್ರ ರಾಜಧಾನಿ ಪ್ರದೇಶ (ಎನ್‌ಸಿಆರ್) ವ್ಯಾಪ್ತಿಗೆ ಒಳಪಡುವ ಉತ್ತರಪ್ರದೇಶ ಪಶ್ಚಿಮ ಭಾಗದ 8 ಜಿಲ್ಲೆಗಳ ಶಾಲೆಗಳ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿ ನಡೆಸುವಂತೆ ಸೂಚಿಸಲಾಗಿದೆ.

ಜಿ–20 ಶೃಂಗಸಭೆ: ಜೈಶಂಕರ್–ವಾಂಗ್ ಯಿ ಮಾತುಕತೆ

ನವದೆಹಲಿ/ ರಿಯೋ ಡಿ ಜನೈರೊ(ಪಿಟಿಐ): ಪೂರ್ವ ಲಡಾಖ್‌ನ ಡೆಪ್ಸಾಂಗ್ ಮತ್ತು ಡೆಮ್‌ಚೋಕ್ ಪ್ರದೇಶಗಳಲ್ಲಿ ನಿಯೋಜಿಸಿರುವ ತಮ್ಮ ಸೇನೆಗಳನ್ನು ಚೀನಾ ಹಾಗೂ ಭಾರತ ವಾಪಸ್ ಕರೆಸಿದ ಬಳಿಕ ಕೇಂದ್ರ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರನ್ನು ಭೇಟಿಯಾದರು.

ಬ್ರೆಜಿಲ್‌ನ ರಿಯೋ ಡಿ ಜನೈರೊದಲ್ಲಿ ನಡೆಯುತ್ತಿರುವ ಜಿ–20 ಶೃಂಗಸಭೆಯ ಸಂದರ್ಭದಲ್ಲಿ ಎರಡೂ ದೇಶಗಳ ಉನ್ನತ ಮಟ್ಟದ ನಿಯೋಗವು ಮುಂದಿನ ದಿನಗಳಲ್ಲಿ ತೆಗೆದುಕೊಳ್ಳ ಬೇಕಾದ ಕ್ರಮಗಳ ಕುರಿತು ಮಾತುಕತೆ ನಡೆಸಿದವು.

ಸಭೆ ಕುರಿತು 'ಎಕ್ಸ್'ನಲ್ಲಿ ತಿಳಿಸಿರುವ ವಿದೇಶಾಂಗ ಸಚಿವ ಜೈಶಂಕರ್, 'ಗಡಿ ಭಾಗದಲ್ಲಿ ಸೇನೆ ಹಿಂದಕ್ಕೆ ಪಡೆದ ಬಳಿಕ ಉಭಯ ರಾಷ್ಟ್ರಗಳು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದು, ದ್ವಿಪಕ್ಷೀಯ ಸಂಬಂಧ ವೃದ್ಧಿ ನಿಟ್ಟಿನಲ್ಲಿ ಮುಂದಿನ ಹೆಜ್ಜೆಯಿಟ್ಟಿವೆ. ಜಾಗತಿಕ ಸ್ಥಿತಿಗತಿ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಗಿದೆ' ಎಂದು ತಿಳಿಸಿದರು.

'ಉಭಯ ದೇಶಗಳ ನಡುವೆ ಸಂಬಂಧ ಸ್ಥಿರಗೊಳಿಸಿ, ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಮುಂದಿನ ಕ್ರಮ, ಭಾರತ– ಚೀನಾದ ವಿಶೇಷ ಪ್ರತಿನಿಧಿಗಳು, ವಿದೇಶಾಂಗ ಕಾರ್ಯದರ್ಶಿ, ವಿದೇಶಾಂಗ ರಾಜ್ಯ ಸಚಿವರ ಜೊತೆಗೂ ಶೀಘ್ರದಲ್ಲಿ ಸಭೆ ನಡೆಸಲು ಸಭೆ ನಿರ್ಧರಿಸಿತು' ಎಂದು ವಿದೇಶಾಂಗ ಸಚಿವಾಲಯವು ತಿಳಿಸಿದೆ.

'ಕೈಲಾಸ ಮಾನಸ ಸರೋವರ ಯಾತ್ರೆಗೆ ಮತ್ತೆ ಚಾಲನೆ, ಗಡಿಯಾಚೆಗಿನ ನದಿ ನೀರಿನ ಹಂಚಿಕೆಯ ಮಾಹಿತಿ ವಿನಿಮಯ, ಚೀನಾ– ಭಾರತ ನಡುವೆ ನೇರ ವಿಮಾನಯಾನ ಸಂಪರ್ಕ, ಮಾಧ್ಯಮ ಸಂವಾದ ನಡೆಸುವ ಕುರಿತಂತೆ ಚರ್ಚೆ ನಡೆಸಲಾಗಿದೆ' ಎಂದು ಹೇಳಿದೆ.

ಡೆಪ್ಸಾಂಗ್ ಮತ್ತು ಡೆಮ್‌ಚೋಕ್‌ನಲ್ಲಿ ಉಭಯ ದೇಶಗಳು ಸೇನೆಯನ್ನು ಹಿಂದಕ್ಕೆ ಕರೆಸಿಕೊಳ್ಳುವ ಪ್ರಕ್ರಿಯೆಯು ಅಕ್ಟೋಬರ್‌ನಲ್ಲಿ ಮುಕ್ತಾಯಗೊಂಡಿತ್ತು. ಗಡಿ ವಿವಾದ ಬಗೆಹರಿಸಲು ಶೀಘ್ರದಲ್ಲಿಯೇ ಮಾತುಕತೆ ನಡೆಸುವ ಇಂಗಿತ ವ್ಯಕ್ತಪಡಿಸಿದ್ದವು. ನಂತರ, ಪೂರ್ವ ಲಡಾಖ್‌ನಲ್ಲಿರುವ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಡೆಮ್‌ಚೋಕ್, ಡೆಪ್ಸಾಂಗ್ ಪ್ರದೇಶದಲ್ಲಿ ಗಸ್ತು ಆರಂಭಿಸಿದ್ದವು.

ಸಂಕ್ಷಿಪ್ತ ಸುದ್ದಿ

ಜೆರಾಲ್ಡ್ ಕೊಟ್ಜಿಯಗೆ ಐಸಿಸಿ ವಾಗ್ದಂಡನೆ

ದುಬೈ (ಪಿಟಿಐ): ಭಾರತ ವಿರುದ್ಧ ಜೊಹಾನೆಸ್‌ಬರ್ಗ್‌ನಲ್ಲಿ ನಡೆದ ನಾಲ್ಕನೇ ಟಿ20 ಪಂದ್ಯದ ವೇಳೆ ಅಂಪೈರ್ ನಿರ್ಧಾರದ ವಿರುದ್ಧ ಅಸಮಾಧಾನ ಹೊರಹಾಕಿದ ದಕ್ಷಿಣ ಆಫ್ರಿಕಾದ ವೇಗದ ಬೌಲರ್ ಜೆರಾಲ್ಡ್ ಕೊಟ್ಜಿಯ ಅವರಿಗೆ ವಾಗ್ದಂಡನೆ ವಿಧಿಸಲಾಗಿದೆ ಎಂದು ಐಸಿಸಿ ಮಂಗಳವಾರ ತಿಳಿಸಿದೆ.

ತಮ್ಮ ಎಸೆತವನ್ನು ವೈಡ್ ಎಂದು ಅಂಪೈರ್ ಸಾರಿದ ತಕ್ಷಣ ಕೊಟ್ಜಿಯ ಅನುಚಿತ ಪದ ಪ್ರಯೋಗಿಸಿದ್ದರು.

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ನಾಲ್ಕನೇ ಟಿ20 ಪಂದ್ಯದ ವೇಳೆ ಕೊಟ್ಜಿಯ ಐಸಿಸಿ ನೀತಿಸಂಹಿತೆಯ ವಿಧಿ 2.8 ಉಲ್ಲಂಘಿಸಿರುವುದು ದೃಢಪಟ್ಟಿದೆ.

ಡೇವಿಸ್ ಕಪ್: ನಡಾಲ್‌ಗೆ ಸೋಲು

ಮಲಗಾ (ಸ್ಪೇನ್), (ಎಪಿ): ನಿವೃತ್ತರಾಗುವ ಮೊದಲು ಸ್ಪೇನ್‌ನ ರಫೆಲ್ ನಡಾಲ್ ಅವರು ಡೇವಿಸ್ ಕಪ್ ಕ್ವಾರ್ಟರ್‌ಫೈನಲ್‌ನ ಮೊದಲ ಸಿಂಗಲ್ಸ್‌ನಲ್ಲಿ ಕಣಕ್ಕೆ ಇಳಿದಿದ್ದು, ಮಂಗಳವಾರ ತಡರಾತ್ರಿ ನಡೆದ ಪಂದ್ಯದಲ್ಲಿ 4–6, 4–6ರಿಂದ ಬೊಟಿಕ್ ವಾನ್ ಡಿ ಝಂಡ್‌ಶುಲ್ಪ್ ಅವರಿಗೆ ಶರಣಾದರು. ಈ ಮೂಲಕ ನೆದರ್ಲೆಂಡ್ಸ್ 1-0 ಮುನ್ನಡೆ ಸಾಧಿಸಿತು.

38 ವರ್ಷ ವಯಸ್ಸಿನ, 22 ಗ್ರ್ಯಾನ್ ಸ್ಲಾಮ್ ವಿಜೇತ ಆಟಗಾರ ಡೇವಿಸ್ ಕಪ್‌ನಲ್ಲಿ ಸತತ 29 ಪಂದ್ಯಗಳನ್ನು ಗೆದ್ದ ದಾಖಲೆ ಹೊಂದಿದ್ದು, 30ನೇ ಪಂದ್ಯದಲ್ಲಿ ಪರಾಭವಗೊಂಡಿದ್ದಾರೆ.

ಮಿನಿ ಒಲಿಂಪಿಕ್ಸ್ ಕ್ರೀಡಾಕೂಟ: ಷಾಟ್‌ಪಟ್‌ನಲ್ಲಿ ಬೆಂಗಳೂರಿನ ತೇಜಸ್ವಿನಿಗೆ ಸ್ವರ್ಣ

ಇಯಾನ್, ಸಂಹಿತಾಗೆ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಸಂಹಿತಾ ಜಿ.ರಾವ್ ಮತ್ತು ಇಯಾನ್ ಅಮನ್ನ ಅವರು ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಆಶ್ರಯದಲ್ಲಿ ಇಲ್ಲಿ ನಡೆಯುತ್ತಿರುವ ಮಿನಿ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಕ್ರಮವಾಗಿ ಬಾಲಕಿಯರ ಮತ್ತು ಬಾಲಕರ 200 ಮೀಟರ್ ಓಟದಲ್ಲಿ ಚಿನ್ನ ಗೆದ್ದರು.

ಕ್ರೀಡಾಕೂಟದ ಆರನೇ ದಿನವಾದ ಮಂಗಳವಾರ ನಡೆದ ಸ್ಪರ್ಧೆಯಲ್ಲಿ ಸಂಹಿತಾ ಜಿ. ರಾವ್ 27.8 ಸೆಕೆಂಡ್‌ನಲ್ಲಿ ಗುರಿ ಮುಟ್ಟಿದರು. 100 ಮೀಟರ್ ಓಟದಲ್ಲೂ ಚಾಂಪಿಯನ್ ಆಗಿದ್ದ ಇಯಾನ್ ಅಮನ್ನ 24.55 ಸೆಕೆಂಡ್‌ನಲ್ಲಿ ಗುರಿ ತಲುಪಿದರು.



ಬಾಲಕರ 4x100 ಮೀಟರ್ ರಿಲೆಯಲ್ಲಿ ಚಿನ್ನ ಗೆದ್ದ ದಕ್ಷಿಣ ಕನ್ನಡ ತಂಡ

ಫಲಿತಾಂಶ: ಬಾಲಕರು: ಅಥ್ಲೆಟಿಕ್ಸ್: 200 ಮೀ ಓಟ: ಇಯಾನ್ ಅಮನ್ನ (ಮಂಗಳೂರು, ಕಾಲ 24.55ಸೆ)–1, ಈರಣ್ಣ ಬಿ. ಹಡಪಾಡಿ (ಉಡುಪಿ)–2, ಆಶೀಶ್ ಆರ್. (ಮೈಸೂರು)–3; 600 ಮೀ. ಓಟ: ಅಜಯ್ ಪೃಥ್ವಿರಾಜ್ ಎಂ.ಎಲ್. (ಮೈಸೂರು, 1ನಿ. 28.6ಸೆ)–1, ಚಿರಂತ್ ಎಂ. ಕಶ್ಯಪ್ (ಚಿಕ್ಕಬಳ್ಳಾಪುರ)–2, ಆದಿತ್ಯ (ದಕ್ಷಿಣ ಕನ್ನಡ)–3; ಲಾಂಗ್‌ಜಂಪ್: ಮಿಹಿರ್ ಮುಕುಲ್ ಕರ್ಕೇರ (ಉಡುಪಿ, ಅಂತರ 5.84 ಮೀ)–1, ಕೌಶಿಕ್ ಪಿ. ಶೆಟ್ಟಿಗಾರ್ (ದಕ್ಷಿಣ ಕನ್ನಡ)–2, ಜಿಷ್ಣು ಯಶಸ್ಸನ್ (ಹಾಸನ)–3; ಜಾವೆಲಿನ್ ಥ್ರೋ: ಚಿರಾಗ್ ಎಂ.ಎಲ್ (ತುಮಕೂರು, ಎಸೆತ 36.80 ಮೀ)–1, ಧನುಷ್ ಡಿ.ಆರ್. (ಕೋಲಾರ)–2, ನಿರಂಜನ್ ಎಂ.ಕೆ. (ರಾಮನಗರ)–3; 4x100 ಮೀ. ರಿಲೇ: ದಕ್ಷಿಣ ಕನ್ನಡ (ಕಾಲ 49.2ಸೆ)–1, ಶಿವಮೊಗ್ಗ–3; 60 ಮೀ ಓಟ: ಸಲೀಮ್ ಮೊಹಮ್ಮದ್ ಗೊರೆಸಾಬ್ (ದಕ್ಷಿಣ ಕನ್ನಡ, ಕಾಲ 7.5ಸೆ)–1, ವಂಶಿ ಟಿ. (ಶಿವಮೊಗ್ಗ)–2, ಸಿದ್ಧ ರೆಡ್ಡಿ (ಯಾದಗಿರಿ)–3

ಟೇಕ್ವಾಂಡೊ: 24 ಕೆಜಿ ಒಳಗಿನವರು: ತರುಣ್ (ಬೆಂಗಳೂರು)–1, ಸಾಕ್ಷಿ ವರ್ಧನ್ (ಬೆಂಗಳೂರು)–2, ವೀರಾಂಜನ್ ಎಚ್. (ಕೊಡಗು) ಮತ್ತು ಬಿಲಾಲ್ ಅಹಮ್ಮದ್–3; 31 ಕೆಜಿ ಒಳಗಿನವರು: ಮೊಹಮ್ಮದ್ ಅಬೂಬಕ್ಕರ್ ಷರೀಫ್ (ಬೆಂಗಳೂರು)–1, ಮುಸ್ತಕಿಮ್ ಎ ಮುಲ್ಲ (ಬೆಳಗಾವಿ)–2, ಚಿರಾಗ್ ಎಸ್. (ಬೆಂಗಳೂರು ನಗರ) ಮತ್ತು ಎಸ್.ಜೋಯಲ್ ಸ್ಮಿತ್ (ಬೆಂಗಳೂರು)–3; 39 ಕೆಜಿ ಒಳಗಿನವರು: ಮೊಹಮ್ಮದ್ ಉಮರ್ ಷರೀಫ್ (ಬೆಂಗಳೂರು)–1, ಅಥರ್ವ್ ಎಸ್.ಟಿ (ಬೆಳಗಾವಿ)–2, ಗೋಕುಲ್ ಎಂ. (ಬೆಂಗಳೂರು) ಮತ್ತು ಆಯುಷ್ (ರಾಮನಗರ)–3; 48 ಕೆಜಿ ಒಳಗಿನವರು: ಹೇಮನಗೌಡ ಎಸ್ (ಬೆಂಗಳೂರು)–1, ವಿಪುಲ್ (ಬೆಂಗಳೂರು)–2, ಧನ್ವಂತ್ ಕುಮಾರ್ ಪಿ. (ಬೆಂಗಳೂರು) ಮತ್ತು ಸಾಗರ್ ಸಿ.ಎಸ್. (ಮಂಡ್ಯ)–3; 54 ಕೆಜಿ ಮೇಲಿನವರು: ಅಂಕಿತ್ ಸುನಿಲ್ (ಬೆಂಗಳೂರು)–1, ತನೀಶ್ ಎಸ್ (ಬೆಂಗಳೂರು)–2, ಹರ್ಷ ಕರುಂಬಿಯಾ (ಕೊಡಗು) ಮತ್ತು ಶ್ರೀಶ್ ಆಚಾರ್ಯ (ಧಾರವಾಡ)–3. **ಬ್ಯಾಸ್ಕೆಟ್‌ಬಾಲ್:** ಎಂಸಿಎಚ್‌ಸಿ– 1, ಪಿಸಿಸಿ–2, ಮೈಸೂರು–3.

ಬಾಲಕಿಯರು: ಅಥ್ಲೆಟಿಕ್ಸ್: 200 ಮೀ. ಓಟ: ಸಂಹಿತಾ ಜಿ. ರಾವ್ (ದಕ್ಷಿಣ ಕನ್ನಡ, ಕಾಲ 27.8ಸೆ)–1, ನಿಶ್ಚಿತಾ ಪಿ ಗೌಡ (ಮೈಸೂರು)–2, ಮಾಣಿಕಾ ಆದ್ಯಾ ಎಸ್ (ಮೈಸೂರು)–3; 600 ಮೀ. ಓಟ: ಗೌರಿ ಪೂಜಾರಿ (ಬೆಳಗಾವಿ, ಕಾಲ 1ನಿ. 40.6ಸೆ)–1, ಪೃಥ್ವಿ ಧರೆಪ್ಪ ಬೈಕೋಡ (ಬಾಗಲಕೋಟೆ)–2, ದಿವ್ಯಾ ಎನ್. (ರಾಮನಗರ)–3; ಷಾಟ್‌ಪಟ್: ತೇಜಸ್ವಿನಿ ಜಿ.ಆರ್ (ಬೆಂಗಳೂರು ನಗರ, ಎಸೆತ 11.62 ಮೀ)–1, ಪರಿಣಿತಾ ಕೆ. (ರಾರಾಜಿನಗರ)–2, ವೈಷ್ಣವಿ ಎಸ್. ಗೌಡ (ರಾಮನಗರ)–3; 4x100 ಮೀ. ರಿಲೇ: ಮೈಸೂರು (ಕಾಲ 53.4ಸೆ)–1, ಬೆಂಗಳೂರು ನಗರ–2, ತುಮಕೂರು–3; 60 ಮೀ ಓಟ: ಪೂಜಾ (ಉಡುಪಿ, ಕಾಲ 8ಸೆ)–1, ಖುಷಿ ಎಸ್. (ಶಿವಮೊಗ್ಗ)–2, ಯುಕ್ತಿ ಕೆ. (ಮೈಸೂರು)–3.

ಟೇಕ್ವಾಂಡೊ: 23 ಕೆಜಿ ಒಳಗಿನವರು: ಆರ್. ಕಾವ್ಯಾ (ಬೆಳಗಾವಿ)–1, ಲಿಖಿತಾಂಜನಾ ಕೆ. (ಬೆಂಗಳೂರು)–2, ಅಂಕಿತಾ ಉಪಾಧ್ಯಾ (ಬೆಂಗಳೂರು) ಮತ್ತು ಹರ್ಷಿತಾ ಪಿ. (ರಾಮನಗರ)–3; 30 ಕೆಜಿ ಒಳಗಿನವರು: ಸ್ವಪ್ನಾ (ದಕ್ಷಿಣ ಕನ್ನಡ)–1, ಮನೋನ್ಮಣಿ ರಾವ್ ಎಸ್. (ಬೆಂಗಳೂರು)–2, ಆರೂಷ್ ಪರ್ವೀನ್ (ಕೊಡಗು) ಮತ್ತು ಸಂಚ್ವಿ ಎಸ್. ಹಾನಗಲ್ (ಬೆಂಗಳೂರು ಉತ್ತರ)–3; 38 ಕೆಜಿ ಒಳಗಿನವರು: ನೀಲಾ ಭಾರ್ಗವ (ಬೆಂಗಳೂರು)–1, ಡಿ.ಜಿ. ಲಾವಣ್ಯ (ಚಿತ್ರದುರ್ಗ)–2, ವೇದಾಶ್ರೀ ಬಿ (ಬೆಂಗಳೂರು) ಮತ್ತು ಗಾಣಿಕಾ ಬಿ.ಎಚ್ (ಚಿಕ್ಕಮಗಳೂರು)–3; 48 ಕೆಜಿ ಒಳಗಿನವರು: ಪೂರ್ವಿಕಾ ಎಂ (ರಾಮನಗರ)–1, ಸ್ವಸ್ತಿಕಾ ಬಿ. (ಬೆಂಗಳೂರು)–2, ಗಾನವಿ ಎ. ಮತ್ತು ಧಾತ್ರಿ ಎಸ್. (ಇಬ್ಬರೂ ಬೆಂಗಳೂರು)–3; 53 ಕೆಜಿ ಮೇಲಿನವರು: ಚರಣ್ಯಾ ಎಸ್. (ಬೆಂಗಳೂರು)–1, ಚರಿತಾ ಎಂ.ಎಸ್. (ಚಿಕ್ಕಮಗಳೂರು)–2, ಅಫ್ರಾ ಪಠಾಣ್ (ಬೆಳಗಾವಿ) ಮತ್ತು ತಮೋಘ್ನಾ ಸಾಗರ್ (ಹೊಸದುರ್ಗ).

ಬ್ಯಾಸ್ಕೆಟ್‌ಬಾಲ್: ಮೈಸೂರು–1, ಬೀಗಲ್ಸ್ ಬಿಸಿ–2, ಯಂಗ್ ಓರಿಯನ್ಸ್ ಎಸ್.ಸಿ–3.

ಬ್ಯಾಡ್ಮಿಂಟನ್: ಜಾಂಗ್‌ಗೆ ಅನುಪಮಾ ಆಘಾತ

ಶೆನ್‌ಜೆನ್ (ಚೀನಾ) (ಪಿಟಿಐ): ಭಾರತದ ಅನುಪಮಾ ಉಪಾಧ್ಯಾಯ ಮಂಗಳವಾರ ಚೀನಾ ಮಾಸ್ಟರ್ಸ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲಿ 15ನೇ ಕ್ರಮಾಂಕದ ಬೀವೆನ್ ಜಾಂಗ್ ಅವರಿಗೆ ಆಘಾತ ನೀಡಿದರು.



ಅನುಪಮಾ ಉಪಾಧ್ಯಾಯ

19 ವರ್ಷ ವಯಸ್ಸಿನ ಆಟಗಾರ್ತಿ ಮಂಗಳವಾರ ನಡೆದ ಪಂದ್ಯದಲ್ಲಿ 21-17, 8-21, 22-20ರಿಂದ ಮೂರು ಗೇಮ್‌ಗಳ ಹೋರಾಟದಲ್ಲಿ ಅಮೆರಿಕದ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿದರು.

ರ‍್ಯಾಂಕಿಂಗ್‌ನಲ್ಲಿ 50ನೇ ಸ್ಥಾನದಲ್ಲಿರುವ ಅನುಪಮಾ ಅವರು ಮುಂದಿನ ಸುತ್ತಿನಲ್ಲಿ ಜಪಾನ್‌ನ ನಟ್ಸುಕಿ ನಿದೈರಾ ಅವರನ್ನು ಎದುರಿಸಲಿದ್ದಾರೆ.

ಸುಮೀತ್ ರೆಡ್ಡಿ ಮತ್ತು ಎನ್.ಸಿಕ್ಕಿ ರೆಡ್ಡಿ ಜೋಡಿಯು ಮಿಶ್ರ ಡಬಲ್ಸ್‌ನಲ್ಲಿ ಎರಡನೇ ಸುತ್ತಿಗೆ ಮುನ್ನಡೆಯಿತು. ಈ ಜೋಡಿಯು 23-21, 17-21, 21-17ರಿಂದ ಅಮೆರಿಕದ ಪ್ರೀಸ್ಲೆ ಸ್ಮಿತ್ ಮತ್ತು ಜೆನ್ನಿ ಗೇ ಅವರನ್ನು ಮಣಿಸಿತು.

ಪುರುಷರ ಸಿಂಗಲ್ಸ್‌ನಲ್ಲಿ ಪ್ರಿಯಾಂಶು ರಾಜಾವತ್ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಕ್ರಾಸ್ ಕಂಟ್ರಿ: ಮುಂಬೈ ವಿ.ವಿ.ಯ ರಾಜ್ ತಿವಾರಿಗೆ ಚಿನ್ನ

ಮಂಗಳೂರು ವಿವಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಆತಿಥೇಯ ಮಂಗಳೂರು ವಿಶ್ವವಿದ್ಯಾನಿಲಯ ತಂಡ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪುರುಷರ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಭಾರತೀಯ ವಿಶ್ವವಿದ್ಯಾಲಯಗಳ ಸಂಘ ಮತ್ತು ಮಂಗಳೂರು ವಿವಿ ಸಹಯೋಗದಲ್ಲಿ ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಂಗಳವಾರ ಆಯೋಜಿಸಿದ್ದ ಚಾಂಪಿಯನ್‌ಷಿಪ್‌ನಲ್ಲಿ ಮಂಗಳೂರು ವಿವಿ 69 ಪಾಯಿಂಟ್ಸ್ ಕಲೆ ಹಾಕಿತು. ಮುಂಬೈ ವಿವಿ ರನ್ನರ್ ಅಪ್ ಆದರೆ ಜೈಪುರದ ರಾಜಸ್ತಾನ ವಿವಿ ಮೂರನೇ ಸ್ಥಾನ ಮತ್ತು ಚಂಡೀಗಢದ ಲುಮ್ರಿನ್ ತಾಂತ್ರಿಕ ವಿವಿ 4ನೇ ಸ್ಥಾನ ಗಳಿಸಿತು.

ಕಳೆದ ಬಾರಿ ಚಾಂಪಿಯನ್ ಆಗಿದ್ದ ಮಂಗಳೂರು ವಿವಿ ಪರವಾಗಿ ಆಳ್ವಾಸ್ ಕಾಲೇಜಿನ ನವರತನ್, ಸಾಹಿಲ್ ಕಾಂಬೋಜ್, ಅಮನ್ ಕುಮಾರ್, ರೋಹಿತ್ ಜಾ, ಚಂದನ್ ಯಾದವ್ ಮತ್ತು ಗಗನ್ ಸಿಂಗ್ ಅವರನ್ನು ಕಣಕ್ಕೆ ಇಳಿಸಲಾಗಿತ್ತು. ನವರತನ್ ಎಂಟನೇ ಸ್ಥಾನ ಗಳಿಸಿ ವಿಶ್ವವಿದ್ಯಾಲಯದ ಉತ್ತಮ ಓಟಗಾರ ಎನಿಸಿಕೊಂಡರು. ಗಗನ್ ಮತ್ತು ರೋಹಿತ್ ಝಾ ಕ್ರಮವಾಗಿ 17 ಮತ್ತು 18ನೇ ಸ್ಥಾನ ಗಳಿಸಿದರೆ ಅಮನ್ ಕುಮಾರ್ 26ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು. ಕಳೆದ ಬಾರಿಯ ಬೆಳ್ಳಿ ಪದಕ ವಿಜೇತ ಚಂದನ್ ಯಾದವ್ ಓಟ ಪೂರ್ತಿಗೊಳಿಸದೆ ನಿರಾಸೆ ಅನುಭವಿಸಿದರು. ಸಾಹಿಲ್ ಕೂಡ ವೈಫಲ್ಯ ಕಂಡರು.

ಚಿನ್ನಕ್ಕೆ ಮುತ್ತಿಟ್ಟ ರಾಜ್ ತಿವಾರಿ: ಮುಸ್ಸಂಜೆಯ ಹಿತಕರ ವಾತಾವರಣದಲ್ಲಿ ಅಮೋಘ ಓಟ ಪ್ರದರ್ಶಿಸಿದ ಮುಂಬೈ ವಿವಿಯ ರಾಜ್ ತಿವಾರಿ ಪ್ರತಿಸ್ಪರ್ಧಿಯನ್ನು ಅರ್ಧ ನಿಮಿಷದ ಅಂತರದಲ್ಲಿ ಹಿಂದಿಕ್ಕಿ ಚಿನ್ನಕ್ಕೆ ಮುತ್ತಿಕ್ಕಿದರು. 30ನಿ 59 ಸೆ.ಗಳಲ್ಲಿ ಅವರು ಗುರಿ ಮುಟ್ಟಿದರು. ಬೆಳ್ಳಿ ಪದಕಕ್ಕೆ ಕೊಲ್ಹಾಪುರದ ಶಿವಾಜಿ ವಿವಿಯ ಪ್ರಧಾನ್ ಕಿರೂಳ್ಕರ್ ಮತ್ತು ಅಭಿಷೇಕ್ ದೇವಕಾತೆ ನಡುವೆ ಜಿದ್ದಾಜಿದ್ದಿಯ ಹಣಾಹಣಿ ಏರ್ಪಟ್ಟಿತು. ಪ್ರಧಾನ್ 31 ನಿ 28 ಸೆಕೆಂಡು ಮತ್ತು ಅಭಿಷೇಕ್ 31 ನಿ 30 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಫಲಿತಾಂಶಗಳು: ರಾಜ್ ತಿವಾರಿ (ಮುಂಬೈ ವಿವಿ)–1. ಕಾಲ: 30ನಿ 59 ಸೆ, ಪ್ರಧಾನ್ ಕಿರೂಳ್ಕರ್ (ಶಿವಾಜಿ ವಿವಿ, ಕೊಲ್ಹಾಪುರ)–2. (31.28), ಅಭಿಷೇಕ್ ದೇವಕಾತೆ (ಶಿವಾಜಿ ವಿವಿ)–3. (31.30); ದಿನೇಶ್ ಕುಮಾರ್ (ದೀನ್ ದಯಾಳ್ ಉಪಾಧ್ಯಾಯ ವಿವಿ, ಗೋರಖ್‌ಪುರ)–4, ನಬೀಲ್ ಸಾಹಿ (ಕ್ಯಾಲಿಕಟ್ ವಿವಿ)–5, ಶುಭಂ ಬಲಿಯಾನ್ (ಲುಮ್ರಿನ್ ತಾಂತ್ರಿಕ ವಿವಿ)–6, ಮೃಣಾಲ್ ಸರೋದೆ (ಮುಂಬೈ ವಿವಿ)–7, ನವರತನ್ (ಮಂಗಳೂರು ವಿವಿ)–8, ಸೌರವ್ ತಿವಾರಿ (ಆರ್‌ಟಿಎಂ ವಿವಿ ನಾಗ್ಪುರ)–9, ಬಿಟ್ಟು (ರಾಜಸ್ತಾನ ವಿವಿ)–10.

ಸೆಮಿಫೈನಲ್‌ನಲ್ಲಿ ಜಪಾನ್ ವಿರುದ್ಧ 2–0 ಜಯ • ನವನೀತ್, ಲಾಲ್ರೆಂಸಿಯಾಮಿ ಮಿಂಚು

ಫೈನಲ್‌ಗೆ ಭಾರತ; ಚೀನಾ ಎದುರಾಳಿ

ರಾಜಗೀರ್ (ಬಿಹಾರ), (ಪಿಟಿಐ): ಅಜೇಯ ಓಟವನ್ನು ಮುಂದುವರಿಸಿದ ಹಾಲಿ ಚಾಂಪಿಯನ್ ಭಾರತ ತಂಡ 2–0 ಗೋಲುಗಳಿಂದ ಜಪಾನ್ ತಂಡವನ್ನು ಸೋಲಿಸಿ ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಮಂಗಳವಾರ ಫೈನಲ್ ಪ್ರವೇಶಿಸಿತು.

ಉಪನಾಯಕಿ ನವನೀತ್ ಕೌರ್ ಅವರು 48ನೇ ನಿಮಿಷ ಪೆನಾಲ್ಟಿ ಸ್ಟ್ರೋಕ್ ಅವಕಾಶವನ್ನು ಗೋಲಾಗಿ ಪರಿವರ್ತಿಸಿದರೆ, 56ನೇ ನಿಮಿಷ ಲಾಲ್ರೆಂಸಿಯಾಮಿ ಫೀಲ್ಡ್ ಗೋಲಿನ ಮೂಲಕ ಗೆಲುವಿನ ಅಂತರ ಹೆಚ್ಚಿಸಿದರು. ಆದರೆ ಸೆಮಿಫೈನಲ್ ಪಂದ್ಯದಲ್ಲಿ ಭಾರತ ತಂಡಕ್ಕೆ ಹಲವು ಸ್ಕೋರಿಂಗ್ ಅವಕಾಶಗಳು ದೊರೆತಿದ್ದವು. 13 ಪೆನಾಲ್ಟಿ ಕಾರ್ನರ್‌ಗಳು ಅವಕಾಶಗಳೂ ವ್ಯರ್ಥವಾದವು. ಆತಿಥೇಯ ತಂಡವು ಬುಧವಾರ ನಡೆಯುವ ಫೈನಲ್‌ನಲ್ಲಿ ಚೀನಾ ತಂಡವನ್ನು ಎದುರಿಸಲಿದೆ. ಚೀನಾ ದಿನದ ಮೊದಲ ಸೆಮಿಫೈನಲ್‌ನಲ್ಲಿ 3–1 ಗೋಲುಗಳಿಂದ ಮಲೇಷ್ಯಾ ತಂಡವನ್ನು ಪರಾಭವಗೊಳಿಸಿತ್ತು.

ಮಲೇಷ್ಯಾ ಮತ್ತು ಜಪಾನ್ ತಂಡಗಳು ಮೂರು ಮತ್ತು ನಾಲ್ಕನೇ ಸ್ಥಾನ ನಿರ್ಧರಿಸಲು ಸೆಣಸಾಡಲಿವೆ. ದಕ್ಷಿಣ ಕೊರಿಯಾ ದಿನದ ಇನ್ನೊಂದು ಪಂದ್ಯದಲ್ಲಿ 3–0ಯಿಂದ ಥಾಯ್ಲೆಂಡ್ ತಂಡವನ್ನು ಸೋಲಿಸಿ ಐದನೇ ಸ್ಥಾನ ಪಡೆಯಿತು.



ಭಾರತ ತಂಡದ ಮೊದಲ ಗೋಲು ಗಳಿಸಿದ ನವನೀತ್ ಕೌರ್ (ಎಡಗಡೆ) ಅವರ ಜೊತೆ ಸಹ ಆಟಗಾರ್ತಿಯರು ಸಂಭ್ರಮಿಸಿದರು ಪಿಟಿಐ ಚಿತ್ರ

ಭಾರತ ತಂಡದವರು ಲೀಗ್ ಪಂದ್ಯದ ರೀತಿ ಸೆಮಿಫೈನಲ್‌ನಲ್ಲೂ ಆಕ್ರಮಣದ ಆಟವನ್ನು ಮುಂದುವರಿಸಿ ಜಪಾನ್ ತಂಡದ ಮೇಲೆ ಒತ್ತಡ ಹೇರಿದರು. ಜಪಾನ್ ತಂಡದ ಆವರಣದಲ್ಲೇ ಹೆಚ್ಚಿನ ಅವಧಿಯಲ್ಲಿ ಆಟ ಸಾಗಿದ್ದ ಪರಿಣಾಮ, ಭಾರತದ ರಕ್ಷಣಾ ವಿಭಾಗಕ್ಕೆ ಪರೀಕ್ಷೆಯೇ ಎದುರಾಗಲಿಲ್ಲ.

ಐದನೇ ನಿಮಿಷ ನಾಯಕಿ ಸಲೀಮಾ ಟೆಟೆ ಅವರ ಗೋಲು ಪ್ರಯತ್ನವನ್ನು ಜಪಾನ್‌ನ ಗೋಲ್‌ಕೀಪರ್ ಯು ಕುಡೊ ವಿಫಲಗೊಳಿಸಿದರು.ಭಾರತದ ಆಟಗಾರ್ತಿಯರ ಸತತ ದಾಳಿಯ ಪ್ರಯತ್ನಗಳಿಂದ ಮತ್ತೆರಡು ಪೆನಾಲ್ಟಿ ಕಾರ್ನರ್‌ಗಳು ದೊರೆತವು. ಆದರೆ ಕುಡೊ ಜಾಗೃತರಾಗಿದ್ದು ನವನೀತ್ ಕೌರ್ ಮತ್ತು ದೀಪಿಕಾ ಅವರ ಗೋಲು ಯತ್ನಗಳಿಗೆ ಅಡ್ಡಿಯಾದರು.

ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ

ಎರಡನೇ ಕ್ವಾರ್ಟರ್‌ನಲ್ಲಿ ಮೂರು ನಿಮಿಷಗಳಾಗುವಷ್ಟರಲ್ಲಿ ಭಾರತಕ್ಕೆ ಸತತವಾಗಿ ಪೆನಾಲ್ಟಿ ಕಾರ್ನರ್ ಅವಕಾಶಗಳು ದೊರೆತರೂ ಅವುಗಳಲ್ಲಿ ಯಶಸ್ಸು ದೊರೆಯಲಿಲ್ಲ.

21ನೇ ನಿಮಿಷದಲ್ಲೂ ಕಾರ್ನರ್‌ಗಳು ದೊರೆತವು. ಆದರೆ ಕುಡೊ ಅವರನ್ನು ವಂಚಿಸಲಾಗಲಿಲ್ಲ. ಒಮ್ಮೆಯಂತೂ ತಮ್ಮ ಬಲಗಾಲನ್ನು ಪೂರ್ಣವಾಗಿ ಚಾಚಿದ ಎದುರಾಳಿ ಗೋಲ್‌ಕೀಪರ್, ದೀಪಿಕಾ ಅವರಿಗೆ ಗೋಲು ನಿರಾಕರಿಸಿದರು.

ವಿರಾಮದ ನಂತರವೂ ಭಾರತದ ಮೇಲುಗೈ ಮುಂದುವರಿಯಿತು. 31ನೇ ನಿಮಿಷ, 41 ನಿಮಿಷದಲ್ಲೂ ಪೆನಾಲ್ಟಿ ಕಾರ್ನರ್ ಅವಕಾಶ-ಗಳಲ್ಲಿ ಆಟಗಾರ್ತಿಯರು ಯಶ ಕಾಣಲಿಲ್ಲ. 47ನೇ ನಿಮಿಷ 12ನೇ ಪೆನಾಲ್ಟಿ ಕಾರ್ನರ್ ಅವಕಾಶವೂ ವ್ಯರ್ಥವಾಯಿತು.

ಆದರೆ ಮರುನಿಮಿಷ ದೀಪಿಕಾ ಅವರನ್ನು ಫೌಲ್ ಮಾಡಿದ್ದರಿಂದ ದೊರೆತ 'ಪೆನಾಲ್ಟಿ' ಅವಕಾಶವನ್ನು ಪರಿವರ್ತಿಸುವಲ್ಲಿ ನವನೀತ್ ಕೌರ್ ಯಶಸ್ವಿಯಾದರು. ಈ ಗೋಲಿನಿಂದ ಭಾರತದ ಪಾಳೆಯದಲ್ಲಿ ನವೋಲ್ಲಾಸ ಮನೆಮಾಡಿತು.56ನೇ ನಿಮಿಷ ಭಾರತ ಫೀಲ್ಡ್ ಗೋಲಿನ ಮೂಲಕ ಮುನ್ನಡೆಯನ್ನು 2–0ಗೆ ಹೆಚ್ಚಿಸಿತು.

ಸುನೆಲಿಟಾ ಟೊಪ್ಪೊ ಅವರು ಕೌಶಲದ ಡ್ರಿಬ್ಲಿಂಗ್ ಮೂಲಕ ನೀಡಿದ ಪಾಸ್ ನಲ್ಲಿ ಲಾಲ್ರೆಂಸಿಯಾಮಿ ಚೆಂಡನ್ನು ಜಪಾನ್ ಗೋಲಿನೊಳಕ್ಕೆ ನಿರ್ದೇಶಿಸಿದರು.

ಜಪಾನ್ ತಂಡಕ್ಕೆ ಅಪರೂಪವೆಂಬಂತೆ ಪಂದ್ಯದ ಕೊನೆಯ ಕ್ಷಣದಲ್ಲಿ ಪೆನಾಲ್ಟಿ ಕಾರ್ನರ್ ದೊರೆತರೂ, ಪ್ರಬಲ-ವಾಗಿದ್ದ ಭಾರತ ತಂಡದ ರಕ್ಷಣೆ ಗೋಲಿಗೆ ಅವಕಾಶ ನೀಡಲಿಲ್ಲ.

ಫೈನಲ್ ಪಂದ್ಯ: ಸಂಜೆ 4.45
ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಕೊಹ್ಲಿ ಸುತ್ತ ಹೇಳಿಕೆಗಳ ಬಾಣ ಬಿರುಸು

ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಗೆ ಸಿದ್ಧತೆ

ಸಿಡ್ನಿ (ಪಿಟಿಐ): ಬಾರ್ಡರ್ –ಗಾವಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯ ಆರಂಭ ಸಮೀಪಿಸುತ್ತಿದೆ. ಅದರೊಂದಿಗೆ ಆತಿಥೇಯ ಆಸ್ಟ್ರೇಲಿಯಾ ತಂಡದ ಮಾಜಿ ಹಾಗೂ ಹಾಲಿ ಆಟಗಾರರ ಹೇಳಿಕೆಗಳೂ ಕಾವೇರಿಸುತ್ತಿವೆ. ಅದರಲ್ಲೂ ವಿರಾಟ್ ಕೊಹ್ಲಿ ಅವರನ್ನು ಕೇಂದ್ರಿಕರಿಸಿದ ಮಾತಿನ ಬಾಣಗಳು ಹೆಚ್ಚೆಚ್ಚು ತೂರಿಬರುತ್ತಿವೆ. ಈಗ ಈ ಸಾಲಿಗೆ ಆಸ್ಟ್ರೇಲಿಯಾದ ವಿಕೆಟ್‌ಕೀಪಿಂಗ್ ದಂತಕಥೆ ಇಯಾನ್ ಹೀಲಿ ಕೂಡ ಸೇರಿದ್ದಾರೆ.



ವಿರಾಟ್ ಕೊಹ್ಲಿ

'ಬೌಲರ್‌ಗಳು ಕೊಹ್ಲಿಯ ದೇಹ ಮತ್ತು ಫ್ರಂಟ್‌ಫುಟ್ ಪ್ಯಾಡ್ ಗುರಿಯಾಗಿಸಿಕೊಂಡು ಎಸೆತಗಳನ್ನು ಹಾಕಬೇಕು. ಅದರೊಂದಿಗೆ ಕೊಹ್ಲಿ ಬ್ಯಾಕ್‌ಫು-ಟ್‌ನಲ್ಲಿ ಆಡುವಂತೆ ಮಾಡಬೇಕು. ಆದರೆ ಪ್ರತಿಯೊಂದು ಎಸೆತವನ್ನೂ ಅದೇ ರೀತಿ ಪ್ರಯೋಗಿಸಬಾರದು. ಕೊಹ್ಲಿ ಅದಕ್ಕೆ ಕೂಡಲೇ ಒಗ್ಗಿಕೊಳ್ಳುತ್ತಾರೆ' ಎಂದು ಹೀಲಿ ಸಲಹೆ ನೀಡಿದ್ದಾರೆ. 119 ಟೆಸ್ಟ್ ಪಂದ್ಯಗಳಿಂದ 4500 ರನ್ ಗಳಿಸಿರುವ ಹೀಲಿ ಅವರು ಎಸ್.ಇ. ಎನ್ ರೇಡಿಯೊಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

'ಒಂದೊಮ್ಮೆ ಫ್ರಂಟ್ ಫುಟ್ ತಂತ್ರಗಾರಿಕೆ ಫಲಿಸದಿದ್ದರೆ ಕೊಹ್ಲಿಯ ದೇಹವನ್ನು ಗುರಿಯಿಟ್ಟುಕೊಳ್ಳಿ. ವಿಶೇಷವಾಗಿ ಅವರ ಕಂಕುಳದ ಸಮೀಪದಲ್ಲಿ ಹಾದುಹೋಗುವಂತೆ ಎಸೆತಗಳಿರಲಿ. ಅವರು ಬಲಗೈ ಬ್ಯಾಟರ್ ಆಗಿರುವುದರಿಂದ ಇಂತಹ ಎಸೆತಗಳನ್ನು ಆಡುವಾಗ ತಪ್ಪು ಮಾಡುವ ಸಾಧ್ಯತೆ ಇದೆ. ಡಕಿಂಗ್, ವೇವಿಂಗ್ ಮತ್ತು ಬ್ಯಾಕ್‌ವರ್ಡ್ ಬೆಂಡಿಂಗ್ ಮಾಡುತ್ತಿದ್ದರೆ ಅವರ ಮುಂದೆ ಶಾರ್ಟ್ ಲೆಗ್ ಫೀಲ್ಡರ್ ಇರಲಿ. ಅವರು ಹುಕ್ ಮತ್ತು ಪುಲ್ ಶಾಟ್‌ಗಳನ್ನು ಆಡುವುದನ್ನು ತಡೆಯಲು ಬ್ಯಾಡ್ಜ್ ಎತ್ತರಕ್ಕೆ ಎಸೆತ ಹಾಕಿ' ಎಂದು ಸಲಹೆ ನೀಡಿದ್ದಾರೆ.

ಕೊಹ್ಲಿಯನ್ನು ಕೆಣಕಬೇಡಿ: 'ವಿರಾಟ್ ಕೊಹ್ಲಿ ಅವರನ್ನು ಕೆಣಕಬೇಡಿ. ಅವರನ್ನು ಅವರ ಪಾಡಿಗೆ ಬಿಟ್ಟುಬಿಡಿ. ಅವರನ್ನು ಕೆಣಕಿದಾಗ ಲೆಲ್ಲ ಅತ್ಯುತ್ತಮವಾಗಿ ಆಡಿದ ಉದಾಹರಣೆಗಳು ಬಹಳಷ್ಟಿವೆ. ಅವರು ಅಕ್ರಮಣಶೀಲರಾಗಿಬಿಟ್ಟರೆ ನಿಯಂತ್ರಿಸುವುದು ಕಷ್ಟ' ಎಂದು ಆಸ್ಟ್ರೇಲಿಯಾದ ಮಾಜಿ ಆಲ್‌ರೌಂಡರ್ ಶೇನ್ ವಾಟ್ಸನ್ ಹೇಳಿದ್ದಾರೆ.

'ನನಗೆ ಗೊತ್ತಿರುವ ಪ್ರಕಾರ ಕೊಹ್ಲಿ ಅವರಲ್ಲಿ ಸಾಧನೆಯ ಹಸಿವು ಅಗಾಧವಾಗಿದೆ. ಸದಾಕಾಲ ಅವರು ಪ್ರಜ್ವಲಿಸಲು ಪ್ರಯತ್ನಿಸುತ್ತಾರೆ. ತಾವು ಎದುರಿಸುವ ಪ್ರತಿಯೊಂದು ಎಸೆತಕ್ಕೂ ತಕ್ಕ ಉತ್ತರ ನೀಡುತ್ತಾರೆ. ಅವರು ಅತಿಮಾನುಷ ಶಕ್ತಿಯುಳ್ಳವರು' ಎಂದು ವಾಟ್ಸನ್ 'ವಿಲ್ಲೊ ಟಾಕ್' ಪಾಡ್‌ಕಾಸ್ಟ್‌ನಲ್ಲಿ ಬಣ್ಣಿಸಿದ್ದಾರೆ.

ವಿರಾಟ್ ಚಾಂಪಿಯನ್: ಪ್ರಸಕ್ತ ವರ್ಷದಲ್ಲಿ ವಿರಾಟ್ ಕೊಹ್ಲಿ ಅವರು ರನ್ ಗಳಿಸಲು ಪರದಾಡುತ್ತಿದ್ದಾರೆ. ಫಾರ್ಮ್ ಮರಳುವ ಪ್ರಯತ್ನಗಳಲ್ಲಿ ಎಡವುತ್ತಿದ್ದಾರೆ. ಆಡಿರುವ 6 ಟೆಸ್ಟ್‌ಗಳಲ್ಲಿ 22.72ರ ಸರಾಸರಿಯಲ್ಲಿ ರನ್ ಗಳಿಸಿದ್ದಾರೆ. ಇದರಿಂದಾಗಿ ಹಲವರು ಅವರನ್ನು ಟೀಕಿಸುತ್ತಿದ್ದಾರೆ. ಆದರೆ ಆಸ್ಟ್ರೇಲಿಯಾದ ಸ್ಪಿನ್ ತಾರೆ ನೇಥನ್ ಲಯನ್, 'ವಿರಾಟ್ ಅವರು ಎಂದಿದ್ದರೂ ಚಾಂಪಿಯನ್ ಆಟಗಾರ' ಎಂದಿದ್ದಾರೆ.

'ಅವರ ಸಮಗ್ರ ದಾಖಲೆಗಳನ್ನು ನೋಡಿ. ಅವರನ್ನು ನೀವು ಚಾಂಪಿಯನ್ ಅನ್ನದೇ ಇರಲು ಸಾಧ್ಯವೇ ಇಲ್ಲ. ಅವರ ಬಗ್ಗೆ ನನ್ನ ಮನದಲ್ಲಿ ಅಪಾರ ಗೌರವದ ಭಾವನೆ ಬಿಟ್ಟು ಮತ್ತೇನೂ ಇಲ್ಲ' ಎಂದು ಲಯನ್ ಹೇಳಿದ್ದಾರೆ.

'ನಾನು ಅವರ ವಿಕೆಟ್ ಗಳಿಸಲು ಉತ್ಸುಕನಾಗಿದ್ದೇನೆ. ಅದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ. ಆದರೆ ಅದೆಷ್ಟು ಕಠಿಣ ಸವಾಲು ಎಂಬುದೂ ನನಗೆ ಗೊತ್ತಿದೆ. ಅವರಂತಹ ಆಟಗಾರನೊಂದಿಗೆ ಸ್ಪರ್ಧಿಸುವುದು ಅಮೋಘವಾದ ಅನುಭವ' ಎಂದು ಕ್ರಿಕೆಟ್ ಡಾಟ್ ಕಾಮ್ ಡಾಟ್ ಎಯು ವೆಬ್‌ಗೆ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಭಾರತ ತಂಡಕ್ಕೆ ಸಿಗದ ಅನುಮತಿ

ನವದೆಹಲಿ (ಪಿಟಿಐ): ಪಾಕಿಸ್ತಾನದಲ್ಲಿ ನಡೆಯಲಿರುವ ಅಂಧರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಆಡುವುದಿಲ್ಲ. ಭಾರತದ ಕೇಂದ್ರ ಸರ್ಕಾರವು ಪಾಕಿಸ್ತಾನಕ್ಕೆ ಪ್ರಯಾಣಿಸಲು ಅನುಮತಿ ನೀಡದ ಕಾರಣ ತಂಡವು ಟೂರ್ನಿಯಿಂದ ಹಿಂದೆ ಸರಿದಿದೆ ಎಂದು ರಾಷ್ಟ್ರೀಯ ಅಂಧರ ಕ್ರಿಕೆಟ್ ಫೆಡರೇಷನ್ ತಿಳಿಸಿದೆ.

ಇದೇ 23ರಿಂದ ಡಿಸೆಂಬರ್ 3ರವರೆಗೆ ಟೂರ್ನಿಯು ಪಾಕ್‌ನಲ್ಲಿ ನಡೆಯಲಿದೆ. ಅದರಲ್ಲಿ ಭಾಗವಹಿಸಲು ಭಾರತ ತಂಡವು ವಾಘಾ ಗಡಿ ಮೂಲಕ ಪಾಕಿಸ್ತಾನಕ್ಕೆ ತೆರಳಬೇಕಿತ್ತು. ಅಂಧರ ಕ್ರಿಕೆಟ್ ತಂಡಕ್ಕೆ ಈಚೆಗೆ ಕೇಂದ್ರ ಕ್ರೀಡಾ ಸಚಿವಾಲಯವು ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡಿತ್ತು. ಆದರೆ ವಿದೇಶಾಂಗ ವ್ಯವಹಾರಗಳ ಸಚಿವಾಲಯದಿಂದ ಅನುಮತಿ ದೊರೆಯಲಿಲ್ಲ.

'ನಾವು ನಾಳೆ (ಬುಧವಾರ) ವಾಘಾ ಗಡಿಗೆ ಹೋಗಲು ಸಿದ್ಧರಾಗಿದ್ದೆವು. ಆದರೆ ಇದುವರೆಗೆ ವಿದೇಶಾಂಗ ವ್ಯವಹಾರಗಳ ಇಲಾಖೆಯ ಅಧಿಕಾರಿಗಳಿಂದ ಯಾವುದೇ ಅನುಮತಿ ಬಂದಿಲ್ಲ. ಇದರಿಂದ ನಮಗೆ ಬೇಸರವಾಗಿದೆ' ಎಂದು ಭಾರತೀಯ ಅಂಧರ ಕ್ರಿಕೆಟ್ ಸಂಸ್ಥೆ (ಐಬಿಸಿಎ) ಪ್ರಧಾನ ಕಾರ್ಯದರ್ಶಿ ಶೈಲೇಂದ್ರ ಯಾದವ್ ಹೇಳಿದ್ದಾರೆ.

ಶ್ರೇಯಾಂಕಾ, ಶಫಾಲಿಗೆ ಕೊಕ್

ನವದೆಹಲಿ (ಪಿಟಿಐ): ಒಂದು ವರ್ಷದಿಂದ ಸತತವಾಗಿ ವಿಫಲರಾದ ಅಗ್ರ ಕ್ರಮಾಂಕದ ಬ್ಯಾಟರ್ ಶಫಾಲಿ ವರ್ಮಾ ಅವರನ್ನು ಆಸ್ಟ್ರೇಲಿಯಾ ವಿರುದ್ಧ ಡಿಸೆಂಬರ್‌ನಲ್ಲಿ ನಡೆಯಲಿರುವ ಮೂರು ಪಂದ್ಯಗಳ ಏಕದಿನ ಸರಣಿಗೆ ಭಾರತ ತಂಡದಿಂದ ಕೈಬಿಡಲಾಗಿದೆ.

ನ್ಯೂಜಿಲೆಂಡ್ ವಿರುದ್ಧ ಕಳೆದ ತಿಂಗಳು ತವರು ಸರಣಿಯಲ್ಲಿ 2–1 ರಿಂದ ಗೆದ್ದ ತಂಡದಲ್ಲಿದ್ದ ಉಮಾ ಚೆಟ್ರಿ, ದಯಾಳನ್ ಹೇಮಲತಾ, ಶ್ರೇಯಾಂಕಾ ಪಾಟೀಲ ಮತ್ತು ಸಯಾಲಿ ಸಾತ್ಘರೆ ಅವರನ್ನೂ ಕೈಬಿಡಲಾಗಿದೆ. ಸರಣಿಯ ಮೊದಲೆರಡು ಏಕದಿನ ಪಂದ್ಯಗಳು ಡಿಸೆಂಬರ್ 5 ಮತ್ತು 8ರಂದು ಬ್ರಿಸ್ಬೇನ್‌ನ ಆ್ಯಲನ್ ಬಾರ್ಡರ್ ಫೀಲ್ಡ್‌ನಲ್ಲಿ ನಡೆಯಲಿವೆ.

ಭಾರತ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪ ನಾಯಕಿ), ಪ್ರಿಯಾ ಪೂನಿಯಾ, ಜೆಮಿಮಾ ರಾಡ್ರಿಗಸ್, ಹರ್ಲೀನ್ ದಿಯೋಲ್, ಯಷ್ತಿಕಾ ಭಾಟಿಯಾ (ವಿಕೆಟ್ ಕೀಪರ್), ರಿಚಾ ಘೋಷ್ (ವಿಕೆಟ್ ಕೀಪರ್), ತೇಜಲ್ ಹಸಬ್ನಿಸ್, ದೀಪ್ತಿ ಶರ್ಮಾ, ಮಿನ್ನು ಮಣಿ, ಪ್ರಿಯಾ ಮಿಶ್ರಾ, ರಾಧಾ ಯಾದವ್, ತಿತಾಸ್ ಸಾಧು, ಅರುಂಧತಿ ರೆಡ್ಡಿ, ರೇಣುಕಾ ಸಿಂಗ್ ಠಾಕೂರ್ ಮತ್ತು ಸೈಮಾ ಠಾಕೂರ್.

ಅಭಿಯಾನ ಮುಗಿಸಿದ ಕರ್ನಾಟಕ

ಬೆಂಗಳೂರು: ಐದು ಬಾರಿಯ ಚಾಂಪಿಯನ್ ಕರ್ನಾಟಕ ತಂಡವು ಸಂತೋಷ್ ಟ್ರೋಫಿಗಾಗಿ ನಡೆಯುತ್ತಿರುವ 78ನೇ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ 'ಜಿ' ಗುಂಪಿನ ಪಂದ್ಯದಲ್ಲಿ ಮಂಗಳವಾರ 11–0 ಗೋಲುಗಳಿಂದ ಅಂಡಮಾನ್ ಮತ್ತು ನಿಕೋಬರ್ ತಂಡವನ್ನು ಸುಲಭವಾಗಿ ಮಣಿಸಿ, ಅಭಿಯಾನವನ್ನು ಮುಗಿಸಿತು.

ಕರ್ನಾಟಕ ತಂಡವು ಆಡಿರುವ ಮೂರು ಪಂದ್ಯಗಳಲ್ಲಿ ಎರಡರಲ್ಲಿ ಗೆದ್ದು ಆರು ಅಂಕ ಗಳಿಸಿ ಗುಂಪಿನಲ್ಲಿ ಎರಡನೇ ಸ್ಥಾನದೊಂದಿಗೆ ಟೂರ್ನಿಯಿಂದ ಹೊರಬಿತ್ತು. ತಮಿಳುನಾಡು ವಿರುದ್ಧದ ಸೋಲು ದುಬಾರಿಯಾಯಿತು.

ಮೂರೂ ಪಂದ್ಯಗಳಲ್ಲಿ ಗೆದ್ದ ತಮಿಳುನಾಡು (9 ಅಂಕ) ಅಗ್ರಸ್ಥಾನದೊಂದಿಗೆ ಮುಂದಿನ ಸುತ್ತಿಗೆ ಪ್ರವೇಶಿಸಿತು.

ಪ್ರೊ ಕಬಡ್ಡಿ : ಟೈ ಪಂದ್ಯದಲ್ಲಿ ಪಲ್ಟನ್

ನೋಯಿಡಾ(ಪಿಟಿಐ): ಪ್ರೊ ಕಬಡ್ಡಿ ಟೂರ್ನಿಯಲ್ಲಿ ಮಂಗಳವಾರ ನಡೆದ ಪುಣೇರಿ ಪಲ್ಟನ್ ಮತ್ತು ಯುಪಿ ಯೋಧಾಸ್ ತಂಡಗಳ ನಡುವಣ ಪಂದ್ಯವು ರೋಚಕ ಟೈ ಆಯಿತು.

ನೋಯಿಡಾ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಆರಂಭದಿಂದಲೂ ಉಭಯ ತಂಡಗಳು ಜಿದ್ದಾಜಿದ್ದಿ ನಡೆಸಿದವು ಇದರಿಂದಾಗಿ 29–29ರಿಂದ ಟೈ ಆಯಿತು.

ಪಂದ್ಯದ ಮೊದಲಾರ್ಧದಲ್ಲಿ ಯೋಧಾಸ್ ತಂಡವು 16–14ರಿಂದ ಮುನ್ನಡೆ ಸಾಧಿಸಿತ್ತು. ವಿರಾಮದ ನಂತರದ ಅವಧಿಯಲ್ಲಿ ಪುಣೇರಿ ಪಲ್ಟನ್ ತಿರುಗೇಟು ನೀಡಿತು. ಈ ಅವಧಿಯಲ್ಲಿ ಪುಣೇರಿ 15–13ರ ಮುನ್ನಡೆ ಸಾಧಿಸಿತು.

ಮತ್ತೊಂದು ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ 54–31ರಿಂದ ಬೆಂಗಳೂರು ಬುಲ್ಸ್ ತಂಡವನ್ನು ಮಣಿಸಿತು.



ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಭೇಟಿ ನೀಡಿದ ವೇಳೆ ಭಾರತ ಟಿ20 ಕ್ರಿಕೆಟ್ ತಂಡದ ನಾಯಕ ಸೂರ್ಯಕುಮಾರ್ ಯಾದವ್– ದೇವಿಶಾ ಶೆಟ್ಟಿ ದಂಪತಿ ಮಂಗಳವಾರ ಸುಬ್ರಹ್ಮಣ್ಯ ಮಠದ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಅವರನ್ನು ಭೇಟಿಯಾದರು


ಟೆನಿಸ್: ಪ್ರಿಕ್ವಾರ್ಟರ್‌ಗೆ ಧೀರಜ್, ಮನೀಶ್

• ಮಲ್ಲಪ್ಪ ಪಾರೇಗಾಂವ

ಕಲಬುರಗಿ: ಭಾರತದ ದೇವ್ ಜೇವಿಯಾ, ಧೀರಜ್ ಕೆ. ಹಾಗೂ ಮನೀಶ ಸುರೇಶಕುಮಾರ ಅವರು ಇಲ್ಲಿ ನಡೆಯುತ್ತಿರುವ ಪುರುಷರ ಐಟಿಎಫ್ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ಪ್ರಿಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಮಂಗಳವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ 7ನೇ ಶ್ರೇಯಾಂಕಿತ ದೇವ್ ಜೇವಿಯಾ ಅವರು ಮನೀಶ್ ಗಣೇಶ ವಿರುದ್ಧ 6–4, 6–3ರಿಂದ ಗೆಲುವು ಸಾಧಿಸುವ ಮೂಲಕ 2ನೇ ಸುತ್ತಿಗೆ ಪ್ರವೇಶಿಸಿದರು. ಮನೀಶ್ ಸುರೇಶಕುಮಾರ ಅವರು ಸಿದ್ಧಾಂತ್ ಬಾಂಥಿಯಾ ಅವರನ್ನು 7–6(7–4), 6–4 ಸೆಟ್‌ಗಳ ಅಂತರದಿಂದ ಪರಾಭವಗೊಳಿಸಿದರು.

ಇನ್ನೊಂದು ಪಂದ್ಯದಲ್ಲಿ ಧೀರಜ್ ಕೆ. ಅವರು ಕೊರಿಯಾದ ಯುನ್ಸೆಕ್ ಜಾಂಗ್ ವಿರುದ್ಧ 6–0, 3–4 ಮುನ್ನಡೆಯಲ್ಲಿದ್ದರು. ಈ ವೇಳೆ ಲೈನ್ ಅಂಪೈರಿಂಗ್ ನೀಡಿದ ತೀರ್ಪಿನ ಕುರಿತು ಯುನ್ಸೆಕ್ ಅಸಮಾಧಾನ ವ್ಯಕ್ತಪಡಿಸಿ-ದರು. ಅಂಪೈರ್ ತಮ್ಮ ನಿರ್ಧಾರವನ್ನು ಬದಲಿಸದೇ ಇದ್ದುದರಿಂದ ಅವರು ರೆಕೆಟ್ ಎಸೆದು ಪಂದ್ಯದಿಂದ ಹೊರನಡೆದರು.



ಭಾರತದ ದೇವ್ ಜೇವಿಯಾ ಆಟದ ವೈಖರಿ

ಸಿದ್ಧಾಂತ್-ವಿಷ್ಣುವರ್ಧನ್ ಜೋಡಿ ಕ್ವಾರ್ಟರ್‌ಗೆ: ಡಬಲ್ಸ್ ವಿಭಾಗದಲ್ಲಿ 3ನೇ ಶ್ರೇಯಾಂಕದ ಸಿದ್ಧಾಂತ್ ಬಾಂಥಿಯಾ ಮತ್ತು ವಿಷ್ಣುವರ್ಧನ್ ಜೋಡಿಯು ರಾಘವ್ ಜೈಸಿಂಘಾನಿ ಮತ್ತು ಜಪಾನಿನ ಕಜುಕಿ ನಿಶಿವಾಕಿ ಜೋಡಿ ವಿರುದ್ಧ 6–3, 7–6(7–3)ರಿಂದ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್‌ಗೇರಿತು.

4ನೇ ಶ್ರೇಯಾಂಕದ ಪರೀಕ್ಷಿತ್ ಸೋಮಾನಿ ಮತ್ತು ಮನೀಶ್ ಸುರೇಶ್ ಕುಮಾರ್ ಜೋಡಿಯು ಜರ್ಮನಿಯ ಲುಕಾನ್ ಡೆಲಿಯಾನೊ ಮತ್ತು ಉಜ್ಬೇಕಿ-ಸ್ತಾನದ ಖುಮೋಯುನ್ ಸುಲ್ತಾನೋವ್ ಜೋಡಿಯನ್ನು 6–1, 6–4ರಿಂದ ಪರಾಭವಗೊಳಿಸಿ ಎಂಟರ ಘಟ್ಟಕ್ಕೇರಿತು.

ಅಗ್ರ ಶ್ರೇಯಾಂಕದ ರಷ್ಯಾದ ಇಗೊರ್ ಅಗಾಪೋನೊವ್ ಹಾಗೂ ಬಾಗ್ದಾನ್ ಬಾಬ್‌ರೋವ್ ಜೋಡಿಯು ಭಾರತದ ಮನಸ್ ಧಾಮ್ನೆ ಮತ್ತು ಯುವಾನ್ ನಂದ್ಯಾಳ್ ಜೋಡಿಯನ್ನು 6–2, 6–3ರಿಂದ ಮಣಿಸಿತು.

ಇಂಡೋನೇಷ್ಯಾದ ಎಂ.ರಿಫ್ಕಿ ಫಿತ್ರಿಯಾದಿ ಮತ್ತು ಭಾರತದ ರಿಷಿ ರೆಡ್ಡಿ ಜೋಡಿಯು ಸಂದೇಶ್ ದತ್ತಾತ್ರೇಯ ಕುರಾಳೆ ಮತ್ತು ಪ್ರಸಾದ್ ಇಂಗಳೆ ಜೋಡಿಯನ್ನು 6–4, 7–6(7–5)ರಿಂದ ಪರಾಭವಗೊಳಿಸಿತು.

ರಿಷಭ್ ಅಗರ್‌ವಾಲ್ ಮತ್ತು ಕಬೀರ್ ಹನ್ಸ್ ಜೋಡಿಯು ಆದಿತ್ಯ ಬಾಲಶೇಖರ ಮತ್ತು ರಷ್ಯಾದ ಮ್ಯಾಕ್ಸಿಮ್ ಜೋಡಿ ವಿರುದ್ಧ 6–2, 6–0ಯಿಂದ ಗೆಲುವು ಸಾಧಿಸಿತು.